ಸಂವಾದ

ಜುಲೈ ೨೦೧೧ ರೂ. ೨೦

ನೆನಪು: ಹಳೆಮನೆ

ಯುನೈಟೆಡ್ ಸ್ಟೇಟ್ಸ್ ಆಫ್ ಇಂಡಿಯಾ!

ಸಂವಾದ

ಮಾಸ ಪತ್ರಿಕೆ

ಸಂಪುಟ ೯ ಸಂಚಿಕೆ ೯

ಜುಲೈ ೨೦೧೧

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಡಾ॥ ಕೆ. ಪುಟ್ಟಸ್ವಾಮಿ

ಡಾ॥ ಡಿ. ಡೊಮಿನಿಕ್

ಡಾ॥ ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091

✆ Editorial: 9448048306
✆ Circulation: 9945264687
080-23480278,
e-mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

- ❑ ಪತ್ರಗಳು ೦೩
- ❑ ಸಂಪಾದಕರೊಂದಿಗೆ ಸಂವಾದ:
  - ○ ಶಿವಸುಂದರ್ ೦೪
  - ○ ಸಂಡೂರು ಕುಮಾರಸ್ವಾಮಿ ೦೫
  - ○ ಮಲ್ಲಿಕಾರ್ಜುನ ಗುಮ್ಮಗೋಳ ೦೬
- ❑ ಮಠಗಳು: ಬಸವತತ್ವ ವಿರೋಧಿ ನೆಲೆಗಳು
  - ○ ಜ. ಹೊ. ನಾರಾಯಣಸ್ವಾಮಿ ೦೮
- ❑ ಭ್ರಷ್ಟಾಚಾರ ವಿರೋಧಿ ಆಂದೋಲನವೂ ಆನೆಗಳ ನಗರ ಪ್ರವೇಶವೂ.....
  - ○ ಡಿ. ಎಸ್. ನಾಗಭೂಷಣ ೧೦
- ❑ ಹೊಸ ಪುಸ್ತಕ ೧೩
- ❑ ಯಾಕೆ ಮೇಸ್ತ್ರೆ ಹಾಗೆ ಹೋದಿರಿ...
  - ○ ಡಾ. ಕುಂಸಿ ಉಮೇಶ್ ೧೪



- ❑ ಕಾರ್ಮಿಕ ಮರೆತ ನೇತಾರ
  - ○ ಡಾ. ಎಸ್. ನರೇಂದ್ರಕುಮಾರ್ ೧೮
- ❑ ಕ್ಲಾಸಿಕಲ್ ಪಠ್ಯಗಳು: ಸಾಂಸ್ಕೃತಿಕ ರಾಜಕಾರಣದ ರೂಪಕಗಳು
  - ○ ಮೇಟಿ ಮಲ್ಲಿಕಾರ್ಜುನ ೨೦
- ❑ ಹೊಸ ಪಕ್ಷಿ ರಾಗ...೧೨
  - ○ ಜ್ಯೋತಿ ಗುರುಪ್ರಸಾದ್ ೨೨
- ❑ ಕಲ್ಯಾಣವೆಂಬ ಬೆಡಗು
  - ○ ಡಾ. ಮೂಡ್ನಾಕೂಡು ಚಿನ್ನಸ್ವಾಮಿ ೨೬
- ❑ ಅಸಮಾನ ಭಾರತ
  - ○ ಡಾ. ಕುಂಸಿ ಉಮೇಶ್ ೩೦
- ❑ ದಲಿತ ಜಾಗೃತಿ: ಒಂದು ಚಿಂತನ
  - ○ ಗಿರಿಧರ್. ಎಸ್ ೩೨
- ❑ ಹಾಗೆ ನೋಡಿದರೆ -೬
  - ○ ಡಾ. ಬಂಜಗೆರೆ ಜಯಪ್ರಕಾಶ ೩೮
- ❑ ಕಾಲಮಾನ-೧೫
  - ○ ಡಾ. ಮುಜಾಫ್ಫರ್ ಅಸ್ಸಾದಿ ೪೨
- ❑ ದಲಿತ್ ಡೈರಿ
  - ○ ಚಂದ್ರಭಾನ್ ಪ್ರಸಾದ್/ ಎಸ್. ಮರಿಸ್ವಾಮಿ ೪೬
- ❑ ಬುದ್ಧಾಯಣ
  - ○ ಸಿ. ಎಚ್ ರಾಜಶೇಖರ್ ೫೦

ಕವನಗಳು : ❑ ಒಬ್ಬ ತಂದೆಯ ಹಾಡು ೧೭ ❑ ಕತ್ತೆಯ ಕಾಂಡ (ರೂಪಕ) ೩೪

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಜಾರು ಹೇಳಿಕೆಗಳ ಹಳವಂಡ!

ಪ್ರೀಯ ಸಂಪಾದಕರೇ,

ಮೇ 2011ರ ಸಂವಾದದಲ್ಲಿ ಮಾನ್ಯ ಡಿ.ಎಸ್. ನಾಗಭೂಷಣ್‌ರವರು 'ಅಂಬೇಡ್ಕರ್‌ರನ್ನು ವಿಮರ್ಶಿಸಲು ಬಿಡದ ದಲಿತ ರಾಜಕಾರಣ' ಎಂಬ ಪತ್ರದಲ್ಲಿ ಕೆಲವು ಜಾರು ಹೇಳಿಕೆಗಳ ಮೂಲಕ ತಮ್ಮ ಎಂದಿನ 'ದಲಿತ ಚಿಂತನೆ'ಯ ಅನುಮಾನದ ಎಳೆಗಳನ್ನು ಬಿಚ್ಚಿಡುವ ಪ್ರಯತ್ನ ಮಾಡಿದ್ದಾರೆ. ಅಂಬೇಡ್ಕರ್‌ರವರ ಸಂವಿಧಾನ ಮತ್ತು ಭಾರತ ಸಂವಿಧಾನವನ್ನು ನಿಜವಾದ ಅರ್ಥದಲ್ಲಿ ವ್ಯಾಖ್ಯಾನಿಸಬೇಕಾದ ಜರೂರು ಇರುವ ಈ ಹೊತ್ತಿನಲ್ಲಿ, ಈ ದೇಶದ ರಾಜಕಾರಣ ಮತ್ತು ಸಾಮಾಜಿಕ ವಿಪ್ಲವಗಳ ಜೊತೆಗೆ ಗಾಂಧಿ, ಲೋಹಿಯಾ ಮತ್ತು ಅಂಬೇಡ್ಕರ್‌ರವರ ಕಾಳಜಿಗಳು ಸಹಜವಾಗಿ ಬೇರೆ-ಬೇರೆಯಾಗಿರಬೇಕಾದ್ದೇ.

ಏಕೆಂದರೆ ಎಲ್ಲರ ಹುಟ್ಟು-ಅವಮಾನಗಳು ಒಂದೇ ತೆರನಾಗಿಲ್ಲ. ಹಾಗಿದ್ದೂ ಅಂಬೇಡ್ಕರ್ ಚಿಂತನೆಗಳ ಹಿಂದಿರುವ ಸಾಮಾಜಿಕ-ಆರ್ಥಿಕ ಸ್ವಾತಂತ್ರ್ಯದ ಹಂಬಲ ಮತ್ತು ಹೋರಾಟವನ್ನು 'ಸಣ್ಣ ದಲಿತ ರಾಜಕಾರಣ'ವೆಂದು ಅರ್ಥೈಸುವ ಡಿ.ಎಸ್. ನಾಗಭೂಷಣ್‌ರವರು ಯಾವ ಆದರ್ಶವಾದಿ ರಾಜಕಾರಣದ ನೆಲೆಯಲ್ಲಿ ನಿಂತಿದ್ದಾರೆ? ಅಲ್ಲದೇ ಲೋಹಿಯಾ ಗುಂಗಿನಲ್ಲಿರುವಾಗ ಹೋರಾಟ ಹಾಗೂ ಆದರ್ಶವಾದಿ ಅಥವಾ ಸುಧಾರಣಾವಾದಿ ಚಿಂತನೆಗಳೊಂದಿಗೆ ಅಂಬೇಡ್ಕರ್‌ರವರ ಹಸಿದ, ಅವಮಾನದ ತಾತ್ವಿಕತೆಯನ್ನು ನಿಷ್ಠೂರವಾಗಿ ಒಳಗೆಳೆದುಕೊಳ್ಳಲು ಕೆಲವು ತೊಂದರೆಗಳಿರುವುದು ನಿಜ. ಏಕೆಂದರೆ, ಡಿ.ಎಸ್. ನಾಗಭೂಷಣ್ ನಿಂತಿರುವ ನೆಲೆಗಟ್ಟು ಅವಮಾನಮುಕ್ತ ಹಾಗೂ ಸುಧಾರಣಾವಾದಿ ಚೌಕಟ್ಟಿನದು.

ಪತ್ರಾಗಾರ

ಹಾಗಿಲ್ಲದಿದ್ದರೆ, ಎಚ್. ಗೋವಿಂದಯ್ಯನವರು ಅಂದೆಂದೋ ಹೇಳಿದ ದಸಂಸದ ಏಕ ಪಕ್ಷೀಯ ಹೇಳಿಕೆಯನ್ನು ಇಂದು ಅರ್ಥೈಸಿಕೊಂಡು ಒಪ್ಪಿಕೊಂಡಿರುವ ಡಿ.ಎಸ್. ಎನ್., ಆ ಮೂಲಕ ದಲಿತ ಸಂಘರ್ಷ ಸಮಿತಿಯು ಕರ್ನಾಟಕದಾದ್ಯಂತ ಹುಟ್ಟುಹಾಕಿದ ವೈಚಾರಿಕ ಪ್ರಗತಿ ಹಾಗೂ, ಒದಿನ ಗೀಳು ಮತ್ತು ಸಂಘಟನಾತ್ಮಕ ಹೋರಾಟದ ಕಿಚ್ಚುಗಳನ್ನು ಅಲ್ಲಗಳೆಯಲು ತಯಾರಾಗಿದ್ದಾರಾ? ಯೋಚಿಸಬೇಕಾಗಿದೆ.

ದಲಿತ ಸಂಘರ್ಷ ಸಮಿತಿಗಳೂ ಚಂಪನ್ನೈವತ್ತಾರು ಚೂರಾಗಿ ನಾಯಕರ ಗೀಳಿಗೆ ಬಿದ್ದು 70-80ರ ದಶಕದ ಕಾವನ್ನು ಕಳೆದುಕೊಂಡಿರುವುದು ನಿಜವೆ. ಹಾಗೆ ನೋಡಿದರೆ ಇಂಡಿಯಾದಲ್ಲಿ ಯಾವ ಚಳವಳಿಗಳು, ಸಂಘಟನೆಗಳು ಹುಟ್ಟಿದ ದಿನದ ಹೋರಾಟ ಹಾಗೂ ಸೈದ್ಧಾಂತಿಕತೆಯನ್ನು ಉಳಿಸಿಕೊಂಡಿವೆ? ಮತ್ತೊಂದು ಅಂಶವನ್ನೂ ಪ್ರಸ್ತಾಪಿಸಿರುವ ನಾಗಭೂಷಣ್‌ರವರು ಅದನ್ನು ವಿಸ್ತರಿಸಲಾರದೆ ಜಾರು ಹೇಳಿಕೆಯಂತೆ ತೇಲಿಸಿದ್ದಾರೆ. 'ಅಂಬೇಡ್ಕರ್‌ರವರ ಹಲವು ರಾಜಕೀಯ ನಡೆಗಳು, ತತ್ವಗಳು ವಿವಾದಾಸ್ಪದವೇ ಆಗಿವೆ' ಎಂದಿರುವುದು ಅವರ ಅನುಮಾನ ಅದೂ ಯಾವ ನೆಲೆಯಲ್ಲಿಯದೆಂದು, ಅದಕ್ಕೆ ಬೇಕಾದ ಪೂರಕ ಸಂಗತಿಗಳನ್ನು ಮುಂದಾದರೂ ನೀಡಿಯಾರೆಂದು ಆಶಿಸುತ್ತೇನೆ.

ಹಾಗೂ 'ಅಂಬೇಡ್ಕರ್‌ರವರನ್ನು ವಿಮರ್ಶಾತೀತರನ್ನಾಗಿ ಮಾಡುವಂತೆ ಕಟ್ಟಲಾಗುತ್ತಿರುವ ಇತ್ತೀಚಿನ ದಲಿತ ರಾಜಕೀಯ ಸಂಕಥನ' ಎಂದಿರು... ಮ...ತಿಗೆ, ಅವರು ಕೊಡುವ ಕಾರಣ ಬಾಬೂ ಜಗಜೀವನ್‌ರಾಮ್ ಹಾಗೂ ಅಂಬೇಡ್ಕರ್‌ರವರನ್ನು ಜೊತೆಗಿಟ್ಟು ಚರ್ಚಿಸುವ-'ಆರಾಧಿಸುವ' ಕ್ರಮವನ್ನು ಕುರಿತದ್ದಾಗಿದೆ; ಕರ್ನಾಟಕದ ಜಾತಿ ಕಾರಣದಲ್ಲಿ ಮೇಲಿರಿಮೆ-ಕೀಳರಿಮೆಯ ಜಾತಿ ವ್ಯವಸ್ಥೆಯು ಹುಟ್ಟುಹಾಕಿದ ಕ್ರೌರ್ಯದ ನಡೆ ಇದಾಗಿದೆ. ಭಾರತದ ಚರಿತ್ರೆಯಲ್ಲಿ ಜಾತಿಗಳ ಅಹಂಕಾರವನ್ನು ಹಾಗೂ ಹುಟ್ಟಿದ ಜಾತಿ ಕಾರಣಕ್ಕೆ ಕಟ್ಟಿಕೊಂಡ ಕೀಳರಿಮೆಯ ಬದುಕನ್ನು ಹೋಗಲಾಡಿಸಲಾರದ ಸುಧಾರಣಾವಾದಿ ಚರಿತ್ರೆಯು, ಇ...ಕ್ಕೆ ...ತ್ತರ ಕೊಡಬೇಕೇ ಹೊರತು ಡಿ.ಎಸ್.ಎನ್., ಹೇಳುವಂತೆ ಬಾಬೂಜಗಜೀವನ್‌ರಾಮ್ ಅವರನ್ನು 'ಹೊತ್ತು ಮೆರೆಯುತ್ತಿರುವ 'ದಲಿತರಲ್ಲ" ಎಂಬುದು ನನ್ನ ನಂಬಿಕೆ.

'ಗಾಂಧೀಜಿಯನ್ನು ದೇವರು ಮಾಡಿ ಮುಗಿಸಲಾಗಿದೆ' ನಿಜ, ಈಗ ಅಂಬೇಡ್ಕರ್ ಸರದಿ', ಅದೂ ನಿಜವೇ ಆದರೆ ಗಾಂಧೀಜಿಯನ್ನು ದೇವರು ಮಾಡಿ ಮುಗಿಸಿ ದವರು ಬನಿಯಾಗಳಲ್ಲ, ಅದು ವ್ಯವ ಸ್ಥೆಯ ಪಾಪದ ಮೊತ್ತ. ಹಾಗೆಯೇ ಅಂಬೇಡ್ಕರ್‌ರವರನ್ನು ಮುಗಿಸುತ್ತಿರುವುದು ದಲಿತರಲ್ಲ, ಅಪರನ್ನು ಅಣು-ಅಣುವಿನಂತೆ ಸೀಳಿ ಪ್ರತ್ಯೇಕಿಸಿದ ಪ್ರಭುತ್ವ ವ್ಯವಸ್ಥೆಯ ಹುನ್ನಾರಗಳು. ಈ ಎಲ್ಲವೂ ನಾಗಭೂಷಣ್‌ರವರಿಗೆ ತಿಳಿದಿಲ್ಲವೆಂದಲ್ಲ, ಹಾಗಿದ್ದೂ ಅವರು ನಿರ್ಧರಿಸಿ ಕೊಂಡಂತಿರುವ 'ದಲಿತ ರಾಜಕಾರಣ' ಎಂಬುದೊಂದಿದೆಯಾ?

ಡಾ. ಕುಂಸಿ ಉಮೇಶ್
ಹೊಳೆಹೊನ್ನೂರು

ಕೋಮುವಾದಿಗಳ ಪರ ನಿಂತ ಮಾಧ್ಯಮಗಳು!

ಪ್ರೀಯ ಸಂಪಾದಕರೇ,

ಈ ದೇಶದ ಎಲ್ಲಾ ಮಾಧ್ಯಮಗಳು (ಬಹುಪಾಲು ಎಲೆಕ್ಟ್ರಾನಿಕ್ಸ್ ಮಾಧ್ಯಮಗಳು) ಇಂದು ಇಡೀ ದೇಶವೇ ಒಂದು ಕಡೆ. ಕೇಂದ್ರದ UPA ಸರ್ಕಾರವೇ ಒಂದು ಕಡೆ ಎನ್ನುವಂತೆ ಬಿಂಬಿಸುತ್ತಿವೆ. ಅಗಲೆ ರಾಜದೀಪ ಎನ್ನುವ ದೊಡ್ಡ ಬಾಯಿ ಬಡುಕ ಬಿಜೆಪಿ ಪಾಳೆಯದಲ್ಲಿ ಸೂಕ್ತ ಪ್ರಧಾನಮಂತ್ರಿಯನ್ನು ಹುಡುಕುತ್ತಿದ್ದಾನೆ. ಇದಕ್ಕೆ ಈ ಮಾಧ್ಯಮಗಳ, ಸೋಕಾಲ್ಡ್ ಎಲೈಟ್ ಬುದ್ಧಿಜೀವಿಗಳ ಬೌದ್ಧಿಕ ದಿವಾಳಿತನ, ಆತ್ಮವಂಚನೆ, ಹಾಗು ಕಾಂಗ್ರೆಸ್ ದ್ವೇಷ ಎಷ್ಟು ಕಾರಣವೋ ಹಾಗೆಯೇ ಕೇಂದ್ರದ UPA ಸರ್ಕಾರದ ಆತ್ಮಹತ್ಯಾತ್ಮಕ, ಮೂರ್ಖತನದ, ಅನೇಕ ವೇಳೆ ಎಡಬಿಡಂಗಿತನದ ಆಡಳಿತ ನೀತಿಗಳು ಕೂಡ ಅಷ್ಟೇ ಕಾರಣ. ಇಲ್ಲದಿದ್ದರೆ ಕಳೆದ 7 ವರ್ಷಗಳಲ್ಲಿ ದೇಶದಲ್ಲಿ ಕೋಮುಗಲಭೆಗಳಾಗಲಿ, ಭಯೋತ್ಪಾದನೆಯಾಗಲಿ ನಡೆದಿಲ್ಲ.

ಇದು UPA ತನ್ನ ಅನೇಕ ಮಿತಿಗಳ ನಡುವೆ ಸಾಧಿಸಿರುವ ಒಂದು ದೊಡ್ಡ ಯಶಸ್ಸು. ಆದರೆ ಇದು ಗಣನೆಗೆ ಬಾರದೆ ಕೇವಲ ಭ್ರಷ್ಟಾಚಾರ ಒಂದು ಅಜೆಂಡ ವನ್ನಾಗಿ ಮಾಡಿಕೊಂಡು 2014ರ ವೇಳೆಗೆ UPA ಸರ್ಕಾರವನ್ನು ಸಂಪೂರ್ಣ ನಿಶ್ಶಕ್ತಿ ಗೊಳಿಸುವುದೇ ಎಲ'ಕ್ಟ್ರಾನಿಕ್ ಮಾಧ್ಯಮಗಳ ಹುನ್ನಾರ. ನಾನು ಇಲ್ಲಿ UPA ಪರವಾಗಿ ಮಾತನಾಡುತ್ತಿಲ್ಲ. ಆದರೆ ನಿಜಸ್ಥಿತಿ ಏನೆಂದರೆ ಇಂದಿನ ಅತ್ಯಂತ ದುರ್ಬಲ ದಿನಗಳಲ್ಲಿ ಸಧ್ಯಕ್ಕೆ UPA ಬಿಟ್ಟರೆ ಬೇರೆ ಪರ್ಯಾಯ ರಾಜಕೀಯ ಮಾರ್ಗಗಳು ಇಲ್ಲ. ಇದು ಕಟು ವಾಸ್ತವ. ಏಕೆಂದರೆ ಇಂದಿನ ಅತ್ಯಂತ ಗೊಂದಲಮಯ ವಾತಾವರಣದಲ್ಲಿ ಕೇವಲ ಎರಡನೇ ದರ್ಜೆಯ ನಾಯಕರಿರುವ, ಕೋಮು ವಾದಿ ಬಿಜೆಪಿ ಅಧಿಕಾರಕ್ಕೆ ಬಂದರೆ ಆಗುವ ಅನಾಹುತಗಳ ಸರಣಿ ಊಹೆಗೂ ಮೀರಿದ್ದು.

ಬಿ. ಶ್ರೀಪಾದ ಭಟ್
ಬೆಂಗಳೂರು



ಚಂದಾ ವಿವರ
ಬಿಡಿ ಪ್ರತಿ ರೂ.೨೦/-
೧ ವರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ
ರೂ.೨೦೦/- ರೂ.೫೦೦/- ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ
ರೂ.೨೫೦/- ರೂ.೬೦೦/- ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ
ರೂ.೫೦೦/- ರೂ.೧೫೦೦/- ರೂ.೨೫೦೦/-
ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-
ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ.

ಅಂಬರ ಮೀರಿದ ಅಂಬಾನಿಯ ಭ್ರಷ್ಟಾಚಾರವನ್ನು ತಡೆಯುವ ತಾಕತ್ತು ಸಂವಿಧಾನಕ್ಕಿದೆಯೇ?

ಸಂಪಾದಕರೊಡನೆ ಸಂವಾದ

ಶಿವಸುಂದರ್

ಪ್ರೀಯ ಸಂಪಾದಕರೇ,

ಭ್ರಷ್ಟಾಚಾರ ಎಂದರೇನು ಮತ್ತು ಭ್ರಷ್ಟಾಚಾರಿಗಳು ಯಾರು ಎಂಬ ಚರ್ಚೆ ದೇಶದಾದ್ಯಂತ ಬಿಸಿ ಏರುತ್ತಿರುವ ಹೊತ್ತಿನಲ್ಲಿ ಭಾರತದ ಮಹಾ ಲೆಕ್ಕ ಪರಿಶೋಧಕರು (Comptroller and Auditor General - CAG) ಈ ದೇಶದ ಜನತೆಗೆ ಆಗಿರುವ ಮತ್ತೊಂದು ಮಹಾ ವಂಚನೆಯೊಂದನ್ನು ಬಯಲಿಗೆಳೆದಿದ್ದಾರೆ. ಅದು ಭಾರತ ಉದ್ಯಮಪತಿಗಳಲ್ಲೇ ಅತಿ ಗಣ್ಯರಾದ ಹಾಗೂ ದೇಶದ ಮಾತ್ರವಲ್ಲದೆ ವಿಶ್ವದ ಅತಿ ದೊಡ್ಡ ಶ್ರೀಮಂತರಲ್ಲಿ ಒಬ್ಬನಾದ ಮುಖೇಶ್ ಅಂಬಾನಿಯ ರಿಲಯನ್ಸ್ ಕಂಪನಿ (RIL) ಸರ್ಕಾರದ ಬೊಕ್ಕಸಕ್ಕೆ ತೂತು ಕೊರೆದು ಮಾಡಿಕೊಂಡಿರುವ ಸಾವಿರಾರು ಕೋಟಿ ಲಾಭದ ವಂಚನೆ. ಆದರೆ ಭ್ರಷ್ಟಾಚಾರದ ಬಗ್ಗೆ ಹುಯಿಲೆಬ್ಬಿಸುತ್ತಿರುವ ಹಜಾರೆಯವರಾಗಲೀ ಅಥವಾ ಬೂಸಿಬಾಬಾಗಳಾಗಲೀ ಇದನ್ನು ಭ್ರಷ್ಟಾಚಾರವೆಂದೇ ಪರಿಗಣಿಸುವುದಿಲ್ಲ. ಅವರಿರಲಿ ಜಾಗತೀಕರಣದ ನಂತರದಲ್ಲಿ ಈ ದೇಶದಲ್ಲಿ ಬದಲಾಗಿರುವ ಕಾನೂನುಗಳು ಈ ಹಗಲು ದರೋಡೆಯನ್ನು ಕನಿಷ್ಟ ವಂಚನೆಯೆಂದು ಪರಿಗಣಿಸುವುದಿಲ್ಲ. ವಾಸ್ತವವಾಗಿ ಈ ದೇಶದ ಜನತೆಗೆ ದಕ್ಕಬೇಕಿರುವ ಸಂಪನ್ಮೂಲಗಳು ಉಳ್ಳವರ ಪಾಲಾಗುತ್ತಿರುವುದು ಕಾನೂನು ಬಾಹಿರ ಭ್ರಷ್ಟಾಚಾರದಿಂದಲ್ಲ ಬದಲಿಗೆ ಈ ಬಗೆಯ ಕಾನೂನುಬದ್ಧ ಭ್ರಷ್ಟಾಚಾರದಿಂದಲೇ. ಮಹಾ ಲೆಕ್ಕ ಪರಿಶೋಧಕರೂ ತಮ್ಮ ವರದಿಯಲ್ಲಿ ಪರೋಕ್ಷವಾಗಿ ಇದನ್ನೇ ಹೇಳಿದ್ದಾರೆ.

ಭಾರತದ ಅಭಿವೃದ್ಧಿ ದರ ಶೇ.9ರ ಗತಿಯನ್ನು ಉಳಿಸಿಕೊಳ್ಳಬೇಕೆಂದರೂ ಈ ದೇಶದ ಇಂಧನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕೆಂದೂ ಅದಕ್ಕೆ ಖಾಸಗಿ ಸಹಭಾಗಿತ್ವದೊಂದಿಗೆ ಇಂಧನ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕೆಂದು ಈ ದೇಶದ ಆಳುವ ವರ್ಗಗಳ ಯೋಜನೆ. ಅದಕ್ಕಾಗಿ ಅವರು ಹತ್ತನೇ ಪಂಚವಾರ್ಷಿಕ ಯೋಜನೆಯ ಕಾಲದಿಂದಲೆ ಭವಿಷ್ಯದ ಇಂಧನವಾಗಿ ನೈಸರ್ಗಿಕ ಅನಿಲದ ಅನ್ವೇಷಣೆ, ಉತ್ಪಾದನೆ ಮತ್ತು ವಿತರಣೆಯ ಯೋಜನೆಯನ್ನು ದೊಡ್ಡ ಮಟ್ಟದಲ್ಲಿ ಮಾಡಬೇಕೆಂದು ಯೋಜಿಸಿದ್ದರು. ಆ ವೇಳೆಗಾಗಲೇ ಖಾಸಗಿ ಮತ್ತು ವಿದೇಶಿ ಬಂಡವಾಳವೇ ಈ ದೇಶದ ಅಭಿವೃದ್ಧಿಯನ್ನು ಮಾಡಬಲ್ಲವು ಎಂಬುದು ಜಾಗತೀಕರಣದ ನೀತಿಗಳಾಗಿ ಶಾಸನವೂ ಆಗಿಬಿಟ್ಟಿದ್ದವು. ಹೀಗಾಗಿ ನೈಸರ್ಗಿಕ ಅನಿಲದ ಸಂಶೋಧನೆ, ಉತ್ಪಾದನೆ ಮತ್ತು ವಿತರಣೆ ಎಲ್ಲದರಲ್ಲೂ ಸರ್ಕಾರ ಬಂಡವಾಳ, ಮತ್ತು ಇತರ ಎಲ್ಲಾ ಸಂಪನ್ಮೂಲವನ್ನು ಒದಗಿಸಿದರೂ ಅಲ್ಪಸ್ವಲ್ಪ ಬಂಡವಾಳವನ್ನು ಹಾಕಿದ ಏಕೈಕ ಕಾರಣಕ್ಕಾಗಿ ಖಾಸಗಿ ಹೂಡಿಕೆದಾರರೇ ಲಾಭದ ಮತ್ತು ನಿರ್ವಹಣೆಯ ಅಧಿಕಾರದ ಸಿಂಹಪಾಲನ್ನು ಪಡೆಯುವ ರೀತಿಯಲ್ಲಿ ಈ ಖಾಸಗಿ-ಸರ್ಕಾರ ಸಹಭಾಗಿತ್ವ ಯೋಜಿತಗೊಂಡಿತ್ತು. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಕಳೆದ ಇಪ್ಪತ್ತು ವರ್ಷದಲ್ಲಿ ದೊಡ್ಡ ಮಟ್ಟದಲ್ಲಿ ನಷ್ಟ ಉಂಟಾಗುತ್ತಿದ್ದರೆ ಅದರ ಲಾಭವನ್ನೆಲ್ಲಾ ಅಂಬಾನಿಯಂತ ಖಾಸಗಿ ಕಂಪನಿಗಳೇ ನುಂಗಿಹಾಕುತ್ತಿದ್ದವು.

ಇಂತಹ ಒಂದು ಯೋಜನೆಯಿಂದ ಅಂಬಾನಿಯಂತ ಒಂದು ಕಂಪನಿ ಒಂದು ಯೋಜನೆಯಲ್ಲಿ ಸರ್ಕಾರಕ್ಕೆ ಮಾಡಿರುವ ವಂಚನೆಯ ಕುರಿತಾಗಿಯೇ ಭಾರತದ ಮಹಾ ಲೆಕ್ಕ ಪರಿಶೋಧಕರು (Comptroller and Auditor General - CAG) ತಮ್ಮ ತೀವ್ರ ಆಕ್ಷೇಪಣೆಯನ್ನು ಎತ್ತಿದ್ದಾರೆ. ಭಾರತದಲ್ಲಿ ನೈಸರ್ಗಿಕ ಅನಿಲದ ನಿಕ್ಷೇಪಗಳು ದೊಡ್ಡ ಮಟ್ಟದಲ್ಲಿ ಕೃಷ್ಣ-ಗೋದಾವರಿ ಬೇಸಿನ್‌ನಲ್ಲಿ ಕಂಡುಬಂದಿವೆ. ಇದನ್ನು ಸರ್ಕಾರವೇ ತನ್ನ ಖರ್ಚಿನಲ್ಲಿ ಕಂಡುಹಿಡಿದಿತ್ತು. ಮತ್ತು ತನ್ನ ಬಳಿ ಇರುವ ಬಂಡವಾಳ ಮತ್ತು ತಂತ್ರಜ್ಞಾವನ್ನು ಹೂಡಿಯೇ ಅಗ್ಗದ ಬೆಲೆಯ ಈ ನೈಸರ್ಗಿಕ ಅನಿಲದ ಉತ್ಪಾದನೆ ಮಾಡಿ ಜನತೆಗೆ ಅಗ್ಗದ ವೆಚ್ಚದಲ್ಲಿ ಇಂಧನವನ್ನು ಒದಗಿಸಬಹುದಾಗಿತ್ತು. ಆದರೆ ಜಾಗತೀಕರಣ ಪ್ರಣೀತ ಆರ್ಥಿಕ ನೀತಿಯಿಂದಾಗಿ ಸರ್ಕಾರ ತಾನೇ ಇತರ ಎಲ್ಲಾ ಸೌಕರ್ಯವನ್ನು ಒದಗಿಸಿಕೊಟ್ಟರೂ ಈ ಭಾಗದಲ್ಲಿ ನೈಸರ್ಗಿಕ ಅನಿಲ ಉತ್ಪಾದನೆ ಮತ್ತು ವಿತರಣೆಯನ್ನು ಮಾಡಲು ಮುಕೇಶ್ ಅಂಬಾನಿಯ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (RIL) ಜೊತೆ ಒಪ್ಪಂದ ಮಾಡಿಕೊಂಡಿತು. ಕೃಷ್ಣ-ಗೋದಾವರಿ ಬೇಸಿನ್‌ನಲ್ಲಿ 18 ಕಡೆ ದೊಡ್ಡ ಮಟ್ಟದ ನೈಸರ್ಗಿಕ ಅನಿಲ ನಿಕ್ಷೇಪವನ್ನು ಕಂಡುಹಿಡಿಯಲಾಗಿದೆ. ಅದರಲ್ಲಿ ಅತಿ ಹೆಚ್ಚು ನಿಕ್ಷೇಪ ಇರುವ ಎರಡು ವಿಭಾಗಗಳಲ್ಲಿನ ಉತ್ಪಾದನೆಯನ್ನು ಸರ್ಕಾರ ಅಂಬಾನಿಗೆ ವಹಿಸಿದೆ. ಈ ಯೋಜನೆಯನ್ನು KG-ಆ6 ಎಂದು ಕರೆಯಲಾಗುತ್ತದೆ.

ಆದರೆ ದೇಶದ ಜನತೆಗೆ ಸೇರಬೇಕಿರುವ ಈ ಸಂಪನ್ಮೂಲವನ್ನು ಖಾಸಗಿ ಕಂಪನಿಗೆ ವಹಿಸುವಾಗ ಸರ್ಕಾರದ ಅರ್ಥಾತ್ ಜನತೆಯ ಆರ್ಥಿಕ ಮತ್ತು ಭವಿಷ್ಯದ ಹಿತಾಸಕ್ತಿಯನ್ನು ಎಷ್ಟರ ಮಟ್ಟಿಗೆ ಗಮನದಲ್ಲಿರಿಸಿಕೊಂಡಿತ್ತು? ಮತ್ತು ಅಂಬಾನಿ ಕಂಪನಿ ಎಷ್ಟರ ಮಟ್ಟಿಗೆ ಕಾನೂನುಗಳ ಸಂದಿಯನ್ನು ಬಳಸಿಕೊಂಡು ನಷ್ಟವನ್ನು ಸರ್ಕಾರಕ್ಕೂ ಮತ್ತು ಲಾಭವನ್ನೂ ಮಾತ್ರ ತನಗೂ ವರ್ಗಾಯಿಸಿಕೊಂಡಿತು? ಈ ಬಗೆಯ ಯೋಜನೆಯಲ್ಲಿ ಸರ್ಕಾರ ಮತ್ತು ಖಾಸಗಿ ಕಂಪನಿಗಳು ಪಾಲುದಾರಿಕೆ ಮಾಡಿಕೊಳ್ಳುವಾಗ ಲಾಭವನ್ನು ಹೇಗೆ ಹಂಚಿಕೊಳ್ಳಬೇಕು ಎಂಬ ಬಗ್ಗೆ Production Sharing Contract (PSC) ಎಂಬ ಒಪ್ಪಂದವನ್ನು ಮಾಡಿಕೊಳ್ಳಲಾಗುತ್ತದೆ.

ಈ ಒಪ್ಪಂದವನ್ನು ರೂಪಿಸುವಾಗಲೇ ಅಧಿಕೃತ ಭ್ರಷ್ಟಾಚಾರ ಮೇರೆ ಮೀರಿ ದೇಶವನ್ನು ಬರ್ಬಾದ್ ಮಾಡಿ ಖಾಸಗಿ ಕಂಪನಿಗಳ ತಿಜೋರಿ ತುಂಬಿಕೊಳ್ಳುವುದು. ಈ PSC ಒಪ್ಪಂದ ಪ್ರಕಾರ ಲಾಭದ ಹಂಚಿಕೆಯು ಯಾರು ಎಷ್ಟು ಬಂಡವಾಳವನ್ನು ಹೂಡುತ್ತಾರೋ ಆ ಪ್ರಮಾಣದ ಮೇಲೆ ಇರುತ್ತದೆ. ಇದರಲ್ಲಿ ಆಗುವ ಅತಿ ದೊಡ್ಡ ಅನ್ಯಾಯವೆಂದರೆ ನೈಸರ್ಗಿಕ ಸಂಪನ್ಮೂಲ ಪ್ರಧಾನವಾಗಿ ಈ ದೇಶದ ಜನತೆಗೆ ಸೇರಿದೆಯಾದ್ದರಿಂದ ಈ ದೇಶದ ಸರ್ಕಾರ ಈ ದೇಶದ ಜನತೆಯ ಪ್ರತಿನಿಧಿಯಾದ್ದರಿಂದ ಸರ್ಕಾರ ಬಂಡವಾಳ ಕಡಿಮೆ ಹೂಡಿದರೂ ಸರ್ಕಾರಕ್ಕು ಅರ್ಥಾತ್ ಜನತೆಗೂ ಸರಿಪ್ರಮಾಣದ ಲಾಭದ ಶೇರು ಸೇರಬೇಕು. ಆದರೆ PSC ಒಪ್ಪಂದ ಈ ಪ್ರಮುಖ ಅಂಶವನ್ನು ಗಣನೆಗೇ ತೆಗೆದುಕೊಳ್ಳುವುದಿಲ್ಲ. ಅದಕ್ಕಿಂತ ಹೆಚ್ಚಾಗಿ ಬಂಡವಾಳ ವೆಚ್ಚ ಹೆಚ್ಚು ತೋರಿಸಿದಷ್ಟೂ ಖಾಸಗಿ ಕಂಪನಿಗಳ ಲಾಭದ ಶೇರು ಹೆಚ್ಚುವುದರಿಂದ ಖಾಸಗಿ ಕಂಪನಿಗಳು ವಿನಾಕಾರಣ ತಮ್ಮ ಬಂಡವಾಳ ವೆಚ್ಚ ಅಧಿಕಗೊಳಿಸಿ ತೋರಿಸಿ ದುಪ್ಪಟ್ಟು ಲಾಭದ ಪಾಲು ಪಡೆಯುತ್ತಾರೆ. ಅಧಿಕೃತವಾಗಿ. ಶಾಸನಬದ್ಧವಾಗಿ. ಇದು ಮಾತ್ರ ಲೋಕಪಾಲ್ ಮಸೂದೆಯಲ್ಲಾಗಲೀ, ಹಜಾರೆ, ಬಾಬಾಗಳ ಜನಲೋಕಪಾಲ್ ಮಸೂದೆಯಲ್ಲಾಗಲೀ ಭ್ರಷ್ಟಾಚಾರ, ಜನತೆಯ ಸಂಪನ್ಮೂಲದ ಲೂಟಿಯೆಂದು ಎನಿಸಿಕೊಳ್ಳುವುದೇ ಇಲ್ಲ.

ಈ KG-ಆ6 ಯೋಜನೆಯಲ್ಲಿ ಅಂಬಾನಿಗಳು ಮೊದಲು ತೋರಿಸಿದ ಬಂಡವಾಳ ವೆಚ್ಚ 2.3 ಬಿಲಿಯನ್ ಡಾಲರ್ ಅಂದರೆ ಅಂದಾಜು 13,000 ಕೋಟಿ ರೂಪಾಯಿಗಳು. ಆದರೆ ಕೇವಲ ಒಂದೇ ವರ್ಷದಲ್ಲಿ, ಅದರ ವೆಚ್ಚವನ್ನು ಯಾವುದೇ ವಿಶೇಷ ಕಾರಣವಿಲ್ಲದೆ 5.1 ಬಿಲಿಯನ್ ಡಾಲರ್‌ಗೆ ಏರಿಸಿಕೊಂಡಿತು. ಅಂದರೆ ಅಂದಾಜು 30,000 ಕೋಟಿ ರೂಪಾಯಿಗಳು ಎಂದು ತೋರಿಸಿತು. ಒಟ್ಟು ಅದು ಈಗ ತೋರಿಸುತ್ತಿರುವ ವೆಚ್ಚ 45,000 ಕೋಟಿ ರೂಪಾಯಿಗಳು. ಹೀಗೆ ಅದರ ಬಂಡವಾಳ ವೆಚ್ಚ ಶೇ.117ರಷ್ಟು ಹೆಚ್ಚಾದದ್ದರಿಂದ ಲಾಭದಲ್ಲಿಯೂ ಅದರ ಪಾಲು ಶೇ.117ರಷ್ಟು ಜಾಸ್ತಿಯಾಗಿ, ಸರ್ಕಾರದ ಅಂದರೆ ಜನತೆಯ ಪಾಲು ಶೇ.5ಕ್ಕಿಂತಲೂ ಕಡಿಮೆಯಾಗಿದೆ.

ಲೆಕ್ಕ ಮಹಾ ಪರಿಶೋಧಕರು ಏಕಾಏಕಿ ಬಂಡವಾಳ ಹೆಚ್ಚಲು ಕಾರಣವೇನು ಎಂದು ಹುಡುಕಲು ಅಂಬಾನಿ ಕಂಪನಿಗೆ ತಮ್ಮ ವೆಚ್ಚದ ಲೆಕ್ಕಪತ್ರವನ್ನು ಒದಗಿಸಲು ಆದೇಶಿಸಿದರೂ ಈ ಕಾರ್ಪೊರೇಟ್ ಕಂಪನಿ ತಾನೊಂದು ಖಾಸಗಿ ಕಂಪನಿಯೆಂದೂ, ಈ ಯೋಜನೆಯ ನಿರ್ದಿಷ್ಟ ಬಾಬತ್ತಿಗೆ ಬಿಟ್ಟು ಮಿಕ್ಕಂತೆ ತನ್ನ ಲೆಕ್ಕಾಚಾರವನ್ನು ಕೇಳುವ ಅಧಿಕಾರ CAG ಗೆ ಇಲ್ಲವೆಂದೂ ಉತ್ತರ ಕೊಟ್ಟಿದೆ. ಖಾಸಗಿ ಕಂಪನಿಗಳ ಎದುರು ನಿಸ್ಸಹಯಕವಾದ ಸಾಂವಿಧಾನಿಕ ಸಂಸ್ಥೆಯಾದ CAG

(7ನೇ ಪುಟಕ್ಕೆ)

ಸಂಪಾದಕರೊಡನೆ ಸಂವಾದ

ಕಪ್ಪು ದಂಧೆಯ ಬಿಳಿ ಮುಖವಾಡಗಳು!!

ಸಂಡೂರು ಕುಮಾರಸ್ವಾಮಿ

ಪ್ರೀಯ ಸಂಪಾದಕರೇ,

ಹಿನ್ನೆಲೆಯಲ್ಲಿ, ರಾಷ್ಟ್ರಪಿತ ಗಾಂಧೀಜಿ ಹಾಗೂ ಕೇಸರಿಪಡೆಯ ಭಾರತ ಮಾತೆಯ ಚಿತ್ರಗಳು. ವಂದೇ ಮಾತರಂ, ಭಾರತ ಮಾತಾಕೀ ಜೈ ಎನ್ನುವ ಘೋಷಣೆಗಳು. ಹೋರಾಟ-ತ್ಯಾಗ-ಬಲಿದಾನಗಳ ಭಾಷಣಗಳೊಂದಿಗೆ ಉಪವಾಸ ಸತ್ಯಾಗ್ರಹದ ಮೂಲಕ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿರುವ, ಖಾದಿಗಿರಿಯ ಉರುಫ್ ಅಣ್ಣಾ ಹಜಾರೆ ಅಲಿಯಾಸ್ ಕಿಷನ್ ಬಾಬುರಾವ್ ಹಜಾರೆ ಹಾಗು ಖಾವಿಗಿರಿಯ ಉರುಫ್ ಬಾಬಾ ರಾಮದೇವ್ ಅಲಿಯಾಸ್ ರಾಮ ಕಿಷನ್ ಯಾದವ್ ರವರು ಇಡೀ ದೇಶಾದ್ಯಂತ ಸುದ್ದಿ-ಚರ್ಚೆಗೆ ಗ್ರಾಸವಾಗಿದ್ದಾರೆ.

ಜನಲೋಕಪಾಲ ಮಸೂದೆಯ ಮಂತ್ರದಂಡದಿಂದ ಭ್ರಷ್ಟಾಚಾರವನ್ನು ಮೆಟ್ಟಬಹುದು. 'ಮಸೂದೆಯ ಜಾರಿಗಾಗಿ ಪ್ರಾಣತ್ಯಾಗಕ್ಕೂ ಸಿದ್ಧ' ಎನ್ನುವ ನಿಲುವಿನ ನಾಗರೀಕ ಸಮಾಜದ (civil society) ಅಣ್ಣಾ ಹಜಾರೆಯ ಐವರ ತಂಡ ಒಂದೆಡೆ.

ವಿದೇಶದಲ್ಲಿರುವ ಭಾರತೀಯರ ಕಪ್ಪು ಹಣವನ್ನು ವಾಪಸು ತಂದು, ಭಾರತವನ್ನು ನಂದನವನವನ್ನಾಗಿಸುವ ಸಂಕಲ್ಪದ ಯೋಗ ಗುರು ಬಾಬಾ ರಾಮದೇವ ಮತ್ತು ಪರಿವಾರ ಮತ್ತೊಂದೆಡೆ. ಇವೆರೆಡರ ಅಡಕೊತ್ತಿನಲ್ಲಿ ಭ್ರಷ್ಟಾಚಾರದ ಸುಳಿಯಲ್ಲಿರುವ ಯು.ಪಿ.ಎ. ಸರ್ಕಾರ.

ಭ್ರಷ್ಟ ಅಂದರೆ ಅಡ್ಡದಾರಿ, ಅಸಾಧು, ತಪ್ಪುದಾರಿ ಎಂದರ್ಥ. ಆಚಾರವೆಂದರೆ ನೀತಿ, ನಿಯಮ, ಕಟ್ಟುಪಾಡು, ನಡತೆ ಎಂದರ್ಥ. ಭ್ರಷ್ಟಾಚಾರವೆಂದರೆ ಅಯೋಗ್ಯ, ಅನೀತಿಯ, ಅನೈತಿಕತೆಯ, ನಡತೆಗೆಟ್ಟ, ಅಶುದ್ಧ, ಮಲಿನವಾದ, ದುರ್ವ್ಯಾಪಾರ ಅಥವಾ ದುರಾಚಾರ ಎಂದರ್ಥ. ಆರ್ಥಿಕ ಭ್ರಷ್ಟಾಚಾರ, ಧಾರ್ಮಿಕ ಭ್ರಷ್ಟಾಚಾರ, ಸಾಮಾಜಿಕ ಭ್ರಷ್ಟಾಚಾರ, ರಾಜಕೀಯ ಭ್ರಷ್ಟಾಚಾರ, ಸಾಂಸ್ಕೃತಿಕ ಭ್ರಷ್ಟಾಚಾರ ಮುಂತಾದವುಗಳು ಭ್ರಷ್ಟಾಚಾರದ ವಿವಿಧ ಮುಖಗಳು.

ಭ್ರಷ್ಟಾಚಾರವಿರುವುದು ಈಗ ಮಾತ್ರವೇ? ಹಿಂದೆ ಇರಲಿಲ್ಲವೇ? ಎನ್ನುವ ಪ್ರಶ್ನೆಗೆ, ಭ್ರಷ್ಟಾಚಾರ ಸರ್ವಕಾಲಿಕ ಸತ್ಯ ಎನ್ನುವುದೇ ಉತ್ತರ. ಹಿಂದೆಯೂ ಇತ್ತು, ಇಂದು ಇದೆ, ನಾಳೆಯೂ ಇರುತ್ತೆ. ಭ್ರಷ್ಟಾಚಾರ ಬೆಳೆಯಲಿಕ್ಕೆ ಮೂರು ಮುಖ್ಯ ಕಾರಣಗಳಿವೆ.

1. ಅಧಿಕಾರದ (power) ದುರುಪಯೋಗ.
2. ವಿವೇಚನೆಯ (Discretion) ದುರುಪಯೋಗ.
3. ಸಂದರ್ಭದ (Time) ದುರುಪಯೋಗ.

ಅಸ್ಪೃಶ್ಯತೆ-ಅಸಮಾನತೆ-ಧಾರ್ಮಿಕ ಪಿಡುಗುಗಳು. ಸತಿಸಹಗಮನ, ವರದಕ್ಷಿಣೆ, ಬಾಲ್ಯ ವಿವಾಹಗಳು ಸಾಮಾಜಿಕ ಪಿಡುಗುಗಳು. ಮಲೇರಿಯಾ, ಪ್ಲೇಗು, ಕಾಲರಾ ಮುಂತಾದ ರೋಗಗಳು ಸಾಂಕ್ರಾಮಿಕ ಪಿಡುಗುಗಳಾದರೆ, ಭ್ರಷ್ಟಾಚಾರ ಎನ್ನುವುದು ರಾಜಕೀಯ ಪಿಡುಗು. ರಾಜಕೀಯ ವ್ಯವಸ್ಥೆಯ (ಸಂವಿಧಾನ)ದ ದುರುಪಯೋಗವೇ ಮೂಲ ಕಾರಣ. ರಾಜಕಾರಣಿಗಳು ಹಾಗೂ ವಾಣಿಜ್ಯೋದ್ಯಮಿಗಳು ಭ್ರಷ್ಟಾಚಾರದ ಜನಕರು ಹಾಗೂ ಫಲಾನುಭವಿಗಳು.

ಭ್ರಷ್ಟಾಚಾರದ ತೀವ್ರ ದುಷ್ಪರಿಣಾಮಕ್ಕೆ ಗುರಿಯಾಗುವವರು ಈ ನಾಡಿನ ಜನಸಾಮಾನ್ಯರು. ಜೀವನಾವಶ್ಯಕ ವಸ್ತುಗಳ ವಿಪರೀತ ಬೆಲೆ ಏರಿಕೆಯಿಂದಾಗಿ ಎರಡೊತ್ತಿನ ಊಟಕ್ಕೂ ಗತಿಯಿಲ್ಲದಂತಾಗುತ್ತದೆ. ತಾನು ಮಾಡದ ತಪ್ಪಿಗೆ ಜನಸಾಮಾನ್ಯ ಸರ್ಕಾರದಿಂದಲೇ ಶೋಷಣೆಗೊಳಗಾಗುತ್ತಾನೆ. ಭ್ರಷ್ಟಾಚಾರ ಬಡವ ಹಾಗೂ ಶ್ರೀಮಂತರ ಮಧ್ಯೆ ಅಗಾಧ ಕಂದಕವನ್ನು ಸೃಷ್ಟಿಸುತ್ತಾ ಬಡವನನ್ನು ಅತ್ಯಂತ ಬಡವನನ್ನಾಗಿ, ಶ್ರೀಮಂತನನ್ನು ಅತ್ಯಂತ ಶ್ರೀಮಂತನನ್ನಾಗಿ ಮಾಡುತ್ತದೆ.

ಇನ್ನು ಕಪ್ಪು ಹಣದ ಬಗ್ಗೆ ಹೇಳುವುದಾದರೆ, ಎಲ್ಲವೂ ಅಂತೆ-ಕಂತೆಯ ಸಂತೆ. ಕಪ್ಪುಹಣ ಎಂದರೆ, ಎಲ್ಲರಿಗೂ ತಿಳಿದಂತೆ ತೆರಿಗೆ ವಂಚಿತ ಹಣ ಅಥವಾ ಬಚ್ಚಿಟ್ಟ ಹಣ. ಈಗ ವಿದೇಶದಲ್ಲಿರುವ ಭಾರತೀಯ ಸಂಜಾತರ ಹಣವನ್ನು ವಾಪಾಸು ತರುವ ಬಗ್ಗೆ ಹೋರಾಟ ನಡೆದಿದೆ. ಇದು ಹೇಗಿದೆ ಎಂದರೆ, "ಕೋಣ ಈಯಿತು ಎಂದರೆ ಕೊಟ್ಟಿಗೆಗೆ ಕಟ್ಟು" ಎನ್ನುವಂತಾಗಿದೆ.

ವಿದೇಶದಲ್ಲಿರುವ ಕಪ್ಪು ಹಣ ಯಾರದು? ಎಲ್ಲಿದೆ? ಎಷ್ಟಿದೆ? ಎನ್ನುವುದೇ ಯಕ್ಷಪ್ರಶ್ನೆ. ಈಗ ಲಭ್ಯವಾಗುತ್ತಿರುವ ಅಂಕಿಅಂಶಗಳಿಗೆ ಯಾವುದೇ ತರ್ಕಬದ್ಧವಾದ ತಳಹದಿಯಿಲ್ಲ. ದುರಂತವೆಂದರೆ, ನಾವು ವಿದೇಶದಲ್ಲಿರುವ ಕಪ್ಪುಹಣದ ಬಗ್ಗೆ ಮಾತನಾಡುತ್ತೇವೆ. ಆದರೆ, ಈ ದೇಶದಲ್ಲಿರುವ ಕಪ್ಪುಹಣದ ಬಗ್ಗೆ, ಅದರ ದುರುಪಯೋಗದ ಬಗ್ಗೆ ಹಾಗೂ ನಿರ್ಮೂಲನದ ಬಗ್ಗೆ ಯಾರೂ ಚಕಾರವೆತ್ತುತ್ತಿಲ್ಲ. ದಿನೇದಿನೇ ಕಪ್ಪು ಹಣದ ಸೃಷ್ಟಿ ಹೆಚ್ಚಾಗುತ್ತಿದ್ದರೂ ಅದರ ಬಗ್ಗೆ ಎಚ್ಚರವಹಿಸದೇ, ವಿದೇಶದಲ್ಲಿರುವ ಭಾರತೀಯ ಕಪ್ಪುಹಣದ ಬಗೆಗಿನ ಚರ್ಚೆ ಎಷ್ಟು ಸಮಂಜಸ?

ಕಪ್ಪುಹಣವನ್ನು ರಾಷ್ಟ್ರೀಯ ಸಂಪತ್ತೆಂದು ಘೋಷಿಸಬೇಕೆಂಬ ಬೇಡಿಕೆಯಿದೆ. ಅಸ್ಪೃಶ್ಯತಾ ಆಚರಣೆ ಅಪರಾಧವೆಂದು ನಮ್ಮ ಸಂವಿಧಾನ ಘೋಷಿಸಿದ್ದರೂ, ಇಂದಿಗೂ ಈ ಅಮಾನವೀಯ ಆಚರಣೆ ಜಾರಿಯಲ್ಲಿಲ್ಲವೇ? ಇಂತಹ ಬೇಡಿಕೆಗಳಿಗೆ ಬೆಲೆಯಿದೆಯೇ?

ಕಪ್ಪುಹಣವನ್ನು ದೇಶಕ್ಕೆ ವಾಪಸ್ಸು ತರಬೇಕು ಎಂದರೆ ಬೇಡವೆನ್ನುವವರು ಯಾರು? ಆದರೆ, ತರಲು ಸಾಧ್ಯವೇ? ಎನ್ನುವುದು ಮುಖ್ಯ ಪ್ರಶ್ನೆ. ಬೋಫೋರ್ಸ್ ಹಗರಣದ ಆರೋಪಿ ಕ್ವಟ್ರೋಚಿಯನ್ನು ವಶಕ್ಕೆ ಪಡೆಯವಲ್ಲಿ ನಮ್ಮ ಘನ ಸರ್ಕಾರಗಳು ವಿಫಲವಾದವು. ವಿದೇಶದಲ್ಲಿರುವ ಭೂಗತ ದೊರೆ ದಾವೂದ್ ಇಬ್ರಾಹಿಂ ನನ್ನು ವಶಕ್ಕೆ ಪಡೆಯಲು ಈವರೆವಿಗೂ ಸಾಧ್ಯವಾಗಿಲ್ಲ. ಒಬ್ಬ ಬಿನ್-ಲಾಡೆನ್ ನನ್ನು ಹತ್ಯೆಗೈಯಲು ಅಮೆರಿಕದಂತಹ ಬಲಾಢ್ಯ ರಾಷ್ಟ್ರಕ್ಕೆ 10 ವರ್ಷಗಳೇ ಬೇಕಾಯಿತೆಂದ ಮೇಲೆ, ಸ್ಪಷ್ಟ ಮಾಹಿತಿಯಿರದ, ವಿದೇಶದಲ್ಲಿರುವ ಕಪ್ಪುಹಣವನ್ನು ವಾಪಸ್ಸು ತರುವುದು ಅಮವಾಸ್ಯೆಯ ಕಾರಾಳ ರಾತ್ರಿಯಲ್ಲಿ ಕಣ್ಣಿಗೆ ಕಪ್ಪುಬಟ್ಟೆಯನ್ನು ಕಟ್ಟಿಕೊಂಡು ಇದ್ದಿಲನ್ನು ಹುಡುಕಿದಂತೆ.

ಗಮನಿಸಬೇಕಾದ ಮತ್ತೊಂದು ಮುಖ್ಯ ಸಂಗತಿಯೆಂದರೆ, ಭ್ರಷ್ಟಾಚಾರ ಹಾಗೂ ಕಪ್ಪುಹಣದ ಬಗ್ಗೆ ಮಾತನಾಡುವವರು ಅಧಿಕಾರ ಕಳೆದುಕೊಂಡ ವಿರೋಧ ಪಕ್ಷಗಳು. ಇಷ್ಟು ಕಾಳಜಿವಹಿಸಿ ಮಾತನಾಡುವ ಈ ಪಕ್ಷಗಳು ಅಧಿಕಾರದಲ್ಲಿದ್ದಾಗ ಭ್ರಷ್ಟಾಚಾರ ನಿಗ್ರಹಿಸಲು ಏನು ಕ್ರಮ ಕೈಗೊಂಡರು? ಎಂದು ಅವಲೋಕಿಸಿದಾಗ ಸಿಗುವ ಸಾಧನೆ ಶೂನ್ಯ. ಅಧಿಕಾರ ಸಿಕ್ಕಾಗ ಭ್ರಷ್ಟಾಚಾರದಲ್ಲಿ ಮುಳುಗುವುದು, ಅಧಿಕಾರ ಕಳೆದುಕೊಂಡಾಗ ಭ್ರಷ್ಟಾಚಾರದ ವಿರುದ್ಧ ಸಿಡಿದೇಳುವುದು ಎಲ್ಲಾ ಪಕ್ಷಗಳ ಜಾಯಮಾನವೇ ಈ ದೇಶದ ದೊಡ್ಡ ದುರಂತ.

ವಿಭಿನ್ನತೆಯ ಹಾಗೂ ಉಗ್ರ ರಾಷ್ಟ್ರ ಭಕ್ತಿಯ ಬಿ.ಜೆ.ಪಿ. ಮತ್ತು ಪರಿವಾರ ಈಗ ರಾಷ್ಟ್ರಮಟ್ಟದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ವಿರುದ್ಧದ ಸಮರಕ್ಕೆ ಬೆಂಬಲಿಸಿ ತನ್ನ ಕಾಳಜಿಯನ್ನು ಮೆರೆದಿದೆ. ಆದರೆ, ಬಿ.ಜೆ.ಪಿ. ಅಧಿಕಾರವಿರುವ ಕರ್ನಾಟಕದಲ್ಲಿ ಸರ್ಕಾರದ ಭ್ರಷ್ಟತೆ ಬಗ್ಗೆ ದಿವ್ಯ ನಿರ್ಲಕ್ಷ್ಯ ವಹಿಸುತ್ತದೆ.

2ಜಿ ತರಂಗಾಂತರ ಹಗರಣದ ತನಿಖೆ ಬಗ್ಗೆ ಪಟ್ಟುಹಿಡಿಯುವ ಬಿ.ಜೆ.ಪಿ., ತಮ್ಮ ಪಕ್ಷದ ಗಣಿ ಹಗರಣದ ಬಗ್ಗೆ, ಮುಖ್ಯ ಮಂತ್ರಿಗಳ ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಹಾಗೂ ಅಕ್ರಮ ಆಸ್ತಿಗಳಿಕೆಯ ಬಗ್ಗೆ ಜಾಣ ಮೌನವಹಿಸುತ್ತದೆ.

ಲೋಕಪಾಲ್ ಮಸೂದೆಯ ಪರಮಾಧಿಕಾರದ ಬಗ್ಗೆ ಮಾತನಾಡುವ ಬಿ.ಜೆ.ಪಿ., ಕರ್ನಾಟಕದ ಲೋಕಾಯುಕ್ತರಿಗೆ ಪರಮಾಧಿಕಾರ ನೀಡುವ ಎಲ್ಲ ಅವಕಾಶಗಳಿದ್ದರೂ ಇದುವರೆಗೂ ಪರಮಾಧಿಕಾರ ನೀಡಿಲ್ಲ. ಬಿ.ಜೆ.ಪಿ. ಅಧಿಕಾರದಲ್ಲಿರುವ ಗುಜರಾತಿನಲ್ಲಿ ಈಗಲೂ ಲೋಕಾಯುಕ್ತರಿಲ್ಲ.

ಕೊಪ್ಪಳದಲ್ಲಿ, ಕೂಲಿಯನ್ನು ಕೇಳಿದ ಕಾರ್ಮಿಕರ ಮೇಲೆ ಅಮಾನುಷವಾಗಿ ಪೊಲೀಸ್ ದೌರ್ಜನ್ಯವನ್ನು ನಡೆಸಿದ ಮಾನ್ಯ ಸರ್ಕಾರ, ಬಾಬಾ ರಾಮದೇವ್ ಮೇಲಿನ ದೌರ್ಜನ್ಯವನ್ನು ಖಂಡಿಸುವ ನಿರ್ಣಯವನ್ನು ವಿಧಾನಸಭೆಯಲ್ಲಿ ಅಂಗೀಕರಿಸುತ್ತದೆ.

2008ರ ವಿಧಾನಸಭಾ ಚುನಾವಣೆಯಲ್ಲಿ ಬಿ.ಜೆ.ಪಿ.ಯ ಬಲ 110. ಮೂರು ವರ್ಷಗಳ ನಂತರ ಈಗಿನ ಬಿ.ಜೆ.ಪಿ.ಯ ಬಲ 120. ಬಲವೃದ್ಧಿಗೆ ಕಾರಣ ಆಪರೇಷನ್ ಕಮಲ. ಉಪಚುನಾವಣೆಯಲ್ಲಿ ಗೆದ್ದದ್ದು-ಭ್ರಷ್ಟಾಚಾರ! ಸೋತದ್ದು-ಜನಸಾಮಾನ್ಯ! (ಆಮ್ ಆದ್ಮಿ).

(7ನೇ ಪುಟಕ್ಕೆ)

ಜಾಗತೀಕರಣದಿಂದ ಪ್ರಜಾಪ್ರಭುತ್ವದ ಕಡೆಗೆ

ಸಂಪಾದಕರೊಡನೆ ಸಂವಾದ

ಮಲ್ಲಿಕಾರ್ಜುನ ಗುಮ್ಮಗೋಳ

ಪ್ರೀಯ ಸಂಪಾದಕರೇ,

ಮಧ್ಯಪ್ರಾಚ್ಯ ದೇಶಗಳಲ್ಲಿ ರಾಜಕೀಯ ಬದಲಾವಣೆಯ ಗಾಳಿ ಬೀಸುತ್ತಿದೆ. ಪ್ರಜಾಪ್ರಭುತ್ವದ ಪರವಾದ ಕೂಗು ಕೇಳುತ್ತಿದೆ. 1789 ಮತ್ತು 1917ರಲ್ಲಿ ಯುರೋಪಿನಲ್ಲಿ, ತದನಂತರ ಲ್ಯಾಟಿನ್ ಅಮೆರಿಕದಲ್ಲಿ ಹಾಗೂ 1991ರಲ್ಲಿ ಸೋವಿಯತ್ ರಶಿಯಾದಲ್ಲಿ ಇಂತಹದೇ ಕ್ರಾಂತಿ ಉಂಟಾಗಿ ಅಲ್ಲಿ ರಾಜಕೀಯ ಬದಲಾವಣೆ ಉಂಟಾಯಿತು. ಈಗ ಅದು ಈಜಿಪ್ಟ್, ಟುನೀಷಿಯಾ ಮತ್ತು ಲಿಬಿಯಾಗಳಲ್ಲಿ ಆರಂಭವಾಗುವ ಮೂಲಕ ಇನ್ನುಳಿದ ಮಧ್ಯಪ್ರಾಚ್ಯ ದೇಶಗಳಾದ ಯಮೆನ್, ಇರಾನ್, ಬಹರೇನ್, ಅಲ್ಜೀರಿಯಾ, ಜೋರ್ಡಾನ್, ಸಿರಿಯಾ ಹಾಗೂ ಸುಡಾನ್ ದಂಥಹ ದೇಶಗಳಲ್ಲಿಯ ಅರಸೊತ್ತಿಗೆ, ಮಿಲಿಟರಿ ಸರ್ವಾಧಿಕಾರ ಅಥವಾ ಅಧ್ಯಕ್ಷೀಯ ಮಾದರಿಯ ನಿರಂಕುಶ ಸರಕಾರಗಳನ್ನು ಪದಚ್ಯುತಗೊಳಿಸುವ ಹಂತಕ್ಕೆ ಬಂದಿದೆ. ಈ ದೇಶಗಳಲ್ಲಿ ಪ್ರಜಾಪ್ರಭುತ್ವ ಮಾದರಿಯ ಸರಕಾರಗಳನ್ನು ಅಸ್ಥಿತ್ವಕ್ಕೆ ತರುವ ಪಣ ತೊಟ್ಟಿರುವ ಅಮೆರಿಕದ ಆಶಯಕ್ಕೆ ತಕ್ಕಂತೆ ವಿಶ್ವ ಸಂಸ್ಥೆಯೂ ಸಹ ಹೆಜ್ಜೆ ಹಾಕುತ್ತಿದೆ.

ಎಂಬತ್ತರ ದಶಕದಲ್ಲಿ ಆರಂಭವಾದ ದ್ವಿತೀಯ ಕೈಗಾರಿಕಾ ಕ್ರಾಂತಿಯು ಜಾಗತಿಕ ಸಮುದಾಯವನ್ನು ಕೊಡಕೊಳ್ಳುವಿಕೆಯ ಮೂಲಕ ವ್ಯಾಪಾರ ವಾಣಿಜ್ಯ ಎಂಬ ಜಾಲಕ್ಕೆ ಒಳಪಡಿಸಿತು. ತೊಂಬತ್ತರ ದಶಕದಲ್ಲಿ ಆರಂಭವಾದ ಜಾಗತೀಕರಣ ನೀತಿಯು ವಿಭಿನ್ನ ಧರ್ಮ–ಜನಾಂಗದ ಹಾಗೂ ವಿಭಿನ್ನ ರಾಜಕೀಯ ಪದ್ಧತಿಯನ್ನು ಹೊಂದಿದ ದೇಶಗಳನ್ನು ಪರಸ್ಪರ ಅವಲಂಭನೆಯ ಅನಿವಾರ್ಯತೆಗೆ ಬಂಧಿಸಿತು. ಈ ವ್ಯಾಪಾರಿ ವಹಿವಾಟುಗಳನ್ನು ನಿಬಂಧನೆಗೆ ಒಳಪಡಿಸುವ ಸಲುವಾಗಿ ಗ್ಯಾಟ್ ಮತ್ತು ವಿಶ್ವ ವಾಣಿಜ್ಯ ಸಂಸ್ಥೆ(GATT-WTO) ಅಸ್ಥಿತ್ವಕ್ಕೆ ಬಂದಿತು. ಅದು ಇಂದು 'ಪರ್ಯಾಯ ಆರ್ಥಿಕ ಸರಕಾರ' ಎನ್ನುವಷ್ಟರ ಮಟ್ಟಿಗೆ ಜಾಗತಿಕ ಮಟ್ಟದಲ್ಲಿ ತನ್ನ ಪ್ರಭಾವವನ್ನು ಹೊಂದಿದೆ. ಯಾವುದೇ ಒಂದು ರಾಷ್ಟ್ರದ ಮೇಲೆ ಆರ್ಥಿಕ ದಿಗ್ಬಂಧನವನ್ನು ಹೇರುವ ಮೂಲಕ ಅದನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುವ ಶಕ್ತಿಯನ್ನು ಹೊಂದಿದೆ. ಇದಕ್ಕೆ ಬೆಂಬಲವಾಗಿ ಪ್ರಬಲ ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ಹಾಗೂ ಜಪಾನ್‌ನಂಥಹ ರಾಷ್ಟ್ರಗಳು ನಿಂತಿವೆ. ಅವುಗಳ ಮಿಲಿಟರಿ ಒಕ್ಕೂಟವಾದ 'ನ್ಯಾಟೋ' ಜಗತ್ತಿನ ಎಲ್ಲ ಆಯಕಟ್ಟಿನ ಪ್ರದೇಶಗಳಲ್ಲಿ ತನ್ನ ಪಡೆಯನ್ನು ಸನ್ನದ್ಧವಾಗಿ ನಿಲ್ಲಿಸಿದೆ. ಈ ಹಿಂದೆ ಇರಾಕ್ ದೇಶದ ಮೇಲೆ ಆರ್ಥಿಕ ದಿಗ್ಬಂಧನವನ್ನು ವಿಧಿಸಿ, ಆ ದೇಶದ ತೈಲವನ್ನು ಜಗತ್ತಿನ ಯಾವುದೇ ದೇಶವು ಖರೀದಿಸದಂತೆ ಮಾಡಲಾಯಿತು. ಇದರಿಂದ ಆಹಾರ ಮತ್ತು ಔಷಧಿ ಇಲ್ಲದೆ ಜನ ತೀವ್ರ ಸಂಕಟಕ್ಕೆ ಸಿಗಬೇಕಾಯಿತು. ಇದು ಪರೋಕ್ಷವಾಗಿ ಸರ್ವಾಧಿಕಾರಿ ಸದ್ದಾಂ ಹುಸೇನ್‌ನ ಮೇಲೆ ದಂಗೆ ಏಳುವಂತೆ ಅಲ್ಲಿಯ ಜನರಿಗೆ ಪ್ರೇರಣೆಯನ್ನು ನೀಡಿತು. ಆ ಕ್ರಾಂತಿಗೆ ಅಮೆರಿಕ ಮಿಲಿಟರಿ ಪಡೆ ಕೈಜೋಡಿಸಿ ಸದ್ದಾಂ ಹುಸೇನ್‌ನನ್ನು ಪದಚ್ಯುತಗೊಳಿಸಿತು.

> **ಪ್ರಜಾಪ್ರಭುತ್ವವೆಂಬುದು ಜನರಿಗೆ ರಾಜಕೀಯ ಅಧಿಕಾರವನ್ನು ಹಾಗೂ ಮುಕ್ತ ಸ್ವಾತಂತ್ರ್ಯವನ್ನು ತಂದು ಕೊಡುತ್ತದೆ. ಆದರೆ ಆರ್ಥಿಕ ಹಾಗೂ ಸಾಮಾಜಿಕ ಸಮಾನತೆಯನ್ನು ಅದು ತರಲು ಸಾಧ್ಯವಿಲ್ಲ. ಕತಾರ್, ಯುನೈಟೆಡ್ ಅರಬ್ ಎಮಿರೇಟ್ಸ್ ಹಾಗೂ ಕುವೈತ್ ದೇಶಗಳಲ್ಲಿ ಸರಕಾರಗಳು ತಮ್ಮ ಜನರಿಗೆ ಯಾವುದೇ ತೆರಿಗೆಯನ್ನು ವಿಧಿಸುವದಿಲ್ಲ. ಅಲ್ಲದೆ ಮದುವೆ ಖರ್ಚು ಬರಿಸುವಂಥ, ಮನೆ ಕಟ್ಟಿಸಿ ಕೊಡುವಂಥ ಹಲವಾರು ಜನ ಕಲ್ಯಾಣ ಕೆಲಸಗಳನ್ನು ಮಾಡುತ್ತವೆ. ಆದರೆ ಮುಕ್ತ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಕೊರತೆ ಬಹಳವಾಗಿದೆ. ಹಮ್ಮುರಾಭಿಯ ಶಾಸನ ಇನ್ನೂ ಅಲ್ಲಿ ಕರಾಳವಾಗಿ ಕಾಡುತ್ತಿದೆ. 'ಉಪವಾಸವಿದ್ರು ಉಪದ್ರವವಿರಬಾರದು' ಎಂಬುದು ಮನುಷ್ಯ ಸ್ವಭಾವ. ಹೀಗಾಗಿ ಅಲ್ಲಿಯ ಜನ ಪ್ರಜಾಪ್ರಭುತ್ವಕ್ಕಾಗಿ ಹಾತೊರೆಯುತ್ತಿದ್ದಾರೆ. ಆದರೆ ಭಾರತದಲ್ಲಿ ಇದಕ್ಕಿಂತ ತದ್ವಿರುದ್ಧವಾದ ವಾತಾವರಣವಿದೆ. ಜನರ ತಲೆಯ ಮೇಲೆ ಮಣಭಾರ ತೆರಿಗೆ ಹೇರುವ ಸರಕಾರಗಳು ಅವರಿಗೆ ಕನಿಷ್ಠ ಸೌಲಭ್ಯಗಳನ್ನೂ ಕಲ್ಪಿಸುವದಿಲ್ಲ.**

ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಮಾನವ ಹಕ್ಕುಗಳನ್ನು ಉಲ್ಲಂಘನೆ ಮಾಡುವ ಯಾವುದೇ ರಾಷ್ಟ್ರವಿರಲಿ ಅಲ್ಲಿ ಅಮೆರಿಕ ನೇರವಾಗಿ ಮಧ್ಯಪ್ರವೇಶಿಸುತ್ತದೆ. ಇದೇ ಕಾರಣಕ್ಕಾಗಿ ಮಧ್ಯಪ್ರಾಚ್ಯ ದೇಶಗಳಲ್ಲಿ ಅಮೆರಿಕ ಹಸ್ತಕ್ಷೇಪವನ್ನು ಮಾಡುತ್ತಿದೆ. ಏಕ ಚಕ್ರಾಧಿಪತಿಗಳ ಸರ್ವಾಧಿಕಾರವನ್ನು ಕೊನೆಗೊಳಿಸಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಅಲ್ಲಿಯ ಜನ ದಂಗೆ ಎದ್ದಿದ್ದಾರೆ. ಅವರಿಗೆ ಅಮೆರಿಕ ಶಸ್ತ್ರಾಸ್ತ್ರಗಳನ್ನು ಸಹ ಪೂರೈಸುತ್ತಿದೆ! ಈ ಹಿಂದೆ ನಡೆದ ಎಲ್ಲ ಜಾಗತಿಕ ಕ್ರಾಂತಿಗಳಿಗೆ ಟಿ. ಹೆಚ್. ಗ್ರೀನ್, ಜೆ. ಎಸ್. ಮಿಲ್, ಮಾಂಟೆಸ್ಕ್ಯೂ, ಡಾಂಟೆ ಯಂಥಹ ಹಲವಾರು ರಾಜಕೀಯ ಚಿಂತಕರ ವಿಚಾರಗಳು ಪ್ರೇರಣೆಯನ್ನು ನೀಡಿದ್ದವು. ಆದರೆ ಮಧ್ಯಪ್ರಾಚ್ಯ ದೇಶಗಳಲ್ಲಿ ಈಗ ನಡೆಯುತ್ತಿರುವ ಕ್ರಾಂತಿಗೆ ನಿರುದ್ಯೋಗ, ಬಡತನ, ಭ್ರಷ್ಟಾಚಾರ ಹಾಗೂ ಮೂಲಭೂತ ಹಕ್ಕುಗಳ ಧಮನವೇ ಮುಖ್ಯ ಕಾರಣವಾಗಿದೆ.

ಈ ಸರ್ವಾಧಿಕಾರಿ ಧೋರಣೆಯ ವಿರುದ್ಧ ಸುಶಿಕ್ಷಿತ ಯುವ ಜನಾಂಗ ಸಾಮಾಜಿಕ ಜಾಲತಾಣಗಳಾದ ಫೇಸ್ ಬುಕ್, ಯು ಟ್ಯೂಬ್ ಹಾಗೂ ಟ್ವಿಟ್ಟರ್‌ಗಳ ಮುಖಾಂತರ ಕ್ರಾಂತಿಗೆ ಪ್ರೇರಣೆಯನ್ನು ನೀಡಿದ್ದಾರೆ. ಆದರೆ ಈ ದೇಶಗಳಲ್ಲಿ ಸರ್ವಾಧಿಕಾರ ಅಷ್ಟು ಸುಲಭವಾಗಿ ಕೊನೆಗೊಳ್ಳುತ್ತದೆ ಎಂದು ಹೇಳಲಾಗದು. ಮುಸ್ಲಿಮ್ ಮೂಲಭೂತವಾದಿಗಳ 'ನ್ಯೂಕ್ಲಿಯರ್ ಜಹಾದ್' ಏನಾದರೂ ಕೆಲಸ ಮಾಡಿದರೆ ದೊಡ್ಡ ದುರಂತವೇ ಸಂಭವಿಸಬಹುದು. ಪಾಕಿಸ್ತಾನದ ಪರಮಾಣು ಪಿತಾಮಹ ಅಬ್ದುಲ್ ಖಾದರ್ ಖಾನ್ ಈಗಾಗಲೆ ಪರಮಾಣು ತಂತ್ರಜ್ಞಾನವನ್ನು ಲಿಬಿಯಾ ಸೇರಿದಂತೆ ಹಲವಾರು ಮುಸ್ಲಿಮ್ ದೇಶಗಳಿಗೆ ಕಳ್ಳಸಾಗಾಣಿಕೆ ಮಾಡಿದ್ದಾರೆ. ಅಲ್ಲದೆ ರಾಸಾಯನಿಕ ಅಸ್ತ್ರಗಳನ್ನು ಈ ದೇಶಗಳು ಹೊಂದಿರುವ ಗುಮಾನಿ ಜಗತ್ತನ್ನು ಕಾಡುತ್ತಿದೆ. ಈ ಹಿನ್ನೆಲೆಯಲ್ಲಿ ಅಲ್ಲಿಯ ಸರ್ವಾಧಿಕಾರಿಗಳನ್ನು ಅತ್ಯಂತ ಉಪಾಯದಿಂದ ಹಾಗೂ ಅವರ ಪ್ರಾಣ ಮತ್ತು ಆಸ್ತಿಗೆ ಧಕ್ಕೆಯಾಗದ ರೀತಿಯಿಂದ ಕೆಳಗೆ ಇಳಿಸುವ ತಂತ್ರಗಾರಿಕೆಯನ್ನು ಅಮೆರಿಕ ಹೊಂದಿದೆ. ಈ ಕಾರಣಕ್ಕಾಗಿ ಸಂವಿಧಾನಾತ್ಮಕ ಅರಸೊತ್ತಿಗೆ ಅಲ್ಲಿ ಜಾರಿಯಾದರೂ ಅದನ್ನು ಸ್ವಾಗತಿಸಲು ಅದು ಸಿದ್ಧವಾಗಿದೆ.

ಅಂತರಾಷ್ಟ್ರೀಯ ರಾಜಕಾರಣದಲ್ಲಿ ರಾಜಕೀಯ ಬಲ ಈಗ ಅಮೆರಿಕದ ಪರವಾಗಿದೆ. ತೊಂಬತ್ತರ ದಶಕದ ಮುಂಚೆ ಸೋವಿಯತ್ ಯೂನಿಯನ್ ಅಮೆರಿಕದ ಎಲ್ಲ ಬಲ ಪ್ರಯೋಗಗಳ ಮೇಲೆ ತನ್ನ "ವಿಟೋ" ಅಧಿಕಾರವನ್ನು ಚಲಾಯಿಸುವ ಮೂಲಕ ಜಾಗತಿಕ ಸಮತೋಲನವನ್ನು ಕಾಯ್ದುಕೊಂಡು ಬಂದಿತ್ತು. ಅದಕ್ಕೆ ಸಮಾನವಾದ ಮಿಲಿಟರಿ ಶಕ್ತಿಯನ್ನು ಹೊಂದಿತ್ತು. ಸೋವಿಯತ್ ಯೂನಿಯನ್ ವಿಘಟನೆಯ ನಂತರ ಅಮೆರಿಕೆಗೆ ಪ್ರತಿಸ್ಪರ್ಧಿಯಾಗಿ ಚೀನಾ ಬೆಳೆಯಬಲ್ಲದು ಎಂಬ ನಿರೀಕ್ಷೆ ಸಧ್ಯದ ಮಟ್ಟಿಗೆ ಹುಸಿಯಾಗಿದೆ. ಜಗತ್ತಿನ ಏಕೈಕ ದೊಡ್ಡ ಕಮ್ಯೂನಿಷ್ಟ್ ದೇಶವಾದ ಚೀನಾ

ಮಿಕ್ಕೆಲ್ಲಕಡೆ ಕಮ್ಯೂನಿಸಮ್ ಕಣ್ಣು ಮುಚ್ಚುತ್ತಿದ್ದರೂ ಮೂಖ ಪ್ರೇಕ್ಷ ನಾಗಿ ನೋಡುವಂತಾಗಿದೆ.

ಪ್ರಜಾಪ್ರಭುತ್ವವೆಂಬುದು ಜನರಿಗೆ ರಾಜಕೀಯ ಅಧಿಕಾರವನ್ನು ಹಾಗೂ ಮುಕ್ತ ಸ್ವಾತಂತ್ರ್ಯವನ್ನು ತಂದು ಕೊಡುತ್ತದೆ. ಆದರೆ ಆರ್ಥಿಕ ಹಾಗೂ ಸಾಮಾಜಿಕ ಸಮಾನತೆಯನ್ನು ಅದು ತರಲು ಸಾಧ್ಯವಿಲ್ಲ. ಕತಾರ್, ಯುನೈಟೆಡ್ ಅರಬ್ ಎಮಿರೇಟ್ಸ್ ಹಾಗೂ ಕುವೈತ್ ದೇಶಗಳಲ್ಲಿ ಸರಕಾರಗಳು ತಮ್ಮ ಜನರಿಗೆ ಯಾವುದೇ ತೆರಿಗೆಯನ್ನು ವಿಧಿಸುವದಿಲ್ಲ. ಅಲ್ಲದೆ ಮದುವೆ ಖರ್ಚು ಬರಿಸುವಂಥ, ಮನೆ ಕಟ್ಟಿಸಿ ಕೊಡುವಂಥ ಹಲವಾರು ಜನ ಕಲ್ಯಾಣ ಕೆಲಸಗಳನ್ನು ಮಾಡುತ್ತವೆ. ಆದರೆ ಮುಕ್ತ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಕೊರತೆ ಬಹಳವಾಗಿದೆ. ಹಮ್ಮುರಾಭಿಯ ಶಾಸನ ಇನ್ನೂ ಅಲ್ಲಿ ಕರಾಳವಾಗಿ ಕಾಡುತ್ತಿದೆ. 'ಉಪವಾಸವಿದ್ರು ಉಪದ್ರವವಿರಬಾರದು' ಎಂಬುದು ಮನುಷ್ಯ ಸ್ವಭಾವ ಹೀಗಾಗಿ ಅಲ್ಲಿಯ ಜನ ಪ್ರಜಾಪ್ರಭುತ್ವಕ್ಕಾಗಿ ಹಾತೊರೆಯುತ್ತಿದ್ದಾರೆ.

ಆದರೆ ಭಾರತದಲ್ಲಿ ಇದಕ್ಕಿಂತ ತದ್ವಿರುದ್ಧವಾದ ವಾತಾವರಣವಿದೆ. ಜನರ ತಲೆಯ ಮೇಲೆ ಮಣಭಾರ ತೆರಿಗೆ ಹೇರುವ ಸರಕಾರಗಳು ಅವರಿಗೆ ಕನಿಷ್ಠ ಸೌಲಭ್ಯಗಳನ್ನೂ ಕಲ್ಪಿಸುವದಿಲ್ಲ. ಆದರೆ ಅಪರಿಮಿತವಾದ ಸ್ವಾತಂತ್ರ್ಯವನ್ನು ಕೊಟ್ಟಿವೆ. ಎಲ್ಲಿ ಬೇಕಾದರೂ ನಿಂತು ಉಚ್ಚೆ ಹೊಯ್ಯಬಹುದು ಯಾರೂ ಕೇಳುವದಿಲ್ಲ! ಶೇ 37ರಷ್ಟು ಜನ ಬಡತನ ರೇಖೆಯ ಕೆಳಗೆ ಜೀವಿಸುತ್ತಿದ್ದಾರೆ. ನಿರುದ್ಯೋಗ, ಬೆಲೆ ಏರಿಕೆ, ಭ್ರಷ್ಟಾಚಾರ, ರೈತರ ಆತ್ಮಹತ್ಯೆ ಹಾಗೂ ಅನಾರೋಗ್ಯಗಳು ಇಲ್ಲಿ ಕ್ರಾಂತಿಗೆ ಕಾರಣಗಳೇ ಆಗುವದಿಲ್ಲ!

ಪ್ರಜಾಪ್ರಭುತ್ವವು ಜಾಗತೀಕರಣಕ್ಕೆ ಸ್ವರ್ಗವಿದ್ದಂತೆ. ಅಲ್ಲಿ ಹಣವಿದ್ದವರು ಏನನ್ನಾದರೂ ಖರೀದಿಸಬಹುದು, ಎಷ್ಟಾದರೂ ಗಳಿಸಬಹುದು. ಈ ಅವಕಾಶವೇ ಬಂಡವಾಳಶಾಹಿಗಳಿಗೆ ಪ್ರಜಾಪ್ರಭುತ್ವವನ್ನು ಬೆಂಬಲಿಸುವಂಥಹ ಪ್ರೇರಣೆಯನ್ನು ನೀಡಿದೆ. ಇಂದಿನ ನಿರಂಕುಶ ಆಡಳಿತಗಾರರು ತಮ್ಮ ಅಧಿಕಾರವನ್ನು ಕಳೆದುಕೊಳ್ಳಬಹುದು, ಮುಂದೆ ಆ ಗದ್ದುಗೆಗೆ ಬಂಡವಾಳಶಾಹಿಗಳು ಬಂದು ಕುಳಿತುಕೊಳ್ಳುವದಿಲ್ಲ ಎಂಬ ಗ್ಯಾರಂಟಿ ಏನಿದೆ? ಜಾಗತೀಕರಣದ ಪರಿಣಾಮವಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ತಮ್ಮ ಪ್ರಾಕೃತಿಕ ಸಂಪತ್ತನ್ನು ತ್ವರಿತವಾಗಿ ಕಳೆದುಕೊಳ್ಳುತ್ತಿವೆ. ಅದಕ್ಕೆ ಬದಲಾಗಿ ಸಿದ್ಧ ವಸ್ತುಗಳನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತಿವೆ. ಇದಕ್ಕಾಗಿ ಪ್ರತಿವರ್ಷ 500 ರಿಂದ 800 ಬಿಲಿಯನ್ ಡಾಲರ್ ಹಣವನ್ನು ವ್ಯಯಿಸುತ್ತಿವೆ. ಅದೆ ತಾವು ರಫ್ತು ಮಾಡಿದ ಕಚ್ಚಾ ಪದಾರ್ಥಕ್ಕೆ ಕೇವಲ 50 ರಿಂದ 80 ಬಿಲಿಯನ್ ಡಾಲರ್ ಹಣವನ್ನು ಆದಾಯವಾಗಿ ಪಡೆದುಕೊಳ್ಳುತ್ತಿವೆ. ತೃತಿಯ ಜಗತ್ತಿನ ರಾಷ್ಟ್ರಗಳು ಶಸ್ತ್ರಾಸ್ತ್ರಗಳನ್ನು ಉತ್ಪಾದಿಸುವ ಹಾಗಿಲ್ಲ ಹಾಗೂ ಹೊಂದುವ ಹಾಗಿಲ್ಲ. ತಮ್ಮ ರಕ್ಷಣೆಗಾಗಿ ಅವು ಅಮೆರಿಕದಂತ ಪ್ರಬಲ ರಾಷ್ಟ್ರಗಳ ಮೇಲೆ ಅವಲಂಭಿತವಾಗಬೇಕಾಗಿದೆ. ಈಗ ತೈಲ ಸಂಪದ್ಭರಿತ ರಾಷ್ಟ್ರಗಳಲ್ಲಿ ಉಂಟಾಗಿರುವ ಅಂದೋಲನ ಅಮೆರಿಕೆಗೆ ಅವರ್ಣನೀಯ ಆನಂದವನ್ನು ಉಂಟುಮಾಡಿದೆ. ಮಾನವ ಹಕ್ಕುಗಳು ಮತ್ತು ಪ್ರಜಾಪ್ರಭುತ್ವದ ಹೆಸರಿನಲ್ಲಿ ಅದು ತನ್ನ ಆರ್ಥಿಕ ಸಾಮ್ರಾಜ್ಯಶಾಹಿತ್ವವನ್ನು ವಿಸ್ತರಿಸಿಕೊಳ್ಳುವ ಧಾವಂತದಲ್ಲಿದೆ. □

ತಡೆಯುವ ತಾಕತ್ತು ಸಂವಿಧಾನಕ್ಕಿದೆಯೇ?

(4ನೇ ಪುಟದಿಂದ)

ಯೂ ಸಹ "ಭಾರತದ ಇಂದಿನ ಪರಿಸ್ಥಿತಿಯಲ್ಲಿ ಪ್ರಸ್ತುತ ಸರ್ಕಾರ ರೂಪಿಸಿರುವ PSC ಆಧಾರಿತ ಲಾಭ ಹಂಚಿಕೆ ಸ್ವರೂಪವು ಯಾವ ರೀತಿಯಲ್ಲೂ ಸರ್ಕಾರಕ್ಕೆ ಲಾಭ ತಂದುಕೊಡುವುದಿಲ್ಲ. ಆದ್ದರಿಂದ ಈ ಒಪ್ಪಂದದಲ್ಲೇ ಮೂಲಭೂತ ಬದಲಾವಣೆ ತರಬೇಕು ಮತ್ತು ಬಂಡವಾಳಾಧಾರಿತ ಲಾಭ ಹಂಚಿಕೆಯ ಬದಲಿಗೆ, ರಾಯಲ್ಟಿ (ರಾಯಧನ)ಆಧಾರಿತ ಒಪ್ಪಂದವೇ ಸೂಕ್ತವೆಂದು" ಸಲಹೆ ನೀಡಿದೆ. ಈ ರೀತಿ ಅಂಬಾನಿ ಕಂಪನಿ ಬೇಕಾಬಿಟ್ಟಿ ಬಂಡವಾಳ ವೆಚ್ಚವನ್ನು ಹೆಚ್ಚಿಸಿದ್ದನ್ನು ಸರ್ಕಾರ ಒಪ್ಪಿಕೊಂಡಿದ್ದು ಹೇಗೆ ಎಂದು ಲೆಕ್ಕ ಪರಿಶೋಧಕರು ಪ್ರಶ್ನಿಸಿದ್ದಾರೆ. ಈ ರೀತಿ ಖಾಸಗಿಯವರೊಡನೆ ವ್ಯಾವಹಾರಿಕ ಒಪ್ಪಂದ ಮಾಡಿಕೊಳ್ಳುವಾಗ ಸರ್ಕಾರದ ಆರ್ಥಿಕ ಹಿತಾಸಕ್ತಿಯನ್ನು ಕಾಪಾಡುವಂತೆ ಒಪ್ಪಂದ ರಚಿತವಾಗಬೇಕೆಂದೂ ಸಲಹೆ ನೀಡಿದೆ.

ಆದರೆ CAG ಯೇ ಗುರುತಿಸಿರುವಂತೆ ಲಾಭ ಹಂಚಿಕೆ ಒಪ್ಪಂದದ ಸ್ವರೂಪದಲ್ಲೇ ಸರ್ಕಾರಕ್ಕೆ ಆಗುವ ಅನ್ಯಾಯದ ಮೂಲವಿದೆ. ಅರ್ಥಾತ್ ಖಾಸಗಿ-ಸರ್ಕಾರಿ ಸಹಭಾಗಿತ್ವದಲ್ಲೇ ಜನರ ಸಂಪನ್ಮೂಲ ಲೂಟಿಯಾಗುವುದರ ಮೂಲವಿದೆ. ಮೂಲ ಇದರ ಬದಲಾದ-ಆರ್ಥಿಕ ನೀತಿಗಳಲ್ಲಿದೆ. ವಿದೇಶಿ ಮತ್ತು ಖಾಸಗಿ ಬಂಡವಾಳವನ್ನು ಹೆಚ್ಚೆಚ್ಚು ಆಕರ್ಷಿಸುವುದರಿಂದ ಮಾತ್ರ ಈ ದೇಶದ ಅಭಿವೃದ್ಧಿ ಸಾಧ್ಯ ಎಂಬ ಕಾರ್ಪೊರೇಟ್ ಅಭಿವೃದ್ಧಿ ಮೀಮಾಂಸೆಯೇ ಈ ಅಧಿಕೃತ ಹಗಲು-ದರೋಡೆ ಮತ್ತು ಬ್ರಹ್ಮಾಂಡ ಭ್ರಷ್ಟತೆಯ ಜನನಿ. ಆದರೆ ಈ ದೇಶದ ವರಿಷ್ಠ ನ್ಯಾಯಾಲಯವೂ ಸಹ ಈ ಬಗೆಯ ಆರ್ಥಿಕ ನೀತಿಯ ಪರವಾಗಿ ನಿಂತಿದೆ. ಮತ್ತು ತಾನು ಸರ್ಕಾರ ರೂಪಿಸುವ ಆರ್ಥಿಕ ನೀತಿ ಜನರ ಪರವೋ ಅಲ್ಲವೋ ಎಂಬ ವಿಮರ್ಶೆಯಲ್ಲಿ ತೊಡಗುವುದಿಲ್ಲ. ಅದನ್ನು ಮಾಡಲು ಪಾರ್ಲಿಮೆಂಟೇ ಸೂಕ್ತ ಎಂದು ಹೇಳಿಯಾಗಿದೆ.

ಆದ್ದರಿಂದಲೇ ಅಂಬಾನಿಯಂತವರು ತಾವು ಏಕೆ ಬಂಡವಾಳ ವೆಚ್ಚ ಹೆಚ್ಚಿಸಿದೆವು ಎಂಬುದರ ಲೆಕ್ಕ ಕೇಳುವ ಅಧಿಕಾರ ಸಾಂವಿಧಾನಿಕ ಸಂಸ್ಥೆಯಾದ CAG ಗೂ ಇಲ್ಲವೆಂದು ಸಡ್ಡು ಹೊಡೆದಿದೆ. ಹಾಗೆ ನೋಡಿದರೆ ಈ ಬಾಬತ್ತಿನಲ್ಲಿ ಮಾಜಿ ಇಂಧನ ಮಂತ್ರಿ ಮುರಳಿ ದೆವೊರಾ ನಂತ ಮಂತ್ರಿಗಳ ಕೈ ನೂರಿನ್ನೂರು ಕೋಟಿ ಬೆಚ್ಚಗಾಗಿರಬಹುದು. ಆದರೆ 30,000 ಕೋಟಿಗೂ ಹೆಚ್ಚು ಜನರಿಗೆ ಸೇರಬೇಕಾದ ಹಣ ಅಂಬಾನಿ ತಿಜೋರಿ ಸೇರುತ್ತದೆ. ಲೋಕಪಾಲ್ ಮಸೂದೆ ಅಥವಾ ಇನ್ನಿತರ ಯಾವುದೇ ಭ್ರಷ್ಟಾಚಾರ ವಿರೋಧಿ ಕಾನೂನುಗಳು ನೂರು ಕೋಟಿ ತಿಂದ ಮಂತ್ರಿಯನ್ನು ಹಿಡಿಯಬಹುದು. ಲಕ್ಷ ಲಕ್ಷ ಕೋಟಿ ತಿನ್ನುತ್ತಿರುವ ಅಂಬಾನಿಗಳನ್ನು ಹಿಡಿಯಲಾರವು ಎಂಬುದನ್ನು ಸಾಂವಿಧಾನಿಕ ಸಂಸ್ಥೆಯಾದ CAG ವ್ಯಕ್ತಪಡಿಸಿರುವ ನಿಸ್ಸಹಾಯಕತೆ ಸ್ಪಷ್ಟಪಡಿಸುತ್ತದೆ.

ಆದ್ದರಿಂದಲೇ ಭ್ರಷ್ಟಾಚಾರ ವಿರೋಧಿ ಹೋರಾಟ ನಿಜಕ್ಕೂ ಅರ್ಥಪೂರ್ಣವಾಗಬೇಕೆಂದರೆ ಶಾಸನಬದ್ಧವಾಗಿ ಜನರ ಸಂಪನ್ಮೂಲಗಳನ್ನು ಕಸಿದು ಅಂಬಾನಿಗಳನ್ನು ಮಾತ್ರ ಕುಬೇರರನ್ನಾಗಿ ಮಾಡುತ್ತಿರುವ ಅರ್ಥವ್ಯವಸ್ಥೆಯ ವಿರುದ್ಧವೇ ಸಮರ ಹೂಡಬೇಕು. ಅದಿಲ್ಲದೆ ಭ್ರಷ್ಟಾಚಾರವೆಂಬುದನ್ನು ಕೇವಲ ಒಂದು ನೈತಿಕ ಮೌಲ್ಯವೆಂಬಂತೆ ಅಮೂರ್ತ ರೂಪದಲ್ಲಿ ಹೋರಾಡುತ್ತಿದ್ದರೆ ಯಾವ ಪ್ರಯೋಜನವೂ ಇಲ್ಲ. ಒಂದರ್ಥದಲ್ಲಿ CAG ಹೇಳುತ್ತಿರುವುದೂ ಇದೇ. □

ಬಿಳಿ ಮುಖವಾಡಗಳು!!

(5ನೇ ಪುಟದಿಂದ)

ವಿಶ್ವದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಎನ್ನುವುದು ಭಾರತದ ಹೆಗ್ಗಳಿಕೆ. ಪ್ರಜಾಪ್ರಭುತ್ವ ನಿಂತಿರುವುದು ಚುನಾವಣಾ ವ್ಯವಸ್ಥೆಯ ಮೇಲೆ. ಇಂತಹ ಚುನಾವಣಾ ವ್ಯವಸ್ಥೆಯನ್ನೇ ಭ್ರಷ್ಟಗೊಳಿಸಲಾಗಿದೆ. ಎಲ್ಲಾ ಪಕ್ಷಗಳು ಭ್ರಷ್ಟ ಹಣ ಹಾಗೂ ಭ್ರಷ್ಟ ಮಾರ್ಗದಿಂದ ಅಧಿಕಾರವನ್ನು ಪಡೆಯುತ್ತವೆ. ನಾಗರಿಕ ಸಮಾಜದ ಅತ್ಯಂತ ಪವಿತ್ರ ಕೆಲಸವಾಗಬೇಕಿದ್ದ "ಮತದಾನ" ಇಂದು "ಮತ" ವನ್ನು ಕೊಡು-ಕೊಳ್ಳುವ ಕಪ್ಪು ದಂಧೆಯಾಗಿದೆ. ಇದಕ್ಕೆ ರಾಜಕಾರಣಿಗಳಷ್ಟೇ ಮತದಾರರು ಜವಾಬ್ದಾರರು. ಇನ್ನು ಮಧ್ಯಮವರ್ಗ ಹಾಗೂ ಮೇಲ್ಮಧ್ಯಮವರ್ಗದ ಜನರು ಸಿನಿಕತನದಿಂದಾಗಿ ಚುನಾವಣೆಯಲ್ಲಿ ಪಾಲ್ಗೊಳ್ಳದೆ, ಪರೋಕ್ಷವಾಗಿ ಭ್ರಷ್ಟಾಚಾರ ಹಾಗೂ ಭ್ರಷ್ಟ ರಾಜಕಾರಣಿಗಳ ಏಳ್ಗೆಗೆ ಕಾರಣವಾಗುತ್ತಾರೆ.

ಈಗಾಗಲೇ ಹೇಳಿದಂತೆ, ಭ್ರಷ್ಟಾಚಾರ ರಾಜಕೀಯ ಪಿಡುಗು. ಇದನ್ನು ತಹಬಂಧಿಗೆ ತರಬೇಕಾದರೆ, ರಾಜಕೀಯ ಇಚ್ಛಾಶಕ್ತಿ ಹಾಗೂ ಬದ್ಧತೆಯಿರುವ ಚುನಾಯಿತ ಸರ್ಕಾರದಿಂದ ಮಾತ್ರ ಸಾಧ್ಯ. ಮಾಧ್ಯಮಗಳ ಕೃಪೆಯಿಂದಾಗಿ ಅಣ್ಣಾ ಹಜಾರೆಯ ತಂಡ ಅಥವಾ ಬಾಬಾ ರಾಮದೇವ್ ಪರಿವಾರ ಸುಶಿಕ್ಷಿತ ಜನರಲ್ಲಿ ಭಾವನಾತ್ಮಕ ಭ್ರಮೆ ತುಂಬುತ್ತಿದ್ದಾರೆಯೇ ಹೊರತು ಭ್ರಷ್ಟಾಚಾರ ತೊಲಗಿಸುವ ದಿಸೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲ.

ಭ್ರಷ್ಟಾಚಾರದ ದುಷ್ಪರಿಣಾಮಕ್ಕೆ ಬಲಿಯಾಗುವ ಈ ನಾಡಿನ ಜನಸಾಮಾನ್ಯ (ಆಮ್ ಆದ್ಮಿ) ಎಲ್ಲಿಯವರೆಗೆ ತನ್ನ ಹಕ್ಕು-ಕರ್ತವ್ಯಗಳ ಬಗ್ಗೆ ಜಾಗೃತನಾಗುವುದಿಲ್ಲವೋ ಅಲ್ಲಿಯವರೆಗೆ ಇದೇ ವ್ಯವಸ್ಥೆ ಮುಂದುವರೆಯುತ್ತದೆ. ಸಂವಿಧಾನ ತನಗೆ ನೀಡಿರುವ ಮತದಾನದ ಹಕ್ಕನ್ನು ಮಾರಿಕೊಳ್ಳದೆ, ಆಮಿಷಗಳಿಗೆ ಬಲಿಯಾಗದೆ, ಸಿದ್ಧಾಂತ-ಚಾರಿತ್ರ್ಯವಿರುವ ಯೋಗ್ಯ ವ್ಯಕ್ತಿಗಳಿಗೆ ಯೋಗ್ಯ 'ಭ್ರಷ್ಟವಲ್ಲದ) ಮತನೀಡುವುದರ ಮೂಲಕ ತನ್ನನ್ನು ಕಾಪಾಡಿಕೊಳ್ಳಬಹುದು.

ಮತವನ್ನು ಖರೀದಿಸುವ ರಾಜಕಾರಣದಿಂದ ಭ್ರಷ್ಟಾಚಾರವನ್ನು ನಿರ್ಮೂಲನಗೊಳಿಸಲು ಸಾಧ್ಯವಿಲ್ಲ. ಮತವನ್ನು ಯೋಗ್ಯತೆ ಹಾಗೂ ಸಿದ್ಧಾಂತದ ಮೇಲೆ ಗಳಿಸುವ ರಾಜಕಾರಣದಿಂದ ಮಾತ್ರ ಭ್ರಷ್ಟಾಚಾರ ನಿರ್ಮೂಲನೆ ಸಾಧ್ಯ. □

ಮಠಗಳು: ಬಸವತತ್ವ ವಿರೋಧಿ ನೆಲೆಗಳು

ಜ. ಹೊ. ನಾರಾಯಣಸ್ವಾಮಿ

ಯಾಗ ಯಜ್ಞ ಹೋಮ ಹವನ ಮುಂತಾದ ವಿಕೃತ ಕ್ರಿಯೆಗಳಲ್ಲಿ ಕೊಬ್ಬಿದ ವೈದಿಕರು ನರಬಲಿಯನ್ನೂ ಕೊಡುವ ಹಂತಕ್ಕೆ ತಲುಪಿದಾಗ ಅದರ ವಿರುದ್ಧ ಕ್ರಿ.ಪೂ. ೫೫೫ರಲ್ಲಿ ಒಂದು ಮಹಾನ್ ಜ್ಯೋತಿ ಉದಯಿಸಿತು. ಆ ಜ್ಯೋತಿಯೆ ಭಗವಾನ್ ಬುದ್ಧ. ಆತ ಬೋಧಿಸಿದ ದಮ್ಮ ಇಡೀ ಭಾರತವನ್ನು ಆವರಿಸಿಕೊಂಡು ಹೊರ ದೇಶಗಳಿಗೂ ಹರಡುತ್ತಿದ್ದಾಗ ಅದನ್ನು ದಮನಮಾಡಲು ಬುದ್ಧ ಹುಟ್ಟಿದ ೧೨೮೧ ವರ್ಷಗಳ ನಂತರ ಆದಿಶಂಕರ ಹುಟ್ಟಿದ. ವೈದಿಕ ಪ್ರಾಭಲ್ಯ ಮತ್ತೆ ಗರರಿಗೆದರಿ ಜನಸಾಮಾನ್ಯರ ಬದುಕು ಮೂರಾಬಟ್ಟೆಯಾಗುತ್ತಿದ್ದಾಗ ಬುದ್ಧ ಹುಟ್ಟಿದ ೧೬೯೭ ವರ್ಷಗಳ ನಂತರ ಜಗತ್ತನ್ನು ಬೆಳಗುವ ಮತ್ತೊಂದು ಮಹಾಜ್ಯೋತಿ ಕರ್ನಾಟಕದಲ್ಲಿ ಉದಯಿಸಿತು. ಅದೇ ಜಗಜ್ಯೋತಿ ಬಸವಣ್ಣನವರು.

ವೈದಿಕರಾಗಿ ಜನಿಸಿದ ಬಸವಣ್ಣನವರು ಬಾಲ್ಯದಲ್ಲಿಯೆ ಅದರ ಅನಿಷ್ಟ ಗುಣವನ್ನು ಅರಿತು ಜನಿವಾರವನ್ನು ತಿರಸ್ಕರಿಸಿ ಹೊರಬಂದ ಹೃದಯ ಸಂಪನ್ನರು. ಒಡಲ ತುಂಬ ವರ್ಣ ವ್ಯವಸ್ಥೆಯ ವಿಷವನ್ನು ತುಂಬಿಕೊಂಡು ಹುಸಿ ಶ್ರೇಷ್ಠತೆಯ ಹೆಸರಿನಲ್ಲಿ ಸ್ವಾರ್ಥ ಸಾಧಿಸಿಕೊಳ್ಳುತ್ತಿದ್ದ ಹಾರುವರ ಅನಿಷ್ಟ ಆಚರಣೆಗಳನ್ನು ಖಂಡತುಂಡವಾಗಿ ಖಂಡಿಸಿ ಜೀವಪರವಾಗಿ ಸೆಟೆದು ನಿಂತವರು.

ಬ್ರಾಹ್ಮಣನು ಹುಟ್ಟಿನಿಂದಲೇ ದೇವರಿಗೂ ದೇವನು (೧೧-೮೪); ಬ್ರಾಹ್ಮಣನು ಅವಿದ್ಯಾವಂತನಾದರೂ ಪೂಜ್ಯನು (೯-೩೧೭); ಬ್ರಾಹ್ಮಣನು ಹತ್ತು ವಯಸ್ಸಿನವನಾದರೂ ನೂರು ವರ್ಷ ವಯಸ್ಸಿನ ಮಹಾರಾಜನಿಗೆ ಪಿತೃಸಮಾನ, ಅವರಿಬ್ಬರಲ್ಲಿ ಬ್ರಾಹ್ಮಣನೆ ತಂದೆ (೨-೧೩೫); ಬ್ರಾಹ್ಮಣರು ನಾನಾವಿಧವಾದ ಕೀಳು ಕಸುಬುಗಳಲ್ಲಿ ನಿರತರಾಗಿದ್ದರೂ ಅವರು ಪೂಜಾರ್ಹರು (೯-೩೧೯); ಸರ್ವ ಪಾಪಗಳನ್ನು ಮಾಡಿದಾಗ್ಯೂ ಬ್ರಾಹ್ಮಣನನ್ನು ವಧಿಸಬಾರದು (೮-೩೮೦); ಬ್ರಾಹ್ಮಣನು ಸಂಶಯ ಪಡದೆ ಶೂದ್ರನ ಹಣವನ್ನು ಕಿತ್ತುಕೊಳ್ಳಬೇಕು (೮-೪೧೭); ಶೂದ್ರನಿಗೆ ಧರ್ಮ ಸಂಸ್ಕಾರಗಳಿಲ್ಲ (೧೦-೧೨೬); ಶೂದ್ರನಿಗೆ ಉಂಡು ಮಿಕ್ಕ ಅನ್ನ, ಹಳೆಯ ಬಟ್ಟೆ, ಬೆರಕೆ ಧಾನ್ಯ, ಹಳೆಯ ಹಾಸಿಗೆ ಕೊಡಬೇಕು (೧೦-೧೨೫); ಸ್ತ್ರೀಯರಿಗೆ ವೇದಾಧ್ಯಮಾನದ ಹಕ್ಕಿಲ್ಲ, ಆದ್ದರಿಂದ ಅವರಿಗೆ ಧರ್ಮಜ್ಞಾನವೂ ಇರುವುದಿಲ್ಲ. (೯-೧೮); ಕೆಳ ಜಾತಿಯ ಹೆಂಗಸು ಮೇಲು ಜಾತಿಯ ಪುರುಷನ ಸಂಬಂಧದಿಂದ ಏಳು ಸಂತತಿಯನ್ನು ಪಡೆದರೆ ಅವಳು ಉಚ್ಛಜಾತಿಯಲ್ಲಿ ಹುಟ್ಟುವಳು(೧೦-೧೪); ಮುಂತಾದ ಕ್ರೂರ ನಿಯಮಗಳನ್ನು 'ಮನುಸ್ಮೃತಿ'ಯಲ್ಲಿ ರಚಿಸಿಕೊಂಡು ಅಟ್ಟಹಾಸದಿಂದ ಮೆರೆಯುತ್ತಿದ್ದ ಹಾರುವರಿಗೆ ಬಸವಣ್ಣನವರು ಸಿಂಹ ಸ್ವಪ್ನವಾಗಿ ಎದ್ದುನಿಂತರು.

ದೇವರು ಧರ್ಮದ ಹೆಸರಿನಲ್ಲಿ ಹಾರುವರು ಮಾಡುತ್ತಿದ್ದ ಮೋಸವಂಚನೆಗಳನ್ನು ಬಹಿರಂಗಗೊಳಿಸಿ ಸರ್ವ ಸಮಾನತೆಯನ್ನು ಸಾರುವ ಶರಣ ತತ್ವವನ್ನು ಜಾರಿಗೆ ತಂದರು. ಸ್ವಾಭಿಮಾನದ ಸಂಕೇತವಾಗಿ ತನ್ನಾಶ್ರಯದ ರತಿಸುಖವನು ತಾನುಂಡ ಊಟವನು ಬೇರೆ ಮತ್ತೊಬ್ಬರ ಕೈಲಿ ಮಾಡಿಸಬಹುದೆ? ಎಂದು ಪರ್ಯಾಯವಾಗಿ 'ಜಗದಗಲ... ಅಗಮ್ಯ, ಅಗೋಚರ, ಅಪ್ರತಿಮ ಲಿಂಗವನ್ನು ಸೆರೆಹಿಡಿದು ಅಂಗೈಗೆ ಅಲಂಕರಿಸಿದರು. ಯಾವ ಹಾರುವರು ಸ್ತ್ರೀಯರನ್ನ, ಶೂದ್ರರನ್ನ, ದಲಿತರನ್ನ ಕೀಳಾಗಿ ಕಂಡರೋ ಅವರನ್ನು ಬಸವಣ್ಣನವರು 'ಇವ ನಮ್ಮವ' ಎಂದು ಸಮಾನವಾಗಿ ಸ್ವೀಕರಿಸಿದರು. ಕಿರಿದರಲ್ಲಿ ಹಿರಿದನ್ನೂ ಕಂಡು ಶಿರದಲ್ಲಿ ಧರಿಸಿದ ಮಹಾನುಭಾವರು. ಜಾತಿಯನ್ನು ತೊಡೆದು ಶರಣರೆಲ್ಲರೂ ಒಂದೆ ಎಂದು ಹರಳಯ್ಯನ ಮಗನಿಗೆ (ದಲಿತ) ಮಧುವರಸನ ಮಗಳನ್ನು (ಬ್ರಾಹ್ಮಣ) ಕೊಟ್ಟು ಮದುವೆ ಮಾಡಿ ಮಾನವ ಸಮಾನತೆಯ ಭೇರಿಯನ್ನು ಜಗತ್ತಿಗೆ ಮೊಳಗಿಸಿದ ಧೀಮಂತ ಬಸವಣ್ಣನವರು. ಕರ್ನಾಟಕಕ್ಕೆ ಬಂದ ವಿವೇಕಾನಂದರಿಗೆ ಬಸವಣ್ಣನವರ ಜೀವನ ಹಾಗೂ ಸಾಧನೆಗಳನ್ನು ಪರಿಚಯಿಸಿದ್ದರೆ ಅವರು ವಿಶ್ವ ವೇದಿಕೆಯಲ್ಲಿ ಬಸವಣ್ಣನವರನ್ನು ಕೊಂಡಾಡುತ್ತಿದ್ದರು ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ.

ಬಸವಣ್ಣನವರು ವೀರಶೈವರ ಸೊತ್ತಲ್ಲ, ಅವರು ಮನುಕುಲದ ಮಹಾನ್ ಜ್ಯೋತಿ. ಅಮರಿಕೊಂಡಿರುವ ವೀರಶೈವರಿಂದ ಬಿಡಿಸಿಕೊಳ್ಳಬೇಕಾದ ತುರ್ತು ಈಗ ಬಂದಿದೆ. ಅತ್ತ ಮಾನವೀಯ ಹೃದಯ ಉಳ್ಳವರ ಚಿತ್ತ ಮತ್ತೆ ಅತ್ತ ಇತ್ತ ಸುಳಿದಾಡದೆ ಗುರಿಮುಟ್ಟುವತ್ತ ಕ್ರಿಯಾಶೀಲವಾಗಬೇಕಿದೆ.

ಮಠಗಳು:- ಬಸವಣ್ಣನವರು ಜ್ಞಾನಿ. ಆದ್ದರಿಂದ ಅವರು ಮಠಗಟ್ಟಲಿಲ್ಲ ಬದಲಿಗೆ 'ಅನುಭವ' ಮಂಟಪ ತೆರೆದರು. ಸಂಪ್ರದಾಯದ ಅಚರಣೆಗಳಲ್ಲಿ, ಅರಿವನ್ನು ಮೂಡಿಸುವುದು ಅವರ ಪರಮಗುರಿಯಾಗಿತ್ತು. ಅರಿವಿನಿಂದ ದೂರವಾದ ಮಠಗಳು ಹುಟ್ಟಿಕೊಂಡದ್ದು ಬಸವಣ್ಣನವರ ನಂತರವೇ.

ಮಠ ಎಂದರೆ ಅವು ಸನ್ಯಾಸಿಗಳು ವಾಸಿಸುವ ಕುಟೀರಗಳೆ ಹೊರತು ಭವ್ಯ ಬಂಗಲೆಗಳಲ್ಲ. ಅವು ವೈಭೋಗಗಳನ್ನು ಮೆರೆವ ತಾಣಗಳಲ್ಲ. ಬದಲಿಗೆ ತಪಸ್ಸಿನ, ಜ್ಞಾನಾನ್ವೇಷಣೆಯ ಧಾರ್ಮಿಕ ಕೇಂದ್ರಗಳು ಕ್ರಮೇಣ ಅವು ಆಶ್ರಮ, ಗುರುಮನೆ, ಗುರುಕುಲಗಳಾಗಿ ಕಾಲಕಳೆದಂತೆ ವಿದ್ಯಾಪ್ರಸಾರ, ಜ್ಞಾನಪ್ರಸಾರ, ಮತ ಪ್ರಚಾರ ಕೇಂದ್ರಗಳಾಗಿ ಬೆಳೆದಿವೆ. ಸ್ವಾಮಿ ವಿವೇಕಾನಂದರು ಉದಾತ್ತ ಸೇವಾದೃಷ್ಟಿಯಿಂದ ಸ್ಥಾಪಿಸಿದ ರಾಮಕೃಷ್ಣ ಆಶ್ರಮವೂ ಈಗ ಮಠವಾಗಿ ಪರಿವರ್ತಿತವಾಗಿದೆ.

ಮಠ ಎಂದರೆ ಅವು ಸನ್ಯಾಸಿಗಳು ವಾಸಿಸುವ ಕುಟೀರಗಳೆ ಹೊರತು ಭವ್ಯ ಬಂಗಲೆಗಳಲ್ಲ. ಅವು ವೈಭೋಗಗಳನ್ನು ಮೆರೆವ ತಾಣಗಳಲ್ಲ, ಬದಲಿಗೆ ತಪಸ್ಸಿನ, ಜ್ಞಾನಾನ್ವೇಷಣೆಯ ಧಾರ್ಮಿಕ ಕೇಂದ್ರಗಳು ಕ್ರಮೇಣ ಅವು ಆಶ್ರಮ, ಗುರುಮನೆ, ಗುರುಕುಲಗಳಾಗಿ ಕಾಲಕಳೆದಂತೆ ವಿದ್ಯಾಪ್ರಸಾರ, ಜ್ಞಾನಪ್ರಸಾರ, ಮತ ಪ್ರಚಾರ ಕೇಂದ್ರಗಳಾಗಿ ಬೆಳೆದಿವೆ. ಸ್ವಾಮಿ ವಿವೇಕಾನಂದರು ಉದಾತ್ತ ಸೇವಾದೃಷ್ಟಿಯಿಂದ ಸ್ಥಾಪಿಸಿದ ರಾಮಕೃಷ್ಣ ಆಶ್ರಮವೂ ಈಗ ಮಠವಾಗಿ ಪರಿವರ್ತಿತವಾಗಿದೆ.

ಪ್ರತಿ ಮಠಕ್ಕೂ ಒಬ್ಬ ಅಧಿಪತಿ ಇರುತ್ತಾನೆ. ಅವನನ್ನು ಆಚಾರ್ಯ, ಕುಲಪತಿ, ಗುರು, ಜಗದ್ಗುರು, ಸ್ವಾಮಿ, ಯತಿ, ಯತೀಂದ್ರ, ದೇಶಿಕ, ದೇಶಿಕೇಂದ್ರ ಮುಂತಾದ ಹೆಸರುಗಳಿಂದ ಕರೆ ಯುತ್ತಾರೆ. ಅವರ ಉಡುಗೆ ಕಾವಿ. ಎಲ್ಲ ಧರ್ಮೀಯರಲ್ಲೂ ಇಂಥ ಮಠಗಳು ಬೇರೆ ಬೇರೆ ಹೆಸರಿನಲ್ಲಿ ಇರುತ್ತವೆ. ಅವರವರ ರೀತ್ಯಾ ಅವರ ಉಡಿಗೆ ತೊಡಿಗೆಗಳು ಇರುತ್ತವೆ.

ಕಾವಿ: ಕಾವಿ ತ್ಯಾಗದ ಹಾಗೂ ಶೌರ್ಯದ ಪ್ರತೀಕ, ಸರ್ವಸಂಘ ಪರಿತ್ಯಾಗದ ಸಂಕೇತ, ಅರಿಷಡ್ವರ್ಗಗಳ ಮೇಲೆ ವಿಜಯಸಾಧಿಸಿದ ಕುರುಹು.

ಬಸವಣ್ಣನವರಾಗಲೀ, ಶ್ರೀರಾಮಕೃಷ್ಣ ಪರಮಹಂಸರಾಗಲೀ, ರಮಣ ಮಹರ್ಷಿಗಳಾಗಲೀ ಅವರು ಕಾವಿ ತೊಟ್ಟವರಲ್ಲ. ಶ್ರೇಷ್ಠತೆಯ ವ್ಯಸನದ 'ಜನಿವಾರ'ವನ್ನು ಅವರು ಕಿತ್ತೆಸೆದವರು. 'ಪುಣ್ಯತೀರ್ಥ, ಪುಣ್ಯಕ್ಷೇತ್ರ, ಪುಣ್ಯಶೈಲದಲ್ಲಿ ಮೂರಕಣ್ಣನಿಲ್ಲ, ಭಕ್ತರುಗಳ ಹೃದಯವಾಸನು' ಎನ್ನುವಂತೆ ಅಂತರಂಗದಲ್ಲೆ ಇರುವ ದೈವವನ್ನು ಮಾನ್ಯ ಮಾಡಿದವರು. ಅದರ ಅರಾಧನೆಗೆ ಮಾರ್ಗ ತೋರಿದವರು.

ಇಂದು ಮಠಮಾನ್ಯಗಳಾಗಲೀ, ಕಾವಿಧಾರಿಗಳಾಗಲೀ ಆ ಪಾವಿತ್ರತೆಯನ್ನು ಕಾಪಾಡಿಕೊಳ್ಳುವಲ್ಲಿ ವಿಫಲವಾಗಿವೆ ಎನ್ನುವುದು ಅಂಗೈ ಹುಣ್ಣಿನಷ್ಟು ಸ್ಪಷ್ಟವಾಗಿದೆ. ಇಂಥ ವಿಷಮ ಪರಿಸ್ಥಿಯಲ್ಲಿಯೂ ಕೆಲವು ಮಠಗಳಾದರೂ ಪಾವಿತ್ರತೆಯನ್ನು ಉಳಿಸಿಕೊಂಡು ಮನುಕುಲದ ಮುನ್ನಡೆಗೆ ಶ್ರಮಿಸುತ್ತಿರುವುದು ಸ್ವಾಗತಾರ್ಹ.

ಹಠ-ಚಟ:- 'ಅಪ್ಪನು ಮಾದಾರ ಚನ್ನಯ್ಯ, ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ' ಎಂದು ಬಸವಣ್ಣನವರು ತಮ್ಮ ಹುಟ್ಟಿನಿಂದ ಬಂದ ಬ್ರಾಹ್ಮಣ ಎಂಬ ಹುಸಿ ಶ್ರೇಷ್ಠತೆಯ ಅಹಂಕಾರ ವನ್ನೂ ಅಳಿಸಿ ಹಾಕಿದವರು. ನಿರ್ಮಲ ಚಿತ್ತರಾಗಿಯೂ 'ಎನ್ನ ಚಿತ್ತ ಹತ್ತಿಯ ಹಣ್ಣು ನೋಡಯ್ಯ' ಎಂದು ಪರಿತಪಿಸಿ ತಮ್ಮೊಳಗೇ ಶಪಿಸಿಕೊಂಡವರು.

'ತುಪ್ಪದ ಸವಿಗೆ ಅಲಗನೆಕ್ಕುವ ಸೊಣಗಳಂತೆನ್ನ ಬಾಳುವೆ' ಎಂದು ಅಂತರಂಗವನ್ನು ಶೋಧಿಸಿಕೊಂಡವರು. ಆದರೆ ಇಂದಿನ ಮಠಗಳು, ಮಠಾದೀಶರು ಮಾಡುತ್ತಿರುವುದೇನು?

-ನನ್ನ ಮಠ ಅತ್ಯಂತ ಶ್ರೀಮಂತ ಮಠವಾಗಬೇಕು

-ಆ ಸ್ವಾಮಿ ಕಾರಿನಲ್ಲಿ ಹೋದರೆ ನಾನು ಹೆಲಿಕ್ಯಾಪ್ಟರ್‌ನಲ್ಲಿ

-ಬಸವಣ್ಣ ಜಾತಿಯನ್ನು ಬಿಟ್ಟರೇನಂತೆ, ನಮಗೆ ಜಾತಿಯೆ ನೀತಿ, ಪ್ರೀತಿ, ಬಂಡವಾಳ ಎನ್ನುವ ಹಠಕ್ಕೆ ಜೋತು ಬಿದ್ದವರಾಗಿದ್ದಾರೆ.

ಆರು ಜನ ಒಟ್ಟಿಗೆ ಸೇರಿ ನಾವು ಎಲ್ಲಿ ವಿಜ್ರಂಭಿಸಬಹುದು ಎಂದು ಹರಸುತ್ತಾ ಜನಸಾಮಾನ್ಯರಲ್ಲಿಗೆ ಹೋದರು. ಜನಸಾಮಾನ್ಯರು ನಿತ್ಯಕಾಯಕ ಮಾಡುತ್ತಾ ನಿಷ್ಠೆಯಿಂದ ದುಡಿದು ನಿಸರ್ಗ ಸಹಜವಾಗಿ ಬದುಕುತ್ತಿದ್ದರು. ಇಲ್ಲಿ ತಮ್ಮ ಬೇಳೆ ಬೇಯುವುದಿಲ್ಲ ಎಂದು ತನಿಯಾದ ಜಾಗ ಹುಡುಕುತ್ತಾ ಕಡೆಗೆ ಮಠಗಳಿಗೆ ಬಂದು ಬೀಡು ಬಿಟ್ಟರು. ಅಲ್ಲಿ ನೆಲೆನಿಂತ ಅವರಲ್ಲಿ.

ಕಾಮ ಹೇಳಿದ- ಜಗತ್ತಿನಲ್ಲಿರುವ ಹೆಣ್ಣು ಹೊನ್ನು ಮಣ್ಣು ನನ್ನದೆ.

ಕ್ರೋಧ ಹೇಳಿತು- ಈ ಮೂರನ್ನೂ ನಾನು ವಶಪಡಿಸಿಕೊಳ್ಳುತ್ತೇನೆ.

ಲೋಭ ಹೇಳಿತು- ಅದಕ್ಕಾಗಿ ಯಾವ (ವಾಮ) ಮಾರ್ಗವಾದರೂ ಸರಿಯೆ, ಬಿಡುವುದಿಲ್ಲ.

ಮೋಹ ಹೇಳಿತು- ಮರುಳು ಮಾಡುವ ತಂತ್ರ ನಾನು ಬಲ್ಲೆ.

ಮದ ಹೇಳಿತು- ನಾನೇ ಶ್ರೇಷ್ಠ. ನಾನು ನಾನೇ ತಂದ ನಾಲ್ಕು ಇಂಚು ಎತ್ತರದ ಪೀಠದಲ್ಲೇ ವಿರಾಜಮಾನ, ಅಡ್ಡಪಲ್ಲಕ್ಕಿ ನಮ್ಮ ಹಕ್ಕು.

ಮತ್ಸರ ಹೇಳಿತು- ನಾನು ಹಾಳಾದರೂ ಚಿಂತೆಯಿಲ್ಲ, ನನಗೆ ಮಣಿಯದವರನ್ನು ಹಾಳುಮಾಡದೆ ಬಿಡುವುದಿಲ್ಲ.

ಹೀಗೆ ಬಹುತೇಕ ಮಠಗಳು ಅರಿಷಡ್ವರ್ಗಗಳಿಗೆ ಬಲಿಯಾಗಿ ಚಟಗಳ ದಾಸಾನುದಾಸರಾಗಿದ್ದಾರೆ.

'ಶರಣು' ಎಂದ ಶರಣಂಗೆ 'ಶರಣು ಶರಣಾರ್ಥಿ' ಎಂದು ಪಾದುಕೆಗಳನ್ನು ತಲೆಯ ಮೇಲೆ ಹೊತ್ತು ಗೌರವ ತೋರಿದ ಬಸವಣ್ಣನವರೆಲ್ಲಿ, ಪಾದಗಳು ಇರುವುದೆ ಪರರು ಪೂಜಿಸುವುದಕ್ಕೆ ಎನ್ನುವ ಭ್ರಮೆಗೆ ಒಳಗಾಗಿ ಕಾಲುಗಳನ್ನು ಚಾಚುತ್ತ ಅಂತರಂಗದಲ್ಲಿ ಹೆಣ್ಣು ಹೊನ್ನುಗಳಿಗೆ ಬಲೆಬೀಸುವ ಇಂದಿನ ಮಠಾಧೀಶರೆಲ್ಲಿ !? ಅಜಗಜಾಂತರ!

ಜನಿವಾರ-ಶಿವದಾರ:- ಜನಿವಾರವನ್ನು ತಿರಸ್ಕರಿಸಿ ತನ್ಮೂಲಕ ವೈದಿಕ ಧರ್ಮಕ್ಕೆ ತಿಲಾಂಜಲಿ ಇತ್ತ ಬಸವಣ್ಣನವರ ಮಾರ್ಗ ತುಳಿದು ಶಿವದಾರ ಧರಿಸಿದವರು ಮತ್ತೆ ಜನಿವಾರಕ್ಕೆ ಜೋತುಬಿದ್ದು ಹೋಮ, ಹವನ, ಯಾಗ ಯಜ್ಞ ಮುಂತಾದ ವೈದಿಕ ಕ್ರಿಯೆಗೆ ಒಳಗಾಗುತ್ತಿರುವುದು ಇತಿ ಹಾಸದ ದೊಡ್ಡ ವ್ಯಂಗ್ಯ. ಮುಖ್ಯಮಂತ್ರಿ ಯಡ್ಡಿಯ ಹಣೆಯಲ್ಲಿ ವಿಜ್ರಂಭಿಸುತ್ತಿರುವುದು 'ವಿಭೂತಿ' ಅಲ್ಲ ಕುಂಕುಮ. ಅವರ ಮಾರ್ಗ 'ವೈದಿಕ ಮಾರ್ಗ'ವೇ ಹೊರತು 'ಬಸವ ಮಾರ್ಗ'ವಲ್ಲ. ಹಾಗಾಗಿ ಇಂದು ವೀರಶೈವರೆಂದು ಕೊಂಡವರು ಬ್ರಾಹ್ಮಣ ಬಿಲ್ಲಿಗೆ ಬಾಣವಾಗಿದ್ದಾರೆ. ಬಿಲ್ಲು (ಬ್ರಾಹ್ಮಣ) ಸದಾ ಸುರಕ್ಷಿತ, ಬಾಣ (ವೀರಶೈವರು) ಕೊಲ್ಲಬೇಕು ಇಲ್ಲ ಕೊಲೆಗೆ ಈಡಾಗಬೇಕು. ಹೇಗಿದೆ ಹುನ್ನಾರ? ಹಾರುವರ ಈ ಹುನ್ನಾರಗಳನ್ನು ಸ್ಪಷ್ಟವಾಗಿ ಅರಿತಿದ್ದ ವಿವೇಕಾನಂದರು 'ನೀಚರೂ ಕುತಂತ್ರಿಗಳೂ ಆದ ಪುರೋಹಿತರು ಎಲ್ಲಾ ವಿಧದ ಮೂಢ

ಜನಿವಾರವನ್ನು ತಿರಸ್ಕರಿಸಿ ತನ್ಮೂಲಕ ವೈದಿಕ ಧರ್ಮಕ್ಕೆ ತಿಲಾಂಜಲಿ ಇತ್ತ ಬಸವಣ್ಣನವರ ಮಾರ್ಗ ತುಳಿದು ಶಿವದಾರ ಧರಿಸಿದವರು ಮತ್ತೆ ಜನಿವಾರಕ್ಕೆ ಜೋತು ಬಿದ್ದು ಹೋಮ, ಹವನ, ಯಾಗ, ಯಜ್ಞ ಮುಂತಾದ ವೈದಿಕ ಕ್ರಿಯೆಗೆ ಒಳಗಾಗುತ್ತಿ ರುವುದು ಇತಿಹಾಸದ ದೊಡ್ಡ ವ್ಯಂಗ್ಯ. ಮುಖ್ಯಮಂತ್ರಿ ಯಡ್ಡಿಯ ಹಣೆಯಲ್ಲಿ ವಿಜ್ರಂಭಿಸುತ್ತಿರುವುದು 'ವಿಭೂತಿ' ಅಲ್ಲ ಕುಂಕುಮ. ಅವರ ಮಾರ್ಗ 'ವೈದಿಕ ಮಾರ್ಗ'ವೇ ಹೊರತು 'ಬಸವ ಮಾರ್ಗ' ವಲ್ಲ. ಹಾಗಾಗಿ ಇಂದು ವೀರಶೈವರೆಂದು ಕೊಂಡವರು ಬ್ರಾಹ್ಮಣ ಬಿಲ್ಲಿಗೆ ಬಾಣ ವಾಗಿದ್ದಾರೆ. ಬಿಲ್ಲು (ಬ್ರಾಹ್ಮಣ) ಸದಾ ಸುರಕ್ಷಿತ, ಬಾಣ (ವೀರಶೈವರು) ಕೊಲ್ಲ ಬೇಕು ಇಲ್ಲ ಕೊಲೆಗೆ ಈಡಾಗಬೇಕು.

ನಂಬಿಕೆ ಗಳನ್ನು ವೇದ ಮತ್ತು ಹಿಂದೂ ಧರ್ಮದ ಸಾರ ಎಂದು ಬೋಧಿಸುತ್ತಾರೆ. ಈ ಠಕ್ಕಗಾರರಾದ ಪುರೋಹಿತರಗಲೀ ಅಥವಾ ಅವರ ತಾತ ಮುತ್ತಾತಂದಿರಾಗಲೀ ಕಳೆದ ನಾನೂರು ತಲೆಮಾರುಗಳಿಂದಲೂ ವೇದದ ಒಂದು ಭಾಗವನ್ನೂ ನೋಡಿಲ್ಲ. ಮೂಢಾಚಾರಗಳನ್ನು ಅನುಸರಿಸಿ ಹೀನ ಸ್ಥಿತಿಗೆ ಬರುತ್ತಾರೆ. ಕಲಿಯುಗದಲ್ಲಿ ಬ್ರಾಹ್ಮಣ ವೇಷದಲ್ಲಿರುವ ಈ ರಾಕ್ಷಸರಿಂದ ಮುಗ್ಧ ಜನರನ್ನು ಆ ದೇವರೇ ಕಾಪಾಡಬೇಕು' (೬-೬೬) ಎಂದು ಹಾರುವರ ಅಂತರಂಗದ ರಾಕ್ಷಸಗುಣವನ್ನು ಬಹಿರಂಗಗೊಳಿಸಿದ್ದಾರೆ. ಅಲ್ಲದೆ 'ಭಾಷ್ಯವನ್ನು ಬರೆದ ದೊಡ್ಡ ಆಚಾರ್ಯರೆಲ್ಲಿ ಕೆಲವು ವೇಳೆ ತಮ್ಮ ಸಿದ್ಧಾಂತಕ್ಕೆ ಸರಿಯಾದ ಅರ್ಥವನ್ನು ಸೂತ್ರ ದಲ್ಲಿ ಬರುವಂತೆ ಮಾಡುವಾಗ ತಿಳಿದೇ ಸುಳ್ಳು ಹೇಳುತ್ತಿ ದ್ದರು' (೮-೫೦) ಎಂದಿದ್ದಾರೆ.

ಹಾಗಾಗಿ ಇಂದು ಎಲ್ಲ ಹುನ್ನಾರಗಳಿಂದ ಗೌಪ್ಯವಾಗಿ ಕೇಶವ ಕೃಪದಲ್ಲಿ 'ಜನಿವಾರ' ತಿಂದುಂಡ ಎಂಜಲನ್ನು 'ಶಿವದಾರ' (ಮಠಗಳು) ಸಾರ್ವಜನಿಕವಾಗಿ ತಿಂದು ಜನರ ಬಾಯಿಗೆ ತಾಂಬೂಲವಾಗಿವೆ. ಇದರಿಂದ ಇತರ ಜಾತಿ ಮಠಗಳೂ ಮುಕ್ತವಾಗಿಲ್ಲ ಎಂಬುದು ಖೇದದ ಸಂಗತಿ.

ಆದಿ ಚುಂಚನಗಿರಿ ಸ್ವಾಮೀಗೆ ಕುವೆಂಪು ಹೇಳಿದ ಮಾತು ಇತರ ಮಠಾಧೀಶರಿಗೂ ಅನ್ವಯಿಸುವಂಥದ್ದು ಅ ಮಾತೆಂದರೆ.

"ವೈದಿಕ ಮಠಗಳನ್ನು ಅನುಕರಣೆ ಮಾಡುತ್ತಾ ಪಾದಪೂಜೆ, ಅಡ್ಡಪಲ್ಲಕ್ಕಿ, ಕಿರೀಟಧಾರಣೆ ಇವುಗಳ ನಕಲಿಯಲ್ಲಿ ತೊಡಗಬೇಡಿ. ಏಕೆಂದರೆ ನೀವು ಭಾರತೀಯ ಸನಾತನ ಧರ್ಮದ ವೈದಿಕ ಅವೃತ್ತಿಯನ್ನು ಪುರಸ್ಕರಿಸುವುದಾದರೆ ಅದು ಕೊಟ್ಟಕೊನೆಗೆ ಜಗದ್ಗುರುವಾಗುವ ನಿಮ್ಮ ಅರ್ಹತೆಯನ್ನೇ ತಿರಸ್ಕರಿಸುತ್ತದೆ. ನೀವು ರಾಮಕೃಷ್ಣ ಮಿಷನ್‌ನ ರೀತಿ ನೀತಿಗಳನ್ನು, ಧ್ಯೇಯ ಧೋರಣೆಗಳನ್ನು ತಿಳಿದುಕೊಂಡು ಆ ರೀತಿ ವರ್ತಿಸಿ ಇಡೀ ಶೂದ್ರ ಸಮುದಾಯವನ್ನು ಬದಲಾಯಿಸುವ ಅಧ್ಯಾತ್ಮಿಕ ಮತ್ತು ಸಾಮಾಜಿಕ ಪರಿವರ್ತನೆಯ ಹರಿಕಾರರಾಗಿ." ಕುವೆಂಪು ಅವರ ಈ ಬೆಳಕಿನ ಮಾತು ಅರಿಷಡ್ವರ್ಗಗಳ ಕತ್ತಲೆಯಲ್ಲಿ ಕೊಳೆಯುತ್ತಿರುವ ಮಠಾಧೀಶರುಗಳಿಗೆ ಹೇಗೆ ಕಂಡೀತು?

ವಾಸ್ತವ:- ಉತ್ತರ ಕರ್ನಾಟಕದಲ್ಲಿ ಪ್ರವಾಹಕ್ಕೆ ತುತ್ತಾಗಿ ವರ್ಷಗಳುರುಳಿದವು. ಅತ್ತ ಗಮನ ಹರಿಸದ ಸರ್ಕಾರ Jss ಮಠದಲ್ಲಿ ಮುಖ್ಯ ಮಂತ್ರಿಯಾದಿಯಾಗಿ 'ಯೋಗ' ನಿರತವಾಗಿತ್ತು. ಸಂವಿಧಾನದ 'ಅ'ಕಾರವೂ ಗೊತ್ತಿರದ ಮಠಾಧೀಶರ ಮುಂದೆ ಸರ್ಕಾರ ಮುಂಡಿಯೂರಿ ಕುಳಿತಿತ್ತು. ಮೊದಲು ಪ್ರವಾಹ ಸಂತ್ರಸ್ತರ ನೆರವಿಗೆ ಹೋಗಿ ಎನ್ನುವ ಒಂದು ಸೌಜನ್ಯದ ಮಾತು ಮಠಾಧೀಶರ ಬಾಯಿಂದ ಬರಲಿಲ್ಲ.

ತಿರುಪತಿ ತಿಮ್ಮಪ್ಪನಿಗೆ, ಅಷ್ಟ ಮಠಗಳಿಗೆ, ಶೃಂಗೇರಿ ಮಠಕ್ಕೆ, ರಾಮಚಂದ್ರಪುರ ಮಠಕ್ಕೆ, ಆರ್ಟ್ ಆಫ್ ಲಿವಿಂಗ್‌ಗೆ, ತಮಿಳುನಾಡು, ಕೇರಳ ದೇವಸ್ಥಾನಗಳಿಗೆ ಬೊಕ್ಕಸದ ಹಣವನ್ನು ಅನೈತಿಕವಾಗಿ ಹಂಚುತ್ತಾ ಸಂತ್ರಸ್ತರಿಗೆ ಸರ್ಕಾರ ಬೆನ್ನುಮಾಡಿರುವುದು ಎಷ್ಟು ಸರಿ? ರಾಜಕೀಯ ಪಕ್ಷಗಳ ರೆಸಾರ್ಟ್ ರಾಜಕಾರಣ ನೈತಿಕವಾದದ್ದೆ? ಹೆಲಿಕ್ಯಾಪ್ಟರ್‌ನಲ್ಲಿ ಹೋದ ಸಚಿವ ಕರಂದ್ಲಾಜೆ ಮಂತ್ರಾಲಯದ ಸ್ವಾಮಿಯನ್ನು ಮಾತ್ರ ರಕ್ಷಿಸಿಕೊಂಡು ಬಂದದ್ದು, ಅದರ ಬೆನ್ನ ಹಿಂದೆಯೇ ಮುಖ್ಯಮಂತ್ರಿ ಹತ್ತು ಸಾವಿರ ಸ್ವಾಮಿಗೆ ನೀಡಿದ್ದುದರ ಅಂತರಂಗದಲ್ಲಿ ಅನೇಕ ಗೌಪ್ಯಗಳು ಅಡಗಿವೆ. ಮಠಗಳು ಸರ್ಕಾರದ ಎಂಜಲು ತಿಂದ ಋಣಕ್ಕಾಗಿ ಕನಿಷ್ಠ ಗೌರವವನ್ನೂ ಗಾಳಿಗೆ ತೂರಿ ಭ್ರಷ್ಟ ಹಾಗೂ ನೀತಿಗೆಟ್ಟ ಸರ್ಕಾರಕ್ಕೆ ಬೆಂಬಲ ಸೂಚಿಸಿ 'ವೀರಶೈವ ಶಾಸಕರ ವಿರುದ್ಧ ಮಾತ ನಾಡಿದರೆ ಪರಿಣಾಮ ನೆಟ್ಟಗಾಗುವುದಿಲ್ಲ' ಎಂಬ ಫತ್ವ ಹೊರಡಿಸಿ ನಗೆಪಾಟಲಿಗೆ ಈಡಾಗುವುದಲ್ಲದೆ ಬಟ್ಟೆ ತೊಟ್ಟೂ ಬೆತ್ತಲಾಗಿವೆ.

ಬಿಜ್ಜಳನ ಆಸ್ಥಾನದಲ್ಲಿ ಅರ್ಥ ಮಂತ್ರಿಗಳಾಗಿದ್ದ, ಅದನ್ನು ಸಮರ್ಥವಾಗಿ, ಅರ್ಥಪೂರ್ಣವಾಗಿ ನಿಭಾಯಿಸಿಯೂ ಆರೋಪಕ್ಕೆ ಗುರಿಯಾದ ಬಸವಣ್ಣನವರು ಇಂದು ಇದ್ದಿದ್ದರೆ ಸರ್ಕಾರದ ಬೊಕ್ಕಸದ ಹಣ ಹೀಗೆ ಪೋಲಾಗುತ್ತಿರುವುದನ್ನು ಕಂಡು ಸಾರ್ವಜನಿಕವಾಗಿ ನೇಣು ಹಾಕಿಕೊಳ್ಳುತ್ತಿದ್ದರು ಎನ್ನುವ ಶಂಕೆ ಯಾರಿಗಾದರೂ ಮೂಡುವುದು ಸಹಜವೆ.

ಒಟ್ಟಿನಲ್ಲಿ ಯಾವುದೇ ಮಠಗಳಾಗಲೀ ಅವು ಅರಿಷಡ್ವರ್ಗಗಳ ಅಲಗಿನಿಂದ 'ಇರಿವ' ತಾಣಗಳಾಗದೆ ಅನುಭವ ಮಂಟಪದಂತೆ 'ಅರಿವ' ತಾಣಗಳಾದಾಗ ಮಾತ್ರ ಬಸವಣ್ಣನವರ ತತ್ವಗಳಿಗೆ ಮಹತ್ವ ಬರುತ್ತದೆ. ಹಾಗಾಗಬೇಕಾದರೆ ಬಸವಣ್ಣನವರ ತತ್ವಗಳನ್ನು ಗಾಳಿಗೆ ತೂರಿ ಸ್ವೇಚ್ಛೆಯಲ್ಲಿ ಮೈಮರೆತಿರುವ ಮಠಗಳ ಚಿತ್ತ ಅತ್ತ ಎಚ್ಚೆತ್ತುಕೊಳ್ಳುವಂತೆ ಮಾಡಬೇಕಾದರೆ ಹುರಿಗೊಳ್ಳಲೇಬೇಕಾಗುತ್ತದೆ ಬಸವ ಭಕ್ತರ ಬೆಳಕಿನ ಬೆತ್ತ.

(ಬೀದರ್ ಜಿಲ್ಲೆಯ ಹಿರೇಮಠ ಸಂಸ್ಥಾನ ಭಾಲ್ಕಿಯಲ್ಲಿ ಪೂಜ್ಯ ಶ್ರೀ ಡಾ॥ ಚನ್ನಬಸವ ಪಟ್ಟದ್ದೇವರ ೧೧ನೇಯ ಸ್ಮರಣೋತ್ಸವ ಹಾಗೂ ೨೪ನೇಯ ಕಲ್ಯಾಣ ನಾಡಿನ ಶರಣ ಸಮ್ಮೇಳನದಲ್ಲಿ ದಿನಾಂಕ ೨೧-೪-೨೦೧೧ರಂದು ಮಂಡಿಸಿದ ಪ್ರಬಂಧ) ☐

ಭ್ರಷ್ಟಾಚಾರ ವಿರೋಧಿ ಆಂದೋಲನವೂ, ಆನೆಗಳ ನಗರ ಪ್ರವೇಶವೂ....

ಡಿ.ಎಸ್. ನಾಗಭೂಷಣ

ಭ್ರಷ್ಟಾಚಾರ ಮತ್ತು ಕಪ್ಪುಹಣದ ವಿರುದ್ಧ ಆಂದೋಲನಗಳು ತಾರಕಕ್ಕೇರುತ್ತಿರುವ ಸಂದರ್ಭದಲ್ಲೇ ಮೈಸೂರು ನಗರಕ್ಕೆ ಆನೆಗಳು ನುಗ್ಗಿ ನಗರದ 'ನಾಗರಿಕ'ರನ್ನು ಭಯಭೀತಗೊಳಿಸಿವೆ. ಅರೇ, ಇವೆರಡಕ್ಕೂ ಯಾವ ಸಂಬಂಧ ಎಂದು ವಿಚಿತ್ರ ರಾಗದಲ್ಲಿ ಆಶ್ಚರ್ಯದ ಧ್ವನಿ ಎತ್ತುವವರೇ ಹೆಚ್ಚೆಂಬುದು ನನಗೆ ಗೊತ್ತು. ಹೇಗೂ ಮುಖ್ಯಮಂತ್ರಿ ಯಡಿಯೂರಪ್ಪನವರೇ, ಆನೆಗಳ ಹಾವಳಿಯನ್ನು ಇನ್ನು ಮುಂದೆ ಗಂಭೀರ ಸಮಸ್ಯೆಯೆಂದು ಪರಿಗಣಿಸುವುದಾಗಿ ಭರವಸೆ ನೀಡಿದ್ದಾರಲ್ಲಾ? ಇನ್ನು ನಮ್ಮ ಅರಣ್ಯ ಮಂತ್ರಿಯವರು ಆನೆಗಳು ನಗರ ಪ್ರವೇಶಿಸದಂತೆ ತಡೆಯಲು ವಿಶೇಷ ಕಾರ್ಯಪಡೆ ರಚಿಸುವುದಾಗಿಯೂ ಘೋಷಿಸಿದ್ದಾರಲ್ಲಾ? ಆದರೆ, ಜನರ ವಿಚಿತ್ರ ರೀತಿಯ ಆಶ್ಚರ್ಯದಂತೆಯೇ ಈ ಇಬ್ಬರ ಈ ಭರವಸೆ ಮತ್ತು ಘೋಷಣೆಗಳೂ ಅಸಂಬದ್ಧ, ಹಾಸ್ಯಾಸ್ಪದ ಎನ್ನದೆ ವಿಧಿಯಿಲ್ಲ. ಭಯೋತ್ಪಾದಕರ ವಿರುದ್ಧ ಕಟ್ಟೆಚ್ಚರದ ಮಾತಾಯಿತು, ವಿಶೇಷ ಕಮಾಂಡೋ ಪಡೆಗಳ ರಚನೆಯೂ ಆಯಿತು. ಆದರೆ ಭಯೋತ್ಪಾದನೆಯ ಭಯ ಮತ್ತು ಹಾವಳಿ ನಿಂತಿದೆಯೇ? ಈಗ ಆನೆಗಳ ಹಾವಳಿ ವಿರುದ್ಧ ಕಟ್ಟೆಚ್ಚರದ ಮತ್ತು ವಿಶೇಷ ಕಾರ್ಯಪಡೆಯ ಮಾತು! ಇದರಿಂದ ಕಾರ್ಯತಃ ಏನಾದರೂ ಪ್ರಯೋಜನವಾದೀತೇ? ಎಲ್ಲ ಕಾಡುಗಳ ಅಥವಾ ನಗರಗಳ ಸುತ್ತ ಹಗಲೂ ರಾತ್ರಿ ಕಾವಲು ಪಡೆಗಳನ್ನು ನಿಯೋಜಿಸಲಾಗುವುದೇ? ಅದು ಸಾಧ್ಯವೇ? ಅದೇನೇ ಇರಲಿ, ಜನ ಜೀವನ ಯಾವಾಗಲೂ ಕಟ್ಟೆಚ್ಚರದಲ್ಲೇ, ವಿಶೇಷ ಪಡೆಗಳ ಕಣ್ಗಾವಲಿನಲ್ಲೇ ಇರುವಂತಾಗುವುದು ಯಾವುದೇ ಆರೋಗ್ಯಕರ ಸಮಾಜದ, ಅದೂ ಜಾಗತಿಕ ಶಕ್ತಿಯಾಗುವತ್ತ ಸಮೃದ್ಧವಾಗಿ ಬೆಳೆಯುತ್ತಿದೆಯೆಂದು ಹೇಳಲಾಗುವ ನಮ್ಮ ಸಮಾಜದ ಒಳ್ಳೆಯ ಲಕ್ಷಣವೇ?

ಸಮಾಜವಾದಿ ಚಿಂತಕ ಹಾಗೂ ಹೋರಾಟಗಾರ ಡಾ. ರಾಮ ಮನೋಹರ ಲೋಹಿಯಾ ವಿದೇಶವೊಂದರಲ್ಲಿ ತಮ್ಮ ಸಹವರ್ತಿಗಳೊಂದಿಗೆ ಕಾರಿನಲ್ಲಿ ಪಯಣಿಸುತ್ತಿದ್ದಾಗ ಎಲ್ಲಿಂದಲೋ ಕಣಜವೊಂದು ಹಾರಿ ಬಂದು ಅವರನ್ನೆಲ್ಲ ಕಾಡಿಸುತ್ತಿತ್ತಂತೆ. ಅವರ ಸಹವರ್ತಿಗಳು ಅದನ್ನು ಪ್ರತಿ ಬಾರಿ ಕೈಯಿಂದಲೋ, ಮತ್ತೊಂದರಿಂದಲೋ ಓಡಿಸಲು ಯತ್ನಿಸುತ್ತಿದ್ದರೂ, ಅದು ಪದೇ ಪದೇ ಹಾರಿ ಬಂದು ಕಾಡುವುದನ್ನು ಮುಂದುವರಿಸುತ್ತಿತ್ತಂತೆ. ಆಗ ಲೋಹಿಯಾ, ಕಾರಿನಲ್ಲಿ ಆ ಕಣಜದ ಗೂಡೆಲ್ಲಿದೆ ನೋಡಿ ಅದನ್ನು ಸ್ವಚ್ಛಗೊಳಿಸಿ ಎಂದು ಸೂಚಿಸಿ, ಅವರು ಕಾರ್ಯೋನ್ಮುಖರಾಗುವಂತೆ ಮಾಡಿದ ನಂತರವೇ ಅದರ ಹಾವಳಿ ತಪ್ಪಿತಂತೆ. ಹಾಗೇ, ಇಂದು ಭಯೋತ್ಪಾದನೆ, ವ್ಯಾಪಕ ಭ್ರಷ್ಟಾಚಾರ, ಕಪ್ಪು ಹಣದ ವ್ಯವಹಾರ, ಇವುಗಳ ಸುತ್ತಮುತ್ತ ದಿನನಿತ್ಯ ನಡೆಯುತ್ತಿರುವ ವಿವಿಧ ರೀತಿಯ ಗೂಂಡಾಗಿರಿ, ಕೊಲೆ, ಆತ್ಮಹತ್ಯೆ ಹಾಗೂ ಇನ್ನಿತರ ಅಪರಾಧಗಳು, ರೈತರ ಆತ್ಮಹತ್ಯೆ, ಪ್ರತಿಭಟನೆಗಳು, ನಕ್ಸಲೀಯರ ದಾಳಿಗಳು ಮತ್ತು ಇವೆಲ್ಲಕ್ಕೆ ಸಾಂಕೇತಿಕ ಕಳಶವಿಟ್ಟಂತೆ ಈಗ ಆನೆಗಳ ನಗರ ಪ್ರವೇಶ ಇವೆಲ್ಲ ಪರಸ್ಪರ ಸಂಬಂಧಪಟ್ಟಂತಿದ್ದು, ಇವುಗಳ ಹಿಂದೆ ಒಂದು ಸಾಮಾನ್ಯ ಕಾರಣವಿರುವುದನ್ನು ಗುರುತಿಸದ ಹೊರತು, ಇವನ್ನು ನಿವಾರಿಸಲಾಗದು ಎಂಬ ಆಳದ ತಿಳುವಳಿಕೆ ಸಮಾಜದಲ್ಲಿ, ಮುಖ್ಯವಾಗಿ ನಮ್ಮನ್ನು ಆಳುವವರಲ್ಲಿ ತುರ್ತಾಗಿ ಮೂಡಬೇಕಿದೆ. ಅಥವಾ ಮೂಡುವಂತೆ ನಾವು ಸಾಮಾನ್ಯ ಜನ ನಮ್ಮ ಮಧ್ಯೆ ಶುದ್ಧ ಮತ್ತು ಸಮರ್ಥ ನಾಯಕತ್ವವನ್ನು ಬೆಳೆಸಬೇಕಿದೆ. ಹಾಗಾಗಿ ಕಟ್ಟುನಿಟ್ಟಿನ ಕ್ರಮ, ಕಾರ್ಯಪಡೆಯ ರಚನೆ, ಮಸೂದೆ, ಕಾನೂನು ಕ್ರಮ ಇತ್ಯಾದಿಗಳು ಪದೇ ಪದೇ ಕಾಡುವ ಕಣಜವನ್ನು ಕೈಯಿಂದ ಓಡಿಸಿದಂತೆ ತತ್ಕಾಲೀನ ಪರಿಹಾರಗಳಾದಾವೇ ಹೊರತು, ಅವುಗಳ ಮೂಲವನ್ನು ಸ್ವಚ್ಛಗೊಳಿಸುವ ಶಾಶ್ವತ ಪರಿಹಾರವಾಗಲಾರದು.

ಆನೆಗಳು ನಗರವನ್ನು ಏಕೆ ಪ್ರವೇಶಿಸಿ ದಾಂಧಲೆ ನಡೆಸುವಂತಾಯಿತು? ಇದೇನು ಇದ್ದಕ್ಕಿದ್ದಂತೆ ಅಥವಾ ತುಂಬಾ ಅನಿರೀಕ್ಷಿತವಾಗಿ ಸಂಭವಿಸಿದ ಘಟನೆಯೇನಲ್ಲ. ಆನೆಗಳು ಮಾತ್ರವಲ್ಲ, ಅಳಿದುಳಿದಿರುವ ಇತರ ವನ್ಯ ಮೃಗಗಳೂ ಪ್ರಕೃತಿ ಸಹಜವಾದ ತಮ್ಮ ಮೂಲ ನಿವಾಸ ಸ್ಥಾನಗಳನ್ನು ಕಳೆದುಕೊಂಡು ಅಸಹಾಯಕವಾಗಿ ಮತ್ತು ಅನಿವಾರ್ಯವಾಗಿ ಜನವಸತಿ ಕಡೆ ಬರುತ್ತಿರುವ ಅನೇಕ ಪ್ರಕರಣಗಳು ಇತ್ತೀಚಿನ ವರ್ಷಗಳಲ್ಲಿ ಪದೇ ಪದೇ ವರದಿಯಾಗುತ್ತಲೇ ಇವೆ. ನಾವು ಈ ಬೆಳವಣಿಗೆಯನ್ನು ಅವುಗಳ ತಂಟೆಕೋರತನ ಮಾತ್ರವೆಂಬಂತೆ, ಅದರ ಹಿಂದಿನ ಜೈವಿಕ ಒತ್ತಡವನ್ನು ಗಂಭೀರವಾಗಿ ಪರಿಗಣಿಸದೆ, ಹಾಗೆ ಕಾಡು ದಾಟಿ ಬಂದ ಆ ಪ್ರಾಣಿಗಳನ್ನು ಕೊಂದೋ,

ಆನೆಗಳು ನಗರವನ್ನು ಏಕೆ ಪ್ರವೇಶಿಸಿ ದಾಂಧಲೆ ನಡೆಸುವಂತಾಯಿತು? ಇದೇನು ಇದ್ದಕ್ಕಿದ್ದಂತೆ ಅಥವಾ ತುಂಬಾ ಅನಿರೀಕ್ಷಿತವಾಗಿ ಸಂಭವಿಸಿದ ಘಟನೆಯೇನಲ್ಲ. ಆನೆಗಳು ಮಾತ್ರವಲ್ಲ, ಅಳಿದುಳಿದಿರುವ ಇತರ ವನ್ಯ ಮೃಗಗಳೂ ಪ್ರಕೃತಿ ಸಹಜವಾದ ತಮ್ಮ ಮೂಲ ನಿವಾಸ ಸ್ಥಾನಗಳನ್ನು ಕಳೆದುಕೊಂಡು ಅಸಹಾಯಕವಾಗಿ ಮತ್ತು ಅನಿವಾರ್ಯವಾಗಿ ಜನವಸತಿ ಕಡೆ ಬರುತ್ತಿರುವ ಅನೇಕ ಪ್ರಕರಣಗಳು ಇತ್ತೀಚಿನ ವರ್ಷಗಳಲ್ಲಿ ಪದೇ ಪದೇ ವರದಿಯಾಗುತ್ತಲೇ ಇವೆ.

ಹೊಡೆದೋಡಿಸಿಯೋ ಅಥವಾ ನಾವು ಈಗ ಮಾಡಿರುವಂತೆ ಹಿಡಿದು ಹಾಕಿಯೋ ಸಮಸ್ಯೆಯನ್ನು ತತ್ಕಾಲೀನವಾಗಿ ಪರಿಹರಿಸಿಕೊಳ್ಳುತ್ತಿದ್ದೆವು. ಅದರ ಪರಿಣಾಮವನ್ನು ನಾವಿಂದು ಮೈಸೂರಿನಲ್ಲಿ ನೋಡಿದ್ದೇವೆ. ಹಾಗೇ ಈ ಮೈಸೂರು ಘಟನೆಯ ಮತ್ತು ಅದರ ಭವಿಷ್ಯದ ಸಾಧ್ಯರೂಪಗಳ ಕಲ್ಪನೆಯ ಭಯಾನಕತೆ ನಮ್ಮನ್ನು ಒಮ್ಮೆ ಎದ್ದು ಕೂತು ಯೋಚಿಸುವಂತೆ ಮಾಡಿದೆ. ಹಾಗೆ ಯೋಚಿಸಿದಾಗ, ಈ ಸಮಸ್ಯೆಯನ್ನು ಕುರಿತ ನಮ್ಮ ಗ್ರಹಿಕೆಯೇ ಮತ್ತು ಹಾಗಾಗಿ ಅದರ ಪರಿಹಾರವೂ ಎಷ್ಟು ಮೇಲ್ಮೈ ಮಟ್ಟದ್ದಾಗಿತ್ತು ಎಂಬುದು ಗೊತ್ತಾಗುತ್ತದೆ.

ಈ ಘಟನೆಯ ಸಂಬಂಧವಾಗಿ ಟಿವಿ ವರದಿಯೊಂದರಲ್ಲಿ ಮೈಸೂರಿನ ಹೊರವಲಯದ ಬಡಾವಣೆಯೊಂದರ ದೊಡ್ಡ ಬಾಯಿಯ ಮಹಿಳೆಯೊಬ್ಬರು ತಮ್ಮ ವಿಶಾಲ ಮಹಡಿ ಮನೆಯ ಮುಂದೆ ತಮ್ಮ ಗೆಳತಿಯರೊಂದಿಗೆ ನಿಂತು, 'ಈ ಆನೆಗಳು ನಮ್ಮ ಮೈಸೂರಿಗೆ ಬರುತ್ತಿದ್ದಾಗ್ಗ ಅರಣ್ಯ ಇಲಾಖೆಯವರು ಏನು ಮಾಡುತ್ತಿದ್ದರು?' ಎಂದು ಕ್ಯಾಮರಾ ಮುಂದೆ ಅರಚಾಡುತ್ತಿದ್ದುದನ್ನು ನೋಡಿ ನಗು ಬಂದಿತು. ಹೌದು, ಕಾಡಾನೆಗಳನ್ನು ಕಲ್ಲು ಹೊಡೆದು ಓಡಿಸಲು ಯತ್ನಿಸುವ ಮೂರ್ಖ ಜನ ಇನ್ನೆಂತಹ ಮಾತಾಡಿಯಾರು, ಅದು ಬೇರೆ ವಿಷಯ! ಆದರೆ ಇವರೇನು, ಕಾಡಾನೆಗಳನ್ನು ಕುರಿಗಳೆಂದೂ, ಅರಣ್ಯ ಇಲಾಖೆಯ ಸಿಬ್ಬಂದಿಯನ್ನು ಈ ಕುರಿಗಳನ್ನು ಕಾಯುವ ಕುರುಬರೆಂದು ಭಾವಿಸಿದ್ದಾರೋನೋ ತಿಳಿಯದು! ಇಲ್ಲಿ ಕೇಳಬೇಕಾದ ಮುಖ್ಯ ಮತ್ತು ದೊಡ್ಡ ಪ್ರಶ್ನೆಯೆಂದರೆ, ಆನೆಗಳು ಮೈಸೂರನ್ನು ಪ್ರವೇಶಿಸುವಂತಾಗುವವರೆಗೂ ಮೈಸೂರಿಗರು ಮತ್ತು ಅವರು ಆರಿಸಿದ ಅಥವಾ ರೂಪಿಸಿದ ನಾಯಕರು ಹಾಗೂ ಆಡಳಿತಗಾರರು ಏನು ಮಾಡುತ್ತಿದ್ದರು ಎಂಬುದೇ ಆಗಿದೆ.

ನೀವು ನಿಮ್ಮ ವಾಸ ಮತ್ತು ಜೀವನೋಪಾಯದ ಜಾಗವನ್ನು ಮಿತಿಯಿಲ್ಲದೆ ವಿಸ್ತರಿಸಿಕೊಳ್ಳುತ್ತಾ ಹೋಗಬಹುದು;ಅದರ ಪರಿಣಾಮವಾಗಿಯೇ, ನಿಮ್ಮಂತೆಯೇ ಈ ಭೂಮಿಯ ಮೇಲೆ ಬಾಳಲು ಬಂದ ವನ್ಯಜೀವಿಗಳು ತಮ್ಮ ವಾಸ ಮತ್ತು ಜೀವನೋಪಾಯದ ಜಾಗವನ್ನು ವಿಸ್ತರಿಸಿಕೊಳ್ಳಬಾರದೆ? ಮದ್ದು-ಗುಂಡು-ಬಂದೂಕು-ಬಾಂಬುಗಳೇ ನಿಮ್ಮ ತಳಿ ಶ್ರೇಷ್ಠತೆಯ ಹೆಗ್ಗುರುತುಗಳಾದಲ್ಲಿ, ಅವುಗಳನ್ನು ಬಳಸಿ ಅವನ್ನು ನಿಮ್ಮ 'ನಾಗರಿಕ ಗೂಂಡಾಗಿರಿ'ಯ ಮೂಲಕ ಹದ್ದುಬಸ್ತಿನಲ್ಲಿಡಲು ಸಾಧ್ಯವೇ ಒಮ್ಮೆ ನೋಡಿ! ಹೇಗೂ ಈ 'ನಾಗರಿಕ ಗೂಂಡಾಗಿರಿ'ಯನ್ನು ನಾವು ಸಮಾಜ ರಕ್ಷಣೆಯ ಹೆಸರಿನಲ್ಲಿ ಕಾನೂನುಬದ್ಧ ಮಾಡಿಬಿಟ್ಟಿದ್ದೇವಲ್ಲ? ಅರಣ್ಯ ಸಚಿರುವ ಪ್ರಸ್ತಾಪಿಸಿರುವ ಕಾರ್ಯಪಡೆಯ ಹಿಂದಿನ ತತ್ವವೂ ಸರಿ ಸುಮಾರು ಇದೇ-'ಮಾನವ ಶ್ರೇಷ್ಠತೆ'ಯೇ ಅಲ್ಲವೇ?

ಇತ್ತೀಚಿನ ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆಗಳ ನಂತರ ಯಾರೋ ಪಾಪ, ದುಃಖದಿಂದ ತಮ್ಮ ಸುಂದರ ಬೆಂಗಳೂರು ಈಗ ಬರೀ ಗೂಂಡಾಗಳ ಆಳ್ವಿಕೆಗೆ ಒಳಗಾಗುತ್ತಿದೆ ಎಂದು ಅಲವತ್ತುಕೊಂಡರು. ಅಧಕ್ಕೆ ನನ್ನ ಉತ್ತರ ಇದಾಗಿತ್ತು: ನಿಮ್ಮ ಸೌಂದರ್ಯ ಪ್ರಜ್ಞೆಯೇ ವಿಕ್ಷಿಪ್ತಗೊಂಡಂತಿದೆ. ಬೆಂಗಳೂರು ಈಗ ಸುಂದರ ನಗರವಾಗಿ ಉಳಿದಿಲ್ಲ. ಅದನ್ನು ನೀವು ಗೂಂಡಾಗಳು ಮಾತ್ರ ಆಳಬಲ್ಲ ರೀತಿಯಲ್ಲಿ ಕಟ್ಟಿಕೊಂಡಿದ್ದೀರಿ; ಅದಕ್ಕೆ ತಕ್ಕ ಬಾಳನ್ನೂ ಬಾಳುತ್ತಿದ್ದೀರಿ. ಹಾಗಾಗಿ, ನೀವು ಹೀಗೆ ದೂರುವ ಹಕ್ಕನ್ನು ಕಳೆದು ಕೊಂಡಿದ್ದೀರಿ.

> **2015ರ ವೇಳೆಗೆ ಭಾರತವನ್ನು ನಗರ ದೇಶವನ್ನಾಗಿ ಮಾಡಬೇಕೆಂಬುದೇ ನಮ್ಮ ಪ್ರಧಾನಿ ಮನಮೋಹನ ಸಿಂಗರಿಗೆ ವಿಶ್ವ ಬ್ಯಾಂಕ್ ನೀಡಿರುವ ಕಾರ್ಯಕ್ರಮವಂತೆ! ಈ ಕಾರ್ಯಕ್ರಮ ಜನರ ಪ್ರತಿರೋಧ ದಿಂದಾಗಿ ಸದ್ಯಕ್ಕಂತೂ ಯಶಸ್ವಿಯಾಗುವಂತೆ ಕಾಣುತ್ತಿಲ್ಲವದರೂ, ಈ ಕಾರ್ಯಕ್ರಮದ ಹಪಾಹಪಿ ರಾಷ್ಟ್ರಾದ್ಯಂತ ಯಾವುದಾವುದೋ ರೂಪದಲ್ಲಿ ಕಾಣತೊಡಗಿರುವುದಂತೂ ನಿಜ. ಹಾಗಾಗಿಯೇ, ಒಂದು ಸಣ್ಣ ಉದಾಹರಣೆಯಾಗಿ ಹೇಳುವುದಾದರೆ, ಇಂದು ಕಲ್ಲು, ಕಬ್ಬಿಣಗಳ ಗಣಿ ಮತ್ತು ಮರಳಿನ ಮಾಫಿಯಾವನ್ನು ಯಾರೂ ತಡೆಯಲಾಗದಾಗಿದೆ. ತಡೆಯಲು ಹೋದವರು-ಸರ್ಕಾರದಲ್ಲಿರುವವರೂ ಸೇರಿದಂತೆ-ಅದರ ತ್ವರಿತ ಚಲನೆ – ವಿಷಸ್ಫುರಣೆಗೆ ಬಲಿಯಾಗುತ್ತಿದ್ದಾರೆ.**

26/11 ಎಂದು ನಾವು ಪದೇ ಪದೇ ದೇಶ ಭಕ್ತಿಯ ಉಮ್ಮಳಿಕೆಯಲ್ಲಿ ಮುಂಬೈ ಮೇಲಿನ ದಾಳಿಯನ್ನು ನೆನಪಿಸಿಕೊಳ್ಳುತ್ತಾ, ಕಸಬ್‌ನನ್ನು ಇನ್ನೂ ಗಲ್ಲಿಗೇ ಕೇರಿಸಿಲ್ಲ ಎಂದು ಕ್ರುದ್ಧರಾಗಿ ಕೇಳುತ್ತಾ ಪಾಕಿಸ್ಥಾನದ ಮೇಲೆ ಕ್ರಿಡಿಕಾರುತ್ತಲೇ ಇರುತ್ತೇವೆ.

ಆದರೆ ಆ ದಾಳಿ ಕೋರರು ನಮ್ಮ ಸುಪರ್ದಿಯಲ್ಲಿರುವ ಸಮುದ್ರದ ಮೇಲೆಯೇ ಮೈಲುಗಟ್ಟಲೆ ದೋಣಿಯಲ್ಲಿ ನಿರಾಳವಾಗಿ ತೇಲಿ ಬಂದು ಸಶಸ್ತ್ರಧಾರಿಗಳಾಗಿಯೇ ಗೇಟ್ ವೇ ಆಫ್ ಇಂಡಿಯಾ ಮೂಲಕ ಮುಂಬೈ ನಗರದ ಬೀದಿಗಳನ್ನು ಪ್ರವೇಶೀಸಿದರಲ್ಲಾ, ಆಗ ಮುಂಬೈನ 'ನಾಗರೀಕ'ರು ಏನು ಮಾಡುತ್ತಿದ್ದರು? ಅದೂ ಭಯೋತ್ಪಾದನೆಯ ಆತಂಕ ಉತ್ತುಂಗ ಸ್ಥಿತಿಯಲ್ಲಿದ್ದು, ಆ ಬಗ್ಗೆ ಜನಜಾಗೃತಿಯ ಆಂದೋಲನವೇ ನಡೆದಿದ್ದ ದಿನಗಳವು! ಆದರೆ ಅಂದು ಜನ ಮಾತ್ರ ಭಯೋತ್ಪಾದನೆಯ ಸಮಸ್ಯೆಗೂ ತಮಗೂ ಏನೂ ಸಂಬಂಧವಿಲ್ಲದಂತೆ; ಕೆಲವರು ಅವರ ವಿಚಿತ್ರ ವೇಷವನ್ನು ನೋಡಿ ಸ್ವಲ್ಪ ಅನುಮಾನಗೊಂಡರೂ, ತಮಗೇಕೆ ಆ ಗೊಡವೆ ಮತ್ತು ಮುಂದಿನ ಪಡಿಪಾಟಲು ಎಂದೋ ಏನೋ, ತಂತಮ್ಮ ಬದುಕು ಕಟ್ಟಿಕೊಳ್ಳುವ ಮುಖ್ಯ 'ಕೆಲಸ'ಗಳಲ್ಲಿ ತೊಡಗಿಕೊಂಡರು! ಏಕೆಂದರೆ ಇಂತಹ ತಮ್ಮ ಬದುಕಿನ 'ಕೆಲಸ'ಗಳನ್ನು ಬಿಟ್ಟು, ಅಂತಹ ಸಾಮಾಜಿಕ ಪಡಿಪಾಟಲುಗಳಲ್ಲಿ ಸಿಕ್ಕಿಹಾಕಿಕೊಂಡರೆ, ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ನಾವು ಹಿಂದೆ ಉಳಿದುಹೋದೇವು ಎಂಬ ಆತಂಕ ಅವರದು!

ಇದು ನಾವು ಕಟ್ಟಿಕೊಂಡಿರುವ ನಾಗರೀಕತೆಯ ಸತ್ವ, ಅಧೂ ಮುಂಬೈ ಎಂಬ ಮಹಾನಗರದ ಮಹಾ ನಾಗರೀಕತೆಯ ಸತ್ವ! ನಾಗರೀಕತೆ ಎಂಬುದು ನಗರ ಎಂಬ ಶಬ್ದದಿಂದ ವ್ಯುತ್ಪತ್ತಿಯಾದುದು ಎಂದು ಕೇಳಿದ್ದೇನೆ. ನಗರ ಎಂಬುದು 'ನಾಗ'ದಿಂದ ತನ್ನ ವ್ಯುತ್ಪತ್ತಿಯನ್ನು ಪಡೆದಿದೆ. 'ನಾಗ' ಎಂದರೆ ಸರ್ಪ, ಶೀಘ್ರ ಚಲನೆ ಮತ್ತು ವೇಗಕ್ಕೆ ಪ್ರತೀಕ! ಅದರಲ್ಲಿ ವಿಷವೂ ಇದ್ದರೂ ಇಲ್ಲದಂತೆ ಇದೆಯಲ್ಲ? ಆದರೂ ನಗರೀಕರಣವೇ-ವಿಷದ ಹೊಳೆಯೇ-ನಮ್ಮ 'ಅಭಿವೃದ್ಧಿ'ಯ ಮಂತ್ರವಾಗಿದೆ.

2015ರ ವೇಳೆಗೆ ಭಾರತವನ್ನು ನಗರ ದೇಶವನ್ನಾಗಿ ಮಾಡಬೇಕೆಂಬುದೇ ನಮ್ಮ ಪ್ರಧಾನಿ ಮನಮೋಹನ್ ಸಿಂಗರಿಗೆ ವಿಶ್ವಬ್ಯಾಂಕ್ ನೀಡಿರುವ ಕಾರ್ಯಕ್ರಮವಂತೆ! ಈ ಕಾರ್ಯಕ್ರಮ ಜನರ ಪ್ರತಿರೋಧದಿಂದಾಗಿ ಸದ್ಯಕ್ಕಂತೂ ಯಶಸ್ವಿಯಾಗುವಂತೆ ಕಾಣುತ್ತಿಲ್ಲವಾದರೂ, ಈ ಕಾರ್ಯಕ್ರಮದ ಹಪಾಹಪಿ ರಾಷ್ಟ್ರಾದ್ಯಂತ ಯಾವುದಾವುದೋ ರೂಪದಲ್ಲಿ ಕಾಣತೊಡಗಿರುವುದಂತೂ ನಿಜ. ಹಾಗಾಗಿಯೇ, ಒಂದು ಸಣ್ಣ ಉದಾಹರಣೆಯಾಗಿ ಹೇಳುವುದಾದರೆ, ಇಂದು ಕಲ್ಲು, ಕಬ್ಬಿಣಗಳ ಗಣಿ ಮತ್ತು ಮರಳಿನ ಮಾಫಿಯಾವನ್ನು ಯಾರೂ ತಡೆಯಲಾಗದಾಗಿದೆ. ತಡೆಯಲು ಹೋದವರು-ಸರ್ಕಾರದಲ್ಲಿರುವವರೂ ಸೇರಿದಂತೆ-ಅದರ ತ್ವರಿತ ಚಲನೆ ಮತ್ತು ವಿಷ ಸ್ಫುರಣೆಗೆ ಬಲಿಯಾಗುತ್ತಿದ್ದಾರೆ.

ಇದು ಗಣಿ ಮಾಲೀಕರ ಅಥವಾ ಮರಳು ಗುತ್ತಿಗೆದಾರರ ದುರಾಸೆಗೆ ಸಂಬಂಧಿಸಿದ ವಿಷಯವೇ ಅಲ್ಲ ಎಂಬುದು ಇಲ್ಲಿ ಮುಖ್ಯ. ಅದು ಸಮಸ್ಯೆಯು ಸರಳೀಕರಣ. ಇದು ನಮ್ಮ 'ಅಭಿವೃದ್ಧಿ' ಕಲ್ಪನೆಯಲ್ಲೇ ಅಡಗಿರುವ ವಿಷದ ಬುಗ್ಗೆಯ ಪರಿಣಾಮ. ಈಗ ಆಯ್ದ ಕೆಲವು ಜನರ ಕೈಗೆ ಅಲ್ಪಾವಧಿಯಲ್ಲೇ ಸುಲಭ 'ದುಡಿಮೆ'ಯ ಮೂಲಕ ರಾಶಿ ರಾಶಿ ಹಣ ಸೇರುವಂತಹ ಉದಾರ ಆರ್ಥಿಕ 'ವ್ಯವಸ್ಥೆ'ಯನ್ನು ಕಾನೂನುಬದ್ಧವಾಗಿಯೇ ಸ್ಥಾಪಿಸಲಾಗಿದೆ. ಹಾಗೇ ಈ ನವ ಶ್ರೀಮಂತರು ಆ ಹಣವನ್ನು ಖರ್ಚು ಮಾಡಲೇ ಬೇಕಾದಂತಹ ಒತ್ತಾಯ ಹಾಗೂ ಆಕರ್ಷಣೆಗಳಿರುವ ಮುಕ್ತ 'ಮಾರುಕಟ್ಟೆ'ಯನ್ನೂ ನಿರ್ಮಿಸಲಾಗಿದೆ.

ಹಾಗಾಗಿ ಈ ಕೆಲವು ಜನ ತಮ್ಮ ಹಣವನ್ನು ಸುಮ್ಮನೆ ಕೊಳೆಯಲು ಬಿಡದೆ, ಸುಖಭೋಗಗಳ ಮೇಲೆ ಎಷ್ಟು ಖರ್ಚು ಮಾಡಿದರೂ ಅದರ ಸಿಬಿರೂ ಸವೆಯುದೆ, ಮಾರುಕಟ್ಟೆಯಲ್ಲಿ ಇಂದು ಬಹು ಬೇಡಿಕೆಯಲ್ಲಿರುವ ನೆಲವನ್ನು ಸ್ಪರ್ಧಾತ್ಮಕವಾಗಿ ಕೊಳ್ಳತೊಡಗಿದ್ದಾರೆ. ಒಂದಲ್ಲ ಎರಡಲ್ಲ ಹಲವು ವಿಶಾಲ ಬಂಗಲೆಗಳನ್ನೂ, ಮನೆಗಳ ಮೇಲೆ ಮನೆಗಳನ್ನು ಕಟ್ಟಿಸುತ್ತಿದ್ದಾರೆ. ಇದೊಂದು ವಿಷವ್ಯೂಹ. ಇಂದು ನಗರಗಳ ಮಧ್ಯಮ ವರ್ಗಗಳ ಬಡಾವಣೆಗಳಲ್ಲಿ ಪುನರ್‌ನವೀಕರಣಗೊಳ್ಳದ ಮನೆಯೇ ಇಲ್ಲವಾಗಿದೆ! ಬೀದಿ ಬೀದಿಯಲ್ಲೂ, ಇಟ್ಟಿಗೆ, ಮರಳು, ಕಬ್ಬಿಣದ ರಾಶಿ ಬಿದ್ದಿದ್ದು ಜನ ಓಡಾಡುವುದೇ ಕಷ್ಟವಾಗತೊಡಗಿದೆ! ಇನ್ನು ನವ ಶ್ರೀಮಂತರು ಬಾಡಿಗೆಗೆ ಮುಗಿಲೆತ್ತರದ ಅಪಾರ್ಟುಮೆಂಟುಗಳನ್ನೂ, ಭವ್ಯ ಮಾಲ್‌ಗಳನ್ನೂ, ತೋಟಗಳಲ್ಲಿ ರೆಸಾರ್ಟುಗಳನ್ನೂ ಕಟ್ಟಿಸುವ ಮೂಲಕ ತಮ್ಮ ದೇಶಭಕ್ತಿಯನ್ನು ಮೆರೆಯುತ್ತಾ ದೇಶದ ಆರ್ಥಿಕತೆ ಎರಡಂಕಿ ದರದಲ್ಲಿ ಬೆಳೆಯಲು ತಮ್ಮ ಪಾಲನ್ನು ಸಲ್ಲಿಸಲು ಹಗಲೂ ರಾತ್ರಿ ದುಡಿಯುತ್ತಿದ್ದಾರೆ. ಇದಕ್ಕೆ ಅತ್ಯಗತ್ಯವಾಗಿ ಬೇಕಾದ ಅಪಾರ ಪ್ರಮಾಣದ ಮಣ್ಣು, ಕಲ್ಲು, ಕಬ್ಬಿಣ, ಮರ, ಮರಳನ್ನು ಒದಗಿಸುವ ಸುಗಮ ವ್ಯವಸ್ಥೆ ಬೇಡವೇ? ಇದಕ್ಕೆ ನಮ್ಮ ಬೆಟ್ಟ ಗುಡ್ಡಗಳನ್ನು ಅಗೆಯದಿರಲು, ಭೂಮಿಯನ್ನು ಬಗೆಯದಿರಲು, ಅರಣ್ಯಗಳನ್ನು ಕಡಿಯದಿರಲು, ನದಿಗಳನ್ನು ಒತ್ತರಿಸಿ ಬತ್ತಿ

ಸದಿರಲು ಆಗುತ್ತದೆಯೇ? ಅಧಿಕ ಸುಖದ ಆಸೆಗಳನ್ನು ಸೃಷ್ಟಿಸುವುದು ಅಭಿವೃದ್ಧಿಯಾಗುವುದಾದರೆ, ಆ ಆಸೆಗಳನ್ನು ಪೂರೈಸಿಕೊಳ್ಳಲು ಹವಣಿಸುವುದು ಅಭಿವೃದ್ಧಿ ವಿರೋಧಿ ಹೇಗಾದೀತು? ಅದನ್ನು ತಡೆಯಲು ಯತ್ನಿಸುವುದು ವ್ಯಾವಹಾರಿಕವಾಗಿ ಎಷ್ಟು ನೈತಿಕ?

ಇದು ಸರ್ಕಾರಕ್ಕೂ ಗೊತ್ತಿಲ್ಲದಿಲ್ಲ. ಹಾಗಾಗಿಯೇ ಅದು ಈ 'ನೈತಿಕತೆ'ಯ ಒತ್ತಡದಲ್ಲಿ; ಪ್ರತ್ಯಕ್ಷವಾಗಿ ಪರಿಸರ ರಕ್ಷಣೆಯ ಕಾನೂನನ್ನೂ ಮಾಡುತ್ತದೆ, ಪರೋಕ್ಷವಾಗಿ ಕಾನೂನುಗಳನ್ನು ಉಲ್ಲಂಘಿಸಲೂ ಅವಕಾಶ ಮಾಡಿಕೊಡುತ್ತದೆ! ಅಥವಾ ಉಲ್ಲಂಘನೆಗಳ ಬಗ್ಗೆ ಬಾಯಲ್ಲಿ ಕಟುವಾಗಿ ಮಾತನಾಡುತ್ತಾ ಕಣ್ಣುಗಳನ್ನು ಮುಚ್ಚಿಕೊಂಡಿರುತ್ತದೆ. ಗಣಿ ಸಂಪತ್ತಿನ ಲೂಟಿ, ಅರಣ್ಯ ನಾಶ, ಮರಳು ಸಾಗಣೆಗಳ ಬಗ್ಗೆ ನಮ್ಮ ರಾಜ್ಯ ಸರ್ಕಾರದ ನಿಲುವು ಇದಕ್ಕೊಂದು ಉತ್ತಮ ನಿದರ್ಶನ. ನಮ್ಮ ಲೋಕಾಯುಕ್ತರೇನೋ ಹೋದಲ್ಲೆಲ್ಲ ರಾಜ್ಯದ ಸಂಪತ್ತು ಲೂಟಿಯಾಗುತ್ತಿದೆ ಎಂದು ಕೂಗಿಕೊಂಡಿದ್ದೇ ಬಂತು; ಯಾವ ಪ್ರಯೋಜನವೂ ಇಲ್ಲದಾಗಿದೆ! ಅದೇನೇ ಇರಲಿ, ಇದನ್ನೆಲ್ಲ ನಾವು-ಈ ಅಧಿಕ ಆಸೆಗಳನ್ನು ನೈತಿಕವಾಗಿ ಕೆಟ್ಟದ್ದು ಎಂದು ಭಾವಿಸುವವರು-ಭ್ರಷ್ಟಾಚಾರ ಮತ್ತು ರಾಜಕೀಯ ಅನಾಚಾರ ಎಂದು ಕರೆಯುತ್ತೇವೆ. ಇದಕ್ಕೆ ವಿರುದ್ಧವಾಗಿ ಅವರು ನಮ್ಮನ್ನು ಅಭಿವೃದ್ಧಿಗೆ ಅಡ್ಡಗಾಲು ಹಾಕುವ ಅಧಿಕಪ್ರಸಂಗಿಗಳು ಎಂದು ಕರೆಯುತ್ತಾರೆ!

ಇದರಿಂದ ಗೊಂದಲಗೊಳ್ಳುವ ಸಾಮಾನ್ಯ ಜನ ಈ ಗೊಂದಲವನ್ನು ತಾವು ಭಾಗಿಯಾದ ಭ್ರಷ್ಟಾಚಾರದ (ಉದಾಹರಣೆಗೆ ತಮಗೆ ನೈತಿಕ ನೆಲೆಯಲ್ಲಿ ಅಥವಾ ಕಾನೂನುಬದ್ಧವಾಗಿ ಸಿಗಲಾರದ ಅನುಕೂಲಗಳನ್ನು ಪಡೆಯಲು ನೀಡುವ ಲಂಚ-ರುಷುವತ್ತುಗಳ) ಮತ್ತು ರಾಜಕೀಯ ಅನಾಚಾರದ(ಚುನಾವಣೆಗಳಲ್ಲಿ ಜಾತಿ-ಹಣ-ಹೆಂಡದ ಆಮಿಷಗಳಿಗೆ ಒಳಗಾಗುವ) ಪ್ರಕರಣಗಳನ್ನು ಜಾಣ ಮರವೆನಲ್ಲಿ ಬದಿಗಿಟ್ಟು ಮಿಕ್ಕೆಲ್ಲ ಭ್ರಷ್ಟಾಚಾರ-ರಾಜಕೀಯ ಅನಾಚಾರಗಳ ವಿರುದ್ಧ ಬೊಬ್ಬೆ ಹಾಕುತ್ತಾ ನಿವಾರಿಸಿಕೊಳ್ಳಲು ಯತ್ನಿಸುತ್ತಲೇ ಇರುತ್ತಾರೆ! ಜನಮನದ ಈ ಮಾನಸಿಕ ಒಡಕಿನ ಮೂಲ ಎಲ್ಲಿದೆ ಮತ್ತು ಇದಕ್ಕೂ ಆಳುವ ವ್ಯವಸ್ಥೆ ಇಂದು ತನ್ನ ಅಭಿವೃದ್ಧಿಯ ಹಪಾಹಪಿಯಲ್ಲಿ ಎದುರಿಸುತ್ತಿರುವ ನೈತಿಕ ಬಿಕ್ಕಟ್ಟಿಗೂ ಎಂತಹ ಸಂಬಂಧವಿದೆ ಎಂಬುದನ್ನು ಗುರುತಿಸದೆ, ಭ್ರಷ್ಟಾಚಾರ ಮತ್ತು ಕಪ್ಪುಹಣದ ವಿರುದ್ಧ ನಾವಾಗಲೀ, ಅಣ್ಣಾ ಹಜಾರೆ ಮತ್ತು ಅವರ ಗೆಳೆಯರಾಗಲೀ ಅಥವಾ ಬಾಬಾ ರಾಂದೇವ್ ಹಾಗೂ ಅವರ ಬೆಂಬಲಿಗರಾಗಲೀ ಹೋರಾಟದ ಮಾತಾಡುವುದು ಆತ್ಮದ್ರೋಹ ಮಾತ್ರವೆನಿಸುತ್ತದೆ.

ಅದು ಪ್ರಕೃತಿಯ ಒತ್ತಡಕ್ಕೆ ಸಿಕ್ಕಿ ಮೈಸೂರು ನಗರವನ್ನು ಪ್ರವೇಶಿಸಿದ ಕಾಡಾನೆಗಳ ಭೀತಿಯನ್ನು ಅಂದಿನ ಮಟ್ಟಿಗೆ ತಹಬಂದಿಗೆ ತಂದುಕೊಂಡು ನೆಮ್ಮದಿಯ ನಿಟ್ಟಿಸಿರು ಬಿಡುವ ಮೂರ್ಖತನದಂತೆಯೇ ಸರಿ! ಇನ್ನು ಸಾವಿರ ಕೋಟಿಗಳ ಸರದಾರ ಬಾಬಾ ರಾಂದೇವರಂತ ಹವರ ಸನ್ಯಾಸತ್ವ ಮತ್ತು ಅದರಿಂದ ಸ್ಫೂರ್ತಿ ಪಡೆದ, ಬಹುಪಾಲು ಸೇಠಜಿ-ಸೇಠಾಣಿಗಳೇ ತುಂಬಿರುವ ಅವರ ಅನುಯಾಯಿಗಳ ದೇಶಭಕ್ತಿಯ ಮೊಳಗುಗಳು ಅತಿ ಭೋಗದಿಂದಲೋ ಅಥವಾ ಅತಿಲೋಭದಿಂದಲೋ ಉಂಟಾಗಿರುವ ಅಜೀರ್ಣದ ತೇಗುಗಳೇ ಸರಿ ಎಂದರೆ ತಪ್ಪಾಗಲಾರದು!

ಪ್ರಕೃತಿಯ ಒತ್ತಡಕ್ಕೆ ಸಿಕ್ಕಿ ಮೈಸೂರು ನಗರವನ್ನು ಪ್ರವೇಶಿಸಿದ ಕಾಡಾನೆಗಳ ಭೀತಿಯನ್ನು ಅಂದಿನ ಮಟ್ಟಿಗೆ ತಹಬಂದಿಗೆ ತಂದುಕೊಂಡು ನೆಮ್ಮದಿಯ ನಿಟ್ಟಿಸಿರು ಬಿಡುವ ಮೂರ್ಖತನದಂತೆಯೇ ಸರಿ! ಇನ್ನು ಸಾವಿರ ಕೋಟಿಗಳ ಸರದಾರ ಬಾಬಾ ರಾಂದೇವರಂತ ಹವರ ಸನ್ಯಾಸತ್ವ ಮತ್ತು ಅದರಿಂದ ಸ್ಫೂರ್ತಿ ಪಡೆದ, ಬಹುಪಾಲು ಸೇಠಜಿ-ಸೇಠಾಣಿಗಳೇ ತುಂಬಿರುವ ಅವರ ಅನುಯಾಯಿಗಳ ದೇಶಭಕ್ತಿಯ ಮೊಳಗುಗಳು ಅತಿ ಭೋಗದಿಂದಲೋ ಅಥವಾ ಅತಿಲೋಭದಿಂದಲೋ ಉಂಟಾಗಿರುವ ಅಜೀರ್ಣದ ತೇಗುಗಳೇ ಸರಿ ಎಂದರೆ ತಪ್ಪಾಗಲಾರದು!

ಜಪಾನಿನ ಸುಪ್ರಸಿದ್ಧ ಚಲಚಿತ್ರ ನಿರ್ದೇಶಕ ಕುರೋಸಾವಾನ ಚಲಚಿತ್ರವೊಂದರಲ್ಲಿ ನಗರದ ಹುಡುಗರು ಹಳ್ಳಿಯೊಂದಕ್ಕೆ ಭೇಟಿ ನೀಡಿ, ಅದರ ಮುಗ್ಧ ಸೌಂದರ್ಯಕ್ಕೆ ಮಾರು ಹೋಗಿ, ಆ ರಾತ್ರಿ ಅಲ್ಲಿಯೇ ಉಳಿಯಲು ನಿರ್ಧರಿಸುತ್ತಾರೆ. ಆದರೆ ಆ ಹಳ್ಳಿಯಲ್ಲಿ ವಿದ್ಯುತ್ತಿಲ್ಲ ಎಂದು ತಿಳಿದು ಹೌಹಾರಿ, ಬೆಳಕೇ ಇಲ್ಲದೆ ಕಗ್ಗತ್ತಲಲ್ಲಿ ರಾತ್ರಿ ಕಳೆಯುವ ಬಗ್ಗೆ ಆತಂಕಿತರಾಗಿ ಹಳ್ಳಿಯ ವಯೋವೃದ್ಧನನ್ನು ಆ ಬಗ್ಗೆ ಪ್ರಶ್ನಿಸುತ್ತಾರೆ. ಆ ವಯೋವೃದ್ಧ ಇವರ ಪ್ರಶ್ನೆಯಿಂದ ಆಶ್ಚರ್ಯಚಕಿತನಾಗಿ, 'ಅರೆ, ರಾತ್ರಿ ಎಂದರೆ ಇರಬೇಕಾದುದೇ ಹಾಗಲ್ಲವೇ?' ಎಂದು ತಿರುಗಿ ಅವರನ್ನೇ ಪ್ರಶ್ನಿಸುತ್ತಾನೆ! ಈ ವಯೋವೃದ್ಧನ ಈ ಸಹಜ ಮುಗ್ಧತೆಯನ್ನು ಗಾಂಪತನವೆಂದು ನಮ್ಮ ಅಭಿವೃದ್ಧಿತನದ ಹುಸಿ ಹಮ್ಮಿನಲ್ಲಿ ಹೀನಾಯವಾಗಿ ತಿರಸ್ಕರಿಸುವ ನಾವು, ಯಾವುದು ಸಹಜವಾಗಿ ಹೇಗೆ ಇರಬೇಕೋ ಹಾಗೆ ಬಿಲ್‌ಕುಲ್ ಇರದಂತೆ ಮಾಡುವ ನಮ್ಮ ಸಾಹಸಗಳನ್ನೇ ನಾಗರೀಕತೆ, ಆಧುನಿಕತೆ, ಅಭಿವೃದ್ಧಿ ಎಂದೆಲ್ಲಾ ಎಂದು ಕರೆದುಕೊಂಡು ಬೀಗುತ್ತಿದ್ದೇವೆ. ನಮ್ಮ ನಗರಗಳನ್ನು ಅಮೆರಿಕಾದ ನಗರಗಳ ರೋಚಕ ಮತ್ತು 'ಅಭಿವೃದ್ಧಿ ಪರ'ವೆಂದು ಹೇಳಲಾಗುವ ರಾತ್ರಿ ಬದುಕಿಗಾಗಿ ವಿದ್ಯುತ್ ಬೆಳಕಿನಲ್ಲಿ ಜಗಮಗಿಸುವಂತೆ ಮಾಡುವ ಆಸೆಯ ಆವೇಗಕ್ಕೆ ಸಿಕ್ಕಿ, ಅತ್ಯಾಧುನಿಕ ಅಣುವಿದ್ಯುತ್ ಸ್ಥಾವರಗಳನ್ನು ಆಹ್ವಾನಿಸುತ್ತಿದ್ದೇವೆ. ಜೊತೆಗೇ ಫುಕೋಶಿಮಗಳನ್ನೂ ಆಹ್ವಾನಿಸುತ್ತಿದ್ದೇವೆ ಎಂಬುದನ್ನು ಮರೆಯುತ್ತಿದ್ದೇವೆ!

ಗಾಂಧೀಜಿ ಒಮ್ಮೆ ಹಡಗಿನಲ್ಲಿ ಪ್ರಯಾಣಿಸುತ್ತಿದ್ದಾಗ, ಹಡಗಿನ ಒಂದು ಬದಿಯಲ್ಲಿ ಜನಸಂದಣಿ ಕಂಡು, ಏನದೆಂದು ವಿಚಾರಿಸಿದರಂತೆ. ಜನ ಸಂದಣಿಯಲ್ಲಿದ್ದ ಒಬ್ಬ, ಇಲ್ಲಿ ಹಡಗಿನ ಮಾಲೀಕರು ಪ್ರಯಾಣಿಕರ ಆಕರ್ಷಣೆಗೆಂದು ದೂರದರ್ಶಕವನ್ನು ಇಟ್ಟಿದ್ದಾರೆ. ಇದರಲ್ಲಿ ಬರಿಗಣ್ಣಿಗೆ ಕಾಣದಂತಹ ದೂರದ ಆಕಾಶಕಾಯಗಳನ್ನು ಕಾಣಬಹುದು ಎಂದು ಅವರನ್ನು ಅದರತ್ತ ಆಹ್ವಾನಿಸಿದನಂತೆ. ಗಾಂಧೀಜಿ ಅದಕ್ಕೆ ನಸುನಕ್ಕು, ನನ್ನ ಕಣ್ಣಿಗೆ ಕಾಣುವಷ್ಟು ಜಗತ್ತು ನನಗೆ ಬೇಕಾದಷ್ಟಾಯಿತು; ಮಿಕ್ಕದ್ದರ ಉಸಾಬರಿ ನನಗೆ ಬೇಡ ಎಂದು ಒಂದಿಷ್ಟೂ ಕುತೂಹಲಿತರಾಗದೆ ಮುಂದೆ ನಡೆದರಂತೆ! ಇವನ್ನು ಸರಳವಾಗಿ, ಸುಲಭವಾಗಿ 'ಪ್ರಗತಿ ವಿರೋಧಿ' ಎಂದು ಕರೆದು 'ಪ್ರಗತಿ ಪಥ'ದಲ್ಲಿ ಮುಂದುವರೆದ ಜನರೇ ಇಂದು ಭಯೋತ್ಪಾದನೆ, ಭ್ರಷ್ಟಾಚಾರ, ಕಪ್ಪುಹಣ, ಗೂಂಡಾಗಳ ಆಳ್ವಿಕೆ, ರೈತರ ಆತ್ಮಹತ್ಯೆ, ಕೊನೆಗೆ ಈಗ ಆನೆಗಳ ನಗರ ಪ್ರವೇಶ ಇತ್ಯಾದಿಗಳಿಂದ ಗಾಬರಿಗೊಂಡು; ಅಣ್ಣಾ ಹಜಾರೆಯವರತ್ತಲೋ, ಬಾಬಾ ರಾಂದೇವ್‌ರತ್ತಲೋ,, ಯಡಿಯೂರಪ್ಪನವರತ್ತಲೋ, ಮನಮೋಹನ ಸಿಂಗರತ್ತಲೋ, ಕೊನೆಗೆ ಓರ್ವ ದಕ್ಷ ಅರಣ್ಯಾಧಿಕಾರಿಯತ್ತಲೋ ಅಥವಾ ಕನಿಷ್ಠ ಸಮರ್ಥ ಮಾವುತನತ್ತಲೋ ಕಣ್ಣು ಹಾಯಿಸುತ್ತಾ, ಅವರಲ್ಲಿ ಯಾರಾದರೊಬ್ಬರಾದರೂ ತಮ್ಮ ರಕ್ಷಣೆಗೆ ಧಾವಿಸಿ ಬರುತ್ತಾರೋ ಇಲ್ಲವೋ ಎಂಬ ಆತಂಕದಲ್ಲಿ, ಬರಲೇಬೇಕೆಂಬ ಆಗ್ರಹದಲ್ಲಿ ದೊಡ್ಡ ಗಂಟಲಲ್ಲಿ ಕೂಗಾಡುತ್ತಲೋ, ಜೈಕಾರ ಹಾಕುತ್ತಲೋ, ಭಜನೆಗೆ ತಾಳ ಹಾಕುತ್ತಲೋ, ಹಾಡುತ್ತಾ ನರ್ತಿಸುತ್ತಲೋ, ಹೋಮ ಹವನ ನಡೆಸಿ ಕೃತಾರ್ಥರಾಗುತ್ತಲೋ; ಒಮ್ಮೆ ಹತಾಶೆಯಲ್ಲಿ, ಮತ್ತೊಮ್ಮೆ ಶುಭ ನಿರೀಕ್ಷೆಯಲ್ಲಿ ಮನುಷ್ಯ ಮತ್ತು ಪ್ರಾಣಿ ನಡುವಣ ಅವಸ್ಥೆಯಲ್ಲಿ ಕಾಲ ನೂಕುತ್ತಿದ್ದಾರೆ.

ಆದರೆ ಎಲ್ಲಿಯವರೆಗೆ ಈ ದೇಹಕ್ಕೆ, ಈ ಮನಸ್ಸಿಗೆ, ಈ ಭೂಮಿಗೆ, ಅದರೊಳಗಿನ ಸಂಪತ್ತಿಗೆ, ಅದರ ಮೇಲಿನ ಈ ಆಕಾಶಕ್ಕೆ, ಈ ಗಾಳಿಗೆ, ಕಾಡಿಗೆ, ಕಾಡಿನೊಳಗಿನ ಜೀವ ಜಗತ್ತಿಗೆ ಧಾರಣೆಯ, ಸೈರಣೆಯ ಒಂದು ಮಿತಿಯಿದೆ;ಅದನ್ನು, ರಾಶಿ ರಾಶಿ ಹಣ, ಮನೆ, ಒಡವೆ, ವಸ್ತ್ರ, ಮಾಹಿತಿ-ಮನರಂಜನೆಯ ಸುಖಭೋಗಗಳ ಸಾಧನ ಸಲಕರಣೆಗಳನ್ನು ಅಡ್ಡಾದಿಡ್ಡಿ ಬಳಸಿ ದಾಟಿ ಹೊರಟಿರುವ ನಮಗೆ ಎಂದೂ ತೃಪ್ತಿಯಲ್ಲಿ ಕೊನೆಗೊಳ್ಳುವ ನಿಜವಾದ ಸುಖ ಒದಗಿಬರಲಾರದು ಎಂಬ ಆಳದ ಅರಿವು ಉಂಟಾಗುವುದಿಲ್ಲವೋ; ಆ ಅರಿವು ಉಂಟಾಗುವಂತಹ ವ್ಯವಧಾನ-ವಿಶ್ರಾಂತಿಗಳ ಬದುಕಿಗೆ ನಾವು ಮರಳುವುದಿಲ್ಲವೋ, ಅಲ್ಲಿಯವರೆಗೆ ನಾವು ನಮ್ಮ ಹಳ್ಳಿಗಳನ್ನು ಹಾಳುಕೊಂಪೆಗಳೆಂದು ಹಳಿದು ನಾಶ ಮಾಡುತ್ತಾ, ನಗರಗಳನ್ನು ಹುತ್ತಗಳಂತೆ ಕಟ್ಟುತ್ತಾ, ನಮ್ಮ ಈ ಅರ್ಧ ಮೃಗ-ಅರ್ಧ ಮನುಷ್ಯ ಅವಸ್ಥೆಯಲ್ಲಿ ಮುಂದುವರೆಯುವುದು ನಮ್ಮ ಕರ್ಮವೇ ಆಗಿರುತ್ತದೆ! □

ಡೆಂಗಿ ಜ್ವರ ತಡೆಗಟ್ಟುವ ಬಗ್ಗೆ ಮುಂಜಾಗ್ರತೆ ಕ್ರಮಗಳು:-

ಡೆಂಗಿ ಜ್ವರ ಎಂದರೇನು?

ಡೆಂಗಿ ಜ್ವರವು ಡೆಂಗಿ ವೈರಸ್‌ನಿಂದ ಉಂಟಾಗುವ ಕಾಯಿಲೆ. ಈ ಕಾಯಿಲೆಯು ಸೋಂಕು ಹೊಂದಿದ ಈಡಿಸ್ ಈಜಿಪ್ಟೈ ಎಂಬ ಸೊಳ್ಳೆಯ ಕಚ್ಚುವಿಕೆಯಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ.

ಈ ರೋಗದ ಮುಖ್ಯ ಲಕ್ಷಣಗಳು

ಇದ್ದಕ್ಕಿದ್ದಂತೆ ತೀವ್ರಜ್ವರ, ವಿಪರೀತ ತಲೆನೋವು, ಕಣ್ಣುಗಳ ಹಿಂಭಾಗದಲ್ಲಿ ನೋವು, ಮಾಂಸಖಂಡ ಮತ್ತು ಕೀಲುಗಳಲ್ಲಿ ನೋವು ಕಾಣಿಸಿಕೊಳ್ಳುವುದು ಈ ರೋಗದ ಲಕ್ಷಣ. ಹಲವು ಬಾರಿ ಮೂಗು, ಬಾಯಿ ಮತ್ತು ವಸಡುಗಳಲ್ಲಿ ರಕ್ತಸ್ರಾವದ ಚಿಹ್ನೆಗಳು ಕಂಡುಬರುತ್ತವೆ. ಈ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ಹತ್ತಿರದ ಸರ್ಕಾರಿ ಆಸ್ಪತೆಗೆ ದಾಖಲಿಸಿ, ರಕ್ತಪರೀಕ್ಷೆ ಮಾಡಿಸಿ, ಸೂಕ್ತ ಚಿಕಿತ್ಸೆ ಪಡೆಯುವುದು.

ಸಾರ್ವಜನಿಕರು ಡೆಂಗಿ ರೋಗವನ್ನು ತಡೆಗಟ್ಟಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು:-

1) ಡೆಂಗಿ ಹರಡುವ ಈಜಿಪ್ಟೈ ಸೊಳ್ಳೆಗಳು ಮನೆಯಲ್ಲಿನ ನೀರು ಶೇಖರಿಸುವ ಸಿಮೆಂಟ್ ತೊಟ್ಟಿಗಳು, ಬ್ಯಾರೆಲ್‌ಗಳು, ಡ್ರಮ್‌ಗಳು, ಏರ್‌ಕೂಲರ್, ಹೂಕುಂಡದ ನೀರಿನ ಸಂಗ್ರಹಗಳು, ಇತ್ಯಾದಿಗಳಲ್ಲಿ ಉತ್ಪತ್ತಿಯಾಗುವುದರಿಂದ ಇವುಗಳನ್ನು ವಾರಕ್ಕೊಮ್ಮೆ ಸಂಪೂರ್ಣವಾಗಿ ಶುಚಿಗೊಳಿಸಿ, ಯಾವಾಗಲೂ ಭದ್ರವಾದ ಮುಚ್ಚಳಿಕೆಯಿಂದ ಮುಚ್ಚಿ ಸೊಳ್ಳೆ ಉತ್ಪತ್ತಿಯಾಗದಂತೆ ಎಚ್ಚರವಹಿಸಿ.

2) ಬಯಲಲ್ಲಿ ಪೈರು, ಎಳನೀರಿನ ಚಿಪ್ಪು ಮತ್ತು ತ್ಯಾಜ್ಯ ವಸ್ತುಗಳಲ್ಲಿ ನೀರು ಸಂಗ್ರಹವಾಗದಂತೆ ಸೂಕ್ತ ವಿಲೇವಾರಿ ಮಾಡುವುದು ಅಥವಾ ನಾಶಗೊಳಿಸುವುದು.

3) ಈ ರೋಗ ಹರಡುವ ಸೊಳ್ಳೆಗಳು ಹಗಲಲ್ಲಿ ಕಚ್ಚುವುದರಿಂದ ಸೊಳ್ಳೆ ಕಡಿತದಿಂದ ಪಾರಾಗಲು ಮಕ್ಕಳು, ವಿಶ್ರಾಂತಿ ಪಡೆಯುವ ವಯೋವೃದ್ಧರು, ಕಾಯಿಲೆಯಿಂದ ನರಳುವವರು ತಪ್ಪದೇ ಸೊಳ್ಳೆಪರದೆಯನ್ನು ಉಪಯೋಗಿಸುವುದು ಹಾಗೂ ಇತರೆ ಸೊಳ್ಳೆ ನಿರೋಧಕಗಳನ್ನು ಬಳಸುವುದು. ಹೀಗೆ ಮಾಡುವುದರಿಂದ ಈ ರೋಗವನ್ನು ತಡೆಗಟ್ಟುವುದು ಸುಲಭ.

ನಿಮ್ಮ ಮನೆಯ ಒಳಗೆ ಹಾಗೂ ಮನೆಯ ಸುತ್ತಮುತ್ತ ಸೊಳ್ಳೆ ಉತ್ಪತ್ತಿಯನ್ನು ತಡೆಗಟ್ಟಿ ಡೆಂಗಿ ಜ್ವರ ನಿಯಂತ್ರಿಸಿ

ಕರ್ನಾಟಕ ವಾರ್ತೆ
Karnataka Information

ಯಾಕೆ ಮೇಸ್ತ್ರೆ ಹಾಗೆ ಹೋದಿರಿ...

ಡಾ ಕುಂಸಿ ಉಮೇಶ

ಹಿರಿಯರ ಸಾವು ಹೃದಯಕ್ಕೆ ಪಾತಾಳಗಡಗ ಹಾಕಿ ಕಲಕಿದಂತಾಗುತ್ತದೆ. ಕಳೆದ ಎರಡು ದಶಕದಿಂದಲೂ ನನ್ನೊಡನೆ ಆತ್ಮೀಯತೆಯನ್ನು ತೋರುತ್ತಾ ಅವರ ಅಪಾರ ಶಿಷ್ಯ ಬಳಗದಲ್ಲಿ ನನ್ನನ್ನೂ ಸೇರಿಕೊಂಡಂತೆ, ನಾಡಿನಾದ್ಯಂತ ಹಿರಿ-ಕಿರಿಯರೆನ್ನದೆ ತಮ್ಮ ತುಂಬು ನಗೆ, ಹಾಗೂ ಮೊನಚುತಪ್ಪದ ಮಾತು-ಸಲಿಗೆಯಿಂದ ಎದೆಯೊಳಕ್ಕಿಳಿಯುತ್ತಿದ್ದ ರಂಗತಜ್ಞ, ನಾಟಕಕಾರ, ಭಾಷಾಶಾಸ್ತ್ರಜ್ಞ, ಸಂಘಟಕ, ಎಡಪಂಥೀಯ ವಿಚಾರಧಾರೆಗೆ ತಮ್ಮನ್ನು ಸದಾ ತೆರೆದುಕೊಂಡಿದ್ದ ರಂಗಾಯಣದ ನಿರ್ದೇಶಕ ಲಿಂಗದೇವರು ಹಳೆಮನೆ. ನಿವ್ಯಾಕೆ ಹೀಗೆ ನಮ್ಮನ್ನು ತೊರೆದು ಹೋದಿರಿ.

ಅಂದು ಮಂಗಳವಾರ ಶಿವಮೊಗ್ಗೆಯಿಂದ ನೀವು ಬೆಳ್ಳಂಬೆಳಿಗ್ಗೆಯೇ ಮೈಸೂರು ಪ್ರಯಾಣ ಮಾಡಬೇಕಿತ್ತು. ತಿಪಟೂರಿನ ಗೆಳೆಯ ಕೃಷ್ಣಮೂರ್ತಿ ಬಿಳಿಗೆರೆಯೊಂದಿಗೆ ಹರಟಿಕೊಂಡು ಊಟ ಮಾಡಿ ತೆರಳುವವರಿದ್ದಿರಿ. ಆದರೆ ನಿಮ್ಮ ಪ್ರೀತಿಯ ಶಿಷ್ಯ ಡಾ. ಮೇಟಿ ಮಲ್ಲಿಕಾರ್ಜುನ ಶಿವಮೊಗ್ಗೆಯಲ್ಲೊಂದು ನಿವೇಶನ ಕೊಂಡದ್ದನ್ನು ಕೇಳಿ ಅಪಾರ ಖುಷಿಯಿಂದ 'ಕುಂಸಿ ನಾಳೆ ಹೇಗೂ ನೀವು ನನ್ನ ಸಂದರ್ಶನ ಮಾಡಬೇಕಲ್ಲ, ಹಾಗೇ ಡಾ. ಅಶೋಕಪೈ ಮನೆಗೆ ಕರೆದಿದ್ದಾರೆ, ರಾಜೇಂದ್ರ ಚನ್ನಿಯವರನ್ನೂ ಮಾತನಾಡಿಸಬೇಕಿದೆ' ಆಯ್ತು ಬಿಡು ಮಧ್ಯಾಹ್ನ ನಿಮ್ಮೊಂದಿಗೆ ಊಟ ಮಾಡಿ ತೆರಳುತ್ತೇನೆಂದು' ಉಳಿದುಕೊಂಡವರು. ನಿಮ್ಮ ನಿಲ್ಲದ ಧಾವಂತದಲ್ಲೂ ಒಂದಿಷ್ಟು ಚರ್ಚೆ, ಚಳವಳಿಗಳ ದಿಕ್ಕು, ರಂಗಾಯಣದ ಹೊಸ ನೋಟ ಹಾಗೂ ಈ ನಾಡಿನ ಭಾಷೆ, ಸಂಸ್ಕೃತಿ, ಕ್ಲಾಸಿಕಲ್ ಕನ್ನಡ, ಹವ್ಯಾಸಿ ಮತ್ತು ವೃತ್ತಿಪರ ರಂಗ ಭೂಮಿ ಮತ್ತು ಸ್ಥಾವರಗೊಂಡ ರೆಪರ್ಟ್ರಿಗಳ ಕುರಿತು ಅದೆಷ್ಟು ಸುದೀರ್ಘವಾಗಿ ನಮ್ಮೊಡನೆ ಚರ್ಚಿಸಿದಿರಿ. ಆಯ್ತಲ್ಲ. ಈ ಸಂದರ್ಶವನ್ನು ಓದದೆ ನೀವ್ಯಾಕೆ ತೆರಳಿದಿರಿ, ಅಲ್ಲದೆ 'ಯಾವ ಪತ್ರಿಕೆಗೆ ಅಂತ ಕಡೆಯಲ್ಲಿ ಕೇಳಿದಿರಿ, ನಾನು ನೋಡೋಣ ಸಾರ್, ಥೀಯಟರ್ ಕುರಿತ ಸಂವಾದದಲ್ಲಿ ನಿಮ್ಮ ಮಾತುಕತೆಯನ್ನು ಬಳಸಿಕೊಂಡೇನು ಅಂದೆ. ಆಯ್ತು ಏನಾದ್ರೂ ಮಾಡು 'ಅರುಹು-ಕುರುಹು'ಗೆ ಮಾತ್ರ ಬೇಡ' ಅಂದ್ರಲ್ಲ, 'ಯಾಕೆ ಸಾರ್', ಅಲ್ಲಪ್ಪ ನಾನು ಆ ಪತ್ರಿಕೆಯಲ್ಲೇ ಇದ್ದು ನಮ್ಮ ಪುಂಗಿಯನ್ನು ಅಲ್ಲೇ ಯಾಕೆ ಬಾರ್ಸಿಕೊಳ್ಳೋದು' ಅನ್ನುವ ಪ್ರಜಾಪ್ರಭುತ್ವವಾದಿ ಸೂಕ್ಷ್ಮವನ್ನು ನೀಡುತ್ತಲೇ, ಅದೆಷ್ಟು ವಿಚಾರ, ಅದೆಷ್ಟು ವಿಸ್ತಾರದ ಜ್ಞಾನವನ್ನು ನಮ್ಮೊಡನೆ ಹಂಚಿಕೊಂಡಿರಲ್ಲ. ಈಗ ನೋಡಿ... ನಿಮ್ಮೆಲ್ಲ ಮಾತುಗಳನ್ನು ನಾನು ಬೆಳಿಗ್ಗೆಯಿಂದಲೇ ಎಲ್ಲಾ ಗೆಳೆಯರೊಂದಿಗೆ, ಪತ್ರಕರ್ತರೊಡನೆ ಹಂಚಿಕೊಳ್ಳುವಂತೆ ಮಾಡಿಬಿಟ್ರಲ್ಲ. ಯಾಕಿಷ್ಟು ಅರ್ಜೆಂಟು ಮಾಡಿದ್ರಿ ಸಾರ್,

ನಿಮ್ಮ ನಿಲ್ಲದ ಧಾವಂತದಲ್ಲೂ ಒಂದಿಷ್ಟು ಚರ್ಚೆ, ಚಳವಳಿಗಳ ದಿಕ್ಕು, ರಂಗಾಯಣದ ಹೊಸ ನೋಟ ಹಾಗೂ ಈ ನಾಡಿನ ಭಾಷೆ, ಸಂಸ್ಕೃತಿ, ಕ್ಲಾಸಿಕಲ್ ಕನ್ನಡ, ಹವ್ಯಾಸಿ ಮತ್ತು ವೃತ್ತಿಪರ ರಂಗ ಭೂಮಿ ಮತ್ತು ಸ್ಥಾವರಗೊಂಡ ರೆಪರ್ಟ್ರಿಗಳ ಕುರಿತು ಅದೆಷ್ಟು ಸುದೀರ್ಘವಾಗಿ ನಮ್ಮೊಡನೆ ಚರ್ಚಿಸಿದಿರಿ ಪ್ರಭುತ್ವವಾದಿ ಸೂಕ್ಷ್ಮವನ್ನು ನೀಡುತ್ತಲೇ, ಅದೆಷ್ಟು ವಿಚಾರ, ಅದೆಷ್ಟು ವಿಸ್ತಾರದ ಜ್ಞಾನವನ್ನು ನಮ್ಮೊಡನೆ ಹಂಚಿಕೊಂಡಿರಲ್ಲ. ಈಗ ನೋಡಿ... ನಿಮ್ಮೆಲ್ಲ ಮಾತುಗಳನ್ನು ನಾನು ಬೆಳಿಗ್ಗೆಯಿಂದಲೇ ಎಲ್ಲಾ ಗೆಳೆಯರೊಂದಿಗೆ, ಪತ್ರಕರ್ತರೊಡನೆ ಹಂಚಿಕೊಳ್ಳುವಂತೆ ಮಾಡಿಬಿಟ್ರಲ್ಲ. ಯಾಕಿಷ್ಟು ಅರ್ಜೆಂಟು ಮಾಡಿದ್ರಿ ಸಾರ್.



ಅದೇ ಮಂಗಳವಾರ ಮಧ್ಯಾಹ್ನ ತಣ್ಣನೆ ಊರ ಹೊರಪಲಯದ ಗಾರ್ಡನ್ ಹೋಟೆಲ್‌ನಲ್ಲಿ ಕೂತು ಶುರುವಾದ ನಿಮ್ಮ ನಗು, ಪ್ರೀತಿತುಂಬಿದ ಮಾನವತಾವಾದಿ ನೆಲೆಗಳು, ಪ್ರವಾಸ, ರಂಗಾಯಣದ ದಿಕ್ಕು, ಹೊಸ ಹುಡುಗರ ಜೀವನೋತ್ಸಾಹ, ವ್ಯವಸ್ಥೆ ಹಾಗೂ ಧರ್ಮದ ಪಾಷಂಡಿತನಗಳನ್ನೆಲ್ಲಾ ಒಂದೊಂದೆ ಬಿಚ್ಚುತ್ತಾ, ನಿರ್ಲಕ್ಷ್ಯ ಹಾಗೂ ನಿರಂಕುಶದ ಈ ಹೊತ್ತಿನಲ್ಲಿ ರಂಗ ಚಟುವಟಿಕೆಗಳೇ ಜನರನ್ನು ಎಚ್ಚರಗೊಳಿಸುವ ಮಾಧ್ಯಮಗಳೆಂದು ಅದೆಷ್ಟು ಉದಾಹರಣೆಗಳನ್ನು ನೀಡಿದಿರಿ. ನಿಮ್ಮೊಂದಿಗೆ ಕಳೆದ ಆ... ಕಡೇ ದಿನದ ನೆನಪುಗಳಲ್ಲಿ ನಾವಷ್ಟೇ ಅಲ್ಲ, ಅಲ್ಲೆಲ್ಲೋ ದೂರದಲ್ಲಿರುವ ಶಂಕರಪ್ಪನ ಮಗನ ಪಿ.ಹೆಚ್.ಡಿ., ಪುರಾಣ. ಹಂಪಿಯ ಅನೇಕ ವಿದ್ವಾಂಸರೆನಿಸಿಕೊಂಡವರ ಬರಹದ ದಿಕ್ಕು, ನಾಗಲ್ಯಾಂಡಿನ ಹೋಟೇಲ್‌ನಲ್ಲಿ ನಂದಾ ಮೇಡ್‌ಂಗಾಗಿ ಮಲೆಯಾಳಿ ಬಾಣಸಿಗ ನೀಡಿದ ಸಸ್ಯಹಾರಿ ಊಟ. ಬರ್ಲಿನ್‌ನಲ್ಲಿ ವಿಹರಿಸುತ್ತಿದ್ದಾಗ ಕಂಡ ಇಂಡಿಯಾ ಪಾಕಿಸ್ತಾನದ ಎರಡೂ ಧ್ವಜಗಳನ್ನು ಹೊತ್ತು ನಿಂತಿದ್ದ ರೆಸ್ಟೋರೆಂಟ್, ಅದರ ಒಳಹೊಕ್ಕು ನೀವು ತಿಂಧ ಕೋಳಿ ಕಬಾಬ್ ಮತ್ತು ಆ ಹೋಟೆಲ್ ಮಾಲೀಕನಾದ ಭಾರತೀಯನ ಬಗೆಗಿನ ಮನುಷ್ಯ ಪ್ರೇಮವನ್ನು ಸಾಧ್ಯಂತವಾಗಿ ವಿವರಿಸಿದ್ದಲ್ಲದೆ, ಮುಂದಿನ ತಿಂಗಳು ಜರ್ಮನಿಗೆ ಹೋದಾಗ ಆ ಹೋಟೆಲ್‌ಗೂ ಹೋಗಿ ಬರುತ್ತೇನೆ ಅಂತ ಹೇಳಿದ ನಿಮ್ಮ ಮಾನವತಾವಾದಿ ಆಕಾಂಕ್ಷೆ ಮತ್ತು ಸಣ್ಣಪುಟ್ಟದ್ದನ್ನೆಲ್ಲ ನೆನಪಿನಲ್ಲಿಟ್ಟುಕೊಂಡು ಅದನ್ನು ಪ್ರತಿಕ್ರಿಯೆ ಬಯಸದೇ ವಿಸ್ತೃತಪಡಿಸುವ ವೈಖರಿ, ನಮ್ಮಂತಹ ಪೀಳಿಗೆಯವರಿಗೆ ಮಾದರಿಯಂತಿತ್ತು.

ಮಧ್ಯಾಹ್ನ 3.15ಕ್ಕೆ ಇನ್ನೇನು ಊಟ ಮುಗಿಸಿ ಹೊರಡಬೇಕೆಂದಾಗ 'ಹಳ್ಳಿಯಲ್ಲಿ ಕಳೆದು ಹೋಗುತ್ತಿರುವ, ಅಥವಾ ಈಗಾಗಲೇ ಕಳೆದು ಹೋದ ಅನೇಕ ಕನ್ನಡ ಪದಗಳನ್ನು ಕಲೆಹಾಕಬೇಕು ಕುಂಸಿ. ನೀನು ಹೇಳಿದ ಅಷ್ಟೆಲ್ಲಾ ಬಗೆಯ ಮೀನಿನ ಹೆಸರುಗಳು-ಅಡಿಗೆಮನೆ ವಸ್ತುಗಳು, ಈಗ ಇಲ್ಲ. ಅಲ್ಲದೆ ಆ ಪದಗಳನ್ನು ಆಡುವವರೂ ಇಲ್ಲದಾಗಿದ್ದಾರೆ. ಕರ್ನಾಟಕದಾದ್ಯಂತ ನಿಮ್ಮಂತಹದೊಂದು ಟೀಮ್ ಮಾಡಿ ಆ ಪದಗಳನ್ನೆಲ್ಲ ಕಲೆ ಹಾಕಬೇಕು. ನಾನು ಮುಂದಿನ ಸಾರಿ ಬರುತ್ತೇ ನಲ್ಲ, ಆ ಹೊತ್ತಿಗೆ ಒಂದು ರೂಪುರೇಷೆ ಸಿದ್ಧಮಾಡಿಸು ದುಡ್ಡಿನ ಬಗ್ಗೆ ಯೋಚಿಸಬೇಡ ಫಂಡ್‌ನಾ ನಾನ್ ತರ್ತೀನಿ, ಆಯ್ತಾ', ಅಂದು ಕೈಕು ಲಿಕಿದರು. ಆನಂದ್ ತಮ್ಮ ಬೈಕ್‌ನಲ್ಲಿದ್ದ ಹಪ್ಪಳದ ಪ್ಯಾಕೇಜ್ ನೀಡಿ 'ಹಾದಿ ಖರ್ಚಿಗಿರಲಿ' ಸಾರ್ ಅಂದು ಅದನ್ನೂ ನೀಡಿದರು. ಜಯ ದೇವಪ್ಪ, ಮೇಟಿ, ಮೇಸ್ತ್ರಿಗೆ ನಮಸ್ಕರಿಸಿ ನಿಂತಾಗ ಕಾರು ಹೊರಟು ನಿಂತಿತ್ತು. ಮತ್ತೆಂದು ಬರ್ತೀರಿ... ಸಾರ್.. ಕಾಣದ ಹೊಸಮನೆಗೆ ತೆರಳಿದಿರಲ್ಲ ನೀವು ಬರುವ ಆ ಮುಂದಿನ ದಿನ

ಯಾವುದು? ಮೇಟಿ ನಿಮ್ಮ 'ಜರ್ಮನಿ ಪ್ರಯಾಣ ಸುಖಕರವಾಗಿರಲಿ' ಅಂದು ಕೈಕುಲುಕಿದ್ದು. ನೀವು ದೊಡ್ಡದಾಗಿ ನಗುತ್ತಾ 'ಬಂದಾಗ ಹೇಳ್ತೀನಿ...' ಮೇಟಿ ಅಂದು ಕೈಬೀಸಿದಿರಿ. ಕಾರು ಹೊರಟಿತು. ನೀವೂ ಹೋದಿರಿ... ನೀವು ಬರುವ ಆ ದಿನ ಯಾವುದು.

ರಾತ್ರಿ 1.15 ರವರೆಗೆ ನಿಮ್ಮೊಡನೆ ಮಾತನಾಡಿದ ಅನೇಕ ವಿಷಯಗಳನ್ನು ಸಂದರ್ಶನ ರೂಪದಲ್ಲಿ ಬರೆದಿಟ್ಟು ಹಾಸಿಗೆಗೆ ಒರಗಿದ್ದೆ. 2.10ರ ಹೊತ್ತಿಗೆ ಹೊನ್ನಾಳಿ ಚಂದ್ರಶೇಖರ್ ಫೋನ್ ಮಾಡಿ 'ಸಾರ್, ನಮ್ಮ ದುರಾದೃಷ್ಟ ಏನು ಹೇಳಾನಾ... ಯಾಕ್ರೀ ಚಂದ್ರು ಏನಾಯ್ತು? ಮೇಸ್ಟ್ರು ಹೋಗಿಬಿಟ್ರಲ್ಲ! ಅಂದ್ರು ನಾನು ಒಮ್ಮೆ ತಬ್ಬಿಬ್ಬಾದೆ ಯಾವ ಮೇಸ್ಟ್ರು, ... ಲಿಂಗದೇವರು! ಮುಂದೆ ನಾನು ಮಾತನಾಡದಾದೆ... ಟೀವಿ ಹಾಕಿದಾಗ ಫ್ಲಾಶ್‌ನ್ಯೂಸ್ ಬರುತ್ತಿತ್ತು. ಲಿಂಗದೇವರು ಎರಡೂ ದಿನ ನಮ್ಮೊಂದಿಗೆ ಉಳಿದು ಇಲ್ಲವಾದರು. ಬರೆದಿಟ್ಟ ಸಂದರ್ಶನವನ್ನು ರಾತ್ರಿ ಇಡೀ ಓದುತ್ತಲೇ ಇದ್ದೆ, ಯಾವ ಕಡೆ ತಿರುಗಿದರು ನಿದ್ದೆ ಇಲ್ಲ.... ಮೇಟಿಯವರಿಗೆ ಆಗಲೇ ಫೋನಾಯಿಸಿದೆ. ಅವರು ತೆಗೆಯಲಿಲ್ಲ. ಭಾರದ ಹೃದಯದಿಂದ 'ಮೇಸ್ಟ್ರು ಇನ್ನಿಲ್ಲ' ಎಂಬ ಸಂದೇಶ ಕಳಿಸಿ ಮೌನವಾಗಿ ಸಂಕಟ ಅನುಭವಿಸಿದೆ.

ಮೊದಲೇ ನಿರ್ಧಾರವಾದಂತೆ ಮಂಗಳವಾರ ಬೆಳಿಗ್ಗೆ 11.30ಕ್ಕೆ ಸರ್ಕ್ಯೂಟ್ ಹೌಸ್‌ನ ಹೊಸ ಬಿಲ್ಡಿಂಗ್‌ನ ರೂಂ ನಂಬರ್ 5ರಲ್ಲಿ ಮೇಸ್ಟ್ರನ್ನು ಕಾಣಲು ಹೋದೆ. 'ಬನ್ನಿ... ಕುಂಸಿ, ಎಲ್ಲಿ ಮೇಟಿ ಅಂದ್ರು. ಈಗ ಬರ್‍ತಾರೆ ಸಾರ್... ನಿಮ್ಮ ತಿಂಡಿಯಾಯ್ತ... 'ನಾನು ಇಡ್ಲಿ ತಿಂದು ಬಂದೆ, ಅನ್ನುತ್ತಾ ಒಂದು ಸಿಗರೇಟ್ ಹಚ್ಚಿಕೊಂಡು 'ಹೇಳಿ' ಅಂದ್ರು. ಏನಿಲ್ಲ ಸಾರ್, ಒಂದಿಷ್ಟು ಪ್ರಶ್ನೋತ್ತರದ ತರಹ ರಂಗ ಚಟುವಟಿಕೆ, ಸಾಹಿತ್ಯ-ಚಳವಳಿ, ಮುಂತಾಗಿ ಮಾತಾಡಿ ಸಾರ್ ಅಂದು. ನನ್ನ ಕೆಲವು ಪ್ರಶ್ನೆ ಗಳನ್ನು ತೆಗೆದಿಟ್ಟುಕೊಂಡು ಮುಂದಾದೆ.

ಕುಂಸಿ: 'ರಂಗಾಯಣ'ವನ್ನು ಶಿವಮೊಗ್ಗದಲ್ಲಿ ಪ್ರಾರಂಭಿಸುವ ಪ್ರಸ್ತಾಪ ಮಾಡಿ ಈಗಾಗಲೇ ಪತ್ರಿಕಾಗೋಷ್ಠಿ ನಡೆಸಿದ್ದೀರಿ ಹಾಗೂ ನಿಮ್ಮ ಯೋಜನೆಗೆ ಕೆಲ ಪತ್ರಿಕೆಗಳು ಅಪಸ್ವರವನ್ನು ಎತ್ತಿವೆ. ಈ ಬಗ್ಗೆ ಇನ್ನಷ್ಟು ವಿಸ್ತರಿಸಿ ಸಾರ್,

ಹಳೆಮನೆ: ಈಗಾಗಲೇ ಸಾಂಸ್ಕೃತಿಕವಾಗಿ ತನ್ನದೇ ಅಸ್ತಿತ್ವವನ್ನು ಹೊಂದಿದ ಶಿವಮೊಗ್ಗೆಯಂತಹ ನಗರಕ್ಕೆ 'ರಂಗಾಯಣವು ಬರುತ್ತಿರುವುದರ ಬಗ್ಗೆ ಅನೇಕರ ಅನುಮಾನ, ಸಂದೇಹ ಸಹಜವಾದದ್ದೇ, ಆದರೆ ರಂಗಾಯಣದಿಂದ ಸ್ಥಳೀಯ ಹವ್ಯಾಸಿ ತಂಡಗಳಿಗೆ ಧಕ್ಕೆಯಾಗುವುದಿಲ್ಲ, ಮೈಸೂರಿನಲ್ಲಿ ಈಗಲೂ ಅನೇಕ ತಂಡಗಳು ಸಕ್ರಿಯವಾಗಿರುವುದು ಏನನ್ನು ಸೂಚಿಸುತ್ತದೆ, ಅಲ್ಲದೆ ಧಾರವಾಡದಲ್ಲಿ ಕೂಡ ವೃತ್ತಿ ರಂಗಭೂಮಿ ಮತ್ತು ಹವ್ಯಾಸಿ ರಂಗ ತಂಡಗಳೊಟ್ಟಿಗೆ ರಂಗಾಯಣವು ತನ್ನ ಸಜೀವ ಸಂಬಂಧವನ್ನಿಟ್ಟುಕೊಂಡಿದೆ, ಎಲ್ಲರೂ ಸೇರಿ ಥಿಯೇಟರ್‌ನ ಶ್ರೇಷ್ಠತೆಯನ್ನು ಸಾಧಿಸುವ ಕಡೆ ಯೋಚಿಸುವಂತಹದ್ದಾಗಬೇಕು. ಹವ್ಯಾಸಿ ರಂಗತಂಡಗಳು ತುಂಬಾ ಇಂಡಿಯ್ಯುಝುವಲ್ ಆಗಿ ತಮ್ಮ-ತಮ್ಮ ಆರ್ಥಿಕ ಮಿತಿ ಮತ್ತು ಸೈದ್ಧಾಂತಿಕ ನೆಲೆಗಳಲ್ಲಿ ರಂಗಚಟುವಟಿಕೆಗಳನ್ನು ನಡೆಸುತ್ತವೆ. ಅವುಗಳ ನಡುವೆ ಒಂದು Internshipನ ಕೊರತೆ ಇರುತ್ತದೆ. ತಮ್ಮ ತಮ್ಮ ಹಿರಿಮೆಗಾಗಿಯೇ ಸದಾ ಪೈಪೋಟಿಗಿಳಿದಿರುತ್ತವೆ. ಹೀಗಾಗಿಯೇ ಥಿಯೇಟರ್‌ನಲ್ಲಿ ಹೊಸದನ್ನು ಸಾಧಿಸುವಲ್ಲಿ ಕೊರತೆಯಾಗಿದೆ, ಇಂತಹದ್ದನ್ನು ನೀಗಿಸಲು ನನ್ನ ಅವಧಿಯಲ್ಲಿ ರಂಗಾಯಣವು ಪ್ರಯತ್ನಿಸುತ್ತದೆ. ಆ ಸಲುವಾಗಿ ಶಿವಮೊಗ್ಗದ ಕಲಾವಿದರು, ರಂಗತಜ್ಞರು, ಪತ್ರಕರ್ತರು ಯೋಚಿಸಬೇಕು ಹಾಗೂ ನಮ್ಮೊಂದಿಗೆ ಕೊಡುಕೊಳ್ಳುವಿಕೆಯನ್ನು ಹೊಂದಬೇಕಾಗಿದೆ.

ಥಿಯೇಟರ್ ಶುರುವಾದದ್ದೇ ದುಡಿವ ವರ್ಗವನ್ನು ಒಂದು ಮಾಡುವ ಮತ್ತು ಅವರ ಹಕ್ಕನ್ನು ಎಚ್ಚರಿಸುವ ಸಲುವಾಗಿ. ಅಲ್ಲದೆ ಇದರಿಂದ ರೂಪಗೊಳ್ಳವ ರಾಜಕೀಯ ಪ್ರಜ್ಞೆ ಮತ್ತು ಪರ್ಯಾಯ ಚಿಂತನೆಗಳನ್ನು ಅಷ್ಟು ಸುಲಭವಾಗಿ ನಿರಾಕರಿಸಲು ಸಾಧ್ಯವಿಲ್ಲ. ಥಿಯೇಟರ್‌ನ ಮೂಲಕ ಸಾಮ್ರಾಜ್ಯಶಾಹಿ ಜಾಗತೀಕರಣದ ಬಗ್ಗೆ ಹೇಗೆ ಪ್ರಜ್ಞೆ ಮೂಡಿಸಬಹುದೋ ಹಾಗೆಯೇ ಭಾರತ ದೇಶದ ಪ್ರಜಾಪ್ರಭುತ್ವದ ಎಚ್ಚರವನ್ನೂ ಜನತೆಯಲ್ಲಿ ಮೂಡಿಸುವ ಮಾರ್ಗದಲ್ಲಿ ಥಿಯೇಟರ್ ಹೆಚ್ಚು ಅನುಕೂಲಕರವಾದದ್ದೆಂದು ಚರಿತ್ರೆಯಿಂದಲೇ ತಿಳಿಯಬಹುದು.

ಕುಂಸಿ: ಶಿವಮೊಗ್ಗದ 'ರಂಗಾಯಣ'ಕ್ಕೆ ಸರ್ಕಾರ ನೀಡಿದ ಹಣ, ಎಷ್ಟು ಹಾಗೂ ನಿಮ್ಮ ಯೋಜನೆ ಕನಸುಗಳೇನು?

ಹಳೆಮನೆ: ನೋಡು, ಸರ್ಕಾರ 35 ಲಕ್ಷ ಹಣ ಮಂಜೂರು ಮಾಡಿ, ಸದ್ಯಕ್ಕೆ ಸುವರ್ಣ ಸಂಸ್ಕೃತಿ ಭವನವನ್ನು ಬಳಸಿಕೊಳ್ಳಲು ಹೇಳಿದೆ. ಆದರೆ ನನಗೆ ಆ ಭವನವನ್ನು ನೋಡಿದ ಮೇಲೆ ಇದು ರಂಗಾಯಣಕ್ಕೆ ತಕ್ಕದಾಗಿಲ್ಲ ಹಾಗೂ ನಾನು ಹಾಕಿಕೊಂಡ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಅದು ಸಾಕಾರಿಯಾಗಿಲ್ಲ. ರಂಗಾಯಣವೆಂದರೆ ಭವ್ಯ ಬಹುಮಹಲುಗಳ ಸೌಧವಲ್ಲ, ಅಲ್ಲಿ ರಂಗಚಟುವಟಿಕೆಗಳು ನಿರಂತರವಾಗಿ ನಡೆಯಬೇಕು, ಅದಕ್ಕಾಗಿ ನಾನು ಸಂಸ್ಕೃತಿ ಭವನದ ಹಿಂದಿರುವ 3 ಎಕರೆ ಜಾಗವನ್ನು ಕೇಳಿದ್ದೇನೆ. ಮುಖ್ಯಮಂತ್ರಿಗಳು ಇಲ್ಲವೆಂದಿಲ್ಲ, ಅಲ್ಲಿ ಒಂದು ಓಪನ್‌ಏರ್, ಇಂಟೀರಿಯರ್ ಹಾಗೂ ರಿಹರ್ಸಲ್ (ತಾಲೀಮು ಕೊಠಡಿ) ನಿರ್ಮಿಸಿಕೊಳ್ಳಬೇಕು, ಹುಡುಗ-ಹುಡುಗಿಯರಿಗೆ-ಸಂಗೀತ ಪರಿಕರಗಳಿಗೆ ಪತ್ಯೇಕ ಡಾರ್ಮೆಂಟ್ರಿಗಳಿರಬೇಕು. ನಿತ್ಯ ನಡೆಯುವ ರಂಗ ಚಟುವಟಿಕೆಗಳಿಗೆ-ಸಾಹಿತ್ಯ-ಸಂವಾದಗಳಿಗೆ ಅವಕಾಶವಿರಬೇಕು. ಹೀಗೆ ರಂಗಾಯಣವು ಅಂತರ್ಮುಖಿಯಾಗಿರದೇ ಬಹುತ್ವಕ್ಕೆ ತೆರೆದುಕೊಳ್ಳುವ ಎಲ್ಲರನ್ನೂ ತನ್ನ ತೆಕ್ಕೆಗೆ ತೆಗೆದುಕೊಂಡು ಮುನ್ನಡೆಯುವ ಒಂದು ಸಾಂಸ್ಕೃತಿಕ ನಡೆಯಾಗಬೇಕು. ಶಿವಮೊಗ್ಗೆಯಲ್ಲಿ ಅದು ಸಾಧ್ಯ ಅನ್ನುವ ನಂಬಿಕೆ ನನಗಿದೆ.

ಕುಂಸಿ: ಧರ್ಮ-ಬದುಕು-ರಾಜಕಾರಣ ಭ್ರಷ್ಟಗೊಂಡಿರುವ ಈ ಹೊತ್ತಿನಲ್ಲಿ ರಂಗಭೂಮಿಯ ಹೊಸ ಸವಾಲುಗಳೇನು? ಸೀಮಿತ ಪ್ರೇಕ್ಷಕ ವಲಯವನ್ನು ಹೊಂದಿರುವ ರೆಪರ್ಟರಿಗಳಿಂದ ಏನನ್ನು ನಿರೀಕ್ಷಿಸಬಹುದು?

ಹಳೆಮನೆ: ನಿಮ್ಮ ಪ್ರಶ್ನೆಯೊಳಗಿನ ಆತಂಕ ನನ್ನದೂ ಹೌದು. ಆದರೆ ಮನುಷ್ಯನ ವರ್ತನೆ ಯಾವಾಗಲೂ ನಿರ್ದಿಷ್ಟವಾಗಿರುವುದಿಲ್ಲ. ಮನಸ್ಸು ನಮ್ಮನ್ನು ಹೇಗೆ ನಿಯಂತ್ರಿಸಿಡಬಲ್ಲದೋ, ಹೇಗೆ ಮನಸ್ಸನ್ನು ನಮ್ಮ ಕಲೆ-ಸಾಹಿತ್ಯ-ಸಂಗೀತ-ನಾಟಕಗಳು ಸರಿದಾರಿಯಲ್ಲಿ ಹೋಗಲು ಪ್ರೇರೇಪಿಸುತ್ತವೆ. ಥಿಯೇಟರ್ ಶುರುವಾದದ್ದೇ ದುಡಿವ ವರ್ಗವನ್ನು ಒಂದು ಮಾಡುವ ಮತ್ತು ಅವರ ಹಕ್ಕನ್ನು ಎಚ್ಚರಿಸುವ ಸಲುವಾಗಿ. ಅಲ್ಲದೆ ಇದರಿಂದ ರೂಪಗೊಳ್ಳವ ರಾಜಕೀಯ ಪ್ರಜ್ಞೆ ಮತ್ತು ಪರ್ಯಾಯ ಚಿಂತನೆಗಳನ್ನು ಅಷ್ಟು ಸುಲಭವಾಗಿ ನಿರಾಕರಿಸಲು ಸಾಧ್ಯವಿಲ್ಲ. ಥಿಯೇಜರ್‌ನ ಮೂಲಕ ಸಾಮ್ರಾಜ್ಯಶಾಹಿ ಜಾಗತೀಕರಣದ ಬಗ್ಗೆ ಹೇಗೆ ಪ್ರಜ್ಞೆ ಮೂಡಿಸಬಹುದೋ ಹಾಗೆಯೇ ಭಾರತ ದೇಶದ ಪ್ರಜಾಪ್ರಭುತ್ವದ ಎಚ್ಚರವನ್ನೂ ಜನತೆಯಲ್ಲಿ ಮೂಡಿಸುವ ಮಾರ್ಗದಲ್ಲಿ ಥಿಯೇಟರ್ ಹೆಚ್ಚು ಅನುಕೂಲಕರವಾದದ್ದೆಂದು ಚರಿತ್ರೆಯಿಂದಲೇ ತಿಳಿಯ ಬಹುದು.

ಬ್ರೆಕ್ಟ್, ಸಫೋಕ್ಲಿಸ್ ಮತ್ತು ಶೇಕ್ಸ್‌ಫಿಯರ್ ರಂತಹವರ ಯಾವ ನಾಟಕಗಳನ್ನು ರಂಗಭೂಮಿ ಆರಿಸಿಕೊಂಡಿದೆ. ಯೋಚನೆಮಾಡು, ಯಾಕೆ ಹಾಗೆ? ಅಲ್ಲದೆ ನಿನ್ನೆ ನೋಡಿದ 'ಧರ್ಮರಿದಂ' ಆಗಲಿ 'ಕರ್ಣಭಾರ' ನಾಟಕವಾಗಲಿ ಇವತ್ತು ರಾತ್ರಿ ನೀವು ನೋಡುವ 'ನೆರಳಿಲ್ಲದ ಮನುಷ್ಯರು'ಆಗಲಿ ಥಿಯೇಟರ್‌ನ್ನ ಯಾವ ಕಡೆ ಯಿಂದ ನೋಡಲು ಪ್ರೇಕ್ಷಕನನ್ನೂ ಪ್ರೇರೇಪಿಸುತ್ತವೆ. ಹಾಗಾದರೆ ನೀನೇ ಕೇಳಿದಂತೆ ಭ್ರಷ್ಟಗೊಂಡ ಧರ್ಮ-ರಾಜಕಾರಣ ಹಾಗೂ ಬದುಕನ್ನು ಹಾಗೇ ಮುಂದುವರಿಯಲು ಬಿಡೋದಾ? (ದೊಡ್ಡದಾಗಿ ನಗುತ್ತಾ...) Theater is most powerful Media Then print and other Medias.

ಕುಂಸಿ: ದುಡಿಯುವ ಜನರನ್ನು ದಮನಿಸುವ ರಾಜಕೀಯ ಸಿದ್ಧಾಂತಕ್ಕೆ ರಂಗಭೂಮಿ ನೀಡುವ ಪ್ರತಿಕ್ರಿಯೆ ಏನು?

ಹಳೆಮನೆ: ಈಗಾಗಲೇ ಹೇಳಿದ್ನಲ್ಲ, ನೋಡು. ಜರ್ಮನ್-ಗ್ರೀಕ್-ಇಂಗ್ಲೆಂಡ್‌ನಲ್ಲಿ ನಾಟಕ ಹುಟ್ಟಿಕೊಂಡದ್ದು ಕಾರ್ಮಿಕ ಸಂಘಟನೆಯ ಕಾರಣಕ್ಕೆ, ಕಾರ್ಮಿಕರ ಹಕ್ಕುಗಳನ್ನು ಎಚ್ಚರಿಸುವ ಸಲುವಾಗಿ. ಇಂಡಿಯಾದಲ್ಲಿ ಕೂಡ ನಡೆದ ಅನೇಕ ಚಳವಳಿಗಳ\ಬೆನ್ನಲುಬು ನಾಟಕಗಳೇ ಅಥವಾ ಬೀದಿ ನಾಟಕಗಳೇ ಯಾಕಾಗಿವೆ! ಬರ್ಲಿನ್ ಗೇಟ್ ಮುಂದೆ ನಡೆದ ನಾಟಕವನ್ನು ಮಾಡಲು ಬರ್ಲಿನ್‌ಗೇ ಹೋಗಬೇಕಿಲ್ಲ, ಎತ್ತರದ ಪ್ರದೇಶವೊಂದರಲ್ಲಿ ನಿಂತುಕೊಂಡು ಇದು 'ಬರ್ಲಿನ್‌ಗೇಟ್' ಅಂತ ಬೋರ್ಡ್ ಹಾಕಿದರೆ ಪ್ರೇಕ್ಷಕ ಸಿದ್ಧನಾಗುತ್ತಾನೆ. ಎಂ.ಎನ್.ಸಿ.ಗಳ ಕುತಂತ್ರವನ್ನು ಬಯಲು ಮಾಡಲು ಯಾವುದೇ ಬೃಹತ್ ಉದ್ಯಮದ ಎದುರು ನಾಟಕ ನಡೆಯಬೇಕಿಲ್ಲ ಪರಿಣಾಮಕಾರಿಯಾಗಿ ಅದನ್ನು ಹೇಳಿದರೂ ಆಯ್ತು. ಆದ್ದರಿಂದ ಥಿಯಟರ್; ಸಿನಿಮಾ-ಟಿ.ವಿ.ಯಂತೆ ಕಾಲ-ದೇಶ ಬದ್ಧವಾದದ್ದಲ್ಲ, ಅತೀತವಾದದ್ದು. ಹಾಗಾಗಿಯೇ ಇಲ್ಲಿನ ಜೋಮ, ಗುತ್ತಿ, ಅಮಾಸ, ಫಣಿಯಮ್ಮ, ಕುಸುಮಬಾಲೆ, ಹೊರಗಿನ ಸೀಸರ್, ಹ್ಯಾಮ್ಲೆಟ್, ಕ್ಲಿಯೋಪಾತ್ರ-ಪುರಾಣದ ರಾಮ-ಆಂಜನೇಯ- ಸ್ಯೂಸ್ ದೇವತೆ, ಎಲ್ಲರೂ ಥಿಯೇಟರ್‌ನಲ್ಲಿ ಕಾಲ-ದೇಶದ ಹಂಗನ್ನು ತೊರೆದು ನಿಲ್ಲುತ್ತಾರೆ. ದುಡಿವ ವರ್ಗದ ರಾಜಕೀಯ ಸಿದ್ಧಾಂತಕ್ಕೆ ರಂಗ ಚಹರೆಯನ್ನು ನೀಡುವುದೇ

ರಂಗಭೂಮಿಯ ಆಧ್ಯತೆಯಾಗಿದೆ. ಹಾಗಾಗದಿದ್ದರೆ ರಂಗ ಭೂಮಿ ಉಳಿಯುವುದಿಲ್ಲ.

ಕುಂಪಿ: ಕನ್ನಡಕ್ಕೆ ವಿದ್ವತ್ತು, ಸೈದ್ಧಾಂತಿಕ ಖಚಿತತೆ, ವಾಗ್ಪಾದ ಮಾಪಿವ ದೇಸಿ ನೆಲೆ ಇದೆ. ಆದರೆ ಅನೇಕ ರೆಪರ್ಟರಿಗಳು ಪಾಶ್ಚಾತ್ಯ ಮಾದರಿ-ತಂತ್ರಗಳಿಗೆ ಹೋಗುವ ಜರೂರು ಏನು?

ಹಳೆಮನೆ: ಇದೊಂದು ಸುದೀರ್ಘವಾಗಿ ಎಲ್ಲರೂ ಯೋಚಿಸಬೇಕಾದ ಪ್ರಶ್ನೆ. ಕನ್ನಡದ ವಿದ್ವತ್ತು, ವಾಙ್ಮಯವನ್ನು ಅಲ್ಲಗಳೆಯಲಾಗುವುದಿಲ್ಲ. ಇಲ್ಲಿನ ದೇಸಿ ಖಚಿತತೆ ಬಗ್ಗೆ ಕೂಡ ತುಂಬ ಹೆಮ್ಮೆ ಎಲ್ಲರದ್ದು. ಆದರೆ ಪಾಶ್ಚಾತ್ಯ ಮಾದರಿ-ತಂತ್ರಗಳಿಗೆ ಮೊರೆ ಹೋಗುವುದೆಂದರೆ ಅದೊಂದು ಕೇವಲ ವಿನಿಮಯ ಅಷ್ಟೇ. ಹಾಗೆ ನೋಡಿದರೆ ನಮ್ಮ ಕಾಳಿದಾಸ-ಭಟ್ಟನಾರಾಯಣ-ವ್ಯಾಸ, ವಾಲ್ಮೀಕಿ - ಕುಮಾರವ್ಯಾಸ, ಹೊರಗಿನವರಿಗೆ ಶೇಕ್ಸಪಿಯರ್, ಇಬ್ಸನ್, ಸಫೋಕ್ಲಿಸ್, ನಮಗೆ ಕಾಡುತ್ತಲೇ ಇರುತ್ತಾರೆ. 'ಪೀಟರ್‌ಬ್ರೂಕ್ಸನ ಮಹಾಭಾರತದ' ಪ್ರಯತ್ನ ಇದನ್ನೇ ಇನ್ನಷ್ಟು ವಿಸ್ತರಿಸಿ ಹೇಳುತ್ತಿದೆ. ಅದಕ್ಕಾಗಿ ರಂಗಾಯಣ ಹೊಸ ಯೋಜನೆಯನ್ನು ಹಮ್ಮಿಕೊಂಡಿದೆ. ನಮ್ಮ ನೆಲದ ದೇಸಿಪುರಾಣಗಳು ಹಾಗೂ ಜನಪದ ನಂಬಿಕೆಯೊಳಗಿನ ಸತ್ವದ ಹಾದಿಗಳನ್ನು ಕಥನ ಮಾಡಿ ಪ್ರತಿ ವರ್ಷ ಒಂದಾದರೂ ನಾಟಕ ಮಾಡುವ ಯೋಜನೆ ಇದೆ. ಅದಕ್ಕಾಗಿ ಶಿಬಿರ ಹಾಗೂ ವಿಚಾರ ಸಂಕಿರಣಗಳನ್ನು ನಡೆಸಿ ಅದನ್ನು ಕಾರ್ಯಯೋಜನೆಗೆ ತರಬಹುದೆ. ನೋಡಾನಾ ನೀವೆಲ್ಲ ಇರ್ರಿರಲ್ಲ!

ಕುಂಪಿ: ಸಾಮಾನ್ಯರ ಹಿತವನ್ನ ದೂರವಿಟ್ಟ ಕಲೆ-ಸಾಹಿತ್ಯ-ರಂಗಭೂಮಿಗೆ ಮುಂದಿನ ದಿನಗಳಲ್ಲಿ ಉಳಿಗಾಲ ಉಂಟು ಅಂತೀರಾ?

ಹಳೆಮನೆ: ನಾಟಕ ಮೂಲತಃ ಅನುಕರಣ ಕಲೆ, ಬಂಡವಾಳ ವ್ಯವಸ್ಥೆಗೆ ಮುಖಾಮುಖಿಯಾದದ್ದು, ಎರ್ವಿನ್‌ಪಿಸ್ಕಾಟರ್‌ನ ಹೆಸರು ಕೇಳಿದ್ದಿಯಾ, ಆತ ಥೀಯೇಟರನ್ನು 'ಶ್ರಮಜೀವಿಗಳ ರಂಗಭೂಮಿ' ಅಂತಲೇ ಕರೆಯುತ್ತಾನೆ. 'ಇಪ್ಟ', 60-70ರ ದಶಕದ 'ಸಮುದಾಯ' ಆ ಹೊತ್ತಿಗೆ ಉಂಟುಮಾಡಿದ ಸಂಚಲನವೇನು ಸಾಮಾನ್ಯದ್ದ. (ಒಂದು ನಿಟ್ಟುಸಿರು ತೆಗೆದು) ಈಗ ನೋಡು Trade Union ಆದರ ಮೂಲಸ್ವರೂಪದಲ್ಲಿ ಇಲ್ಲ. ಶ್ರಮಜೀವಿಗಳು ಅಂತ ನಾವು ಯಾರನ್ನು ಕರೀತಿವೋ ಅವರನ್ನೆಲ್ಲಾ ವ್ಯವಸ್ಥೆ ಚುನಾವಣಾ ಜೀತಕ್ಕಿಟ್ಟುಕೊಂಡಿದೆ. ಒಂದು ನಿಜ, ನೀನು ಹೇಳಿದಂತೆ ಇದು ಹೀಗೆ ಮುಂದುವರೆದರೆ ಯಾವುದೋ ಹಳೇಗಾಯವನ್ನು ನೆಕ್ಕಿಕೊಳ್ಳುವ ಮುದಿ ಸಿಂಹದಂತೆ ನಾವೆಲ್ಲ ಮುಂದೊಂದು ದಿನ ಈ ಹಳಹಳಿಕೆಯಲ್ಲಿ ಬದುಕಬೇಕಾಗುತ್ತೆ. ಅದಕ್ಕಾಗಿ ನಾನು ಹಳ್ಳಿಗಳಲ್ಲಿರುವ ಅನಕ್ಷರಸ್ಥ ಪರಂಪರೆಯ ಅನೇಕ ಪ್ರತಿಭೆಗಳನ್ನು ಹುಡುಕಿ ಅವರೊಂದಿಗೆ ನಮ್ಮ ತಂಡದ ಹುಡುಗರನ್ನ ಹಾಕಿಕೊಂಡು ನಾಟಕ ಮಾಡಿದರೆ ಹೇಗೆ ಅಂತಲೂ ಯೋಚಿಸುತ್ತಿದ್ದೇನೆ. ಅಲ್ಲೂ ನಂಗೆ ನಿರಾಸೆಯೇ ಆಗಬಹುದಾ ಅಂತ, ಯಾಕಂದ್ರೆ ನಮ್ಮ ಉತ್ತರ ಕರ್ನಾಟಕದ ಸಣ್ಣಾಟ, ದೊಡ್ಡಾಟ, ಶ್ರೀಕೃಷ್ಣಪಾರಿಜಾತಗಳೆಲ್ಲ ಸತ್ತಿವೆ, ವೃತ್ತಿರಂಗಭೂಮಿಯ ನಾಟಕಗಳು ಕ್ಷೀಣಿಸಿವೆ. ಜನರೂ ಭ್ರಷ್ಟರಾಗಿದ್ದಾರೆ. ಏನ್ ಮಾಡೋದು... (ನಿಟ್ಟುಸಿರುಬಿಟ್ಟು ಒಂದು ಸಿಗರೇಟು ಹಚ್ಚಿಕೊಂಡು)... ತಗಳಿ ಅಂತ ನಂಗೂ ಕೈಮುಂದು ಮಾಡಿದರು...

ಕುಂಪಿ: ಯಾಕೆಸಾರ್ ನಿಟ್ಟುಸಿರು... ಹತಾಶೆಗೆ ಹೋಗದೆ, ಸದಾ ಹೊಸ ಸಾಧ್ಯತೆಗಳನ್ನು ಹುಡುಕುವುದು ಈ ಹೊತ್ತಿನ ಜರೂರು ಅಲ್ವ! ಈ ಬಗ್ಗೆ ನಿಮ್ಮ ಯೋಜನೆಗಳು....

ಹಳೆಮನೆ: (ಜಗ್ಗನೆ ಮೈಕೊಡವಿಕೊಂಡಂತೆ) ಹಾಂ, ಸರಿ.. ಸರಿ. ನೋಡು ನಾನು ರಂಗಾಯಣಕ್ಕೆ ಬಂದ ಕೂಡ್ಲೆ 'ಸದಾರಮೆ' ತಗಂಡೆ ವೃತ್ತಿರಂಗಭೂಮಿಯಿಂದ ಸೀನರಿಗಳನ್ನ ತರಿಸಿ ಆಡಿಸಿದೆ. ಭರ್ಜರಿ ಯಶಸ್ಸು ನನ್ನಲ್ಲಿ ಹೊಸ ಹುರುಪು ತಂದಿದೆ. ಅದಕ್ಕೆ, ಬನಶಂಕರಿ ಜಾತ್ರೆಯಲ್ಲಿ ಟೆಂಟ್‌ಹಾಕಿ ಒಂದೆರಡು ನಾಟಕ ಮಾಡೋಣ ಅಂತಿದೀನಿ. ಇದನ್ನ ಹೇಗೆ ರಿಲೇಟ್ ಮಾಡೋದೊ ಗೊತ್ತಾಗ್ತಿಲ್ಲ. ನಮ್ಮಲ್ಲಿ 'ಥಿಯೇಟರ್ ಡಿಬೆಟ್' ಇದ್ದಾವೆ ಹೊರತು ಥಿಯೆಟರ್ ಆಪ್ರಿಸಿಯೇಷನ್'ನ ಕೊರತೆ ಇದೆ. ಅದೊಂದು ಕೋರ್ಸನ್ನಾಗಿಯೇ ಮಾಡೋಣ ಅಂತಿದೀನಿ. ನಮ್ಮ ಜನಪದ ನಾಟಕಗಳನ್ನ ತಗೋಬೇಕು. ಆ ಮೂಲಕ ಆಧುನಿಕ ಪುರಾಣಗಳನ್ನು ರೂಪಿಸಿಕೊಳ್ಳಬಹುದು. ಶ್ರೀರಂಗರು ಬಹಳ ಹಿಂದೇನೆ "ಕನ್ನಡ ರಂಗಭೂಮಿ ನಡೆದುಬಂದ ಹಾದಿಯನ್ನು ಗಮನಿಸಿದರೆ ಬೇರೆ ಯಾವುದೇ ಭಾಷೆಯಿಂದಲೂ ಏನನ್ನು ಪಡೆದುಕೊಳ್ಳಬೇಕಾಗಿಲ್ಲ. ಪಡೆದದ್ದಾಗಿದೆ. ಮರುಸೃಷ್ಟಿಸುವುದು ಹಾಗೂ ಆಧುನಿಕ ಪುರಾಣಗಳನ್ನ ಪುನರ್‌ರಚಿಸುವ ಕೆಲಸವಾಗಬೇಕು ಅಂತ, ಆ ನಿಟ್ಟಿನಲ್ಲಿ ನಮ್ಮ ಅಭಿರುಚಿ ಹಾಗೂ ಜನಪದ ಸಂಸ್ಕೃತಿಗೆ ಹತ್ತಿರವಾಗುವಂತಹ ನಾಟಕಗಳನ್ನು ನಿರ್ಮಿಸುವ ಯೋಚನೆ ಇದೆ. ಹಾಗೆ ನಮ್ಮ ಗತಕಾಲದ ಕೆಲ ನಾಟಕಗಳನ್ನು ರಿಪೀಟ್ ಮಾಡಬೇಕಿದೆ... (ಅಷ್ಟರಲ್ಲಿ ನಾನು ಕಂಬಾರ, ಕಾರ್ನಾಡ...ಅಂದೆ) ಪಂಗಲ್ಲ.. ಅದೇ..

> **ಜನರ Trendನ್ನ ಅನೇಕ ತಂಡಗಳು ಭ್ರಷ್ಟಗೊಳಿಸಿವೆ. ಅದು ಅವರ ಮಿತಿಯೇ ಹೊರತು ಪ್ರೇಕ್ಷಕರದಲ್ಲ. ಸ್ವಿಡಿಶ್-ಜರ್ಮನ್ ಮುಂತಾದ ದೇಶಗಳಲ್ಲಿ ಸಿದ್ಧವಾದ Script ಬೇಕು ಅಂತಿಲ್ಲ. ನಿನ್ನೆ ನಡೆದ ಯಾವುದೋ ಒಂದು ಘಟನೆಯೇ ಇಂದು ರಂಗಕ್ಕೆ ಸಿದ್ಧವಾಗಿ ಬಿಡುವ ಜರೂರು ಹೊಂದಿರುತ್ತದೆ. ನಮ್ಮಲ್ಲಿ ಸ್ವಲ್ಪ ನಿಧಾನ, ಯಾಕೆಂದ್ರೆ ಇಲ್ಲಿ ಪ್ರೇಕ್ಷಕನನ್ನು ಥಿಯೇಟರಿಗೆ ತರುವುದೇ ದುಸ್ತರವಾಗಿರುವಾಗ 'ಬಯಲು ಪ್ರದರ್ಶನ' ಇನ್ನೂ ಕಷ್ಟವೇ. ಅದ ಕ್ಕಾಗಿ ಹೊಸಬರನ್ನ ಕಲೆ ಹಾಕಿ ನಾಟಕ ರಚನಾ ಶಿಬಿರ ನಡೆಸುವುದು, ಅತ್ಯುತ್ತಮ ನಾಟಕ ಸ್ಕ್ರಿಪ್ಟ್‌ಗೆ 50 ಸಾವಿರ ಬಹುಮಾನ ಯೋಜನೆಯನ್ನ ಹಾಕಿಕೊಳ್ಳುವುದು, ಕರ್ನಾಟಕದ ಬೇರೆ-ಬೇರೆ ಭಾಗದ ಪ್ರಾಂತೀಯ ಬದ್ಧತೆ ಮತ್ತು ಮಹತ್ವವನ್ನು ಎತ್ತಿ ಹಿಡಿಯುವಂತಹ ಆಕರ್ಷಕ ಹೆಸರಿನಲ್ಲಿ ಶೋ ನೀಡುವುದು.**

Trend ಆಗಬಾರದು ಪ್ರದರ್ಶನವನ್ನೇ ಕಾಣದಂತಹ ಸ್ಕ್ರಿಪ್ಟ್‌ಗಳನ್ನು ಹುಡುಕಬೇಕು. ನೋಡಾನಾ ನಿವೆಲ್ಲ ಇದ್ದೀರಲ್ಲಾ (ಮತ್ತೆ ದೊಡ್ಡನಗು...)

ಕುಂಪಿ: ರಂಗತಂಡಗಳನ್ನು ಒಂದರೊಳಗೊಂದು ನೋಡುವ ಪರಿಪಾಠ ನಮ್ಮಲ್ಲಿಲ್ಲ. ಎಲ್ಲವೂ 'ದ್ವೀಪ' ವಾಗುತ್ತಿವೆ. ಈ ಬಗ್ಗೆ ನಿಮ್ಮ ಯೋಜನೆಗಳೇನು?

ಹಳೆಮನೆ: ಚರಿತ್ರೆಯ ಹಿನ್ನೆಲೆ ಹಾಗೂ ಭವಿಷ್ಯದ ಕಾಣ್ಕೆಗಾಗಿ ದುಡಿಯಬೇಕಾದ ರಂಗಭೂಮಿ ಸಾಮಾನ್ಯ ಜನರನ್ನು ನಿರ್ಲಕ್ಷಿಸಿ ಹೇಗೆ ಬೆಳೆಯಲಾರದೋ ಹಾಗೆ ವಿವಿಧ ರಂಗ ತಂಡಗಳು 'ಡಿಬೆಟ್' ಹಾಗೂ 'ಅಪ್ರಿಷಿ ಯೇಷನ್' ಕ್ಯಾಂಪ್ ನೆಡೆಸದೇ ಸೊರಗಿ ಹೋಗಿವೆ. ಇದು ರಂಗ ತಂಡಗಳಿಗೆ ಉಳಿಗಾಲದ ಸೂಚನೆಯಲ್ಲ. ಅದಕ್ಕಾಗಿಯೇ ಒಂದು ಪ್ರಯತ್ನ ನಡೆಸುತ್ತಿದ್ದೇನೆ. ಈ ಹಿಂದೆ ರಂಗಾಯಣದಲ್ಲಿ ಕಾರಂತ ನಿಮನದಲ್ಲಿ ನೀನಾ ಸಂಸ 'ಅಲಕೆಯ ಅಲಗು' ಎಂಬ ನಾಟಕವನ್ನು ಕರೆಸಿ ದ್ವೆವು. ಇತ್ತೀಚೆಗೆ 'ಅಕ್ಷರ ಮಾತನಾಡಿ ತಂದೆಯವರ ವಾರ್ಷಿಕವಿದೆ' ಅಲ್ಲದೆ 'ಟ್ಯಾಗೋರ್ 150' ಕಾರ್ಯ ಕ್ರಮಕ್ಕೆ ಹೇಗೊ ನಿಮ್ಮ 'ಗೋರಾ' ರೆಡಿ ಇದೆಯಲ್ಲ ನಮ್ಮಲ್ಲಿ ಮಾಡಲಾಗುವುದೇ ಅಂತ ಕೇಳಿದ್ರು. ಸಂತೋ ಷದಿಂದ ಒಪ್ಪಂಡಿದೀವಿ. ಬರುವ 16-17ರಂದು 'ಗೋರಾ' ಅಲ್ಲಿ ಪ್ರದರ್ಶಿಸಲಾಗುವುದು. ತೀರ್ಥಹಳ್ಳಿ ರಂಗ ತಂಡದವರು ಕೇಳಿದ್ದಾರೆ. ಅಲ್ಲೂ ಪ್ರದರ್ಶನ ಮಾಡ್ತೀವಿ. ಶಿವಮೊಗ್ಗೆಯ ನೀವೆಲ್ಲ ಕೇಳಿದೀರಲ್ಲ 'ಮುಗಳೀಂದಿ ಪ್ರಹಸನ, ಸದಾರಮೆ, ಗೋರಾ'... ಇಲ್ಲೂ ಆಡಿ ಸಾನ, ಹೀಗೆ ನಾವು ಮತ್ತೆ ಮತ್ತೆ ತೆರೆದುಕೊಂಡರೆ ಮಾತ್ರ ರಂಗಭೂಮಿ ಉಳಿಯುತ್ತೆ. ಇದು ಯಾರ ಸ್ವತ್ತೂ ಅಲ್ಲ ಜನತೆಯದು, ಅವರ ದನಿಯಾಗಿ ಸ್ಪೇಸ್ (Space) ಆಗಿ ನಾವು ಕಾರ್ಯಮಾಡಬೇಕು ಅಷ್ಟೇ.

ಕುಂಪಿ: ಬರೋ ತಿಂಗಳು ಜರ್ಮನಿ ಟೂರ್ ಅಂದ್ರಿ ಅದರ ಉದ್ದೇಶ ಹಾಗೂ ಫಲಿತವೇನು ಸಾರ್,

ಹಳೆಮನೆ: ಈಗ ಹೇಳಿದ್ನಲ್ಲ 'ಪರಸ್ಪರ', ಹಾಗೆ ಇದೂ 'ವ್ಯೂಸ್‌ಬರ್ಗ' ಜವೇರಿಯಾ ಸ್ಮೇಸ್ಸ ಹಾಗೂ ಬರ್ಲಿನ್ ರಂಗಭೂಮಿ ಕುರಿತು ಎರಡು ವಾರಗಳ ಟೂರ್. ಅದು 'ಯುರೋ ಇಂಡಿಯಾ ವೀಕ್' ಅಂತ ಅಲ್ಲಿಯ ಕಲಾ ತಂಡಗಳು ಹಾಗೂ ಅವರ ತಯಾರಿ ಹಾಗೂ ಪ್ರದರ್ಶನದ ಕ್ವಾಲಿಟಿಯನ್ನು ಅಭ್ಯಾಸಮಾಡುತ್ತಲೇ ನಮ್ಮ ಸ್ಥಳೀಯ ಸಂಸ್ಕೃತಿ ಹಾಗೂ ಪುರಾಣ ಮತ್ತು ಆಧುನಿಕತೆಯನ್ನ ಸಮ್ಮಿಳನಗೊಳಿಸಿ ಹೊಸ ಪ್ರಯೋಗವನ್ನು ಕನ್ನಡದಲ್ಲಿ ಕಟ್ಟುವ ಪ್ರಯತ್ನಕ್ಕಾಗಿ, ಅಲ್ಲದೆ ಈಗಾಗಲೇ ಟ್ಯಾಗೋರ್ ಪ್ರತಿಷ್ಠಾನದಲ್ಲಿ (ಜರ್ಮನಿ) ನಮ್ಮ ಶಿವಪ್ರಕಾಶ್ ಇದ್ದಾರೆ. ಅವರೊಂದಿಗೂ ಚರ್ಚಿಸಿ ಅಲ್ಲಿನ ಕಲಾವಿದರನ್ನು ಇಲ್ಲಿಗೆ ಕರೆತರುವುದು. ಹಾಗೂ ನಮ್ಮ ಹುಡುಗರನ್ನ ಅಲ್ಲಿಗೆ ಕರೆದೊಯ್ಯುವುದು.. ಹೀಗೆ ಒಂದು ಬಹು ದೊಡ್ಡ ಪ್ರಾಜೆಕ್ಟ್ ಹೊಂದಿದ್ದೇನೆ.

ಕುಂಪಿ: ಹೊಸ ನಾಟಕ ಏನನ್ನಾದ್ರೂ ಬರೀತಿದೀರಾ ಸಾರ್! ಮತ್ತೆಯಾವುದಾದರೂ ಪ್ರಾಜೆಕ್ಟ್.

ಹಳೆಮನೆ: ಈ ತಿರುಗಾಟದಲ್ಲಿ ಬರವಣಿಗೆ ಕಡೆ ಗಮನಿಸಲು ಆಗ್ತಿಲ್ಲ. ಮಹಾನ್ ಸಂಗೀತಗಾರ 'ತಾನ್‌ಸೇನ್' ಕುರಿತು 'ತಾನಾರೀರೀ' ಅಂತ ನಾಟಕ ಬರೆಯುತ್ತಿರುವೆ All most ಆಗಿದೆ. ಇನ್ನೊಂದೆರಡು ಸಿಟಂಗ್‌ನಲ್ಲಿ ಮುಗಿಯಬಹುದು. ಇದರನಡುವೆ ಹೊರನಾಡ ಕನ್ನಡಿಗರಿಗಾಗಿ ಹಿಂದೆ ಬರೆದುಕೊಟ್ಟ ಪುಸ್ತಕವನ್ನು ಪ್ರಾಧಿಕಾರದವರು

ಪರಿಷ್ಕರಿಸಿಕೊಡಲು ಹೇಳಿದ್ದಾರೆ. ಆ ಕೆಲಸವನ್ನು ಮುಗಿಸಬೇಕಿದೆ. ರಂಗಭೂಮಿ ಕುರಿತು ಒಂದು ವಿಶ್ವಕೋಶವನ್ನು ತರಬೇಕು. ಹಾಗೂ ರಂಗಭೂಮಿ ಪಾರಿಭಾಷಿಕ ಪದಗಳ ನಿಘಂಟು ಯೋಜನೆಯನ್ನು ತರಬೇಕಿದೆ. ಆಗ್ಲಿ ಎಲ್ಲಾ ಸೇರಿ ಮಾಡಾನಾ. (ನಗುತ್ತ ಸಿಗರೇಟು ಹಚ್ಚಿಕೊಂಡರು. ಅಷ್ಟರಲ್ಲಿ ಮೇಟಿ ಮಲ್ಲಿಕಾರ್ಜುನ ಬಂದರು).

ಕುಂಷಿ: ನಾಟಕಕಾರರಾಗಿ ಇತಿಹಾಸ ಹಾಗೂ ಸಮಕಾಲೀನ ಸ್ಪಂದನದೊಂದಿಗೆ ಆಧುನಿಕ ವಿದ್ಯಮಾನಗಳನ್ನು ಗಮನಿಸುತ್ತಾ, ಚಳವಳಿಗೆ ಸ್ಪಂದಿಸುತ್ತಾ ನಿಮ್ಮೊಳಗಿನ ಭಾಷಾ ವಿಜ್ಞಾನಿಯೊಬ್ಬನಿಂದ ಆಗಬಹುದಾದ ಈಗಿನ 'ಭಾಷಾ ಸಂದರ್ಭದ ಸ್ಪಂದನ ಕಡಿಮೆ ಆಗ್ತಿದೆ ಅನ್ಸಿಲ್ವ ಸಾರ್,

ಹಳೆಮನೆ: ನೋಡು, 'ನಮ್ಮ ಭಾಷಾ ಸಂದರ್ಭ'ಕ್ಕೆ ದುಡಿಯುವವರ ಸಂಖ್ಯೆ ಕಡಿಮೆಯಾಗಿದೆ. ನಾನು ಈ ಎಲ್ಲಾ ಕೆಲಸಗಳ ನಡುವೆ ಅಂದುಕೊಂಡಷ್ಟು ಭಾಷಾ ಸಂದರ್ಭಕ್ಕೆ ಸ್ಪಂದಿಸಲಾಗುತ್ತಿಲ್ಲ. ಆದರೂ ಶಾಸ್ತ್ರೀಯ ಭಾಷಾ ವಿಷಯದಲ್ಲಿ ನಾನು ತೆಗೆದುಕೊಂಡ ನಿಲುವು ನಿಮಗೆಲ್ಲ ಗೊತ್ತೇ ಇದೆ. ಇನ್ನು ತೀವ್ರವಾಗಿ ಭಾಷಾ ಸಂಬಂಧವಾಗಿ ಯೋಚಿಸಬೇಕಿದೆ. (ಊಟಕ್ಕೇಳುವ ಸೂಚನೆಯನ್ನು ಮೇಟಿ ನಾನು ಕಣ್ಣಲ್ಲಂದುಕೊಂಡೆವು)

ಕುಂಷಿ: ಕಡೆಯ ಪ್ರಶ್ನೆ ಸಾರ್, ನಾಟಕಗಳಿಲ್ಲದೆ ನಮ್ಮ ರಂಗ ಭೂಮಿ ದುರ್ಬಲವಾಗಿದೆಯೇ? ಇಲ್ಲಾ ಅಂದ್ರೆ ಕತೆ-ಕಾದಂಬರಿ-ಕಾವ್ಯದ ಚುಂಗುಹಿಡಿದ ರಂಗ ಪ್ರಯೋಗದ ಅನಿವಾರ್ಯವೇನು?

ಹಳೆಮನೆ: ನಾಟಕಗಳಿಲ್ಲ ಅಂತಲ್ಲ ಜನರ Trendನ್ನ ಅನೇಕ ತಂಡಗಳು ಭ್ರಷ್ಟಗೊಳಿಸಿವೆ. ಅದು ಅವರ ಮಿತಿಯೇ ಹೊರತು ಪ್ರೇಕ್ಷಕರದಲ್ಲ. ಸ್ವೀಡಿಶ್-ಜರ್ಮನ್ ಮುಂತಾದ ದೇಶಗಳಲ್ಲಿ ಸಿದ್ಧವಾದ Script ಬೇಕು ಅಂತಿಲ್ಲ. ನಿನ್ನೆ ನಡೆದ ಯಾವುದೋ ಒಂದು ಘಟನೆಯೇ ಇಂದು ರಂಗಕ್ಕೆ ಸಿದ್ಧವಾಗಿ ಬಿಡುವ ಜರೂರು ಹೊಂದಿರುತ್ತದೆ. ನಮ್ಮಲ್ಲಿ ಸ್ವಲ್ಪ ನಿಧಾನ, ಯಾಕೆಂದ್ರೆ ಇಲ್ಲಿ ಪ್ರೇಕ್ಷಕನನ್ನು ಥಿಯೇಟರಿಗೆ ತರುವುದೇ ದುಸ್ತರವಾಗಿರುವಾಗ 'ಬಯಲು ಪ್ರದರ್ಶನ' ಇನ್ನೂ ಕಷ್ಟವೇ. ಅದಕ್ಕಾಗಿ ಹೊಸಬರನ್ನ ಕಲೆಹಾಕಿ ನಾಟಕ ರಚನಾ ಶಿಬಿರ ನಡೆಸುವುದು, ಅತ್ಯುತ್ತಮ ನಾಟಕ ಸ್ಕ್ರಿಪ್ಟ್‌ಗೆ 50 ಸಾವಿರ ಬಹುಮಾನ ಯೋಜನೆಯನ್ನ ಹಾಕಿಕೊಳ್ಳುವುದು, ಕರ್ನಾಟಕದ ಬೇರೆ-ಬೇರೆ ಭಾಗದ ಪ್ರಾಂತೀಯ ಬದ್ಧತೆ ಮತ್ತು ಮಹತ್ವವನ್ನು ಎತ್ತಿ ಹಿಡಿಯುವಂತಹ ಆಕರ್ಷಕ ಹೆಸರಿನಲ್ಲಿ ಶೋ ನೀಡುವುದು. ಹೇಗೆಂದರೆ ರಂಗಾಯಣ ಎಂದಾಗ ಬರೀ ಮೈಸೂರು ಅಲ್ಲ, ಶಿವಮೊಗ್ಗೆಯಲ್ಲಿ ಅದು 'ಸಹ್ಯಾದ್ರಿ ರಂಗಾಯಣ'ವಾಗಬೇಕು. ದಾರವಾಡಕ್ಕೆ ಬಂದಾಗ 'ಶ್ರಾವಣರಂಗಾಯಣ'ವಾಗಬೇಕು ಹೀಗೆ... ಸೃಜನಶೀಲತೆ-ಪ್ರಾದೇಶಿಕತೆ ಮತ್ತು ಕಲಾದೇಶಾತೀತ ಆಕಾಂಕ್ಷೆಗಾಗಿ ರಂಗಭೂಮಿ ತೆರೆದುಕೊಂಡಾಗ ಹೊಸಬರ ಪ್ರವೇಶ ಹೊಸತನದ ದಾರಿ ತೆರೆದುಕೊಳ್ಳುತ್ತದೆ.

ಥ್ಯಾಂಕ್ಯೂ ಸಾರ್, ಊಟಕ್ಕೆ ಹೋಗಾನಾ, ಉಳಿದದ್ದು ಅಲ್ಲಿ ಮಾತಾಡಬಹುದು. ಅನ್ನುತ್ತಾ ಮೇಟಿ ತಮ್ಮ ಕ್ಯಾಮರಾದಲ್ಲಿ ನಮ್ಮ ಫೋಟೋ ತೆಗೆದುಕೊಳ್ಳುತ್ತಿದ್ದಾಗ ಅದ್ಯಾಕ್ರಿ 'ಉದ್ವಿಗ್ನತೆ' ಅದೂ ಮೇಷ್ಟ್ರುಜೊತೆ... ಅಂದಾಗ ಮೇಸ್ಟ್ರು, ನಾನು ಗಹಗಹಿಸಿ ನಕ್ಕೆವು... ಅದೇ ನನ್ನೊಂದಿಗೆ ಅವರ ಕಡೆ ಭಾವಚಿತ್ರವಾಗುತ್ತದೆಂದು ಯಾರು ಕಂಡವರು.

ಯಾಕೆ ಮೇಸ್ತ್ರೇ ಹೀಗೆ ಹೋದಿರಿ.... □

ಸುತ್ತಿಗೆಯನ್ನು ಯೋಚಿಸುತ್ತಾ

ಅಪ್ಪ
ಕುಳಿತಲ್ಲೇ
ಕುಳಿತುಬಿಡುತ್ತಾನೆ.
ಒಮ್ಮೊಮ್ಮೆ
ಮೌನಿಯಂತೆ
ಮೊಗದೊಮ್ಮೆ
ಸಾಕ್ಷಾತ್ ವಿಶ್ವಾಮಿತ್ರನಂತೆ
ಧರ್ಮಾಂಧರು
ಅವನ
ಕೈಕಾಲುಗಳಿಗೆ
ತೊಡಿಸಿದ
ಬೇಡಿಗಳನ್ನು
ತುಂಡರಿಸಲು
ಸುತ್ತಿಗೆಯನ್ನು
ಯೋಚಿಸುತ್ತಾ...!!

○ ಹಳ್ಳಿ ವೆಂಕಟೇಶ್

ಕಾರ್ಮಿಕ ಮರೆತ ನೇತಾರ

ಡಾ. ಎಸ್. ನರೇಂದ್ರಕುಮಾರ್

ಮೇ ಒಂದು ಕಾರ್ಮಿಕರ ದಿನಾಚರಣೆ. ವಿಶ್ವದಾದ್ಯಂತ ಅಂದು ಹಾಗೂ ಆ ತಿಂಗಳು ಕಾರ್ಮಿಕರ ಬಗೆಗಿನ ಅಸಂಖ್ಯಾತ ವಿಚಾರಗಳು ಚರ್ಚೆಯಾಗುತ್ತವೆ. ಈ ಹಿನ್ನೆಲೆಯಲ್ಲಿ ಕಾರ್ಮಿಕರ ಹಕ್ಕುಗಳಿಗಾಗಿ ತಮ್ಮನ್ನು ತೊಡಗಿಸಿಕೊಂಡ ಅನೇಕಾನೇಕ ನೇತಾರರನ್ನು ನೆನಪಿಸಿಕೊಳ್ಳಲಾಗುತ್ತದೆ. ಭಾರತವೂ ಇದಕ್ಕೆ ಹೊರತಲ್ಲ. ಆದರೆ ಕಾರ್ಮಿಕರ ವಿಮೋಚನೆಗಾಗಿಯೂ ತಮ್ಮನ್ನು ತೆತ್ತುಕೊಂಡ ಡಾ. ಅಂಬೇಡ್ಕರ್ ಅವರು ಇಂತಹ ಆಚರಣೆಯಲ್ಲಿ ನೆನಪಾಗದಿರುವುದು ದುರಂತದ ಸಂಗತಿ.

ಬಹುಪಾಲು, ದಲಿತರ ಬಿಡುಗಡೆಯ ನಾಯಕರೆಂಬ ಚೌಕಟ್ಟಿನಲ್ಲೆ ಹೆಚ್ಚಾಗಿ ಗುರುತಿಸಲ್ಪಡುವ ಅರ್ಥೈಸಲ್ಪಡುವ ಏಕರೂಪಿ ವಿಶ್ಲೇಷಣೆ ಅಂಬೇಡ್ಕರ್ ಅವರ ಬಗೆಗೆ ಈವರೆಗೆ ನಡೆದುಹೋದದ್ದರಿಂದ, ಇದನ್ನೂ ಮೀರಿದ ಅಂಬೇಡ್ಕರ್ ಅವರ ಹೋರಾಟ ಹಾಗೂ ವಿಚಾರಧಾರೆ ಗಳನ್ನು ಗ್ರಹಿಸಲು ಸರಿಯಾಗಿ ಸಾಧ್ಯವಾಗುತ್ತಿಲ್ಲ. ಆದರೆ ದಲಿತರೇ ಮಾತ್ರವಲ್ಲ, ಅಸಂಖ್ಯಾತ ಶೋಷಿತರ ಹಾಗೂ ಮಹಿಳಾ ಬಿಡುಗಡೆಗೆ ಹೇಗೆ ಅಂಬೇಡ್ಕರ್ ಪರಿಶ್ರಮವಿದೆಯೋ ಹಾಗೆಯೇ ಕಾರ್ಮಿಕರ ಬಿಡುಗಡೆಗೂ ಶ್ರಮಿಸಿದ್ದು ವಿಶೇಷ.

ಜಗತ್ತಿನ ಬೇರೆ ಬೇರೆ ಪ್ರದೇಶಗಳಿಗಿಂತ ಭಾರತ ಹೇಗೆ ಕಾರ್ಮಿಕರ ಹಿನ್ನೆಲೆಯಲ್ಲಿ ಸಂಕೀರ್ಣತೆಯಿಂದ ಕೂಡಿದೆ ಎಂಬುದನ್ನು ಸೂಕ್ಷ್ಮವಾಗಿ ನೋಡಬೇಕಾದ ಅಗತ್ಯದ ಹೊಸದೃಷ್ಟಿ ನೀಡಿದವರು ಅಂಬೇಡ್ಕರ್. ವಿದೇಶಿ ಕೇಂದ್ರಿತ ವರ್ಗನೆಲೆಯಲ್ಲೇ ಭಾರತದ ಕಾರ್ಮಿಕರ ಸ್ಥಿತಿ ಗತಿಗಳನ್ನು ಅರ್ಥೈಸುವ ಬಗೆಗೆ ಅಂಬೇಡ್ಕರ್ ಅವರಿಗೆ ತೀವ್ರ ವಿರೋಧವಿತ್ತು. ಕಾರ್ಮಿಕರ ಹಿನ್ನೆಲೆಯಲ್ಲಿ ಕಮ್ಯುನಿಸ್ಟ್

ಹಿನ್ನೆಲೆಯ ಬಹುಪಾಲು ಭಾರತೀಯ ಚಿಂತಕರು ಭಾರತವನ್ನು ನೋಡುವ ದೃಷ್ಟಿಕೋನಕ್ಕೂ ಅಂಬೇಡ್ಕರ್ ಅವರು ಕಂಡಿರುವ ಬಗೆಗೂ ವ್ಯತ್ಯಾಸವಿದೆ. ತಾರತಮ್ಯ ವೆಂಬುದು ಭಾರತದಲ್ಲಿ ಜಾತಿ ಶ್ರೇಣೀಕರಣದೊಂದಿಗೇ ಶ್ರಮಶ್ರೇಣೀಕರಣವನ್ನೂ ಒಳಗೊಂಡಿದ್ದು, ಈ ಶ್ರೇಣೀಕರಣ ಕಾರ್ಮಿಕರ ನಡುವೆ ಜಾತಿಯಾಧಾರಿತ ಶಾಶ್ವತ ವಿಭಾಗಗಳನ್ನು ಮಾಡಿದೆ ಎಂಬುದನ್ನು ಅಂಬೇಡ್ಕರ್ ತಿಳಿಸಿದರು.

ಜಾತಿ ಕಾರಣದ ಶ್ರಮ ತಾರತಮ್ಯವನ್ನು ಸರಿಯಾಗಿ ಗ್ರಹಿಸದ ಆದರೆ ಕಾರ್ಮಿಕರ ಪರ ಹೋರಾಟ ರೂಪಿಸುವ ಭಾರತದ ಸಮಾಜವಾದಿಗಳ ಬಗೆಗೆ ಅಂಬೇಡ್ಕರ್ ಸಾತ್ವಿಕ ಸಿಟ್ಟಿನಿಂದ ಮಾತನಾಡಿರುವುದು ಗಮನಾರ್ಹ: "ಅವರು ಈ ನೆಲದ ವಾಸ್ತವತೆಯಿಂದ ಬಹಳ ದೂರದಲ್ಲಿದ್ದಾರೆ. ಈ ಜಗತ್ತಿನಲ್ಲಿ ಎರಡು ವರ್ಗಗಳಿವೆ. ಶ್ರೀಮಂತರು -ಬಡವರು. ಶೋಷಕರು-ಶೋಷಿತರು, ಮಧ್ಯಮ ವರ್ಗವೂ ಇದೆ. ಆದರೆ ಅದು ತೀರಾ ಸಣ್ಣದು. ಶ್ರೀಮಂತರ ಸಿರಿತನ ಬಡವರ ಬವಣೆಯಲ್ಲಿದೆ. ಇದನ್ನು ನಿವಾರಿಸಬೇಕಾದರೆ ದುಡಿಯುವವರೆಲ್ಲ ಜಾತಿ-ಮತಗಳನ್ನು ಧಿಕ್ಕರಿಸಿ ಸಂಘಟಿತರಾಗಬೇಕು, ಹಾಗಾದಾಗ ಎಲ್ಲರೂ ಎಲ್ಲವನ್ನೂ ಹಂಚಿಕೊಳ್ಳಬಹುದು. ಆಗ ಮಾತ್ರ ಸಂಪತ್ತನ್ನು ಉತ್ಪಾದಿಸುವ ಜನ ಹಸಿವೆಯಿಂದ ಸಾಯುವುದಿಲ್ಲ" ಎಂದು ತಿಳಿಸಿದ್ದಾರೆ.

ಅಲ್ಲದೆ ಆರ್ಥಿಕ ಸಮಾನತೆ ಸಾಧಿಸಿದರೆ ಎಲ್ಲವೂ ಸರಿಯಾಗುತ್ತದೆ ಎಂದೇ ನಂಬಿದ್ದ ಸಮಾಜವಾದಿಗಳನ್ನು ಕುರಿತು "ಆರ್ಥಿಕ ಸಮಾನತೆ ತರಲು ಅಧಿಕಾರವಿರಬೇಕು. ಈ ಅಧಿಕಾರ ಕೂಡ ದುಡಿಯುವ ವರ್ಗದ ಕ್ರಾಂತಿಯಿಂದ ಬರಬೇಕಾದದ್ದೆ. ಆದರೆ ಈ ಕ್ರಾಂತಿಯನ್ನು ಮಾಡಲು ಭಾರತದ ದುಡಿಯುವ ವರ್ಗದವರೆಲ್ಲರೂ ಜೊತೆಗೂಡುತ್ತಾರೆಯೇ? ಬೇರೆಲ್ಲಾ ಸರಿಯಿದ್ದು ಕ್ರಾಂತಿಯ ನಂತರ ಎಲ್ಲರೂ ಸಮಾನರು, ಜಾತಿ-ವರ್ಣ ಭೇದಗಳಿರುವುದಿಲ್ಲ ಎಂದಾದರೆ, ಶೋಷಿತರೆಲ್ಲರೂ ಸಮಸಮಾಜ ತರುವ ಈ ಕ್ರಾಂತಿಯಲ್ಲಿ ಪಾಲ್ಗೊಳ್ಳುತ್ತಾರೆ. ಆದರೆ ಇದಕ್ಕೆ ಕೇವಲ ಸಮಾಜವಾದಿಯೊಬ್ಬನ ಭರವಸೆಯೊಂದೇ ಸಾಕಾಗುವುದಿಲ್ಲ" ಎಂದೂ ಮಾರ್ಮಿಕವಾಗಿ ಅಭಿಪ್ರಾಯಪಟ್ಟಿದ್ದಾರೆ. ಜಾತಿಯ ಕಾರಣವಾಗಿ ಶ್ರಮಿಕರು ಒಂದಾಗದ ನಿಜಸ್ಥಿತಿಯ ಬಗೆಗೆ ಅಂಬೇಡ್ಕರ್ ತೀವ್ರ ವಿಷಾದ ವ್ಯಕ್ತಪಡಿಸುತ್ತಾರೆ. ಶ್ರಮಿಕರು ತಮ್ಮ ತಮ್ಮ ಜಾತಿ ಪ್ರಜ್ಞೆಯನ್ನು ಮೀರಿ ಸಂಘಟಿತರಾಗಿ ಹೋರಾಡಿ ದರೆ ನ್ಯಾಯ ದೊರೆಯುತ್ತದೆಂಬ ನಂಬಿಕೆ ಅಂಬೇಡ್ಕರ್ ಅವರ ದಾಗಿತ್ತು. ಈ ಕಾರಣವಾಗಿಯೇ ತೀರಾ ನಿರ್ಲಕ್ಷ್ಯಕ್ಕೆ ಒಳಗಾದ ಶ್ರಮಿ ಕರನ್ನು ಸಂಘಟಿಸಲು, ಅವರ ಪರವಾಗಿ ನ್ಯಾಯಬದ್ಧ ಹೋರಾಟ ರೂಪಿಸಲು ಸ್ವತಃ ತಾವೇ ಪರಿಶ್ರಮಿಸಿದರು.

ಜಾತಿಯಾಧಾರಿತ ಶ್ರಮ ಶ್ರೇಣೀಕರಣ ವ್ಯವಸ್ಥೆಯಲ್ಲಿ ಹೆಚ್ಚಿನ ಶೋಷಿತರು, ಸಹಜವಾಗಿ ಈ ನೆಲದ ತಳ ಸಮುದಾಯಗಳೆಂದು ಕಡೆಗಣಿಸಲ್ಪಟ್ಟ ಜನಸಮುದಾಯಗಳಾಗಿದ್ದವು. ಇಂತಹ ಸಮುದಾಯಗಳನ್ನು ಜಾಗೃತಿಗೊಳಿಸುವ ನಿಟ್ಟಿನಲ್ಲಿ ಸತತವಾಗಿ ಶ್ರಮಿಸಿದರು. ಈ ನಿಟ್ಟಿನಲ್ಲಿ 1936ರಿಂದ 1946ರ ಅವಧಿಯು ಅವರು ಕಾರ್ಮಿಕರ ಪರ ಅರ್ಥಪೂರ್ಣ ಹೋರಾಟವನ್ನು ರೂಪಿಸಿದ ಕಾಲಘಟ್ಟವೆಂದೇ ಗುರುತಿಸಲು ಸಾಧ್ಯ. 1936ರಲ್ಲಿ ಅಂಬೇಡ್ಕರ್ 'ಸ್ವತಂತ್ರ ಕಾರ್ಮಿಕ ಪಕ್ಷ' (Independent Labour Party) ಎಂಬ ರಾಜಕೀಯ ಸಂಘಟನೆಯನ್ನು ಹುಟ್ಟು ಹಾಕಿದರು. ಆದರೆ ಅಂಬೇಡ್ಕರ್ ಅವರಿಗೆ ಇದೊಂದು ರಾಜಕೀಯ ಪಕ್ಷ ಮಾತ್ರವೇ ಆಗಿರಲಿಲ್ಲ. ಈ ಮೂಲಕ ಎಲ್ಲಾ ಹಿನ್ನೆಲೆಯ ಕಾರ್ಮಿಕರ ಹಿತರಕ್ಷಣೆ ಮಾಡುವುದು ಅಂಬೇಡ್ಕರ್ ಅವರ ಬಹುದೊಡ್ಡ ಕಾಳಜಿಯಾಗಿತ್ತು.

ಹಾಗಾಗಿ ಈ ಅವಧಿಯಲ್ಲಿ ಸಣ್ಣ ರೈತರು, ಕೃಷಿ ಕೂಲಿಕಾರ್ಮಿಕರು, ಜೀತಗಾರರು, ಬಿಟ್ಟಿ ದುಡಿಮೆಗಾರರು, ಗಿರಣಿ ಕಾರ್ಮಿಕರು,

ಜಾತಿ ಕಾರಣದ ಶ್ರಮ ತಾರತಮ್ಯವನ್ನು ಸರಿಯಾಗಿ ಗ್ರಹಿಸದ ಆದರೆ ಕಾರ್ಮಿಕರ ಪರ ಹೋರಾಟ ರೂಪಿಸುವ ಭಾರತದ ಸಮಾಜವಾದಿಗಳ ಬಗೆಗೆ ಅಂಬೇಡ್ಕರ್ ಸಾತ್ವಿಕ ಸಿಟ್ಟಿನಿಂದ ಮಾತನಾಡಿರುವುದು ಗಮನಾರ್ಹ: ಅವರು ಈ ನೆಲದ ವಾಸ್ತವತೆಯಿಂದ ಬಹಳ ದೂರದಲ್ಲಿದ್ದಾರೆ. ಈ ಜಗತ್ತಿನಲ್ಲಿ ಎರಡು ವರ್ಗಗಳಿವೆ. ಶ್ರೀಮಂತರು -ಬಡವರು. ಶೋಷಕರು-ಶೋಷಿತರು, ಮಧ್ಯಮ ವರ್ಗವೂ ಇದೆ. ಆದರೆ ಅದು ತೀರಾ ಸಣ್ಣದು. ಶ್ರೀಮಂತರ ಸಿರಿತನ ಬಡವರ ಬವಣೆಯಲ್ಲಿದೆ. ಇದನ್ನು ನಿವಾರಿಸಬೇಕಾದರೆ ದುಡಿಯುವವರೆಲ್ಲ ಜಾತಿ-ಮತಗಳನ್ನು ಧಿಕ್ಕರಿಸಿ ಸಂಘಟಿತರಾಗಬೇಕು, ಹಾಗಾದಾಗ ಎಲ್ಲರೂ ಎಲ್ಲವನ್ನೂ ಹಂಚಿಕೊಳ್ಳಬಹುದು. ಆಗ ಮಾತ್ರ ಸಂಪತ್ತನ್ನು ಉತ್ಪಾದಿಸುವ ಜನ ಹಸಿವೆಯಿಂದ ಸಾಯುವುದಿಲ್ಲ ಎಂದು ತಿಳಿಸಿದ್ದಾರೆ.

ಮಹಿಳಾ ಕಾರ್ಮಿಕರನ್ನು ಗುರಿ ಯಾಗಿಸಿಕೊಂಡು ಅವರ ಸಂಘಟನಾತ್ಮಕ ಹೋರಾಟಕ್ಕೆ ವೇದಿಕೆ ಸಿದ್ಧಪಡಿಸಿದರು. ಈ ಪಕ್ಷದ ಸದಸ್ಯರು 1937ರಲ್ಲಿ ನಡೆದ ಚುನಾವಣೆಯ ಸಂದರ್ಭದಲ್ಲಿ ಮುಂಬೈ ಪ್ರಾಂತ್ಯದಿಂದ ಸ್ಪರ್ಧಿಸುವ ಮೂಲಕ 17 ಸ್ಥಾನಗಳ ಪೈಕಿ 15ರಲ್ಲಿ ಜಯಶಾಲಿಯಾಗಿದ್ದು ಗಮನಾರ್ಹ. ಈ ಕಾರಣವಾಗಿ ಪ್ರಮುಖ ವಿರೋಧ ಪಕ್ಷವಾಗಿ ನೆಲೆ ಕಂಡುಕೊಂಡ ಬಳಿಕ ಮುಂಬೈ ಶಾಸನ ಸಭೆಯಲ್ಲಿ ಈ ಕೆಳಗಿನ ಅನೇಕ ವಿಷಯಗಳನ್ನು ಅಂಬೇಡ್ಕರ್ ಚರ್ಚಿಸಿದರು.

ರೈತರನ್ನು ಕಾರ್ಮಿಕರನ್ನಾಗಿ ಅಂಬೇಡ್ಕರ್ ಕಂಡ ಹಾಗೂ ವಿಶ್ಲೇಷಿಸಿದ ಬಗೆ ವಿಶೇಷವಾದುದು. ಪ್ರಜಾಪ್ರಭುತ್ವದಲ್ಲಿ ಕೃಷಿಯನ್ನು ಸರ್ಕಾರಿ ಕೈಗಾರಿಕೆ (State Industry)ಯಾಗಿ ರೂಪಿಸಬೇಕೆಂದು ಆಶಿಸಿದರು. ಭಾರತದಲ್ಲಿನ ಕೃಷಿಕೇಂದ್ರಿತ ಅಸಮಾನತೆ ಹಾಗೂ ಶೋಷಣೆಯ ಆಳ ಅಗಲಗಳನ್ನು ಬಲ್ಲವರಾಗಿದ್ದ ಅಂಬೇಡ್ಕರ್ ಭೂಮಿಯನ್ನೂ ರಾಷ್ಟ್ರೀಕರಣಗೊಳಿಸಲು ಒತ್ತಾಯಿಸಿದರು. ಈ ಮೂಲಕ ಭೂಮಾಲೀಕರ ಕ್ರೌರ್ಯವನ್ನು ನಿರ್ಮೂಲನಗೊಳಿಸುವ ಕನಸು ಅಂಬೇಡ್ಕರ್ ಅವರದು. ಇದಕ್ಕೆ ಪರ್ಯಾಯವಾಗಿ ಕೃಷಿ ಭೂಮಿಯನ್ನು ಕೃಷಿಯ ಬಗೆಗೆ ಆಸಕ್ತಿಯುಳ್ಳ ಎಲ್ಲಾ ಜಾತಿಯ ಕೃಷಿ ಕಾರ್ಮಿಕರಿಗೆ ಹಂಚಬೇಕೆಂದು ಬಯಸುತ್ತಾರೆ.

ಅಲ್ಲದೆ ಅದನ್ನು ಸಣ್ಣ ಸಣ್ಣ ಹಿಡುವಳಿಗಳನ್ನಾಗಿ ಮಾಡಿ ಸಮುದಾಯ ಬೇಸಾಯ ಪದ್ಧತಿಗೆ ಪ್ರೇರೇಪಿಸುವ ಜೊತೆಗೆ ಕೃಷಿಗೆ ಬೇಕಾದ ಅವಶ್ಯಕ ಸಾಮಗ್ರಿಗಳನ್ನು (ಬಿತ್ತನೆ ಬೀಜ, ನೀರು, ಗೊಬ್ಬರ, ಉಳುಮೆಯ ಸಲಕರಣೆಗಳು) ಸರ್ಕಾರವೇ ಒದಗಿಸಬೇಕೆಂದು ಹೇಳುತ್ತಾರೆ. ಈ ಮೂಲಕ ಭೂಮಾಲೀಕರು ಹಾಗೂ ಮಧ್ಯವರ್ತಿಗಳಿಲ್ಲದ, ಸರ್ಕಾರವೇ ಶೋಷಣಾರಹಿತ ಕೃಷಿ ಚಟುವಟಿಕೆ ನಡೆಸುವ ಆಶಯ ಅವರದು. ಇಷ್ಟೇ ಅಲ್ಲದೆ ರೈತರಿಗೆ ನಷ್ಟವಾಗದಂತೆ ಬೆಳೆಯ ಬೆಲೆಯನ್ನು ನಿಗದಿಪಡಿಸಬೇಕಲ್ಲದೆ ಕೃಷಿಕಾರ್ಮಿಕರಿಗೆ ಜಾತಿಯ ಹಾಗೂ ಲಿಂಗದ ಕಾರಣವಾಗಿ ಕೂಲಿ ತಾರತಮ್ಯವಿರಬಾರದು ಎಂದೂ ಪ್ರತಿಪಾದಿಸಿದ್ದಾರೆ. ಅಲ್ಲದೆ ರೈತರು ಸರ್ಕಾರಕ್ಕೆ ಕೊಡಬೇಕಾದ ಕಂದಾಯವನ್ನು ಬೆಳೆಯಲ್ಲಿ ಬಂದ ಲಾಭದ ಆಧಾರದ ಮೇಲೆ ಕಟ್ಟಿಸಿಕೊಳ್ಳಬೇಕೆಂದೂ ಹೇಳಿದ್ದಾರೆ. ಕೃಷಿ ಕಾರ್ಮಿಕರಿಗೂ ಶ್ರಮದ ಕಾಲ ನಿಗದಿ ಹಾಗೂ ಬಿಡುವು ಅಗತ್ಯವೆಂದು ಒತ್ತಾಯಿಸಿದ್ದಾರೆ. ಅಂಬೇಡ್ಕರ್ ಅವರ ಇಂತಹ ಚಿಂತನೆಗಳನ್ನೇ ಪ್ರಚಲಿತ ರೈತ ಚಳವಳಿಯು ತನ್ನ ಹೋರಾಟದ ಭಾಗವಾಗಿ ತೆಗೆದುಕೊಂಡಿರುವುದನ್ನು ಗಮನಿಸಬಹುದು.

ಪರಿಶಿಷ್ಟ ಸಮುದಾಯಗಳನ್ನು ಬಿಟ್ಟಿ ಚಾಕರಿಯಲ್ಲಿ ತೊಡಗಿಸಿ ಕ್ರೂರವಾಗಿ ಹಿಂಸಿಸುವ ವತನ್‌ದಾರಿ ಕಾಯ್ದೆ ಹಾಗೂ ಖೋಟ ಪದ್ಧತಿಯನ್ನು ನಿಷೇಧಿಸಲು ಅಂಬೇಡ್ಕರ್ ಪರಿಶ್ರಮಿಸಿದರು. ಈ ಹಿನ್ನೆಲೆಯಲ್ಲಿ ಪ್ರಬಲ ಹೋರಾಟವನ್ನೇ ರೂಪಿಸಿದರು. ಶ್ರಮಿಕರ ಈ ಬಗೆಯ ಅಪರಿಮಿತ ಶೋಷಣೆಯ ವಿರುದ್ಧ ತಾವು ತಂದ 'ಮೂಕನಾಯಕ', 'ಬಹಿಷ್ಕೃತ ಭಾರತ' ಹಾಗೂ 'ಜನತಾ' ನಿಯತಕಾಲಿಕೆಗಳಲ್ಲೂ ಈ ಕುರಿತು ಕಾಲ ಕಾಲಕ್ಕೆ ಲೇಖನಗಳನ್ನು ಬರೆದು ಜನಸಮುದಾಯಗಳಲ್ಲಿ ಎಚ್ಚರ ಮೂಡಿಸಲು ಸತತವಾಗಿ ಪ್ರಯತ್ನಿಸಿದರು. ಅಂದಿನ ಬ್ರಿಟಿಷ್ ಸರ್ಕಾರದ ಮಟ್ಟದಲ್ಲಿ ಗಂಭೀರವಾಗಿ

ಪರಿಶಿಷ್ಟ ಸಮುದಾಯಗಳನ್ನು ಬಿಟ್ಟಿ ಚಾಕರಿಯಲ್ಲಿ ತೊಡಗಿಸಿ ಕ್ರೂರವಾಗಿ ಹಿಂಸಿಸುವ ವತನ್‌ದಾರಿ ಕಾಯ್ದೆ ಹಾಗೂ ಖೋಟ ಪದ್ಧತಿಯನ್ನು ನಿಷೇಧಿಸಲು ಅಂಬೇಡ್ಕರ್ ಪರಿಶ್ರಮಿಸಿದರು. ಈ ಹಿನ್ನೆಲೆಯಲ್ಲಿ ಪ್ರಬಲ ಹೋರಾಟವನ್ನೇ ರೂಪಿಸಿದರು. ಶ್ರಮಿಕರ ಈ ಬಗೆಯ ಅಪರಿಮಿತ ಶೋಷಣೆಯ ವಿರುದ್ಧ ತಾವು ತಂದ 'ಮೂಕನಾಯಕ', 'ಬಹಿಷ್ಕೃತ ಭಾರತ' ಹಾಗೂ 'ಜನತಾ' ನಿಯತಕಾಲಿಕೆಗಳಲ್ಲೂ ಈ ಕುರಿತು ಕಾಲ ಕಾಲಕ್ಕೆ ಲೇಖನಗಳನ್ನು ಬರೆದು ಜನಸಮುದಾಯಗಳಲ್ಲಿ ಎಚ್ಚರ ಮೂಡಿಸಲು ಸತತವಾಗಿ ಪ್ರಯತ್ನಿಸಿದರು.

ಚರ್ಚೆಯಾಗುವಂತೆ ಮಾಡಿ ಇದನ್ನು ನಿಷೇಧಿಸುವ ಕಾನೂನುಗಳು ಜಾರಿಯಾಗಲು ನೆರವಾದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮೂಲಭೂತ ಕೈಗಾರಿಕೆಗಳು ಬೃಹತ್ ಕೈಗಾರಿಕೆಗಳು, ಸಣ್ಣ ಕೈಗಾರಿಕೆಗಳು, ಜೀವವಿಮೆ ಮೊದಲಾದ ಜವಾಬ್ದಾರಿಯುತ ಸಂಸ್ಥೆಗಳು ಸರ್ಕಾರದ ಅಧೀನದಲ್ಲೇ ಇರಬೇಕೆಂಬ ಪ್ರಬಲ ಪ್ರತಿಪಾದನೆ ಅಂಬೇಡ್ಕರ್ ಅವರದು. ಪ್ರಜಾಸತ್ತೆಯು ಖಾಸಗಿ ಒಡೆತನದ ಕೈಗಾರಿಕೆಗಳಿಗೆ ಉತ್ತೇಜನ ನೀಡಿದರೆ ಅವುಗಳ ಮಾಲೀಕರು ಏಕಸ್ವಾಮ್ಯದ ಹಿನ್ನೆಲೆ ಹಾಗೂ ಕೇವಲ ತಮ್ಮ ಲಾಭವನ್ನಷ್ಟೇ ಗುರಿಯಾಗಿಸಿಕೊಂಡು ತಮ್ಮಲ್ಲಿ ಕೆಲಸ ಮಾಡುವ ಕಾರ್ಮಿಕರ ಸ್ಥಿತಿಗತಿಗಳ ಬಗೆಗೆ ಹೆಚ್ಚಾಗಿ ಮುತುವರ್ಜಿ ವಹಿಸುವುದಿಲ್ಲ ಎಂಬ ಆತಂಕ ಕೂಡ ಅಂಬೇಡ್ಕರ್ ಅವರದಾಗಿತ್ತು. ಪ್ರಜಾಸತ್ತೆಯಲ್ಲಿ ಎಲ್ಲಾ ಕಾರ್ಖಾನೆಗಳೂ ತನ್ನ ಕಾರ್ಮಿಕರಿಗೆ ಮೂಲಭೂತ ಸೌಕರ್ಯ, ಭವಿಷ್ಯನಿಧಿ, ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸೆ, ವಸತಿ ಗೃಹ, ಶ್ರಮಕ್ಕೆ ಅನುಗುಣವಾದ ವೇತನ, ಮಹಿಳೆ ಹಾಗೂ ಪುರುಷ ಕಾರ್ಮಿಕರ ನಡವೆ ವೇತನ ತಾರತಮ್ಯ ಮಾಡದಿರುವುದು, ಮಹಿಳಾ ಕಾರ್ಮಿಕರಿಗೆ ಸಂಬಳಸಹಿತ ಹೆರಿಗೆ ರಜೆ, ಕಾರ್ಮಿಕರ ಮಕ್ಕಳ ಬದುಕನ್ನು ರೂಪಿಸಲು ಅಗತ್ಯವಾದ ಸೌಲಭ್ಯಗಳನ್ನು ಕುರಿತೂ ಅಂಬೇಡ್ಕರ್ ಚಿಂತನೆ ನಡೆಸಿದರು.

ಮೇಲ್ಕಂಡ ಅನೇಕ ವಿಷಯಗಳು ಅಂಬೇಡ್ಕರ್ ಅವರ ಒತ್ತಾಸೆಯ ಕಾರಣವಾಗಿ ಆಗಿನ ಮುಂಬೈ ಪ್ರಾಂತೀಯ ಸರ್ಕಾರದಲ್ಲಿ ಕಾನೂನುಗಳಾಗಿ ಜಾರಿಗೊಂಡವು. ಮಾತ್ರವಲ್ಲ, ಕಾರ್ಮಿಕರ ಹಿತರಕ್ಷಣೆಯ ಹಿನ್ನೆಲೆಯಲ್ಲಿ ಇಡೀ ದೇಶಕ್ಕೆ ಇವು ಮಾದರಿಯೆಂಬ ಚರ್ಚೆಯು ನಡೆದದ್ದು ಗಮನಾರ್ಹ.

ಮುಂದೆ 1942ರಿಂದ 1946ರ ಅವಧಿಯಲ್ಲಿ ಆಗಿನ ಬ್ರಿಟಿಷ್ ಸರ್ಕಾರದ ಗೌರ್ನರ್ ಜನರಲ್ ಅವರ ಕಾರ್ಯಕಾರಿ ಪರಿಷತ್ತಿನಲ್ಲಿ ಕಾರ್ಮಿಕ ಮಂತ್ರಿಯಾಗಿಯೂ ಅಂಬೇಡ್ಕರ್ ಕೆಲಸ ನಿರ್ವಹಿಸಿದರು. ಈ ಅವಧಿಯಲ್ಲೂ ಸಹ ಕಾರ್ಮಿಕರ ಪರವಾದ ಹಲವಾರು ಕಾನೂನುಗಳು ಜಾರಿಗೆ ಬರಲು ಕಾರಣರಾದರು. ಇವುಗಳ ಗುರುತಿಸುವಿಕೆಯು ಇಂದು ಅತ್ಯಗತ್ಯವಾಗಿದೆ.

1943ರ ಕಾರ್ಮಿಕ ಸಮ್ಮೇಳನವೊಂದರಲ್ಲಿ ಕಾರ್ಮಿಕ ಸಚಿವ ಅಂಬೇಡ್ಕರ್ ಅವರು ಮಾಡಿದ ಭಾಷಣದ ಮಾತುಗಳಿವು: "ಭಾರತದ ಸಕಲ ಕಾರ್ಮಿಕರ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ, ಉದ್ಯೋಗಿಗಳು, ಕೆಲಸ ಮಾಡಿಸುವ-ಕೆಲಸ ಕೊಡುವ ಧಣಿಗಳು ಪರಸ್ಪರ ಜವಾಬ್ದಾರಿ, ಗೌರವ ಮತ್ತು ಪ್ರತಿಯೊಬ್ಬರೂ ಕೊಡುಕೊಳ್ಳುವ ಭಾವನೆಯಿಂದ ಕೆಲಸ ಮಾಡಲು ಸಿದ್ಧರಾಗಬೇಕು. ಈ ರೀತಿಯ ಪರಸ್ಪರ ಗೌರವ ಮತ್ತು ಜವಾಬ್ದಾರಿ ಬೆಳೆಯದೆ ಹೋದರೆ ಕಾರ್ಮಿಕರ ಕಲ್ಯಾಣದ ಸಮಸ್ಯೆ ಎಂದಿಗೂ ನಿವಾರಣೆಯಾಗಲು ಸಾಧ್ಯವಿಲ್ಲ".

ಈ ಮಾತುಗಳು ಕಾರ್ಮಿಕರ ಪರವಾದ ನ್ಯಾಯದ ಹಿನ್ನೆಲೆಯಲ್ಲಿ ಇಂದಿಗೂ ಪ್ರಸ್ತುತವೆನ್ನಿಸುತ್ತವೆ. ಈ ಎಲ್ಲಾ ಕಾರಣಗಳಿಂದಾಗಿಯೇ ಮೇ ಒಂದರಂದು; ಅದಂಲ್ಲೂ ಭಾರತದ ಕಾರ್ಮಿಕರು ಮರೆಯಬಾರದ ನೇತಾರ ಡಾ.ಬಿ.ಆರ್. ಅಂಬೇಡ್ಕರ್ ಅವರಾಗಿದ್ದಾರೆ. □

ಹಸ್ತಪ್ರತಿ ಆಹ್ವಾನ

ಕನ್ನಡ ಕವಯತ್ರಿ ವಿಭಾ ಅವರ ನೆನಪಿನಲ್ಲಿ 'ವಿಭಾ ಸಾಹಿತ್ಯ ಪ್ರಶಸ್ತಿ-೨೦೧೧' ಕ್ಕಾಗಿ ಕನ್ನಡದ ಕವಿಗಳಿಂದ ಮೂವತ್ತಕ್ಕೂ ಹೆಚ್ಚು ಕವಿತೆಗಳಿರುವ ಹಸ್ತಪ್ರತಿಯನ್ನು ಆಹ್ವಾನಿಸಲಾಗಿದೆ. ಈ ಪ್ರಶಸ್ತಿಯು ರೂ. ೫೦೦೦/- ನಗದು ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿದೆ. ಯಾವುದೇ ಕಾರಣಕ್ಕೂ ಹಸ್ತಪ್ರತಿಯನ್ನು ಹಿಂತಿರುಗಿಸಲಾಗುವದಿಲ್ಲ. ಪ್ರಶಸ್ತಿ ವಿಜೇತ ಹಸ್ತಪ್ರತಿಯನ್ನು ಗದಗದ ಲಡಾಯಿ ಪ್ರಕಾಶನದಿಂದ ಪ್ರಕಟಿಸಲಾಗುವದು. ಹಸ್ತಪ್ರತಿ ಕಳುಹಿಸಲು ಕೊನೆಯ ದಿನಾಂಕ ಜುಲೈ ೨೫.

ವಿಳಾಸ:

ಸುನಂದಾ ಮತ್ತು ಪ್ರಕಾಶ ಕಡಮೆ, ೯೦, ನಾಗಸುಧೆ, ೬/ಬಿ, ಕಾಳಿದಾಸನಗರ.
ವಿದ್ಯಾನಗರ ವಿಸ್ತರಣೆ, ಹುಬ್ಬಳ್ಳಿ-೫೮೦೦೩೧ ಸೆಲ್: ೯೮೪೫೭೭೯೩೮೭

ಕ್ಲಾಸಿಕಲ್ ಪಠ್ಯಗಳು: ಸಾಂಸ್ಕೃತಿಕ ರಾಜಕಾರಣದ ರೂಪಕಗಳು

ಮೇಟಿ ಮಲ್ಲಿಕಾರ್ಜುನ

ಸಾಂಸ್ಕೃತಿಕ ರಾಜಕಾರಣ ಎನ್ನುವುದು ಚರಿತ್ರೆಯುದ್ದಕ್ಕೂ ನಡೆದುಕೊಂಡು ಬಂದದ್ದು ಸಹಜವಾಗಿಯೇ ಎದ್ದು ಕಾಣುತ್ತದೆ. ಇದಕ್ಕೆ ಬೇಕಾದ ಸಾಕ್ಷಿಗಳು ನಮ್ಮ ಸಾಂಸ್ಕೃತಿಕ ಚರಿತ್ರೆ ರೂಪಗೊಂಡ ಬಗೆಯಲ್ಲಿಯೇ ದೊರಕುತ್ತವೆ. 'ಸಾಂಸ್ಕೃತಿಕ ರಾಜಕಾರಣ'ವನ್ನು ನಿರಾಕರಿಸಿ ಸಮುದಾಯಗಳ ಏಳ್ಗೆಯ ಬಗ್ಗೆ ಯೋಚನೆ ಮಾಡುವ ಕಾಲಮಾನ ಇದಲ್ಲ ಎಂಬುದು ಈಗಾಗಲೇ ಒಪ್ಪಿತವಾಗಿರುವ ಸಂಗತಿ. ಹಾಗಾದರೆ, ಇಂತಹದೊಂದು ರಾಜಕಾರಣ ಬೇಕೋ ಬೇಡವೋ ಎಂಬುದರ ಬಗ್ಗೆ ಯಾವುದೇ ಚರ್ಚೆಯನ್ನು ಹೂಡುವ ಇರಾದೆ ನನ್ನದಲ್ಲ. ಸಾಂಸ್ಕೃತಿಕ ರಾಜಕಾರಣವು ಬೇಕೇ ಬೇಕು ಎಂಬ ಅಚಲವಾದ ನಂಬಿಕೆಯಿಂದ ಕೆಲವು ವಾದಗಳನ್ನು ಹೂಡುವುದಕ್ಕೆ ಸಜ್ಜಾಗಿರುತ್ತೇನೆ. ಇಂತಹ ರಾಜಕಾರಣ ಯಾರಿಗಾಗಿ? ಯಾತಕ್ಕಾಗಿ? ಯಾವಾಗ? ಎಲ್ಲಿ? ಹೇಗೆ? ಎಂಬ ಕೇಳ್ವಿಗಳನ್ನು ಗುರಿಯಾಗಿಟ್ಟು ಕೊಂಡು ಸಾಂಸ್ಕೃತಿಕ ರಾಜಕಾರಣ ನಡೆಯುತ್ತದೆ ಎಂಬುದು ನಿಚ್ಚಳ. ಈಗ ಇದು ಯಾರಿಗಾಗಿ? ಯಾರು ಸಾಂಸ್ಕೃತಿಕ ರಾಜಕಾರಣ ಮಾಡ ಬೇಕಾಗಿದೆ ಎಂಬುದನ್ನು ಇವತ್ತು ಅತ್ಯಂತ ಜರೂರಿನಿಂದ ಕೇಳುವ ಕೇಳ್ವಿಯೆಂಬುದಂತು ದಿಟ.

ಇತ್ತೀಚಿಗೆ ಗುಲಬರ್ಗಾದ ಕೇಂದ್ರೀಯ ವಿಶ್ವವಿದ್ಯಾಲಯಕ್ಕೆ ಸಹ ಪ್ರಾಧ್ಯಾಪಕ ಹುದ್ದೆಗೆ ನೇಮಕ ಮಾಡುವ ಸಂದರ್ಶನದಲ್ಲಿ ಕನ್ನಡದ ಚಿಂತಕರೊಬ್ಬರು ಯಾವುದೇ ಮುಜುಗರವಿಲ್ಲದೆ ನನಗೆ ಒಂದು ಕೇಳ್ವಿಯನ್ನು ಕೇಳಿದರು. ಅದೇನೆಂದರೆ, ನಿವೊಬ್ಬ ಭಾಷಾಶಾಸ್ತ್ರಜ್ಞನಾಗಿ [ಇಂತಹ ಅಧಿಕಾರದ ಪಟ್ಟದಿಂದ ಗುರುತಿಸಿಕೊಳ್ಳುವುದಕ್ಕೆ ನನಗೆ ಮುಜುಗರವಿದೆ] ಕನ್ನಡದ ಹತ್ತು ಕ್ಲಾಸಿಕಲ್ ಪಠ್ಯಗಳನ್ನು ಗುರುತಿಸುವುದಾದರೇ, ಯಾವ ಪಠ್ಯಗಳನ್ನು ಗುರುತಿಸುತ್ತಿರಿ? ಅವರಿಗೆ ಇಂತಹ ಕೇಳ್ವಿಯನ್ನು ಕೇಳುವುದಕ್ಕೆ ಧೈರ್ಯ ಬಂದಿರುವುದು ತಮಿಳು ನುಡಿಯೇ ಕಾರಣವಿರಬಹುದು. ತಮಿಳು ನುಡಿಯು ಕ್ಲಾಸಿಕಲ್ ಪಟ್ಟವನ್ನು ಪಡೆದುಕೊಂಡಾದ ಮೇಲೆ ನಲವತ್ತೊಮ್ಮರು ಪಠ್ಯಗಳನ್ನು 'ಕ್ಲಾಸಿಕಲ್ ಪಠ್ಯ'ಗಳೆಂದು ಗುರುತಿಸಿದೆ. ಅಚ್ಚರಿಯ ಸಂಗತಿಯೇನೆಂದರೆ, ತಮಿಳು ನುಡಿಯನ್ನು ಹಾಗೂ ಆ ಸಮುದಾಯವನ್ನು ಲೇವಡಿ ಮಾಡುವ ಅಥವಾ ಆಡಿಕೊಳ್ಳುವ ಕನ್ನಡಿಗರಿಗೆ ತಮಿಳು ಒಂದು ಮಾದರಿಯಾದದ್ದು ಕೂಡ ಎರಡು ಸಾವಿರದ ನಾಲ್ಕರ ನಂತರ ಎನ್ನುವುದು ಗಮನಾರ್ಹ.

ಎರಡು ಸಾವಿರದ ನಾಲ್ಕರಲ್ಲಿ ರಾಜಕೀಯ ಬಲದಿಂದ ತಮಿಳಿಗೆ ಕ್ಲಾಸಿಕಲ್ ಪಟ್ಟವು ಸಿಕ್ಕಿರುವುದು ಲೋಕ ಪ್ರಸಿದ್ಧಿಯಾಗಿರುವುದೇನೋ ದಿಟ. ಕನ್ನಡಕ್ಕೂ ಇಂತಹದೊಂದು ಪಟ್ಟ ಬೇಕು ಎಂಬ ಬಯಕೆ ಮೂಡಿದ್ದು ಆವಾಗಲೇ. ಕನ್ನಡಕ್ಕೆ ಏನು ಬೇಕು? ಕನ್ನಡದ ಏಳ್ಗೆಗಾಗಿ ಏನು ಮಾಡಬೇಕು? ಎಂಬ ಬಯಕೆಗಿಂತ ಕ್ಲಾಸಿಕಲ್ ಪಟ್ಟದಂತಹ ಅಧಿಕಾರಸ್ಥ ಜಾಗವನ್ನು ಕನ್ನಡಕ್ಕೆ ಪಡೆದು ಕೊಳ್ಳುವುದರಿಂದ ಏನೆಲ್ಲಾ ಲಾಭಗಳು ಸಿಗಬಹುದು ಎಂಬ ಲೆಕ್ಕಾಚಾರದ ನೆಲೆಗಳೂ ಇಂತಹ ಬಯಕೆಗಳಲ್ಲಿ ಅಡಕಗೊಂಡಿವೆ. ಬಹುತೇಕ ಸಾಂಸ್ಕೃತಿಕ ಚಿಂತಕರಿಗೆ ಇಂತಹವೊಂದು ಬಯಕೆ ಮೂಡುವುದರಲ್ಲಿ ಯಾವುದೇ ಸಂದೇಹವಿಲ್ಲ. ಸಮುದಾಯದ ಏಳ್ಗೆಯನ್ನು ಬಯಸುವದಿಕ್ಕಿಂತ ವೈಯಕ್ತಿಕ ಏಳ್ಗೆಯ ಲೆಕ್ಕಾಚಾರದಲ್ಲಿಯೇ 'ಕ್ಲಾಸಿ ಕಲ್‌ಪಠ್ಯ'ಗಳನ್ನು ಆರಿಸುವಂತಹ ಸಾಂಸ್ಕೃತಿಕ ತೀರ್ಮಾನಗಳನ್ನು ಕೈಗೊಳ್ಳಲಾಗುತ್ತದೆ. ಇಂತಹ ತೀರ್ಮಾನಗಳ ಹಿಂದೆ ಯಾವುದೇ ಆದರ್ಶ ಅಥವಾ ತಾತ್ತ್ವಿಕತೆ ಇರುವುದಿಲ್ಲ ಎಂಬುದನ್ನೂ ಗಮನಿಸ ಬೇಕಾಗುತ್ತದೆ.

ಹಾಗಾಗಿಯೇ ತಮಿಳು ನುಡಿಗೆ ಕ್ಲಾಸಿಕಲ್ ಪಟ್ಟ ಸಿಕ್ಕಿ ತೆಂದೊಡನೆ, ಕನ್ನಡಕ್ಕೂ ಬೇಕು ಎಂಬ ಹಕ್ಕೊತ್ತಾಯದ ಕೂಗು ಕೇಳಿ ಬಂತು. ಇಂತಹ ಬೇಡಿಕೆಗಳು ದಾಯಾದಿ ಮತ್ಸರದಿಂದಲೂ ಬರುವಂತವುಗಳಾಗಿವೆ. ಇಂತಹ ಸನ್ನಿವೇಶದಲ್ಲಿ ಕನ್ನಡದ್ದೇ ನೆಲೆಯಿಂದ ಕನ್ನಡ ಸಾಂಸ್ಕೃತಿಕ-ಶೈಕ್ಷಣಿಕ-ಆರ್ಥಿಕ-ರಾಜಕೀಯ ಏಳ್ಗೆಯನ್ನು ಬಯಸುವ ಚಿಂತಕರು ಸಹಜವಾಗಿಯೇ ಕನ್ನಡದ ವಿರೋಧಿಗಳಂತೆ ಕಾಣುತ್ತಾರೆ. ಇದರಲ್ಲಿ ಅಚ್ಚರಿಪಡಬೇಕಾದದ್ದು ಏನೂ ಇಲ್ಲ. ಇದಕ್ಕೆ ಬೇಕಾದ ಸಾಕಷ್ಟು ಪುರಾವೆಗಳು ನಮ್ಮ ಸಾಂಸ್ಕೃತಿಕ ಲೋಕದಲ್ಲಿಯೇ ಸಿಗುತ್ತವೆ. ಇದೆಲ್ಲವನ್ನು ಹೊತ್ತು ಕಳೆಯುವುದ ಕ್ಕಾಗಿ ಹೇಳುತ್ತಿಲ್ಲ. ಸಾಂಸ್ಕೃತಿಕ ರಾಜಕಾರಣ ಎಂಬ ಅಸ್ತ್ರವೈಯಕ್ತಿಕ ಹಿತಾಸಕ್ತಿಯನ್ನು ಪೊರೈಸಿಕೊಳ್ಳು ವುದಕ್ಕೆ ಹೇಗೆ ಬಳಕೆಯಾ ಗುತ್ತದೆ ಎಂಬುದು ಗಮನಾರ್ಹ ಸಂಗತಿ.

ಭಾರತದಂತಹ ದೇಶವನ್ನು ಕುರಿತು ಮಾತನಾಡುವಾಗ ಯಾವೆಲ್ಲ ಸಂಗತಿಗಳನ್ನು ನೆನಪಿಟ್ಟುಕೊಳ್ಳಬೇಕು ಎಂಬುದು ಗಂಭೀರವಾದ ವಿಷಯ. ಜಾಗತಿಕವಾಗಿ ಹೆಸರು ಮಾಡಿದ ಸಾಮಾಜಿಕ ಭಾಷಾಶಾಸ್ತ್ರಜ್ಞ ಜೋಶ್ವಾ ಫಿಶ್‌ಮನ್ ಎಂಬುವವನು ಮೂರು ಬಗೆಯ ಪರಂಪರೆಗಳ ಹಿನ್ನಲೆಯಿರುವ ದೇಶಗಳನ್ನು ಗುರುತಿಸುತ್ತಾನೆ. 1. ಹಲವು ಪರಂಪರೆಗಳನ್ನು ಒಳಗೊಂಡಿರುವ ದೇಶ. 2.ಒಂದೇ ಒಂದು ಪರಂಪರೆಯನ್ನು ಹೊಂದಿರುವ ದೇಶ. ಹಾಗೂ 3. ಯಾವುದೇ ಪರಂಪರೆಯಿಲ್ಲದೇ ಇರುವ ದೇಶ.

ಭಾರತವು ಹಲವು ಪರಂಪರೆಯನ್ನು ಹೊಂದಿರುವ ದೇಶ ಎಂಬುದರಲ್ಲಿ ಯಾರಿಗೇನು ಭಿನ್ನಾಭಿಪ್ರಾಯವಿಲ್ಲ. ಈ ಪರಂಪರೆಗಳು ನಮ್ಮ ಭಾಷಿಕ, ಧಾರ್ಮಿಕ, ಸಾಮಾಜಿಕ ಬಹುಳತೆಯ ಮೇಲೆ ಪರಿಣಾಮ ಬೀರಿವೆ ಎಂದೇ ನನ್ನ ನಂಬಿಕೆ. ಕರ್ನಾಟಕದಲ್ಲಿರುವ ಹಲವು ಪರಂಪರೆಗಳ ಒಟ್ಟು ಮೊತ್ತವೇ 'ಕನ್ನಡ ಸಂಸ್ಕೃತಿ'ಎಂದು ಹೇಳಬೇಕಾಗುತ್ತದೆ. ಕನ್ನಡ ಸಾಂಸ್ಕೃತಿಕ ಲೋಕ ರೂಪಗೊಂಡ ಬಗೆಯನ್ನು ನಿಗಾಯಿಟ್ಟು ನೋಡಿದರೆ, ಸಾಂಸ್ಕೃತಿಕ ಬಹುಳತೆಗಳು ನಿಚ್ಚಳವಾಗಿ ಕಾಣಿಸುತ್ತವೆ. ಹಾಗೂ ಸಾಂಸ್ಕೃತಿಕ ರಾಜಕಾರಣದ ಬೇರೆ ಬೇರೆ ಮಗ್ಗಲುಗಳನ್ನು ಬಿಡಿಸಿ ನೋಡುವುದಕ್ಕೆ ಇದು ಒತ್ತಾಸೆ ಯಾಗುತ್ತದೆ.

ಇಲ್ಲಿ ಗಮನಿಸಲೇಬೇಕಾದ ಸಂಗತಿಯೇನೆಂದರೆ, ಈ ಸಾಂಸ್ಕೃತಿಕ ರಾಜಕಾರಣವು ಪರ್ಯಾಯ ಅಥವಾ ಪ್ರತಿಸಂಸ್ಕೃತಿ ರಾಜಕಾರಣಕ್ಕೂ ಕಾರಣವಾಗಿದೆ ಎಂಬುದನ್ನು ಮರೆಯುವಂತಿಲ್ಲ. ಈ ಒಟ್ಟು ಚಾರಿತ್ರಿಕ ಪ್ರಕ್ರಿಯೆಯಲ್ಲಿ ಅಧಿಕಾರ ಸಂಬಂಧಗಳು ಹೇಗೆ ಕೆಲಸ ಮಾಡಿವೆ ಹಾಗೂ ಅವುಗಳು ಯಾವುದೇ ಒಂದು ವರ್ಗದ, ಜಾತಿಯ, ಧರ್ಮದ ಪರವಾಗಿ ತಮ್ಮ ವಾದಗಳನ್ನು ಹೇಗೆ ಮಂಡಿಸುತ್ತವೆ ಎಂಬುದು ವಿಶೇಷ. ಹೀಗೆ ಯಾವುದೇ ಧರ್ಮ, ಜಾತಿ, ವರ್ಗದ ಪರ ವಕಾಲತ್ತುವಹಿಸಿ ಮಾತನಾಡುವ ನೆಲೆಗಳು 'ಯಾಜಮಾನ್ಯ'ದ ಜಾಗವನ್ನು ಬಯಸುತ್ತವೆ. ಇದು ಒಂದನ್ನು 'ಪ್ರಧಾನ' ಮತ್ತೊಂದನ್ನು 'ಅಧೀನ'ಗೊಳಿಸುವ ನಿಲುವೂ ಆಗಿರುತ್ತದೆ. ಪ್ರಧಾನ ಹಾಗೂ ಅಧೀನವೆಂದು ಸಾಂಸ್ಕೃತಿಕ ಚಹರೆಗಳನ್ನು ವಿಂಗಡಿಸಿ ನೋಡುವ ಬಗೆಯೇ ಎಂತಹ ಅಪಾಯದ್ದು ಎಂಬುದು ನಮಗಾರಿಗೂ ಅರ್ಥವಾಗದೇ ಇರುವುದು ಸೋಜಿಗದ ಸಂಗತಿಯೇ ಸರಿ. ಕನ್ನಡದ ಚರಿತ್ರೆಯುದ್ದಕ್ಕೂ ಈ ಬಗೆಯ ಅಧಿಕಾರಸ್ಥ ಸಂಕಥನಗಳು

ಸಾಂಸ್ಕೃತಿಕ ರಾಜಕಾರಣವು ಪರ್ಯಾಯ ಅಥವಾ ಪ್ರತಿ ಸಂಸ್ಕೃತಿ ರಾಜಕಾರಣಕ್ಕೂ ಕಾರಣವಾಗಿದೆ ಎಂಬುದನ್ನು ಮರೆಯುವಂತಿಲ್ಲ. ಈ ಒಟ್ಟು ಚಾರಿತ್ರಿಕ ಪ್ರಕ್ರಿಯೆಯಲ್ಲಿ ಅಧಿಕಾರ ಸಂಬಂಧಗಳು ಹೇಗೆ ಕೆಲಸ ಮಾಡಿವೆ ಹಾಗೂ ಅವುಗಳು ಯಾವುದೇ ಒಂದು ವರ್ಗದ, ಜಾತಿಯ, ಧರ್ಮದ ಪರವಾಗಿ ತಮ್ಮ ವಾದಗಳನ್ನು ಹೇಗೆ ಮಂಡಿಸುತ್ತವೆ ಎಂಬುದು ವಿಶೇಷ. ಹೀಗೆ ಯಾವುದೇ ಧರ್ಮ, ಜಾತಿ, ವರ್ಗದ ಪರ ವಕಾಲತ್ತು ವಹಿಸಿ ಮಾತನಾಡುವ ನೆಲೆಗಳು 'ಯಾಜಮಾನ್ಯ'ದ ಜಾಗವನ್ನು ಬಯಸುತ್ತವೆ. ಇದು ಒಂದನ್ನು 'ಪ್ರಧಾನ'ಮತ್ತೊಂದನ್ನು 'ಅಧೀನ'ಗೊಳಿಸುವ ನಿಲುವೂ ಆಗಿರುತ್ತದೆ.

ರೂಪಗೊಂಡ ಬಗೆ ಹಾಗೂ ಪ್ರಧಾನ ಮತ್ತು ಅಧೀನ ಎಂಬ ಸಾಂಸ್ಕೃತಿಕ ಚಹರೆಗಳು ನೆಲೆಯೂರಿದ ಕ್ರಮಗಳು ನಿಚ್ಚಳವಾಗಿ ಎದ್ದು ಕಾಣುತ್ತವೆ. ವಿಪರ್ಯಾಸ ಏನೆಂದರೆ, ಪ್ರಧಾನ ಹಾಗೂ ಅಧೀನ ಎಂಬಂತಹ ಅಧಿಕಾರಸ್ಥ ವಿಂಗಡಣೆಗಳನ್ನು ಸಮನ್ವಯ ಸಹಬಾಳ್ವೆ ಎಂಬೆಲ್ಲಾ ಬೆಲ್ಲದ ಮಾತುಗಳಿಂದ ಕರೆದು ಅವುಗಳಲ್ಲಿ ಅಡಕವಾಗಿರುವ ಸಾಂಸ್ಕೃತಿಕ ಅಸಮಾನತೆಯನ್ನು ಮರೆ ಮಾಚುವ ಹುನ್ನಾರವಾಗಿದೆ.

ಸಮುದಾಯಗಳ ನಡುವಣ ಸಾಮಾಜಿಕ ಅಥವಾ ಸಾಂಸ್ಕೃತಿಕ ಭಿನ್ನತೆಗಳನ್ನು ಆಯಾ ಸಮುದಾಯಗಳ ಅಸ್ತಿತ್ವದ ಚಹರೆಗಳನ್ನಾಗಿ ಕಾಣುವ ಬದಲಾಗಿ ಅಂತಹ ಚಹರೆಗಳನ್ನು ಮೌಖಿಕ-ಲಿಖಿತ, ಶ್ರೇಷ್ಠ-ಕನಿಷ್ಠ, ಮೇಲು-ಕೀಳು, ಪ್ರಧಾನ-ಅಧೀನ, ಮಾರ್ಗ-ದೇಶಿ ಎಂಬಿತ್ಯಾದಿ ವೈರುಧ್ಯದ ನೆಲೆಯಲ್ಲಿ ಗುರುತಿಸಲಾಗಿದೆ. ಈಗಾಗಲೇ ನೆಲೆಗೊಂಡಂತಹ ಸಾಂಸ್ಕೃತಿಕ ರಾಜಕಾರಣವು ವಸಾಹತುಶಾಹಿ ಪ್ರಭಾವ ಮತ್ತು ಅನುಭವದ ಕಾರಣದಿಂದ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ತನ್ನ ಪ್ರಾಬಲ್ಯವನ್ನು ಹಿಗ್ಗಿಸಿಕೊಳ್ಳುವ ಹುನ್ನಾರವನ್ನು ಮಾಡುತ್ತಲೇ ಇದೆ.

ಪ್ರಜಾಪ್ರಭುತ್ವದ ಇವತ್ತಿನ ದಿನಗಳಲ್ಲಿಯೂ ಮತ ಪತ್ರಗಳು ಭೌತಿಕ ಅಧೀನತೆಯನ್ನು ನೆಲೆಗೊಳಿಸುವ ಹಾಗೆ, ಭಾಷೆಯು ಬೌದ್ಧಿಕ/ಆಧ್ಯಾತ್ಮಿಕ ಅಧೀನತೆಯನ್ನು ಸಜ್ಜುಗೊಳಿಸುವ ಅಸ್ತ್ರವಾಗಿ ರೂಪಗೊಂಡಿವೆ. ಅಂದರೆ, ಸಾಂಸ್ಕೃತಿಕ ಸಮರ್ಥನೆಗಳನ್ನು ಮುನ್ನೆಲೆಗೆ ತರುವ ಬಹುಮುಖ್ಯ ಮಾಧ್ಯಮ ಭಾಷೆಯಾಗಿರುವುದರಿಂದ ಅದೊಂದು 'ಸಾಂಕೇತಿಕ ಪ್ರಾಬಲ್ಯ'ವನ್ನು ಮೆರೆಯುವ ಅಸ್ತ್ರವೂ ಆಗಿದೆ. ಇಂತಹ ಮಾನದಂಡಗಳ ನೆಲೆಯಲ್ಲಿ 'ಸಾಂಸ್ಕೃತಿಕ ಪಠ್ಯ'ಗಳು ತಮ್ಮ ತಮ್ಮ ಜಾಗಗಳನ್ನು ಪಡೆದುಕೊಳ್ಳುತ್ತಿವೆ ಎಂಬುದು ಗಮನಾರ್ಹ. ಕನ್ನಡ ಸಾಹಿತ್ಯ-ಸಾಂಸ್ಕೃತಿಕ ಚರಿತ್ರೆಯನ್ನು ಧರ್ಮಗಳ ಆಧಾರದಮೇಲೆ ವಿಂಗಡಿಸಿ ನೋಡುವ ಧೋರಣೆಯ ಹಿಂದಿರುವ ಕೈಗಳು ಕೂಡ ಧಾರ್ಮಿಕ ಪ್ರಾಬಲ್ಯದಿಂದ ಕೂಡಿವೆ.

ಸಾಂಸ್ಕೃತಿಕ ರಾಜಕಾರಣಕ್ಕೆ ಬಲಪಶುವಾಗುವ ಯಾವುದೇ ಸಮುದಾಯಗಳ ಸುಪ್ತ ಪ್ರಜ್ಞೆಯಲ್ಲಿಯೇ ಇಂತಹ ರಾಜಕಾರಣಕ್ಕೆ ಒತ್ತಾಸೆಯಾಗುವ ನಿಲುವುಗಳನ್ನು ರೂಪಿಸಲಾಗುತ್ತದೆ. ಇದು ಅವರಾಡುವ ನುಡಿಗಳ ಮೂಲಕವೇ ಹರಡಿಕೊಳ್ಳುತ್ತದೆ. ಅವರ ಭಾಷಿಕ ಚೌಕಟ್ಟಿನಲ್ಲಿಯೇ ಅವರ ಅಸ್ತಿತ್ವದ ನೆಲೆಗಳನ್ನು ಸಾಹಿತ್ಯಿಕ-ಸಾಂಸ್ಕೃತಿಕವಾಗಿ ನಿರಾಕರಿಸುವಂತೆ ಸಾಂಸ್ಕೃತಿಕ ರಾಜಕಾರಣದ ನೆಲೆಗಳನ್ನೂ ಕಸಿಮಾಡಿರುತ್ತಾರೆ. ಪರಿಣಾಮವಾಗಿ, ಆಯಾ ಸಮುದಾಯದ ದಿಟ ಚಹರೆಗಳು ಸಟೆ ಚಹರೆಗಳಾಗಿಯೂ ಸಟೆ ಚಹರೆಗಳು ದಿಟ ಚಹರೆಗಳಾಗಿಯೂ ಬೇರೂರುತ್ತವೆ. ಇದು ಅವರವರ ಸಾಂಸ್ಕೃತಿಕ ಅಸಮಾನತೆಗಳನ್ನು ಒಪ್ಪಿ ನಡೆಯುವ ರೂಢಿಯನ್ನು ಬಲಗೊಳಿಸುವ ತಂತ್ರವಾಗಿದೆ.

ಈಗಷ್ಟೇ ಬೆಂಗಳೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ಜಿ ವೆಂಕಟ ಸುಬ್ಬಯ್ಯನವರು, ಕನ್ನಡ-ಇಂಗ್ಲಿಶ್ ನುಡಿಗಳ ನಡುವಣ ನಂಟು ಮತ್ತು ತಿಕ್ಕಾಟವನ್ನಷ್ಟೇ ಹೇಳಿದರು ಹೊರತಾಗಿ ಕನ್ನಡ-ಸಂಸ್ಕೃತ ನುಡಿಗಳ ನಡುವಣ ತಿಕ್ಕಾಟವನ್ನು ಕುರಿತು ಚಕಾರವನ್ನೂ ಎತ್ತಲಿಲ್ಲ. ಇದು ಸಂಸ್ಕೃತ ನುಡಿ ಪರವಾಗಿರುವರ ಸಾಂಸ್ಕೃತಿಕ ರಾಜಕಾರಣದ ಒಂದು ಗುಣವೆಂದೇ ಹೇಳಬೇಕು. ಎರಡು ನುಡಿಗಳ ನಡುವಣ ನಂಟು ಯಾವಾಗಲೂ ಸಮಾನ ನೆಲೆಯಿಂದ ಇರುವುದಕ್ಕೆ ಸಾಧ್ಯವೇ ಇಲ್ಲ.

ಕನ್ನಡ ಸಾಹಿತ್ಯ ಪರಂಪರೆಯನ್ನು ಕೇವಲ ಜೈನ, ವೀರಶೈವ ಹಾಗೂ ವೈದಿಕ ಎಂದೋ ಅಥವಾ ಪಂಪಯುಗ, ಬಸವ ಯುಗ ಮತ್ತು ಕುಮಾರವ್ಯಾಸಯುಗವೆಂದು ಗುರಿತಿಸಲಾಗಿದೆ. ಸಾಮಾಜಿಕವಾಗಿ ಅತ್ಯಂತ ಪ್ರಬಲವಾಗಿರುವ ಧರ್ಮಗಳ ಅಥವಾ ಆ ಧರ್ಮಗಳ 'ಐಕಾನ್' ಆಗಿರುವ ವ್ಯಕ್ತಿಗಳನ್ನು ಗುರಿಯಾಗಿಟ್ಟುಕೊಂಡು ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟುವ ಬಗೆಯೇ ಅಸಹನೀಯವಾದದ್ದು. ದಿಟ ಕನ್ನಡ ಸಾಹಿತ್ಯ ಚರಿತ್ರೆಯನ್ನು ಬೇರೆ ಬೇರೆ ಕಾವ್ಯಶೈಲಿಗಳ ಆಧಾರದ ಮೇಲೂ ವಿಂಗಡಿಸಲಾಗಿದೆ. ಇಂತಹ ವಿಂಗಡನೆಯಿಂದಲೂ ಏನನ್ನು ಸಾಧಿಸಲಾಗಿದೆ? ಎಂಬ ಸಂದೇಹ ಹಾಗೇ ಉಳಿದಿದೆ. ಕಾರಣ ಇಲ್ಲಿಯೂ ಕೋಮುವಾದದ ನಿಲುವುಗಳೇ ಕೆಲಸ ಮಾಡಿವೆ ಎನ್ನುವುದು ನಿಚ್ಚಳವಾಗಿ ಕಾಣುತ್ತಿವೆ.

ಇಲ್ಲಿ ಅಧಿಕಾರ ಸಂಬಂಧದ ನಿಲುವುಗಳು ಆ ನುಡಿಗಳ ನಡುವಿನ ನಂಟಸ್ಥಿಕೆಯನ್ನು ಸೂಚಿಸುತ್ತವೆ. ಇಂತಹ ನಂಟಸ್ಥಿಕೆಯಲ್ಲಿ ಅಧಿಕಾರದ ಭಾಷೆಯ ಪ್ರಾಬಲ್ಯವೇ ಎಲ್ಲ ಬಗೆಯ ಸಾಹಿತ್ಯಿಕ-ಸಾಂಸ್ಕೃತಿಕ ನಿಲುವುಗಳನ್ನು ನಿರ್ಧರಿಸುತ್ತದೆ. ಇಂತಹ ನಿರ್ಧಾರದ ಸ್ವಾತಂತ್ರ್ಯ ಸಿಕ್ಕಿರುವುದು ಸಂಸ್ಕೃತಕ್ಕೆ ಹೊರತು ಕನ್ನಡಕ್ಕಲ್ಲ. ಸಂಸ್ಕೃತದ ಛದ್ಮವೇಷದಲ್ಲಿಯೇ ಕನ್ನಡ ಕಾಣಿಸುತ್ತಿದೆ. ಸಂಸ್ಕೃತ ತಿಳಿವು, ಸೃಜನಶೀಲ ನಿಲುವುಗಳನ್ನು ಕನ್ನಡದ ಮೂಲಕ ಹರಡಿಸಿರುವ ವರ್ಗಗಳ ವಾರಸುದಾರರೇ, ಇಂಗ್ಲಿಶ್‌ನ ತಿಳಿವು, ಕಾವ್ಯತತ್ವ ಹಾಗೂ ಸೃಜನಶೀಲ ನೆಲೆಗಳು ಕನ್ನಡದ್ದವೇ ಎಂಬಂತೆ ಒಪ್ಪಿಸಿ ನಂಬಿಸಿದರು. ಕನ್ನಡದ ಸಾಹಿತ್ಯ ಹಾಗೂ ಸಂಸ್ಕೃತಿ ನೆಪದಲ್ಲಿ ಇಷ್ಟೆಲ್ಲ ರಾಜಕಾರಣ ನಡದಿದೆ/ನಡಿಯುತ್ತಿದೆ. ಭಾಷಿಕ ತೀರ್ಮಾನಗಳನ್ನು ಕಡೆಗಣಿಸಿ ಸಾಂಸ್ಕೃತಿಕ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಸಾಧ್ಯವಿಲ್ಲ ಎಂಬುದು ಖಚಿತ. ಸಾವಿರಾರುವರುಷಗಳ ಸಾಂಸ್ಕೃತಿಕ ಚರಿತ್ರೆಯನ್ನು ಹೊಂದಿರುವ ಕನ್ನಡ ಸಮುದಾಯವೇ ಇಂತಹ ಬೌದ್ಧಿಕ ಅಧೀನತೆಗೆ ಒಳಗಾಗಿರುವಾಗ ಸಣ್ಣ ಪುಟ್ಟ ನುಡಿಗಳ ಪಾಡು ಹೇಳತೀರದು.

ವೈದಿಕ ಸಂವೇದನೆಯನ್ನೇ ಸಾಹಿತ್ಯವಾಗಿಸುವ ಆ ನೆಲೆಯಿಂದಲೇ ಕನ್ನಡ ಸಾಹಿತ್ಯವನ್ನು ನೋಡುವ ಮಾನದಂಡಗಳನ್ನೂ ರೂಪಿಸಲಾಗಿದೆ. ಕನ್ನಡದ್ದೇ ಕಾವ್ಯಶಾಸ್ತ್ರವನ್ನು ಕಟ್ಟಿಕೊಳ್ಳುವ ಉಸಾಬರಿ ಬೇಡವೇ ಬೇಡ ಎಂಬ ತೀರ್ಮಾನಕ್ಕೂ ಬಂದಂತಿದೆ. ಕನ್ನಡದ್ದೇ ಕಾವ್ಯಶಾಸ್ತ್ರವನ್ನು ಕಟ್ಟಿಕೊಳ್ಳುವ ಪ್ರಯತ್ನ ಮಾಡಿದವರು ತುಂಬಾನೇ ಕಮ್ಮಿ. ಕನ್ನಡ ಸಾಂಸ್ಕೃತಿಕ ಜಗತ್ತನ್ನು ಕಟ್ಟಿಕೊಳ್ಳುವ ಬಗೆಯಲ್ಲಿಯೇ ಇಂತಹ ತೊಡಕುಗಳು ಅಡಗಿರುವುದರಿಂದ ಇದೇ ನಮ್ಮ ಪರಂಪರೆ ಎನ್ನುವ ನಂಬಿಕೆ ಬಲವಾಗಿದೆ. ಇದನ್ನು ನಿರಾಕರಿಸುವ ಅಥವಾ ಇಂತಹ ಪರಂಪರೆಯನ್ನು ಮುರಿದುಕಟ್ಟುವ ಅಗತ್ಯವಿಲ್ಲ ಎಂಬ ಭಾವನೆ ಗಟ್ಟಿಯಾಗಿದೆ. ಯಾಕೆಂದರೆ ಕನ್ನಡಕ್ಕೆ ಸಂಸ್ಕೃತವೇ ತಾಯಿ ಅದು ತನ್ನ ತಾಯ್ತಿತನವನ್ನು ಧಾರೆಯೆರ ದಿರುವುದರಿಂದ ಕನ್ನಡ ಸಾಂಸ್ಕೃತಿಕವಾಗಿ ಬೆಳೆಯಲು ಸಾಧ್ಯ ಎಂಬಂತಹ ನಂಬಿಕೆಗಳ ಕಾರಣದಿಂದಲೇ ಕನ್ನಡದ ಸಾಂಸ್ಕೃತಿಕ ಮೌಲ್ಯ ಕುಗ್ಗುವಂತಾಗಿದೆ.

ಕನ್ನಡ ಸಾಹಿತ್ಯ ಪರಂಪರೆಯನ್ನು ಕೇವಲ ಜೈನ, ವೀರಶೈವ ಹಾಗೂ ವೈದಿಕ ಎಂದೋ ಅಥವಾ ಪಂಪಯುಗ, ಬಸವಯುಗ ಮತ್ತು ಕುಮಾರವ್ಯಾಸ ಯುಗವೆಂದು ಗುರಿತಿಸಲಾಗಿದೆ. ಸಾಮಾಜಿಕವಾಗಿ ಅತ್ಯಂತ ಪ್ರಬಲವಾಗಿರುವ ಧರ್ಮಗಳ ಅಥವಾ ಆ ಧರ್ಮಗಳ 'ಐಕಾನ್'ಆಗಿರುವ ವ್ಯಕ್ತಿಗಳನ್ನು ಗುರಿಯಾಗಿಟ್ಟುಕೊಂಡು ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟುವ ಬಗೆಯೇ ಅಸಹನೀಯವಾದದ್ದು. ದಿಟ ಕನ್ನಡ ಸಾಹಿತ್ಯ ಚರಿತ್ರೆಯನ್ನು ಬೇರೆ ಬೇರೆ ಕಾವ್ಯಶೈಲಿಗಳ ಆಧಾರದ ಮೇಲೂ ವಿಂಗಡಿಸಲಾಗಿದೆ. ಇಂತಹ ವಿಂಗಡನೆಯಿಂದಲೂ ಏನನ್ನು ಸಾಧಿಸಲಾಗಿದೆ? ಎಂಬ ಸಂದೇಹ ಹಾಗೇ ಉಳಿದಿದೆ. ಕಾರಣ ಇಲ್ಲಿಯೂ ಕೋಮುವಾದದ ನಿಲುವುಗಳೇ ಕೆಲಸ ಮಾಡಿವೆ ಎನ್ನುವುದು ನಿಚ್ಚಳವಾಗಿ ಕಾಣುತ್ತಿವೆ. ಸಾಂಸ್ಕೃತಿಕ ಬಹುಳತೆಯ ಸಸಿಗಳನ್ನು ಬಿತ್ತುವ ಬದಲಾಗಿ ಕೋಮುವಾದದ ಕಳೆಗಳನ್ನು ಬಿತ್ತಲಾಗಿದೆ.

ಕನ್ನಡ ಸಾಂಸ್ಕೃತಿಕ ತೋಟದಲ್ಲಿ ಬೆಳೆಗಿಂತ ಕಳೆಯೇ ಜಾಸ್ತಿಯಾಗಿದೆ. ಇಲ್ಲಿ ಕಳೆಯೆಂದು ಏನನ್ನು ಕರೆಯುತ್ತೇನೆ ಎಂದರೆ, ಕನ್ನಡದ ಸಾಂಸ್ಕೃತಿಕ ಕಸುವನ್ನು ಕಿತ್ತುಕೊಂಡು, ಕನ್ನಡಕ್ಕೆ ಹೊರತಾದ ಹಾಗೂ ಕನ್ನಡ ಸೃಜನಶೀಲ ಮನಸ್ಸನ್ನು ಒತ್ತುವರಿ ಮಾಡಿರುವ ಸಂಸ್ಕೃತವನ್ನು. ಇದು ಕನ್ನಡ ಸಂಸ್ಕೃತಿಗೆ ಗೊಬ್ಬರವಾಗಿದೆ ಎನ್ನುವ ಭ್ರಮೆಯಲ್ಲಿ ಶತಮಾನಗಳೆ ಉರಳಿಹೋಗಿವೆ. ಈ ಕಳೆ ಬಿಡಿಸುವ ಹೊಣೆಗಾರಿಕೆ ಯಾರಿಗೆ ಸೇರಿದ್ದು? ಈಗಾಗಲೇ ಇಂತಹ ಹೊಣೆಯನ್ನು ನಿಭಾಯಿಸುತ್ತಿರುವ ಚಿಂತಕರನ್ನು ಹೇಗೆ ಕಾಣುತ್ತಿದ್ದೇವೆ? ಇವತ್ತಿನ ರಾಜಕೀಯ ವಿರಾಟ ದರುಶನ ಮತ್ತು ಖಾಸಗಿ ಮಾಲೀಕರ ಅಟ್ಟಹಾಸದಿಂದ ಕೋಮುಶಕ್ತಿಗಳು ಇನ್ನೂ ಹೆಚ್ಚು ಹೆಚ್ಚು ಉಬ್ಬುತ್ತಿವೆ. ವಿಪರ್ಯಾಸ ಏನೆಂದರೆ, "ಬಿತ್ತಿ ಬೆಳೆಯಿಂ ಸದ್ಭಕ್ತ ಸಸಿಗಳಂ ಕಿತ್ತಿ ಕಳೆಯಿಂ ಪಾಪದ ಕಳೆಗಳಂ" ಎಂದು ಹೇಳಿದ ಹರಿಹರನೂ ಕೋಮು ಪರಂಪರೆಯ ಭಾಗವಾಗಿದ್ದಾನೆ.

ಸಾಂಸ್ಕೃತಿಕ ಬಹುಳತೆಯನ್ನು ಸೀಳಿನೋಡುವ ಮನಸ್ಸುಗಳೇ ಕೋಮುವಾದಿತನದ ರೂಪಕಗಳು. ಚಾರಿತ್ರಿಕ ಕಾಲವನ್ನು ಗುರುತಿಸುವುದಕ್ಕೆ ಬೇರೆ ದಾರಿಯೇ ಇಲ್ಲವೆಂದಲ್ಲ. ಅಂತಹ ತಟಸ್ಥ ದಾರಿಗಳನ್ನು ಕಂಡು ಕೊಳ್ಳುವುದೆಂದರೆ, ಯಾಜಮಾನಿಕೆಯ ಧರ್ಮಗಳ ಅಹಂನ್ನು ನಾಶಪಡಿಸುವುದೆಂರ್ಥ. ಇಂತಹ ದಾರಿಗಳ ಪಯಣ ಸರಳವಲ್ಲ ಎಂಬುದು ಚರಿತ್ರೆಯ ಪಾಠಗಳೇ ಹೇಳುತ್ತವೆ. ಸರ್ವಜ್ಞ, ನೂರೊಂದು ವಿರಕ್ತರು, ಸ್ವರವ ಚನಕಾರರು, ಸೂಫಿಸಂತರು, ಜಾನಪದ-ಮೌಖಿಕ ಕಥನ ಕಾರರು

ಹಾಗೂ ತತ್ವಪದಕಾರರು ಯಾವುದೇ ಸಾಹಿತ್ಯಿಕ ಪಂಗಡಕ್ಕೆ ಸೇರುವುದಿಲ್ಲ. ಆದರೆ ವಾದಿರಾಜತೀರ್ಥ, ನರೇಂದ್ರತೀರ್ಥರು ಕವಿಗಳಲ್ಲದಿದ್ದರೂ ಕಾವ್ಯ ಪರಂಪರೆಗೆ ಸೇರಿದ್ದಾರೆ. ಇದಕ್ಕಿಂತ ಘೋರವಾದದ್ದು ಏನೆಂದರೆ ಕುಮಾರ ವ್ಯಾಸನ ನಂತರದ ನಾಲ್ಕು ಶತಮಾನಗಳ ಕಾಲ ವನ್ನು ಯಾವುದೇ ಸಾಹಿತ್ಯಿಕ ವರ್ಗೀಕರಣಕ್ಕೆ ಸೇರಿಸದೇ ಇರುವುದು. ಇಂತಹ ಸಾಂಸ್ಕೃತಿಕ ವಿಪರ್ಯಾಸಗಳ ನಡುವೆಯೂ ಕ್ಲಾಸಿಕಲ್ ಪಠ್ಯಗಳನ್ನು ಆರಿಸುವ ಹುಂಬತನಕ್ಕೆ ಏನೆಂದು ಕರೆಯಬೇಕು?

ಕನ್ನಡ ಸಾಂಸ್ಕೃತಿಕ ಚೈತನ್ಯವನ್ನು ಎತ್ತಿತೋರಿಸುವ ಎಷ್ಟೊಂದು ಪಠ್ಯ[ಕೃತಿ]ಗಳು, ಕವಿಗಳು ಸಾಹಿತ್ಯ ಪರಂಪರೆಯಿಂದಲೇ ಹೊರಗುಳಿದಿವೆ. ಹಾಗಾದರೆ ಇದರ ಅರ್ಥವೇನು? ಇದಕ್ಕೆ ಸಾಂಸ್ಕೃತಿಕ ರಾಜಕಾರಣದ ಹುನ್ನಾರವೇ ಕಾರಣವೆಂದು ಹೇಳಬೇಕು. ಕನ್ನಡ ಸಾಹಿತ್ಯ ಚರಿತ್ರೆಯನ್ನು ಕಟ್ಟುವ ಕ್ರಮದಲ್ಲಿ 'ನಾವು' ಹಾಗೂ 'ಬೇರೆ' ಎನ್ನುವ ವೈರುಧ್ಯಗಳು ನಿಚ್ಚಳವಾಗಿ ಕಾಣದೇ ಇರಬಹುದು. ಕಾಲಕಳೆದಂತೆ ಇಂತಹ ವೈರುಧ್ಯಗಳ ಉದ್ದೇಶಗಳೇನು ಎಂಬುದು ಕಣ್ಣಿಗೆ ಕುಕ್ಕುತ್ತಿವೆ. ವರ್ಗೀಕರಣದ ಅಸಲಿ ಗುಣವೇ ಬೇಧವನ್ನು ಹುಟ್ಟುಹಾಕುವುದಾಗಿದೆ. ಬೇಧವನ್ನರಿಯದ ವರ್ಗೀಕರಣವೊಂದು ಸಾಧ್ಯವೇ? ಎಂಬ ಕೇಳ್ವಿಯೊಂದು ನ್ಯಾಯಸಮ್ಮತವಾಗಿಯೇ ಕಾಣುತ್ತದೆ. ಚರಿತ್ರೆಯ ಸಮಗ್ರತೆಯನ್ನು ಸೀಳಿ ನೋಡದೇ, ಹಾಗೂ ಯಾವುದೇ ಅಸಮಾನ ನೆಲೆಗಳಿಲ್ಲದೆ, ಇಡಿಯಾಗಿ ಚರಿತ್ರೆಯೊಂದನ್ನು ಅದರ ಕಾಲಮಾನದ ನೆಲೆಯಿಂದ ಕಟ್ಟದರೆ ಹೇಗೆಂಬುದನ್ನು ಕುರಿತು ಚರ್ಚಿಸಬೇಕಿದೆ. ಹಲವು ಪರಂಪರೆಗಳನ್ನು ಒಳಗೊಂಡಿರುವ ದೇಶವೊಂದರ ಚಾರಿತ್ರಿಕ ನಿಲುವುಗಳು ಸಾಂಸ್ಕೃತಿಕ ಬಹುಳತೆಯ ನೆಲೆಗಳನ್ನು ಎತ್ತಿತೋರಿಸುವ ಬಗೆಗಳಾಗಿರಬೇಕು.

ಇದೊಂದು ಕೇವಲ ಸಾಂಸ್ಕೃತಿಕವಾಗಿ ನೆಲೆನಿಲ್ಲುವವರ ತುಡಿತ ಮಾತ್ರವೆಂದು ತಿಳಿದರೆ ತಪ್ಪಾಗುತ್ತದೆ. ಅನನ್ಯತೆಯ ರಾಜಕಾರಣದಲ್ಲಿ ಸಾಂಸ್ಕೃತಿಕ ಚಹರೆಗಳಿಗೆ ಎಷ್ಟೊಂದು ಮಹತ್ವವಿದೆ ಎನ್ನುವುದು ಆ ಬಗೆಯ ರಾಜಕೀಯತೆಯನ್ನು ರೂಪಿಸುವವರಿಗೆ ಗೊತ್ತಿರುತ್ತದೆ. ಇವು ಕೆಲವೇ ಕೆಲವು ಜನರ ಭಾಷಿಕ ಹಾಗೂ ಸಾಂಸ್ಕೃತಿಕ ಚಹರೆಗಳನ್ನು ಮಾತ್ರ ಸಾರ್ವತ್ರಿಕರಣಗೊಳಿಸುತ್ತವೆ. ಇಂತಹ ಹುನ್ನಾರವನ್ನು ಮಾಡುವುದೇ ಅವರ ಸಾಂಸ್ಕೃತಿಕ ಹೊಣೆಗಾರಿಕೆಯಾಗಿ ತೋರಿಸುತ್ತಾರೆ. ಕನ್ನಡ ನುಡಿಯನ್ನೇ ತಮ್ಮ ಬದುಕಿನ ಏಳ್ಗೆಗಾಗಿ ನಂಬಿಕೊಂಡಿರುವ ಬಹುಜನರಿಗೆ ಮಣ್ಣೆರಚುವ ತಂತ್ರವೂ ಇಂತಹದೊಂದು ಕ್ರಮದಲ್ಲಿ ಅಡಕಗೊಂಡಿರುತ್ತದೆ. ಇದು ಕೇವಲ ಭಾಷಿಕ–ಸಾಂಸ್ಕೃತಿಕ ಪ್ರಶ್ನೆಗಳನ್ನು ಎದುರಾಗುವ ಬಗೆಯನ್ನು ಮಾತ್ರ ಚರ್ಚಿಸದೇ, ಅಂತಹ ಸಮುದಾಯಗಳ ಅಸ್ತಿತ್ವದ ನೆಲೆಗಳನ್ನು 'ಸಾಂಸ್ಕೃತಿಕ ಚಹರೆ'ಗಳನ್ನಾಗಿ ಗುರುತಿಸುವದು ಹೇಗೆಂಬುದನ್ನು ಹುಡಕಬೇಕಿದೆ. ಚಾರಿತ್ರಿಕವಾಗಿ ರೂಪಗೊಂಡ ಯಜಮಾನ್ಯದ ನೆಲೆಗಳೇ ಕಾಲಕಳೆದಂತೆ 'ನಮ್ಮ ಅಸ್ಮಿತೆ'ಯ ಗುರುತುಗಳಾಗಿ ರೂಪಾಂತರಗೊಳ್ಳುತ್ತವೆ.

ಬಹುಜನರ ಅಸ್ತಿತ್ವವನ್ನೇ ಕಡೆಗಣಿಸುವ ಇಂತಹ ಸಾಂಸ್ಕೃತಿಕ ನಂಬಿಕೆಗಳು ಎಷ್ಟೊಂದು ಅಪಾಯಕಾರಿ!. ಕ್ಲಾಸಿಕಲ್ ಪಠ್ಯಗಳು ಕೂಡ ಇಂತಹ ಅಪಾಯವನ್ನು ಇನ್ನಷ್ಟು ಹಿಗ್ಗಿಸುವ ತಂತ್ರಗಳಾಗಿವೆ. ಸಾಂಸ್ಕೃತಿಕ ಹೊಣೆಗಾರಿಕೆಯ ನೆಪದಲ್ಲಿ ಇಂತಹ ಅಪಾಯಗಳನ್ನು ಎಸಗುವ ಸಾಧ್ಯತೆಯನ್ನು ಕನ್ನಡ ವಿದ್ವತ್‌ಲೋಕ ಮನಗಾಣಬೇಕಿದೆ. ವಿಪರ್ಯಾಸ ಏನೆಂದರೆ, ಚರಿತ್ರೆಯ ಒಡಲಲ್ಲಿಯೇ ಇಂತಹ ಅಸಮಾನತೆಗಳು ಅಡಕಗೊಂಡಿರುತ್ತವೆ. ಯಾವ ಕಾರಣಕ್ಕಾಗಿ ಕೆಲವು ಪಠ್ಯಗಳು ಹೆಸರು ಮಾಡಿರುವವೋ ಅದೇ ಕಾರಣಕ್ಕಾಗಿ ಇನ್ನೂ ಕೆಲವು ಪಠ್ಯಗಳು ಕನ್ನಡ ಸಾಹಿತ್ಯ ಪರಂಪರೆಯನ್ನು ಬಿಂಬಿಸುವ ಸೂಚಕಗಳಾಗದೇ ಇರುವುದು ವಿಪರ್ಯಾಸವೇ ಸರಿ. **ದೇವಚಂದ್ರನ 'ರಾಜಾವಳಿ ಕಥೆ' ಬ್ರಹ್ಮಶಿವನ 'ಸಮಯ ಪರೀಕ್ಷೆ' ಅಂಡಯ್ಯನ 'ಕಬ್ಬಿಗರ ಕಾವಂ' ಹಾಗೂ ನಯಸೇನನ 'ಧರ್ಮಾಮೃತ'**ದಂತಹ ಪಠ್ಯಗಳು ಪ್ರತಿ ಸಂಸ್ಕೃತಿಯ ಅಸ್ಮಿತಿಯನ್ನು ಸೂಚಿಸುವ ರೂಪಕಗಳಾಗುವ ಬದಲಾಗಿ ಹೊತ್ತು ಹೋಗುವ ಪ್ರಯತ್ನಗಳಂತೆ ಕಾಣಲಾಗಿದೆ. ಪ್ರಭುತ್ವದ ಹಿರಿಮೆಯನ್ನು ಬಣ್ಣಿಸುವ, ಪ್ರಭುತ್ವದ ಪರವಾಗಿರುವ ಜನರನ್ನೇ 'ಸಾಂಸ್ಕೃತಿಕ ನಾಯಕ' ಅಥವಾ 'ಲಾಂಛನ'ಗಳನ್ನಾಗಿಸುವ/ಸಿದರ ಹುನ್ನಾರಕ್ಕೆ ಏನು ಕಾರಣಗಳೆಂಬುದನ್ನು ಕುರಿತು ಮರು ಚರ್ಚಿಸಬೇಕಿದೆ.

ಕ್ಲಾಸಿಕಲ್ ಎಂಬ ಪರಿಕಲ್ಪನೆಯನ್ನು ಯಾವ ನೆಲೆಯಿಂದ ವ್ಯಾಖ್ಯಾನಿಸಿದರೆ ಯಾರ ಪರಗಾಗಿರುತ್ತೇ ಎಂಬ ರಾಜಕೀಯ ವಿವೇಕ ಇದರ ಹಿಂದೆ ಕೆಲಸ ಮಾಡುತ್ತದೆ. ಯಾಕೆಂದರೆ, ಕ್ಲಾಸಿಕಲ್ ಎನ್ನುವ ಪರಿಕಲ್ಪನೆಯನ್ನೇ ಯಾವುದೇ ಪ್ರಭಾವಕ್ಕೊಳಗಾಗದ, ಸೃಜನಶೀಲ–ಸೋಪಜ್ಞತೆಯನ್ನು ಮರೆಯುವ ಎಂಬಿತ್ಯಾದಿಯಾಗಿ ನಿರ್ವಚಿಸಲಾಗಿದೆ. ಸಾಂಸ್ಕೃತಿಕ ಕೊಡುಕೊಳ್ಳುವಿಕೆಯಲ್ಲಿ ಇದೆಲ್ಲ ಸಾಧ್ಯವೇ? ಎನ್ನುವ ಗುಮಾನಿ ಇದ್ದೇ ಇರುತ್ತದೆ. ಆ ಕಾರಣಕ್ಕಾಗಿ 'ಕ್ಲಾಸಿಕಲ್'ಎನ್ನುವುದೇ ಒಂದು ಹುಸಿಕಲ್ಪನೆ [ಮಿಸ್‌ನಾಮರ್] ಎಂದು ಹೇಳಬೇಕಾಗುತ್ತದೆ. ನಾನು ಈಗಾಗಲೇ ಆರಂಭದಲ್ಲಿ ಸೂಚಿಸಿದಂತೆ, ಆ ಚಿಂತಕರು ಕೇಳಿದ ಕೇಳ್ವಿಗೆ ನನ್ನ ಬದಿಲು ಏನಾಗಿತ್ತೆಂದರೆ, ಕನ್ನಡದ ಚೈತನ್ಯವನ್ನು ಮರೆಯುವ ಪ್ರತಿಯೊಂದು ಪಠ್ಯವೂ ಕೂಡ ಕ್ಲಾಸಿಕಲ್ ಆಗಿರುತ್ತದೆ ಎನ್ನುವುದಾಗಿತ್ತು. ಇದಕ್ಕೆ ಆ ಚಿಂತಕರು ಇದು ತಪ್ಪಿಸಿಕೊಳ್ಳುವ ಪ್ರಯತ್ನ ಎಂದು ಪ್ರತಿಕ್ರಿಯಿಸಿದರು. ದಿಟ, ಅದು ಕೇವಲ ತಕ್ಷಣದ ಪ್ರತಿಕ್ರಿಯೆಯಾಗಿತ್ತು.

ಅನನ್ಯತೆಯ ರಾಜಕಾರಣದಲ್ಲಿ ಸಾಂಸ್ಕೃತಿಕ ಚಹರೆಗಳಿಗೆ ಎಷ್ಟೊಂದು ಮಹತ್ವವಿದೆ ಎನ್ನುವುದು ಆ ಬಗೆಯ ರಾಜಕೀಯತೆಯನ್ನು ರೂಪಿಸುವವರಿಗೆ ಗೊತ್ತಿರುತ್ತದೆ. ಇವು ಕೆಲವೇ ಕೆಲವು ಜನರ ಭಾಷಿಕ ಹಾಗೂ ಸಾಂಸ್ಕೃತಿಕ ಚಹರೆಗಳನ್ನು ಮಾತ್ರ ಸಾರ್ವತ್ರಿಕರಣಗೊಳಿಸುತ್ತವೆ. ಇಂತಹ ಹುನ್ನಾರವನ್ನು ಮಾಡುವುದೇ ಅವರ ಸಾಂಸ್ಕೃತಿಕ ಹೊಣೆಗಾರಿಕೆಯಾಗಿ ತೋರಿಸುತ್ತಾರೆ. ಕನ್ನಡ ನುಡಿಯನ್ನೇ ತಮ್ಮ ಬದುಕಿನ ಏಳ್ಗೆಗಾಗಿ ನಂಬಿಕೊಂಡಿರುವ ಬಹುಜನರಿಗೆ ಮಣ್ಣೆರಚುವ ತಂತ್ರವೂ ಇಂತಹದೊಂದು ಕ್ರಮದಲ್ಲಿ ಅಡಕಗೊಂಡಿರುತ್ತದೆ. ಇದು ಕೇವಲ ಭಾಷಿಕ–ಸಾಂಸ್ಕೃತಿಕ ಪ್ರಶ್ನೆಗಳನ್ನು ಎದುರಾಗುವ ಬಗೆಯನ್ನು ಮಾತ್ರ ಚರ್ಚಿಸದೇ, ಅಂತಹ ಸಮುದಾಯಗಳ ಅಸ್ತಿತ್ವದ ನೆಲೆಗಳನ್ನು 'ಸಾಂಸ್ಕೃತಿಕ ಚಹರೆ'ಗಳನ್ನಾಗಿ ಗುರುತಿಸುವದು ಹೇಗೆಂಬುದನ್ನು ಹುಡಕಬೇಕಿದೆ.

ಹಾಗಂತ ಅವರು ಕೇಳಿದ ಕೇಳ್ವಿಯಿಂದ ತಪ್ಪಿಸಿಕೊಳ್ಳುವ ತಂತ್ರ ಅದಾಗಿರಲಿಲ್ಲ. ಅದು ಅವರ ಕೇಳ್ವಿ ನನ್ನಲ್ಲಿ ಹುಟ್ಟಿಸಿದ ಮುಜುಗರದಿಂದ ಅಂತಹದೊಂದು ಹಾರಿಕೆಯ ಬದಿಲನ್ನು ಹೇಳಬೇಕಾಗಿತ್ತು. ಕಾರಣ ಕ್ಲಾಸಿಕಲ್ ಅನ್ನುವ ಪರಿಕಲ್ಪನೆಯ ಬಗೆಗೇ ನನಗೆ ಸಹಮತವಿಲ್ಲ. ಅದನ್ನು ಸಮರ್ಥಿಸುವುದಕ್ಕೆ ಬೇಕಾದ ತಾತ್ವಿಕ ಸಮರ್ಥನೆಗಳನ್ನು ಆ ಚಿಂತಕರಷ್ಟೇ ಅಲ್ಲ ಬೇರಾರು ಅಂತಹ ಸಮರ್ಥನೆಗಳನ್ನು ಕೊಡಲಾರರು ಎಂಬುದು ನನ್ನ ಬಲವಾದ ನಂಬಿಕೆ. ಇದು ಭಿನ್ನಾಭಿಪ್ರಾಯಗಳಿಗೆ ಮಾತ್ರ ಸಂಬಂಧಿಸಿದ್ದೆಂದು ಹೇಳಲಾರೆ! ಕ್ಲಾಸಿಕಲ್ ಪಠ್ಯಗಳನ್ನು ಗುರುತಿಸುವ ನಂಬಿಕೆಗಳು ಯಾವುದೇ ಒಬ್ಬ ವ್ಯಕ್ತಿ ಅಥವಾ ಚಿಂತಕನಿಗೆ ಮಾತ್ರ ಸಂಬಂಧಿಸದವು ಎಂದು ಹೇಳುವುದು ಸರಿಯಲ್ಲ. ಆ ಕೆಲಸವನ್ನು ಮಾಡುವ ಒಂದು ದೊಡ್ಡ ವಿದ್ವತ್‌ಪಡೆಯೇ ಇದೆ. ಇವರು ರೂಪಿಸುವ ಸಾಂಸ್ಕೃತಿಕ ರಚನೆಗಳು ಕೇವಲ ವ್ಯತ್ಯಾಸವನ್ನು ಅರಿಯುವ ಬಗೆಗಳಾಗದೆ ತರತಮ ನೆಲೆಗಳನ್ನು ಹುಟ್ಟುಹಾಕುವ ಮಾದರಿಗಳಾಗಿರುತ್ತವೆ. ಇಂತಹ ವ್ಯತ್ಯಾಸಗಳನ್ನು ಆಯಾ ಸಮುದಾಯಗಳ ಸಾಂಸ್ಕೃತಿಕ ಗುರುತುಗಳನ್ನಾಗಿ ನೋಡಬೇಕಾಗುತ್ತದೆ.

ಇಂತಹ ನಂಬಿಕೆಗಳನ್ನು ಗಟ್ಟಿಗೊಳಿಸುವ ಪ್ರಯತ್ನಗಳು ಸಾಂಸ್ಕೃತಿಕ ರಾಜಕಾರಣದ ಗುರಿಗಳಾದರೆ ಮಾತ್ರ ಯಾವುದೇ ವರ್ಗ, ಧರ್ಮ, ಭಾಷೆಗಳು ಮಾಡುವ ಹುನ್ನಾರವನ್ನು ಎದುರಿಸುವ ಕಸುವು ಸಮುದಾಯಗಳಿಗೆ ಸಿಗುತ್ತದೆ. ಯಾವುದೇ ಒಂದು ಸಂದರ್ಶನದಲ್ಲಿ ಯಾರೋ ಚಿಂತಕರೊಬ್ಬರ ಯಾವುದೋ ಒಂದು ಕೇಳ್ವಿಗೆ ಇಷ್ಟೊಂದು ಚರ್ಚಿಸುವ ಜರೂರೇನಿದೆ ಎಂದು ಅನ್ನಿಸಬಹುದು. ಇಂತಹ ಸಾಂಸ್ಕೃತಿಕ ತೀರ್ಮಾನಗಳನ್ನು ಕೈಗೊಳ್ಳುವ ಮನಸ್ಥಿತಿಯೊಂದು ಸುಪ್ತಪ್ರಜ್ಞೆಯಲ್ಲಿ ಹುದುಗಿರುತ್ತದೆ. ಇವು ಸಹಜ ನೆಲೆಗಳಾಗಿ ರೂಪಗೊಳ್ಳುವುದಷ್ಟೇ ಅಲ್ಲ, ಈಗಾಗಲೇ ನೆಲೆಗೊಂಡಿರುವ ಅಸಮಾನತೆಗಳನ್ನು ಸಹಜವೆಂದು ಒಪ್ಪಿ ನಡೆಯುವ ಮನಸ್ಥಿತಿಗೆ ಕಾರಣವಾಗುತ್ತವೆ. ಹೊತ್ತು ಹೋಗುವುದಕ್ಕಾಗಿಯೇ ನಡೆಯುವ ಸಂದರ್ಶನಗಳಲ್ಲಿ ಕೇಳಿದ ಒಂದು ಕೇಳ್ವಿ ನನ್ನನ್ನು ತೀವ್ರವಾಗಿ ಕಾಡಿದ್ದಕ್ಕಾಗಿ ಇಷ್ಟೊಂದು ಮಾತುಗಳನ್ನು ಹೇಳುವ ಅಗತ್ಯದ ಜೊತೆಗೆ ಇದೊಂದು ಸಾಂಸ್ಕೃತಿಕ ಸವಾಲಾಗಿ ಕಂಡಿದೆ. ಈ ಬಗೆಯ ಸವಾಲುಗಳಿಗೆ ಯಾವೆಲ್ಲ ಬಗೆಯ ಹಿನ್ನಲೆ ಇರುತ್ತದೆ ಎಂಬುದನ್ನು ಬಿಡಿಸಿ ನೋಡಬೇಕಾಯ್ತು. ಅದನ್ನು ಖಚಿತಪಡಿಸಿಕೊಳ್ಳುವ ಇರಾದೆಯಿಂದಲೇ ಈ ಟಿಪ್ಪಣೆಯನ್ನು ಬರೆದಿರುತ್ತೇನೆ. □

ಬೆತ್ತಲೆ ದೇಹ ಕಾಮದ ಸಂಕೇತವೇ?



-೧೨-

ಜ್ಯೋತಿ ಗುರುಪ್ರಸಾದ್

ಭಾರತೀಯ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿರುವ 'ನಿಷ್ಕಾಮ ಕರ್ಮ' ಎಂಬ ಮಾತು ಕೂಡ ಕಾಮವನ್ನು ಸದುದ್ದೇಶದಿಂದ ತೊಡಗಿಸಿಕೊಳ್ಳುವ ಸಮತೋಲನ ಸ್ಥಿತಿಗೆ ಸಂಬಂಧಿಸಿದ್ದಾಗಿದೆ. ಕಾಮವನ್ನು ಅರಿತು ಅದನ್ನು ಮೀರುವ ಸಹಜ ಘಟ್ಟದಲ್ಲಿ ಮಾತ್ರ ಸನ್ಯಾಸಾಶ್ರಮದ 'ತ್ಯಾಗ'ದ ಘಟ್ಟ ಉದ್ಭವವಾಗುತ್ತದೆ. ಇದು ಬರೀ ಕೇಸರಿ ಉಡುಪನ್ನು ತೊಟ್ಟ ಮಾತ್ರಕ್ಕೆ ಹೃದಯಕ್ಕೆ ಅಂಟಿಕೊಂಡುಬಿಡುವ ತ್ಯಾಗದ ಗುಣವಾಗಿ ಬಿಡುವುದಿಲ್ಲ. ಸ್ವಲ್ಪವೂ ತಾರತಮ್ಯವಿಲ್ಲದೆ ಸಮಗ್ರತೆಯ ಒಳಿತನ್ನು ಬಯಸುವ ಋಷಿ ಸದೃಶ್ಯ ಹೃದಯಗಳಿಂದ ಮಾತ್ರ ಕೇಸರಿ ಬಣ್ಣಕ್ಕೆ ಬೆಳಕು ಬರುತ್ತದೆ

ಕಾಮ ಪುರುಷಾರ್ಥಗಳಲ್ಲಿ ಒಂದು ಎಂಬ ಮಾತು ಅದು ಜೀವನದ ಅವಿಭಾಜ್ಯ ಅಂಗವಾಗಿರುವ ಜೀವಕ್ಕೆ ಜೀವವಾಗಬಲ್ಲ ಧಾತು ಎಂಬ ಒಂದೇ ಕಾರಣಕ್ಕೆ. 'ಕಾಮ' ಎಂದರೆ ಸಹಜ ಸ್ವಾಭಾವಿಕವಾಗಿರುವ ಬಯಕೆ. ಮನುಷ್ಯನಲ್ಲಿ ಅದು ಪ್ರೇಮದ ಕಲಾತ್ಮಕ ಒಂದು ಚೌಕಟ್ಟನ್ನು ಪಡೆದುಕೊಂಡು ಮಾತ್ರ ಉನ್ನತಮಟ್ಟಕ್ಕೇರುತ್ತದೆ. ಪ್ರಾಣಿಗಳಲ್ಲಿ ಹಸಿವು-ನೀರಡಿಕೆ-ಮೈಥುನಗಳ ಪ್ರಕೃತಿದತ್ತ ಚಟುವಟಿಕೆಗಳು ನಿಸರ್ಗ ಧರ್ಮಕ್ಕನುಗುಣವಾಗಿ ಯಾವ ಸಂಕೀರ್ಣತೆಯೂ ಇಲ್ಲದೆ ತನ್ನಷ್ಟಕ್ಕೆ ನಡೆದುಕೊಂಡು ಹೋಗುತ್ತಿರುತ್ತದೆ. ಅವುಗಳಿಗೆ ಮನುಷ್ಯ ಬುದ್ಧಿಯ ವಿಶೇಷ ಚಕ್ಷುಗಳಿಲ್ಲದೇ ಇರುವುದರಿಂದ ಸುಳ್ಳಾಗಲೀ ದುರಾಸೆಯಾಗಲೀ ಸುಳಿಯದಿರುವ ಹಾಗೆ 'ಚಿಂತನೆ' ಎಂಬ ಪ್ರತ್ಯೇಕ ವ್ಯಕ್ತಿತ್ವವೂ ಇಲ್ಲದೆ ದಿನ-ರಾತ್ರಿಗಳನ್ನು ಬಂದಂತೆ ಸ್ವೀಕರಿಸುತ್ತ ಹಾಯಾಗಿರುತ್ತವೆ. ಆದರೆ ಅವುಗಳ ಜೀವನದಲ್ಲೂ ETHICS ಎಂಬುದೊಂದು ಇರುತ್ತದೆ-ಹಾಗೆಂದು ಅವುಗಳಿಗೆ ಗೊತ್ತಿಲ್ಲದೆ! ಪ್ರಾಣಿಗಳಲ್ಲೇ 'ಉತ್ತಮ ಪ್ರಾಣಿ'ಯೆಂದು ಹೆಸರು ಹೊತ್ತಿರುವ ಮನುಷ್ಯ ಮಾತ್ರ 'ಕಾಮಿತಾರ್ಥ'ಗಳನ್ನು ಬುದ್ಧಿಬಲದಿಂದ ವಿಪರೀತವಾಗಿ ಕಲ್ಪಿಸಿಕೊಂಡು ವಾಸ್ತವವನ್ನು ಮರೆಯುವಾಗ ಮಾತ್ರ 'ಕಾಮ' ವಿರೂಪವಾಗುತ್ತದೆಯೇ ಹೊರತು ಇದೇ ಮನುಷ್ಯ ಮನೋವಿಕಾಸದಿಂದ-ವಿದ್ಯೆಯಿಂದ-ಸಂಸ್ಕೃತಿಯಿಂದ-ಕಲೆಯ ಆಸರೆಯಿಂದ ಮಾನವೀಯವಾಗಿಯೇ ವರ್ತಿಸಿದರೆ 'ಕಾಮ'ವೆಂಬುದು ತನ್ನ ಸೌಂದರ್ಯದ ಪ್ರಭೆಯನ್ನು ಉಳಿಸಿಕೊಂಡು ಪುರಾಣ ಕಾವ್ಯದಲ್ಲಿ ಬರುವ ಕಾಮದೇವತೆ ರತಿ-ಮನ್ಮಥರನ್ನು ಧರೆಗಿಳಿಸುತ್ತದೆ. ಅಡಮ್ ಮತ್ತು ಈವ್ ರ ಮೊದಲ ಪಾಪದಿಂದ ಪ್ರಪಂಚದ ಮೊದಲ ತಂದೆ-ತಾಯಿ ಹುಟ್ಟಿದ ಕಥೆಯನ್ನೂ ಹೇಳುತ್ತ ಮನುಷ್ಯ ಸಾಮಾಜಿಕ ಸುಭದ್ರತೆಗೆ ನಿರ್ಮಿಸಿ ಕೊಂಡ ಎಲ್ಲ ಅನಿವಾರ್ಯ ಕಲ್ಪನೆಗಳನ್ನೂ ಕಾಲಕ್ಕನುಗುಣವಾಗಿ ಹೇಳುತ್ತಾ ಹೋಗುತ್ತದೆ. ನಾನಿಲ್ಲಿ ಸೂಚ್ಯವಾಗಿ ಮಾತ್ರ 'ಕಾಮ'ದ ಅಂತರಾಳಕ್ಕೆ ಸಂಬಂಧಿಸಿದ ವಿವೇಚನೆಯನ್ನು ಗಣನೆಗೆ ತಂದುಕೊಂಡು ಸದ್ಯದ ಪರಿಸ್ಥಿತಿಯಲ್ಲಿ ಅಭಾಸವಾಗಿ ಕಾಣುತ್ತಿರುವ ಸಮುದಾಯಕ್ಕೆ ಮಾರಕವಾಗಿ ಕಾಣುತ್ತಿರುವ ಕೆಲವು ವಿರೂಪಗಳನ್ನು ಮಾತ್ರ ವಿಶ್ಲೇಷಿಸಿ ಪ್ರಶ್ನಿಸಬಯಸುತ್ತೇನೆ.

ಭಾರತೀಯ ಸಂಸ್ಕೃತಿಯಲ್ಲಿ ಹಾಸು ಹೊಕ್ಕಾಗಿರುವ 'ನಿಷ್ಕಾಮ ಕರ್ಮ' ಎಂಬ ಮಾತು ಕೂಡ ಕಾಮವನ್ನು ಸದುದ್ದೇಶದಿಂದ ತೊಡಗಿಸಿಕೊಳ್ಳುವ ಸಮತೋಲನ ಸ್ಥಿತಿಗೆ ಸಂಬಂಧಿಸಿದ್ದಾಗಿದೆ. ಕಾಮವನ್ನು ಅರಿತು ಅದನ್ನು ಮೀರುವ ಸಹಜ ಘಟ್ಟದಲ್ಲಿ ಮಾತ್ರ ಸನ್ಯಾಸಾಶ್ರಮದ 'ತ್ಯಾಗ'ದ ಘಟ್ಟ ಉದ್ಭವವಾಗುತ್ತದೆ. ಇದು ಬರೀ ಕೇಸರಿ ಉಡುಪನ್ನು ತೊಟ್ಟ ಮಾತ್ರಕ್ಕೆ ಹೃದಯಕ್ಕೆ ಅಂಟಿಕೊಂಡುಬಿಡುವ ತ್ಯಾಗದ ಗುಣವಾಗಿ ಬಿಡುವುದಿಲ್ಲ. ಸ್ವಲ್ಪವೂ ತಾರತಮ್ಯವಿಲ್ಲದೆ ಸಮಗ್ರತೆಯ ಒಳಿತನ್ನು ಬಯಸುವ ಋಷಿ ಸದೃಶ್ಯ ಹೃದಯಗಳಿಂದ ಮಾತ್ರ ಕೇಸರಿ ಬಣ್ಣಕ್ಕೆ ಬೆಳಕು ಬರುತ್ತದೆ. ಇದಕ್ಕೆ ನಮ್ಮ ಬುದ್ಧನಿಗಿಂತ ಅಗ್ರಗಣ್ಯ ಉದಾಹರಣೆ ಬೇರೆ ಬೇಕೇ? "ಬಹುಜನ ಸುಖಾಯ ಬಹುಜನ ಹಿತಾಯ" ಎಂಬ ತಾರಕ ಮಂತ್ರವನ್ನು ಜೀವನವಾಗಿಸಿಕೊಂಡ ಬುದ್ಧ ಇಡೀ ಸಮುದಾಯದ ಒಳಿತನ್ನು ಬಯಸಿ ತನ್ನ ರಾಜಪದವಿಯನ್ನೇ ತ್ಯಾಗ ಮಾಡಿ ಆಸ್ತಿಯನ್ನಾಗಿ ಯಾವುದನ್ನೂ ಸಂಗ್ರಹಿಸದೆ ತನ್ನ ವಿದ್ಯೆಯನ್ನು ಜನರ ಕಣ್ಣು ತೆರೆಸಲು ದಾನ ಮಾಡಿ ಜನರ ಮನೆಮನೆಗೂ ಭಿಕ್ಷುವಾಗಿ ಅಲೆದು ಬದುಕುವ ದಾರಿಯ ಮಧ್ಯಮಮಾರ್ಗವನ್ನು ಅಹಿಂಸೆಯ ಮೂಲಕ ತೋರಿಸಿ ಕೊಟ್ಟು 'ತಂದೆ'ಯ ಅರ್ಥದ ಸಾತ್ವಿಕತೆಗೆ ಮಾದರಿಯಾದವನು. ಹಾಗೆಯೇ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದರಂಥ ಸಂತರು ಆಧ್ಯಾತ್ಮಿಕತೆಯ ನಿಜ ದಾರಿಯಲ್ಲಿ ನಿರಪೇಕ್ಷವಾಗಿ ನಡೆದು ಕಾಮವನ್ನು ಮೀರಿ ಇಡೀ ಸಮುದಾಯದ ಹಿತವನ್ನು ಬಯಸುತ್ತ ತಮ್ಮ ಚಿಂತನೆಗಳನ್ನು ಸಾಡಿಸುದ್ದಗಲಕ್ಕೂ ಕ್ರಿಯಾಶೀಲವಾಗಿ ಹರಡಿ ಜನತೆಯನ್ನು ಎಚ್ಚರದ ತಂತುವಿನಲ್ಲಿ ಬೆಸೆದು ಭ್ರಷ್ಟರಾಗದಂತೆ ನೈತಿಕ ಪ್ರಜ್ಞೆಯಾಗಿದ್ದರು.

ಯಾಕೆಂದರೆ ಸ್ವತಃ ಆ ಸಂತರುಗಳು ಯೋಗಿಗಳಾಗಿದ್ದರು. ಯೋಗವೆಂದರೆ ಬರೀ ದೈಹಿಕ ಕಸರತ್ತಲ್ಲ. ಅಂತರಂಗ ಶುದ್ಧಿಯಿಂದ ಮನಸ್ಸನ್ನು ಸ್ವಸ್ಥವಾಗಿ ದೇಹದಲ್ಲಿ ತೊಡಗಿಸಿಕೊಂಡು ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡು ಒಳಿತಿಗಾಗಿ ಧ್ಯಾನಿಸುವಿಕೆ. ಇಂಥ ಧ್ಯಾನದಲ್ಲಿ ಧ್ಯಾನಿಯ ಸುತ್ತಲಿನ ಪ್ರಭೆಯ ಸತ್ಯದಿಂದ ಆತನಿಗೂ-ಸಮುದಾಯಕ್ಕೂ ಒಟ್ಟಾಗಿ ಒಳಿತಾಗುವ ಸಾಧ್ಯತೆಯಿರುತ್ತದೆ. ಬಸವಣ್ಣ-ಗಾಂಧೀಜಿ ಎಲ್ಲಾ ಕಾವಿಯ ಕೇಸರಿ ಉಡುಪುತೊಡದೆಯೂ ಕೂಡ ಆ ಬಣ್ಣ ಪ್ರತಿನಿಧಿಸಬಲ್ಲ ತ್ಯಾಗ-ವೈರಾಗ್ಯ-ಆಧ್ಯಾತ್ಮಿಕ ಮೌಲ್ಯಗಳಿಗೆ ಮಾದರಿಯಾಗಿದ್ದರು, ಗಾಂಧೀಜಿ ಭಾರತವನ್ನು ಬ್ರಿಟಿಷರ ಗುಲಾಮಗಿರಿಯಿಂದ ಮುಕ್ತಗೊಳಿಸಲು ಇಡೀ ದೇಶದ ಸ್ವಾತಂತ್ರ್ಯದ ಕಾಮನೆಯಿಂದ ಅರೆ ಬೆತ್ತಲೆಯಾಗಿ ಸತ್ಯಾಗ್ರಹ ಕೂತರು. ಅರ್ಥಾತ್ ಸತ್ಯದ ಆಂತರಿಕ ಶಕ್ತಿಯಿಂದ-ಸತ್ಯವನ್ನು ಆಗ್ರಹಿಸಿ ಅಹಿಂಸೆಯಿಂದ ಯೋಗಿಯಾಗಿ ಚರಕದಲ್ಲಿ ಸ್ವದೇಶೀ ನೂಲನ್ನು ನೂಲುತ್ತಲೇ ಇಡೀ ದೇಶವನ್ನು ದಾಸ್ಯದ ಭ್ರಷ್ಟತೆಯಿಂದ ಪಾರು ಮಾಡಲು ಜೀವನವನ್ನೇ ಮುಡಿಪಾಗಿಟ್ಟು ಹೋರಾಡಿದರು. 'ಸತ್ಯಾಗ್ರಹ' ಎಂಬ ಪದವನ್ನು 'ಉಪವಾಸ'ಕ್ಕೆ ಪರ್ಯಾಯವಾಗಿ ಹುಟ್ಟು ಹಾಕಿ ತಾವು ಸರಳವಾದ ಆಶ್ರಮದ ಜೀವನವನ್ನು ನಡೆಸಿದರು. ಅವರ ಜೀವನ ಶೈಲಿಯೇ ಜನತೆಗೆ ಮಾದರಿಯಾಗಿತ್ತು.

ತಪ್ಪೆಂದು ಗೊತ್ತಾಗಿದ್ದನ್ನು ತಿದ್ದಿಕೊಳ್ಳುವ ಮತ್ತು ಸತ್ಯದ ಪರವಾಗಿರುವ ಖಚಿತತೆಯನ್ನು ಯಾವುದೇ ಕಾರಣಕ್ಕೂ ರಾಜಿ ಮಾಡಿಕೊಳ್ಳದ ದೊಡ್ಡ ಗುಣವೊಂದು ಗಾಂಧೀಜಿಯ ಯೋಗ ಗುಣವಾಗಿ ನೆಲೆಯಾಗಿತ್ತು. 'ಬಾಪು' ಎಂಬ ಅರ್ಥ ನಿಜವಾದ 'ತಂದೆ' ಎಂಬ ಅರ್ಥಕ್ಕೆ ಪರ್ಯಾಯವಾಗಿ ಸಾರ್ಥಕವಾಗುವಂತಿತ್ತು. ಈಗಲೂ 'ಬಾಪೂ' ಎಂದರೆ ಸಾಕು. ಅವರ ಹೆಸರನ್ನು ಹೇಳದಿದ್ದರೂ ಪರವಾಗಿಲ್ಲ. ಹೀಗೇಯೇ ಮುಂದೆ 'ಬಾಬಾ' ಎಂಬ ಹಿಂದೀ ಪದ ನಂತರ-ಸಮಾಜದ ಹಿತ ಬಯಸುವ ಕೆಲವು ಯೋಗಿಗಳ ಜೊತೆಗೆ ಅವರ ಸೇವಾಮನೋಭಾವದ ಸುಧಾರಣೆಗಳಿಗೆ ತಕ್ಕಂತೆ ಅವರ ಹೆಸರಿನ ಜೊತೆಗೆ ಬಳಕೆಯಾಗಲು ಶುರುವಾಯಿತು.

ಆದರೆ ಪ್ರಸ್ತುತದಲ್ಲಿ 'ಬಾಬಾ' ಎಂದು ಕರೆಸಿಕೊಳ್ಳುತ್ತಿರುವ ರಾಮದೇವ್ ಈ 'ಯೋಗಿ' ಪದವಿಗೆ ಸೂಕ್ತವಾಗಿ ಅರ್ಹರಾಗುವು

ದಿಲ್ಲ ಎಂದೇ ನನ್ನ ಅನಿಸಿಕೆ. ಮೊಟ್ಟಮೊದಲಿಗೆ ಅವರ ದೃಷ್ಟಿಯಲ್ಲಿ ಇಡೀ ದೇಶದ ಭ್ರಷ್ಟಾಚಾರವನ್ನು ನಿಷ್ಪಕ್ಷಪಾತವಾಗಿ ಪ್ರತಿಭಟಿಸಬೇಕೆಂಬ ವಾಂಛೆಯ ಬದಲು 'ರಾಮಲೀಲಾ' ಮೈದಾನದಲ್ಲಿ ಉಪವಾಸ ಕುಳಿತು ಕೇಂದ್ರ ಸರ್ಕಾರದ 'ಕಪ್ಪುಹಣ'ವನ್ನು ಮಾತ್ರ ಪ್ರತಿಭಟಿಸುವ ಒಂದು ಅಸಹನೆ ಕಾಣುತ್ತಿದೆ. ಇದು ಯೋಗಿಯ ಸಮಗ್ರತೆ ಖಂಡಿತ ಅಲ್ಲ. ಬಾಬ್ರಿ ಮಸೀದಿ ಒಡೆಯಲ್ಪಟ್ಟು ಭಕ್ತಿಯ ಲಾಲಸೆಯಲ್ಲಿ ಧರ್ಮ ಕುರುಡಾಗಿ 'ಹಿಂದೂತ್ವ'ದ ಅರ್ಥ ಕೋಮು ಬಣ್ಣ ಪಡೆದುಕೊಂಡು ಅನ್ಯಧರ್ಮಿಯರ ಪ್ರಾಣದ ಮಾರಣಹೋಮ ನಡೆದಾಗ 'ರಾಮ'ನ ಅರ್ಥವೂ 'ಕೇಸರಿ' ಅರ್ಥವೂ ಅದರ ಮೂಲ ಅರ್ಥಗಳಿಗೆ ಸರಿ ಹೊಂದದಂತೆ ಭಯೋತ್ಪಾದನೆಯ ಅರ್ಥ ಪಡೆದುಕೊಂಡವು.

ಆದರೆ ಈ ಸೀಮಿತ ಮನೋಭಾವವನ್ನು 'ರಾಷ್ಟ್ರಧರ್ಮ' ವೆಂದೇ ಆ2ರ್.ಎಸ್.ಎಸ್ ಮತ್ತು ಭಾರತೀಯ ಜನತಾ ಪಕ್ಷದವರು ಬಿಂಬಿಸುತ್ತ ದೇಶದ ಒಗ್ಗಟ್ಟಿಗೆ ಸಂಚಕಾರವನ್ನು ತರುತ್ತಲೇ ಮುಂದುವರೆದರು. ದೇಶದ ನಿಜವಾದ ಏಳಿಗೆಯನ್ನು ಬಯಸುವ ಪ್ರಬಲ ವಿರೋಧ ಪಕ್ಷವಾಗಿ ಬೆಳೆಯಲಿಲ್ಲ. ಹಾಗೆ ಬೆಳೆದಿದ್ದರೆ ಇಂದು ಕೇಂದ್ರ ಸರ್ಕಾರದ 'ಕಪ್ಪುಹಣ'ದ ವಿವಾದ ಇರುತ್ತಲೇ ಇರಲಿಲ್ಲವೇನೋ! 'ಹಿಂದೂಧರ್ಮ'ದ ಉಳಿವು ಎಂಬ ಏಕಪಕ್ಷೀಯ ನಿಲುವಿನಲ್ಲಿ ರಾಷ್ಟ್ರವನ್ನು ಒಡೆಯುವ ಪ್ರಯತ್ನಗಳೇ ಹೆಚ್ಚು ನಡೆಯುತ್ತ ಮಾನವೀಯತೆಯ ಸಮಗ್ರ ದೃಷ್ಟಿಯೇ ಮಸುಕಾಗುತ್ತಾ ಬಂತು.

ಇಂಥ 'ಮಸುಕುದೃಷ್ಟಿ' ಇಂದಿನ ಈ ರಾಮದೇವ ಬಾಬಾ ಹೋರಾಟದಲ್ಲಿ ಕಾಣುತ್ತಾ ಆಧ್ಯಾತ್ಮದ ಮತ್ತು ಯೋಗದ ವ್ಯಾಪ್ತಿಯನ್ನು ವಿರೂಪಗೊಳಿಸುತ್ತಿದೆ. ಜನರನ್ನು ವಿಶಾಲ ಮನದವರಾಗಲು ಎಚ್ಚರಿಸದೆ ತಾನು ನಾಯಕನಾಗಿ ಹೆಸರು ಮಾಡಬೇಕೆಂಬ ಕಾಮನೆಯೇ ಇವರ ಗ್ಲಾಮರಸ್-ದುಬಾರಿ ಯೋಗ ಶಿಬಿರಗಳಲ್ಲಿ ಕಾಣುತ್ತಿದೆ. ಯೋಗಾಭ್ಯಾಸದ ಆಸನಗಳನ್ನು ಕಲಿಸುವುದರಿಂದ ಮಾತ್ರ 'ಯೋಗಿ' ಯಾಗಲು ಸಾಧ್ಯವೇ? ಅಂತರ್ಯದಲ್ಲಿ ಶಾಂತಿ ಇಲ್ಲದಿದ್ದಾಗ ಆ ರಾಡಿ ಹೊರಗೆ ಬಂದೇ ಬರುತ್ತದೆ. ಅದೇ ಈ ರಾಮದೇವ್ ಅವರ ವಿಷಯದಲ್ಲಿಯೂ ಆಗಿರುವುದು. ಇವರಿಗೆ ಸಂಸ್ಥೆಯ ಮೂಲಕ ಶಿಷ್ಯವೃಂದದ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ಮೂಲಕ ಹೆಸರುಮಾಡಿ ಅಣ್ಣ ಹಜಾರೆಯವರಿಗಿಂತ ತಾನು ದೊಡ್ಡ ನಾಯಕನಾಗಿ ಬೆಳೆಯಬೇಕೆಂಬ ಅತಿಯಾಸೆ ಬಾಧಿಸುತ್ತದೆಯೇ ಹೊರತು 'ಯೋಗಿ'ಯ ಶಾಂತಿಯನ್ನು ಇಡೀ ದೇಶದಲ್ಲಿ ಪಸರಿಸಬೇಕೆಂಬ ಅಖಂಡ ತತ್ವವಲ್ಲ.

ಹಾಗಿದ್ದಿದ್ದರೆ ಇವರ ಯೋಗ ಶಿಬಿರಗಳಲ್ಲಿ ಅಂಥ 50.000-1,00000ರೂಗಳ ಫೀಸ್‌ಗಳ ಶ್ರೀಮಂತಿಕೆಯ ಮಣೆಯನ್ನು ಹಾಕಿ 'ಯೋಗ'ದ ಪ್ರಚಾರವನ್ನು ಮಾಡುತ್ತಿರಲಿಲ್ಲ. ಕೊನೆಗೆ ಈ ಪ್ರಚಾರದ ಬಲದಲ್ಲಿ ತಾನು ರಾಜಕಾರಣಿಯಾಗಿ ಕಾಣಿಸಿಕೊಳ್ಳಬೇಕೆಂಬ ಲಾಲಸೆಯ ಆಸೆಯಿದ್ದಂತೆ ಮಾತ್ರ ಕೆರಳಿ ಕೂಗಾಡುತ್ತಾ ಈ ರಾಮ್‌ದೇವ್ ಅವರು ಒಂದು ವರ್ಗದ ಜನರ ಭಾವನೆಗಳನ್ನು ಪ್ರಚೋದಿಸಲು ಹವಣಿಸಿದರೇ ಹೊರತು 'ಯೋಗಿ'ಗೆ ತಕ್ಕ ಯೋಗಮುದ್ರೆ ಶಾಂತಿಯನ್ನು ರಾಮದೇವ್ ಮುಖದಲ್ಲಿ ನಾನಂತೂ ನೋಡಲಿಲ್ಲ. ತನ್ನ ಬಳಿಯೇ ಕೊಳೆಯುವಷ್ಟು ಹಣ ಇಟ್ಟುಕೊಂಡು-ಅಷ್ಟೊಂದು ಸಂಸ್ಥೆಗಳ

ಬೆತ್ತಲಾದ ದೇಹಗಳೆಲ್ಲಾ ಕಾಮುಕತೆಯ ಸಂಕೇತವಾಗುವುದಿಲ್ಲ. ಬಟ್ಟೆ ಮುಚ್ಚಿಕೊಂಡ ದೇಹಗಳೆಲ್ಲಾ ಕಾಮುಕತೆಯ ಪ್ರಚೋದನೆಯ ದೃಷ್ಟಿಯಿಂದ ಮುಕ್ತವಾಗಿರುವುದೂ ಇಲ್ಲ. ಇದೆಲ್ಲಾ ಅವರವರ ಮನಸ್ಸಿನ ಸಂಸ್ಕಾರಕ್ಕೆ ಸಂಬಂಧಪಟ್ಟ ವಿಚಾರಕ್ಕೆ ಸಂಬಂಧಿಸಿದಾಗಿಯೇ ಕೊನೆಗೆ ಉಳಿಯುತ್ತದೆ. ಶೀಲ-ಅಶ್ಲೀಲಗಳ ವ್ಯತ್ಯಾಸವನ್ನು ಭಾರತೀಯ ದೃಷ್ಟಿಯಿಂದ-ಕಲಾವಿದನ ದೃಷ್ಟಿಯಿಂದ ನೋಡಿ ಬಿಂಬಿಸುವ ಒಂದು ಪಾರದರ್ಶಕತೆ ಹುಸೇನರ ಗೆರೆಗಳಲ್ಲಿ ಕಾಣುತ್ತದೆಯೇ ವಿನಃ ಅವರು ಮುಸ್ಲಿಂ ಆದ ಮಾತ್ರಕ್ಕೆ ಹಿಂದೂ ದೇವತೆಯನ್ನು ಅವಮಾನಿಸಿರುವರು ಎಂದು ಹೇಳುವ ಮತೀಯ ದೃಷ್ಟಿ ತುಂಬಾ ಅಪಾಯಕಾರಿಯಾದುದು.

ಉಸ್ತುವಾರಿಯನ್ನೂ ವಹಿಸಿಕೊಂಡು ನೆಪಮಾತ್ರಕ್ಕೆ ತನ್ನ ಬಳಿಯಲ್ಲಿರುವ ಆಸ್ತಿ ಲೆಕ್ಕ ತೋರಿಸುತ್ತ ಸರಳವಾದ ಯೋಗಿಯ ಮನಸ್ಸಿಗೆ ತದ್ವಿರುದ್ಧವಾಗಿ ಸಂಕೀರ್ಣತೆಯ ಬಳಲಿಕೆಯುಳ್ಳ ಈ ಬಾಬಾ ಮಾನಸಿಕ ಸಮತೋಲನವಿಲ್ಲದೆ ದೇಹಾರೋಗ್ಯ ಉಪವಾಸದಿಂದ ಕುಸಿದು ಕೇವಲ ಏಳೇ ದಿನಗಳಿಗೇ ಅಸ್ಪತ್ರೆಯ I.C.U.ಗೆ ದಾಖಲಾದರು. 'ಯೋಗ' ವಿಧಾನದ ಪ್ರಕಾರ ಪ್ರತಿದಿನ ಹಣ್ಣಿನ ರಸ-ಜೇನುತುಪ್ಪದ ಮಿತಾಹಾರವನ್ನು ಸೇವಿಸುತ್ತ ಮನಸ್ಸನ್ನು ಧ್ಯಾನದಲ್ಲಿ ಕೇಂದ್ರೀಕರಿಸಿಕೊಂಡಿರುವ ಒಬ್ಬ ವ್ಯಕ್ತಿಯ ಆರೋಗ್ಯ ಅಷ್ಟು ಬೇಗ ಕುಸಿಯುವುದು ಸಾಧ್ಯವೇ ಇಲ್ಲ.

ಮಾನಸಿಕ ಶಕ್ತಿ ಹೆಚ್ಚುತ್ತಿರುವ ಘಟ್ಟದಲ್ಲಿ ದೇಹಾರೋಗ್ಯವೂ ಸ್ಥಿರವಾಗಿರುವುದು ಯೋಗಿಯ ಗುಟ್ಟು. ಇಲ್ಲದಿದ್ದರೆ ಆತ ಒಬ್ಬ ಮಾಮೂಲಿ ಮನುಷ್ಯ ಅಷ್ಟೆ. ಈ ಅಂಶವನ್ನು ಮನಗಾಣದ ರಾಮ್‌ದೇವ್ ಬಾಬಾ ತನ್ನನ್ನು 'ಯೋಗಿ'ಯ ಇಮೇಜಲ್ಲೇ ಉಳಿಸಿಕೊಳ್ಳಲು ಹೊರಟು ಯೋಗಿಯ ಸದುದ್ದೇಶವನ್ನು ಮರೆತಿರುವರು. 'ಕಪ್ಪುಹಣ' ಯಾರೇ ಮಾಡಿದರೂ ತಪ್ಪೇ. ಆದರೆ ಬಾಬಾ ಕೇಂದ್ರ ಸರ್ಕಾರವನ್ನು ಇಳಿಸಲೆಂದೇ ಪಿತೂರಿ ಹೂಡಿದಂತೆ, ರಾಜಕೀಯ ಪಕ್ಷದ ಪ್ರತಿನಿಧಿಯಂತೆ ಕುಪಿತ ಮುಖದಲ್ಲಿ ಕಿರುಚುತ್ತಾ ಇಡೀ ಸಮುದಾಯದ ಶಾಂತಿ ಹರಣಕ್ಕೆ ಹೊರಟಿದ್ದು ಒಬ್ಬ ಯೋಗಿಗೆ ಸಲ್ಲುವ ವೇಷವಲ್ಲ. ಇಂಥವರ ಆರ್ಭಟವನ್ನು ಹತೋಟಿಗೆ ತರಲು ಬಂಧಿಸಲು ಹೊರಟ ಸರ್ಕಾರದ ಕ್ರಮದಿಂದ ತಾನು ಮಾತ್ರ ತಲೆ ಮರೆಸಿಕೊಂಡು ತಪ್ಪಿಸಿಕೊಳ್ಳಲು ಹೊರಟು ಹೆಂಗಸರು ತೊಡುವ ಚೂಡೀದಾರನ್ನು ಉಡುಪಾಗಿ ಬದಲಿಸಿಕೊಂಡು ಹೆಂಗಸರಂತೆ ಕಂಡರೆ ತನ್ನನ್ನು ಬಂಧಿಸುವುದಿಲ್ಲವೆಂದು ರಾಮಲೀಲಾ ಮೈದಾನದ ವೇದಿಕೆಯಿಂದ ಹಾರಲು ಹೊರಟ ಬಾಬಾವನ್ನು 'ಯೋಗಿ' ಎನ್ನಬೇಕೋ? ಭೋಗಿ ಎನ್ನಬೇಕೋ?

ಇನ್ನು ಇತ್ತೀಚೆಗೆ ತಾನೇ ಲಂಡನ್‌ನಲ್ಲಿ ನಿಧನ ಹೊಂದಿದ ಭಾರತೀಯ ಚಿತ್ರಕಲಾವಿದ ಎಮ್.ಎಫ್. ಹುಸೇನರ ಸಂಗತಿ. ಇವರ ಹೆಸರಿನ ಕಾರಣದಿಂದ ಇವರನ್ನು 'ಮುಸ್ಲಿಂ' ಎಂದು ಗುರುತಿಸಿ ಇವರ ಕಲಾಪ್ರತಿಭೆಯನ್ನು ಅಲ್ಲಗಳೆದಿರುವುದೇ ಇವರಿಗೆ ಭಾರತದ ಸಂಕುಚಿತ ಮನಸ್ಸುಗಳು ಎಸಗಿರುವ ಮಹಾಪರಾಧ. ಇವರನ್ನು ಗಡೀಪಾರು ಮಾಡಲು ಫರ್ಮಾನು ಹೊರಡಿಸಿದ ಮುಖ್ಯ ಕಾರಣ ಇವರು ಭಾರತೀಯ ದೇವತೆಗಳ ಬೆತ್ತಲೆ ಚಿತ್ರವನ್ನು ರಚಿಸಿದ ಕಾರಣಕ್ಕೆ. ಅವರ ಆ ಚಿತ್ರಗಳಲ್ಲಿ ಕಲೆಯ ಸಂವೇದನೆಯೂ ಅಡಗಿರುವ ಪಾರದರ್ಶಕ ಗೆರೆಗಳನ್ನು ಗುರುತಿಸಲಾರದ ಒಂದು ಗುಂಪಿನ ಜನ-ಆ ಚಿತ್ರಗಳ ಗುಣಾತ್ಮಕ ಅಂಶಗಳನ್ನು ಅರಗಿಸಿಕೊಳ್ಳಲಾಗದ ಅದನ್ನು 'ಕಾಮುಕತನ'ವೆಂದು ಕರೆಯುವ ಕ್ರೋಧ ಭಾವನೆಗೆ ಒಳಗಾಗಿ ಹುಸೇನರ ಸಂಪೂರ್ಣ ಕಲಾವಿದನ ವ್ಯಕ್ತಿತ್ವವನ್ನೇ ತಿರಸ್ಕರಿಸಿದರು.

ಬೆತ್ತಲಾದ ದೇಹಗಳೆಲ್ಲಾ ಕಾಮುಕತೆಯ ಸಂಕೇತವಾಗುವುದಿಲ್ಲ. ಬಟ್ಟೆ ಮುಚ್ಚಿಕೊಂಡ ದೇಹಗಳೆಲ್ಲಾ ಕಾಮುಕತೆಯ ಪ್ರಚೋದನೆಯ ದೃಷ್ಟಿಯಿಂದ ಮುಕ್ತವಾಗಿರುವುದೂ ಇಲ್ಲ. ಇದೆಲ್ಲಾ ಅವರವರ ಮನಸ್ಸಿನ ಸಂಸ್ಕಾರಕ್ಕೆ ಸಂಬಂಧಪಟ್ಟ ವಿಚಾರಕ್ಕೆ ಸಂಬಂಧಿಸಿದಾಗಿಯೇ ಕೊನೆಗೆ ಉಳಿಯುತ್ತದೆ. ಶೀಲ-ಅಶ್ಲೀಲಗಳ ವ್ಯತ್ಯಾಸವನ್ನು ಭಾರತೀಯ ದೃಷ್ಟಿಯಿಂದ-ಕಲಾವಿದನ ದೃಷ್ಟಿಯಿಂದ ನೋಡಿ ಬಿಂಬಿಸುವ ಒಂದು ಪಾರದರ್ಶಕತೆ ಹುಸೇನರ ಗೆರೆಗಳಲ್ಲಿ ಕಾಣುತ್ತದೆಯೇ ವಿನಃ ಅವರು ಮುಸ್ಲಿಂ ಆದ ಮಾತ್ರಕ್ಕೆ ಹಿಂದೂ ದೇವತೆಯನ್ನು ಅವಮಾನಿಸಿರುವರು ಎಂದು ಹೇಳುವ ಮತೀಯ ದೃಷ್ಟಿ ತುಂಬಾ ಅಪಾಯಕಾರಿಯಾದುದು. ಇಂಥ ಮತೀಯ ದೃಷ್ಟಿಯಿಂದ ಭಾರತದ ಸಮಗ್ರತೆಗೆ ಕುಂದುಂಟಾಗುತ್ತಿದೆಯೇ ವಿನಃ ರಸಿಕತೆಯ ತಳಹದಿಯ ವಿಶಾಲ ದೃಷ್ಟಿ ಕೋನದಿಂದಲ್ಲ.

ಹಾಗೆ ನೋಡಿದರೆ 'ಬೆತ್ತಲೆ'ಯ ಪರಿಕಲ್ಪನೆ ಭಾರತದಂತಹ ಆಧ್ಯಾತ್ಮ ಮಣ್ಣುಳ್ಳ ದೇಶದಲ್ಲಿ 1970ರಲ್ಲಿ ಹುಸೇನರು ಅಂಥ ಚಿತ್ರಗಳನ್ನು ಬರೆಯುವ ಎಷ್ಟೋ ವರ್ಷಗಳ ಪ್ರಾಚೀನದಲ್ಲಿಯೇ ದೇವಾಲಯದಲ್ಲಿ ಲೈಂಗಿಕ ಶಿಲ್ಪಗಳಾಗಿ ಶಿಲ್ಪಿಯ ದೃಷ್ಟಿಯಾಗಿ ದೈವಿಕ ಕಲೆಯೆಂಬಂತೆ ಮೈತಳೆದಿವೆ. ಶಂಕರಾಚಾರ್ಯರ 'ಸೌಂದರ್ಯ ಲಹರಿ'ಯ ಸ್ತೋತ್ರಗಳಂತೂ ದೇವಿಯ ಅಂಗಾಂಗಗಳನ್ನು ಮನತುಂಬಿ ವರ್ಣಿಸುವ ಸಾಲುಗಳನ್ನು ಪಡೆದುಕೊಂಡಿದೆ. ಉದಾಹರಣೆಗೆ ಬೆಳಗಿನ ಸುಬ್ಬಲಕ್ಷ್ಮಿ ಸುಪ್ರಭಾತದ ನಂತರ ಕೇಳುವ 'ಕಮಲಾ ಕುಚ ಚೂಚುಕ ಕುಂಕುಮತೋ ನಿಯತಾರುಣಿತಾ ತುಲನೀಲತನೋ' ಎಂಬಸ್ತೋತ್ರದ ಸಾಲುಗಳನ್ನು ಗಮನಿಸಬಹುದು. ಅಲ್ಲಿಯೂ ಹೆಣ್ಣು ದೇವತೆಯ ಅಂಗಾಂಗಗಳ ವರ್ಣನೆ ರಸಿಕತೆಯ-ಸೌಂದರ್ಯದ ಕಾಮನ ಕಣ್ಣಾಗಿ ಕೇಳಿಸುತ್ತದೆ. ಹುಸೇನ್ ಚಿತ್ರ ಅಶ್ಲೀಲವೆನಿಸುವುದಾದರೆ ಶಂಕರಾಚಾರ್ಯ ಮಂತ್ರದ ಮೊರೆಯೂ ಅಶ್ಲೀಲವೆನಿಸಬೇಕಲ್ಲವೇ? ಅಥವಾ ಅದು ಶೀಲವೆನಿಸಿದರೆ ಇದೂ ಶೀಲವೆನಿಸಬೇಕಲ್ಲವೇ? ಎಂಬುದಷ್ಟೇ ನನ್ನ ಪ್ರಶ್ನೆ. ನಾನಿಲ್ಲಿ ವೈಯಕ್ತಿಕವಾಗಿ ಮನಸ್ಸಿಗೆ ನೋವುಂಟಾಗುವ ಭಾವನೆಯ ದೃಷ್ಟಿಯ ಕುರಿತು ಪ್ರಸ್ತಾಪಿಸುತ್ತಿಲ್ಲ. ಆದರೆ ಕಲಾವಿದನೊಬ್ಬ ಭಾರತದ ಕಾವ್ಯಗಳನ್ನು ಅಧ್ಯಯನ ಮಾಡಿ ಇಷ್ಟಪಟ್ಟು ತನ್ನದಾಗಿಸಿ ಕೊಂಡು ಮಾನವೀಯ ದೃಷ್ಟಿಯುಳ್ಳ 'ಕಲಾವಿದ'ನ ಜಾತಿಗೆ ಸೇರಿದ ಒಬ್ಬ ಕಲಾವಿದನನ್ನು "ಅವನು ಮುಸ್ಲಿಂ. ಅದಕ್ಕೆ ಹಿಂದೂ ದೇವತೆ

ಯನ್ನು ಬೆತ್ತಲಾಗಿ ಚಿತ್ರಿಸಿದ" ಎಂಬ ಆರೋಪವನ್ನು ಹೊರಿಸಿ ಆತನ ಕೃತ್ಯಗಳನ್ನೆಲ್ಲ ಪೂರ್ವಗ್ರಹದಿಂದಲೇ ನೋಡುತ್ತಾ ಅವನನ್ನು ದ್ವೇಷಿಸಿದರೆ ಇಡೀ ಭಾರತೀಯ ಸಂಸ್ಕೃತಿಗೆ-ಕಲಾಪ್ರಕಾರಕ್ಕೆ ಅವಮಾನ ಮಾಡಿದಂತಲ್ಲವೇ? ಎಂದು ನಾನು ಹೇಳಲು ಹೊರಟಿರುವುದು.

ಒಂದು ಕನ್ನಡ ಪತ್ರಿಕೆಯ ಅಂಕಣಕಾರರಂತೂ ಹುಸೇನರನ್ನು ವಿಟನಂತೆ ಚಿತ್ರಿಸುವ ಅಪ್ರಬುದ್ಧ ಲೇಖನವನ್ನು ಬರೆದಿದ್ದು ನೋಡಿದರೆ ಚಿಂತನಾ ರಹಿತ ಅಂಥ ಸ್ಥಿತಿಯ ಭಾರತದ ಬಗ್ಗೆ ಕಳವಳವಾಗುತ್ತದೆ. 'ಅಂಕಣ ಬರಹ'ದ ಉದ್ದೇಶ ಎಂದಿಗೂ 'ಏಕಪಕ್ಷೀಯ ನಿಲುವನ್ನು ತಳೆಯುವ ಮಾನವತೆಗೆ ವಿರುದ್ಧವಾದ ದನಿಯೆತ್ತುವ ಓಲೈಸುವುಕೆಯಾಗಲೇಬಾರದು. ಹುಸೇನರು ಲಂಡನ್‌ನಲ್ಲಿದ್ದರೂ ಅವರ ಮನಸ್ಸು ಭಾರತೀಯ ಪ್ರಜೆಯಾಗಿಯೇ ಉಳಿದು ಭಾರತದಲ್ಲಿ ತಾನು ಇರಲಾಗದ ಕೊನೆಯ ದಿನಗಳಿಗಾಗಿ ಕಂಬನಿ ಮಿಡಿಯುತ್ತ ಕಲಾವಿದನಾಗಿಯೇ ಪ್ರಾಣಬಿಟ್ಟರು. ಹುಸೇನರನ್ನು ಇಂಥ ಸ್ಥಿತಿಗೆ ತಂದ ಮನಸ್ಥಿತಿ ಭಾರತೀಯ ಮೌಲ್ಯವಾಗುವುದು ಸಾಧ್ಯವಿಲ್ಲ. ಅದು ಪಾರದರ್ಶಕವಲ್ಲದ ಪಾರ್ಶ್ವನೋಟದ ದೃಷ್ಟಿಯೆಂದು ಮಾತ್ರ ಹೇಳಬಹುದಷ್ಟೇ.

ಬೆತ್ತಲೆಯೆಂಬುದು ನಮ್ಮಲ್ಲಿ ಅಕ್ಕ ಮಹಾದೇವಿಯ ಬೆತ್ತಲಾಗಿಯೂ, ಬಾಹುಬಲಿಯ ಬೆತ್ತಲಾಗಿಯೂ ಚಾರಿತ್ರಿಕವಾಗಿ ಆಧ್ಯಾತ್ಮದ ಮೌಲ್ಯವನ್ನು ಪಡೆದಿರುವಂತೆಯೇ ಚಂದ್ರಗುತ್ತಿಯ 'ಬೆತ್ತಲೆಸೇವೆ'ಯ ದೇವದಾಸಿ ಪದ್ಧತಿಯ ಮೌಢ್ಯ ವಿಡಂಬನೆಗೆ ಒಳಗಾಗುವಂಥದ್ದು. ಕಾಮ ಪ್ರೇಮವಾಗಿ ವಾತ್ಸಲ್ಯದ ಅಧಿಷ್ಠಾನವಾಗುವ ಶ್ರೇಷ್ಠ ಸ್ಥಿತಿಯ ಬಗ್ಗೆ ಬೇಂದ್ರೆ ತಮ್ಮ 'ಸಾಹಿತ್ಯದ ವಿರಾಟ್ ಸ್ವರೂಪ' ಕೃತಿಯಲ್ಲಿ ಅತ್ಯುತ್ತಮವಾಗಿ 'ದುಷ್ಯಂತ-ಶಕುಂತಲೆ'ಯನ್ನು ಉಲ್ಲೇಖಿಸುತ್ತ ವಿವರಿಸುತ್ತಾರೆ. ಕಾಮದ ಉತ್ಕರ್ಷದಲ್ಲಿ ಒಂದಾಗುವ ದುಷ್ಯಂತ-ಶಕುಂತಲೆಯರು, ಕ್ರಿಯೆಯ ನಂತರ ಮಗುವಿನಂತೆ ನಿದ್ರಿಸಿಬಿಡುವ ದುಷ್ಯಂತನನ್ನು ಮಡಿಲಲ್ಲಿ ಮಲಗಿಸಿಕೊಂಡು ಪ್ರೇಮದಲ್ಲಿ ತಾಯಿಯಂತೆ ಎಚ್ಚರವಾಗಿದ್ದು ಮೈದಡವುವ ಶಕುಂತಲೆ.

ಕಾಮಕ್ಕೆ ಇಂಥ ತಾಯ್ತನದ ಉನ್ನತ ಸ್ಥಿತಿಯೂ ಬಂದಿದೆ ಎಂದು ಜಗತ್ತಿಗೆ ಹೇಳುವ ಜಾಗತಿಕ ದೃಷ್ಟಿ-ಭಾರತೀಯ ದೃಷ್ಟಿ ಎಂದು ನನಗನಿಸುತ್ತದೆ. ಇಂಥ ಜಾಗತಿಕ ದೃಷ್ಟಿಯನ್ನೇ ಹುಸೇನರು ತಮ್ಮ ಚಿತ್ರಗಳಲ್ಲಿ ಧ್ಯಾನಸ್ಥರಾಗಿ ಬಿಂಬಿಸಲು ಹೊರಟಿದ್ದಾರೆ. ಇದನ್ನು ಅಶ್ಲೀಲತೆಯಲ್ಲಿ ಸಂಶಯಿಸಬಾರದು. ಹಾಗೆ ಸಂಶಯಿಸಿದರೆ ಹೊರಗೆ ಮಾತ್ರ ಮೈ ಮುಚ್ಚುವ ಬಟ್ಟೆ ತೊಟ್ಟು ಘನತೆಯನ್ನು ನಟಿಸುತ್ತ ಕಾಮುಕತನದಲ್ಲಿ ಇತರ ಹೆಣ್ಣುಮಕ್ಕಳ ಅಶ್ಲೀಲ ಚಿತ್ರಗಳನ್ನು ನೋಡಿ ಸುಖಿಸಿ-ಅದೆಷ್ಟೋ ಹೆಣ್ಣು ಮಕ್ಕಳನ್ನೂ ವೇಶ್ಯಾವಾಟಿಕೆಗೆ ತಳ್ಳಿ ಮನೆಯಲ್ಲಿ ಗೃಹಸ್ಥ ಜೀವನದ ಧಾರ್ಮಿಕತೆಯ ಮುಖವಾಡ ಧರಿಸುವ ಅದೆಷ್ಟು ದ್ರೋಹಿಗಳನ್ನು ದೇಶಭ್ರಷ್ಟರನ್ನಾಗಿ ಶಿಕ್ಷೆಗೆ ಒಳಪಡಿಸಬೇಕಾಗುತ್ತದೆ. ಲೈಂಗಿಕ ಶಿಲ್ಪಗಳು, ವಾತ್ಸಾಯನನ ಕಾಮ ಸೂತ್ರ ಎಲ್ಲವೂ ಲೈಂಗಿಕ ಜ್ಞಾನವನ್ನು ಮಕ್ಕಳು ಯೌವನಕ್ಕೆ ಬಂದಾಗ ಅರ್ಥವಾಗಲಿ ಎಂದು ಅಳವಡಿಸಲಾಗಿರುವ ಜೀವನದ-ಸಾಮಾಜಿಕ ಭಾಗವಾಗಿ ಧಾರ್ಮಿಕ ಎನಿಸಿಕೊಳ್ಳುತ್ತದೆ. ಇದು ಚಟವಾಗುವ ಕಾಮ ತೃಷೆಯ ಕಾಮುಕತನವನ್ನು ಬೋಧಿಸುವುದಿಲ್ಲ. ಆದರೆ ಪ್ರಕೃತಿದತ್ತವಾಗಿ ಮನುಷ್ಯನಿಗೆ ಇರಬೇಕಾದ ಲೈಂಗಿಕ ಜ್ಞಾನವನ್ನು-ರಸಿಕತೆಯನ್ನು ಪ್ರೇಮಪೂರಿತವಾಗಿ ಹೇಳುತ್ತದೆ. ಪ್ರೇಮ ರಹಿತವಾದ ಕಾಮ ಕೇಳಿಗಳು ವಿಕೃತಿಯ ಮಟ್ಟಕ್ಕೆ ಹೋಗಿ ಸಮಾಜದ ಆರೋಗ್ಯವನ್ನು ಹಾಳು ಮಾಡುವ ಸಾಧ್ಯತೆಗಳೇ ಹೆಚ್ಚು. ಇಂಥ ವಿಕೃತಿಯ ಬಗ್ಗೆ ಮೊದಲು ಹುಸೇನರನ್ನು ಗಡೀಪಾರು ಮಾಡಿದಂಥ ಜನರೂ-ಅದನ್ನು ಅನುಮೋದಿಸುವ ಸರ್ಕಾರವೂ ಯೋಚಿಸಬೇಕಾಗಿದೆ.

ಪುರಾಣದ ಮಹಾಸತಿ ಅನುಸೂಯೆಯ ಕಥೆಯಲ್ಲಿ ಅವಳ ಅಪರಿಮಿತ ಪ್ರೇಮವನ್ನು ಪಾತಿವ್ರತ್ಯವನ್ನು ಗಮನಿಸಿ ಅಚ್ಚರಿಗೊಂಡ ದೇವಾನುದೇವತೆಗಳು ಅವಳನ್ನು ಪರೀಕ್ಷಿಸಲೆಂಬಂತೆ ಅತಿಥಿ ಸತ್ಕಾರ ಪಡೆಯಲು ಬರುತ್ತಾರೆ. 'ಅತಿಥಿ ಸತ್ಕಾರ' ಭಾರತೀಯತೆಯ ಒಂದು ಮೌಲ್ಯ. ಆಗ ಅವಳನ್ನು ಬೆತ್ತಲಾಗಿ ನೋಡ ಬಯಸಿದ ತ್ರಿಮೂರ್ತಿಗಳಾದ ಬ್ರಹ್ಮ-ವಿಷ್ಣು-ಮಹೇಶ್ವರರನ್ನು ಅನಸೂಯೆ ತನ್ನ ಪತಿವ್ರತಾ ಶಕ್ತಿಯಿಂದ ಪುಟ್ಟ ಮಕ್ಕಳಾಗಿ ಪರಿವರ್ತಿಸಿ ತನ್ನ ಬೆತ್ತಲ ದೇಹದ ಮೊಲೆಯ ಹಾಲನ್ನು ಕುಡಿಸುತ್ತಾಳೆ. ಅನಸೂಯೆಯ ಇಂಥ ಪಾರದರ್ಶಕ ತಾಯ್ತನ ಭಾರತೀಯ ಮೌಲ್ಯ.

ಹುಸೇನರು ಚಿತ್ರಿಸಿದ ಬೆತ್ತಲೆ ಭಾರತ ಮಾತೆಯ ಚಿತ್ರ ಭಾರತ ಮಾತೆಗೆ ಭ್ರಷ್ಟಾಚಾರದಿಂದ ಒದಗಿರುವ ಸೀರೆ ಸೆಳೆಯುವಂಥ ಬೆತ್ತಲ ಸ್ಥಿತಿಯನ್ನು ವಿಡಂಬಿಸುತ್ತದೆ. ಸರಸ್ವತಿಯ ಚಿತ್ರ ಸಂಪ್ರದಾಯ ಸ್ಥಿತಿಗೆ ವಿರುದ್ಧವಾದ ಹೆಣ್ತನದ ಸಹಜ ದೇಹದ ಆ ಚೆಲುವಿನಲ್ಲೇ ವೀಣೆ-ಕಮಲ ಎಲ್ಲವೂ ಆ 'ಸ್ತ್ರೀ'ಯ ಅಗಾಧ ಚೈತನ್ಯದ ಶಕ್ತಿಯ ಕೊಡುಗೆ ಎಂಬಂತೆ ಕುಂಚದಿಂದ ಉದ್ಭವಿಸಿ ಬಂದಿರುವ ಕಲಾವಿದನ ಕಣ್ಣನ್ನು ಪಡೆದಿರುವಂತಿದೆ. ಇದನ್ನು ಅಭ್ಯಸಿಸದೆ ಒಂದೇ ಬಾರಿಗೆ ಕಲೆಯನ್ನು-ಕಲಾವಿದನನ್ನು ನಿರಾಕರಿಸಿದರೆ ಅದೊಂದು ಸಮಾಜದ ಅಂಗವಿಕಲತೆಯ ಭಾಗವಾಗುತ್ತಾ-Supreshion ಆಗುತ್ತಾ ಮತ್ತೆಲ್ಲೋ ಒಂದು ಕಡೆ ತೆರೆಯ ಮರೆಯಲ್ಲಿ ನಡೆಯುವ ಕಾಮಕತೆಯ ವಿಜೃಂಭಣೆಗೆ ಕಾರಣವಾಗುತ್ತದೇನೋ ಎಂದೇ ನನ್ನ ವೈಚಾರಿಕ ದೃಷ್ಟಿಯ ವಿಶ್ಲೇಷಣೆ.

ರಸಋಷಿ ಕುವೆಂಪು ಅವರು ಸರಸ್ವತಿಯನ್ನು ರಸಿಕತೆಯ ಕಣ್ಣುಗಳಿಂದ ಧ್ಯಾನಿಸಿರುವ ಈ ಕವಿತೆಯೊಂದು ಈ ಸಂದರ್ಭಕ್ಕೆ ಪೂರಕವಾಗಿ ಕಾಮದ ಅಂದದ ವಿಸ್ತಾರ ಚೆಲುವಿನ ರೂಪಕವಾಗುವುದನ್ನು ಮನಸ್ಸಿಗೆ ಹತ್ತಿರವಾಗುವಂತೆ ಹೇಳುತ್ತದೆ. ಅದು ಹೀಗಿದೆ:-

ನಿನ್ನೆಳೆ ಮೊಗದಲಿ
ನಸುನಗೆಯಾಗಿರೆ
ನನಗಿಹುದೊಂದಾಸೆ
ತಾವರೆ ಹೋಲುವ
ನಿನ್ನಾ ಹಣೆಯಲಿ
ಕುಂಕುಮವಾಗಿರುವಾಸೆ
ಚೆಲುವೆ ಸರಸ್ವತಿಯೇ
ಕಾಮನ ಕಣ್ಣೇ
ನಿನ್ನವ ನಾನಾಗಿರುವಾಸೆ...

ಎಂದು ಸಾಗುವ ಕವಿತೆ ಚಿತ್ರಗೀತೆ ಆಗಿಯೂ ಜನಪ್ರಿಯವಾಗಿದೆ. ಆದರೆ ಸರಸ್ವತಿ ಆಪ್ತವಾಗಿ ನಲ್ಲೆಯಂತೆ ಒಲಿದು ಬರುವ ಜ್ಞಾನಕ್ಕೆ ಸರಿ ಸಮಾನವಾಗಿ ಸಾಟಿಯಾಗುತ್ತಾಳೆ ಎಂಬ ರಸದೃಷ್ಟಿ ಇಲ್ಲಿದೆ. ಇಂಥ ಸಂವೇದನೆ ಸಾಧ್ಯವಾಗದಾಗ, ಸಂಕುಚಿತವಾದಾಗ ಅಲ್ಲಿ ಭ್ರಷ್ಟತೆ ಆರಂಭವಾಗುತ್ತದೆ ಎಂದು 'ಕಾಮಕ್ಕೆ' ಸಂಬಂಧಿಸಿದಂತೆ ನನ್ನಲ್ಲಿ ಮೂಡಿ ಬರುತ್ತಿರುವ ಹೊಳಹುಗಳು.... □

ಸಂವಾದ



ಲೇಖಕರಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ.

ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು.

ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

ಕ್ರಿ.ಶ. ೩ನೆಯ ಶತ
ಮಾನದ ಅಶೋಕನ
ಆಳ್ವಿಕೆಯಲ್ಲಿ ಬೌದ್ಧ
ಧರ್ಮ ಉಚ್ಛ್ರಾಯ
ಸ್ಥಿತಿಗೆ ತಲುಪಿತ್ತು.
ಭಾರತಕ್ಕೆ ಜಗತ್ತಿನ
ನವನಾಗರಿ ಕತೆಯ
ಸೂತ್ರ ಹಿಡಿಯ ಬಹು
ದಾದ ಎಲ್ಲ ಅವಕಾಶ
ಗಳೂ ಒದಗಿ ಬಂದಿ
ದ್ದವು. ಕುತಂತ್ರಗಳ
ಫಲ. ಭಾರತಕ್ಕೆ ಮತ್ತೆ
ಜಾತಿಧರ್ಮದ ಗರ
ಬಡಿಯಿತು. ಅವಸಾನ
ಕಾಲದಲ್ಲಿ ಸೃಷ್ಟಿಯಾ
ಗಿದ್ದ ಯಥಾಸ್ಥಿತಿವಾದಿ
ಭಗವದ್ಗೀತೆಯನ್ನು
ಹಿಡಿದುಕೊಂಡ ಶಂಕ
ರಾಚಾರ್ಯರು ಎಲ್ಲ
ತಂತ್ರಗಳನ್ನು ಬಳಸಿ,
ಆಧಿಪತ್ಯವು ಸೃಷ್ಟಿಸಿದ
ಸ್ವಯಂಪೋಷಕ
ಗ್ರಾಮಗಳಲ್ಲಿ ಜಾತಿ
ಗಳನ್ನು ಸ್ಥಿರೀಕರಿಸಿ
ದರು. ಬೌದ್ಧ ಧರ್ಮವು
ಹುಟ್ಟಿದ ನಾಡಿ
ನಿಂದಲೇ ಕಾಲು
ಕೀಳಬೇಕಾಯಿತು.
ಬಹುಸಂಖ್ಯಾತರಾಗಿದ್ದ
ಬೌದ್ಧರ ಮತಾಂತರದ
ಪ್ರಕ್ರಿಯೆ ಶೂದ್ರರ
ಸಂಖ್ಯೆಯನ್ನು ಹೆಚ್ಚಿಸು
ವುದರೊಂದಿಗೆ ಅಸ್ಪೃ
ಶ್ಯರೆಂಬ ಹೀನಾಯ
ಕುಲದ ಒಂದು ದೊಡ್ಡ
ಪಡೆಯನ್ನೇ ಸೃಷ್ಟಿಸಿತು.

ಕಲ್ಯಾಣವೆಂಬ ಬೆಡಗು

ಡಾ. ಮೂಡ್ನಾಕೂಡು ಚಿನ್ನಸ್ವಾಮಿ

ಕಲ್ಯಾಣ ಎಂದರೆ ಮಂಗಳ ಮತ್ತು ಶುಭ ಎಂಬ ಅರ್ಥ ಪರಿಕಲ್ಪನೆಯನ್ನು ಕೊಡುತ್ತದೆ. ಮಂಗಳಕರವಾದ ಈ ನೆಲದಲ್ಲಿ ಶುಭಕರವಾದ ತತ್ತ್ವಗಳು ಹುಟ್ಟಿ ನೆಲೆ ನಿಂತದ್ದು ಸಹಜವೇ ಆಗಿದೆ. ಕನ್ನಡದ ಸಂದರ್ಭದಲ್ಲಿ ಕಲ್ಯಾಣವೆಂಬುದು ಒಂದು ಭೌಗೋಳಿಕ ಪ್ರದೇಶಕ್ಕೆ ಸೀಮಿತವಲ್ಲ. ಅದೊಂದು ರೂಪಕ. ದೈವೀ ಸಾಮ್ರಾಜ್ಯ ಸೂಚಕವಾದ ರೂಪಕ, ಅಕ್ಕನ ವಚನವೊಂದು ಅದನ್ನು ಕಣ್ಣಿಗೆ ಕಟ್ಟುವಂತೆ ಬಿಡಿಸುತ್ತದೆ.

ಕಲ್ಯಾಣವೆಂಬುದಿನ್ನಾರಿಗೆ ಹೋಗಬಹುದು?/ ಹೋಗಬಾರದು, ಅಸಾಧ್ಯವಯ್ಯಾ. ಎಂದು ಪ್ರಾರಂಭವಾಗುವ ವಚನ 'ಆಸೆ ಆಮಿಷ ಅಳಿದಂಗಲ್ಲದೆ ಕಲ್ಯಾಣದತ್ತಲಡಿಯಿಡಬಾರದು' 'ಒಳಹೊರಗು ಶುದ್ಧ ನಾದಂಗಲ್ಲದೆ ಕಲ್ಯಾಣವ ಹೊಗಬಾರದು' ಎಂಬ ಆಶಯವನ್ನು ವ್ಯಕ್ತಪಡಿಸುತ್ತದೆ. ಇದು ಕಲ್ಯಾಣ ಎಷ್ಟು ಪರಿಶುದ್ಧವಾಗಿತ್ತು ಎಂಬುದನ್ನು ಹೇಳುತ್ತದೆ. ಅದರ ಪಾವಿತ್ರ್ಯವನ್ನು ಕೊಂಡಾಡುತ್ತದೆ. 'ನೀನಾರೆಂಬುದ ಹರಿದಂಗಲ್ಲದೆ ಕಲ್ಯಾಣದ ಒಳಗು ತಿಳಿಯಬಾರದು. ಈ ವ್ಯಾಖ್ಯಾನಗಳು ಬೈಬಲ್ಲಿನಲ್ಲಿ ಬರುವ "The Kingdom of God is within you" ಎಂಬ ಮಾತನ್ನೆ ಹೋಲುತ್ತದೆ. ಇನ್ನೊಂದು ವಚನದಲ್ಲಿ ಅಕ್ಕ ಕಲ್ಯಾಣ ಕೈಲಾಸವೆಂಬ ನುಡಿ ಹಸನಾಯಿತ್ತು/ ಒಳಗೂ ಕಲ್ಯಾಣ ಹೊರಗೂ ಕಲ್ಯಾಣ/ ಇದರಂತುವನಾರು ಬಲ್ಲರಯ್ಯಾ? ಎಂದು ಕೇಳುತ್ತಾಳೆ. ಕಲ್ಯಾಣವೆಂದರೆ ಸದಾಚಾರವೆಂದು ನಾವೇನೆಂದುಕೊಳುತ್ತೇವೆಯೋ ಅವೆಲ್ಲದರ ಸಂಗಮ ಸ್ಥಳ. ಶರಣರು ಸದ್ವಿಚಾರಗಳನ್ನೆ ಕನಲುತ್ತಾ ನಡೆದಾಡಿದ ಸ್ಥಳ.

ಅಲ್ಲಮನೂ ಸಹ ಕಲ್ಯಾಣವನ್ನು ಪ್ರಣತೆಗೆ ಹೋಲಿಸಿದ್ದಾನೆ. ಅಲ್ಲಿ ಭಕ್ತಿರಸವೆಂಬ ತೈಲವಿದೆ. ಆಚಾರವೆಂಬ ಬತ್ತಿ ಇದೆ. ಬಸವಣ್ಣನೆಂಬ ಜ್ಯೋತಿ ಮುಟ್ಟದರೆ ತೊಳಗಿ ಬೆಳಗುವುದು ಶಿವನ ಪ್ರಕಾಶ. ಅಂದರೆ ಪ್ರಜ್ವಲಿಸುವ ಆ ಜಗತ್ತು ಸೃಷ್ಟಿಸಿರುವುದು ಆನಂದಮಯ ಜಗತ್ತು. ಇಂತಹ ತತ್ತ್ವ ಸಮೃದ್ಧಿ ನಾಡಿನಲ್ಲಿ ಶರಣ ಸಾಹಿತ್ಯ ಪರಿಷತ್ತು ಈ ಸಮ್ಮೇಳನಕ್ಕೆ ನನ್ನನ್ನು ಸರ್ವಾಧ್ಯಕ್ಷನನ್ನಾಗಿ ಆಯ್ಕೆ ಮಾಡಿದ್ದು ನನ್ನ ಅರ್ಹತೆಯನ್ನು ಪರುಷಕ್ಕೊಡ್ಡಿದಂತೆ ಕಂಡು ಭಯವಾಗಿದೆ. ಹಾಗಿದ್ದರೂ ಸಂಕೋಚದಿಂದಲೇ ನಿಮ್ಮೆದುರು ನಿಂತಿದ್ದೇನೆ. ಅದಕ್ಕಾಗಿ ಕಲ್ಯಾಣ ನಾಡಿನ ಶರಣ ಪರಿಷತ್ತಿನ ಎಲ್ಲ ಪದಾಧಿಕಾರಿಗಳಿಗೂ ನನ್ನ ವಿನಮ್ರ ಕೃತಜ್ಞತೆಗಳನ್ನು ತಿಳಿಸುತ್ತೇನೆ.

ಅಸಮಾನತೆಯ ವಿರುದ್ಧ ಯುದ್ಧ ಸಾರಿದ ಕಲ್ಯಾಣ

ಭಾರತದ ಮೂಲಮಾತೃಕೆ ಜಾತಿ ಪದ್ಧತಿ, ಇದು ವರ್ಣಾಶ್ರಮ ಆಧಾರಿತವಾದ್ದರಿಂದ ವೇದಪ್ರಣೀತವೆ. ಕರ್ಮಸಿದ್ಧಾಂತವನ್ನು ಸೃಷ್ಟಿಸಿದ ಕರ್ಮಠರ ಕಪಿಮುಷ್ಟಿಗೆ ಸಿಲುಕಿದ್ದ ಭರತವರ್ಷ ವಿಕೃತವಾಗಿ ಬೆಳೆಯುತ್ತಿತ್ತು. ರಾಜರುಗಳು ತೆವಲಿಗಾಗಿ ಯುದ್ಧ ಮಾಡುತ್ತಿದ್ದರು. ಜ್ಞಾನದ ವಾರಸುದಾರರಾದ ಬ್ರಾಹ್ಮಣರು ವೇದಗಳನ್ನೇ ಸರ್ವಸ್ವವೆಂದು ತಿಳಿದು ಅವುಗಳ ಆಚೆ ಈಚೆ ನೋಡುತ್ತಿರಲಿಲ್ಲ. ವೈಶ್ಯರು ವ್ಯಾಪಾರದಲ್ಲಿ ತೊಡಗಿದ್ದರು ಎನ್ನುವುದಕ್ಕಿಂತಲೂ ಶೂದ್ರರಿಂದ ಉತ್ಪನ್ನ ಹಾಗು ಸೇವೆಗಳನ್ನು ಪುಕ್ಕಟೆಯಾಗಿ ಪಡೆದು ಬ್ರಾಹ್ಮಣ ಹಾಗೂ ಕ್ಷತ್ರಿಯರಿಗೆ ಅಲ್ಪ ದರದಲ್ಲಿ ಸಲ್ಲಿಸಿ ತಾವು ಲಾಭ ಮಾಡಿಕೊಳ್ಳುತ್ತಿದ್ದರು. ಇತ್ತ ಬಹು ಸಂಖ್ಯಾತರಾದ ಶೂದ್ರರು ಅಜ್ಞಾನದ ಕೂಪದಲ್ಲಿ ಮುಳುಗಿಹೋಗಿದ್ದರು ಮತ್ತು ತಮ್ಮ ಜಾತಿಗಳಿಗೆ ಅಂಟಿಕೊಂಡಿದ್ದ ವೃತ್ತಿಯನ್ನು ನಿರ್ವಾಹವಿಲ್ಲದೆ ಮಾಡಿಕೊಂಡು ಹೋಗುತ್ತಿದ್ದರು.

ಅಂಥ ಆ ಒಂದು ಕಾಲದಲ್ಲಿ ಅನಾಯಾಸ ರಾಜವೈಭೋಗದ ಸ್ವರ್ಗೋದ್ಯಾನದಲ್ಲಿ ವಿಹರಿಸುತ್ತಿದ್ದ ರಾಜಕುಮಾರನೊಬ್ಬ ಇದ್ದಕ್ಕಿದ್ದಂತೆ ಬಹು ಜನರ ಕನಸ ಕಂಡು ಅವರ ಹಿತಸುಖಗಳನ್ನು, ಲೋಕಾನುಕಂಪವನ್ನು ಹರಸಿ ಹೊರಟ. ಅವನೇ ಬುದ್ಧ. ಕ್ರಿ.ಪೂ. 6ನೇ ಶತಮಾನದಲ್ಲಿಯೇ ಘಟಸಿದ ಬುದ್ಧ ವೇದಗಳನ್ನು, ವರ್ಣಾಶ್ರಮ ಮತ್ತು ಶ್ರೇಣಿಕೃತ ಜಾತಿಗಳನ್ನು, ಯಜ್ಞ ಯಾಗಾದಿ ಪೂಜಾವಿಧಿಗಳನ್ನು ಸಾರಾಸಗಟಾಗಿ ತಿರಸ್ಕರಿಸಿ ಬುದ್ಧಿ ಬಲವುಳ್ಳ ಮನುಷ್ಯ ಬದುಕಿನ ಕಡೆಗೆ ಮುಖಮಾಡಿ ನಿಲ್ಲುವಂತೆ ಮಾಡಿದ. ಜ್ಞಾನೋದಯದ ತರುವಾಯ ತನ್ನ 45 ವರ್ಷಗಳ ಪರ್ಯಟನೆಯಲ್ಲಿ ದೇವರ ಆಶ್ರಯವಿಲ್ಲದ ಒಂದು ಧರ್ಮವನ್ನು ಕಟ್ಟಿದ. ರಾಜರು, ವಣಿಕರು, ಶೂದ್ರಾತಿಶೂದ್ರರು, ಬೆಲ್ಲಕ್ಕೆ ಇರುವೆ ಮುತ್ತುವಂತೆ ಮುತ್ತಿದರು. ಅದು ಜಂಬೂದ್ವೀಪವನ್ನು ಆವರಿಸಿತು. ಗುಲ್ಬರ್ಗ ಜಿಲ್ಲೆಯ ಸನ್ನತಿ ಮತ್ತು ರಾಯಚೂರು ಜಿಲ್ಲೆಯ ಮಸ್ಕಿಯಲ್ಲಿ ದೊರೆತಿರುವ ಶಾಸನಗಳು ಬುದ್ಧನ ವಿಚಾರಗಳು ಕಲ್ಯಾಣ ನಾಡನ್ನು ತಲುಪಿದ್ದವು ಎಂಬುದಕ್ಕೆ ಸಾಕ್ಷಿಯಾಗಿವೆ.

ಕ್ರಿ.ಶ. 3ನೆಯ ಶತಮಾನದ ಅಶೋಕನ ಆಳ್ವಿಕೆಯಲ್ಲಿ ಬೌದ್ಧ ಧರ್ಮ ಉಚ್ಛ್ರಾಯ ಸ್ಥಿತಿಗೆ ತಲುಪಿತ್ತು. ಭಾರತಕ್ಕೆ ಜಗತ್ತಿನ ನವನಾಗರಿಕತೆಯ ಸೂತ್ರ ಹಿಡಿಯ ಬಹುದಾದ ಎಲ್ಲ ಅವಕಾಶಗಳೂ ಒದಗಿ ಬಂದಿದ್ದವು. ಕುತಂತ್ರಗಳ ಫಲ. ಭಾರತಕ್ಕೆ ಮತ್ತೆ ಜಾತಿಧರ್ಮದ ಗರ ಬಡಿಯಿತು. ಅವಸಾನ ಕಾಲದಲ್ಲಿ ಸೃಷ್ಟಿಯಾಗಿದ್ದ ಯಥಾಸ್ಥಿತಿವಾದಿ ಭಗವದ್ಗೀತೆಯನ್ನು ಹಿಡಿದುಕೊಂಡ ಶಂಕರಾಚಾರ್ಯರು ಎಲ್ಲ ತಂತ್ರಗಳನ್ನು ಬಳಸಿ, ಆಧಿಪತ್ಯವು ಸೃಷ್ಟಿಸಿದ ಸ್ವಯಂಪೋಷಕ ಗ್ರಾಮಗಳಲ್ಲಿ ಜಾತಿಗಳನ್ನು ಸ್ಥಿರೀಕರಿಸಿದರು. ಬೌದ್ಧ ಧರ್ಮವು ಹುಟ್ಟಿದ ನಾಡಿನಿಂದಲೇ ಕಾಲು ಕೀಳಬೇಕಾಯಿತು. ಬಹುಸಂಖ್ಯಾತರಾಗಿದ್ದ ಬೌದ್ಧರ ಮತಾಂತರದ ಪ್ರಕ್ರಿಯೆ ಶೂದ್ರರ ಸಂಖ್ಯೆಯನ್ನು ಹೆಚ್ಚಿಸುವುದರೊಂದಿಗೆ ಅಸ್ಪೃಶ್ಯರೆಂಬ ಹೀನಾಯ ಕುಲದ ಒಂದು ದೊಡ್ಡ ಪಡೆಯನ್ನೇ ಸೃಷ್ಟಿಸಿತು. ತಾರತಮ್ಯವೇ ಜೀವನ ವಿಧಾನವಾಯಿತು.

ಈ ಮಧ್ಯೆ ಹಿಂದೂ ಧರ್ಮವೆಂದು ಹೆಸರು ಬದಲಾಯಿಸಿಕೊಂಡ ವೈದಿಕ ಧರ್ಮ, ಜಾತಿಪದ್ಧತಿಯ ಶ್ರೇಣೀಕೃತ ತಾರತಮ್ಯದಿಂದಾಗಿ ಆಗಾಗ್ಗೆ ಪ್ರತಿರೋಧಗಳನ್ನು ಸಹಜವಾಗಿಯೇ ಎದುರಿಸಬೇಕಾಗಿತ್ತು. ಆ ವಿರೋಧಿ ಸಾಂಸ್ಕೃತಿಕ ನಾಯಕರು ಸುಧಾರಕರಾಗಿ ಹೆಸರು ಮಾಡಿದರೂ ತಾತ್ತ್ವಿಕವಾದ ಸಾಮುದಾಯಿಕ ನೆಲೆಯೊಂದನ್ನು ಕಂಡುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಹೆಚ್ಚೆಂದರೆ, ಬದುಕಿನ ಆದರ್ಶಗಳಿಗೆ ಉದಾಹರಣೀಯರಾಗುತ್ತಿದ್ದರು. ಆದರೆ, ಕಲ್ಯಾಣ ನಾಡಿನಲ್ಲಿ ಬಸವಣ್ಣನವರ ಜನನದೊಂದಿಗೆ ಒಂದು ಮಹಾಸ್ಫೋಟ ಸಂಭವಿಸಿತು. ಸುಮಾರು ಒಂದು ಶತಮಾನಗಳ ಕಾಲ ಲೆಕ್ಕ ಹಿಡಿದರೆ (ದೇವರ ದಾಸಿಮಯ್ಯನ ಕಾಲವನ್ನು ಹಿಡಿದು) ಮಾನವ ಕುಲಕ್ಕೆ ಆದರ್ಶಪ್ರಾಯವಾದ, ಸರ್ವಸಮ್ಮತವಾದ, ದೂರದೃಷ್ಟಿಯಿದ್ದ ಒಂದು ಧರ್ಮ ಸಂಸ್ಥಾಪನೆಯಾಯಿತು. ಇದು ನಿರುದ್ದೇಶಪೂರ್ವಕವಾಗಿಯೆ ಸಮಾನ ಮನಸ್ಕರಿಂದ ಸಂಸ್ಕರಿಸಿದ ಧರ್ಮ. ಅದು ಉದಾತ್ತವೂ, ಸರ್ವಶ್ರೇಷ್ಠವೂ ಆಗಿ ಬೆಳೆದಿದೆ. ಇದರ ಧ್ಯೇಯವಾಕ್ಯ ಸಮಾನತೆ ಮತ್ತು ಭ್ರಾತೃತ್ವ ಇದೇ ಲಿಂಗಾಯತ ಧರ್ಮ. ಕಾಯಕ ಮತ್ತು ದಾಸೋಹಗಳ ಅಸ್ತಿವಾರದ ಮೇಲೆನಿಂತು ತೊಳಗಿಬೆಳಗುತ್ತಿರುವ ಮರಧರ್ಮ.

ಬೌದ್ಧಧರ್ಮವನ್ನು ಅಭ್ಯಾಸ ಮಾಡಿದವರಿಗೆ ಲಿಂಗಾಯತ ಧರ್ಮ ಅದರ ಸೋದರ ಧರ್ಮದಂತೆ ಕಂಡು ಬರುತ್ತದೆ. ಬಹಳ ಮುಖ್ಯವಾದ ವ್ಯತ್ಯಾಸವೆಂದರೆ – ಬೌದ್ಧಧರ್ಮ ಅಜ್ಞೇಯತಾವಾದವನ್ನು ಹೇಳುತ್ತದೆ. ಲಿಂಗಾಯತ ಧರ್ಮ ಏಕದೇವೋಪಾಸನೆಯನ್ನು

ಅಂದರೆ ಶಿವಸ್ವರೂಪಿಯಾದ ಇಷ್ಟಲಿಂಗವನ್ನು ದೇವರೆಂದು ಒಪ್ಪಿಕೊಳ್ಳುತ್ತದೆ. ಬುದ್ಧನಂತೆ ಬಸವಣ್ಣನವರು ನಂಬುಗೆಗಳನ್ನು, ಆಚರಣೆಗಳನ್ನು, ಉತ್ಸವಗಳನ್ನು ವಿರೋಧಿಸಿದ್ದಾರೆ. ಸ್ವರ್ಗ ನರಕಗಳ ಪರಿಕಲ್ಪನೆಗಳು ಇಲ್ಲ. ಬುದ್ಧನದು ಧ್ಯಾನ ಮಾರ್ಗವಾದರೆ ಬಸವಣ್ಣನವರದು ಭಕ್ತಿ ಮಾರ್ಗ. ಬುದ್ಧ ದೇವರಿಲ್ಲದ ಧರ್ಮವನ್ನು ಈ ನಾಡಿಗೆ ನೀಡಿದರೆ, ಬಸವಣ್ಣ ದೇವಾಲಯವಿಲ್ಲದ ಧರ್ಮವನ್ನು ಹೇಳಿದರು. ಬುದ್ಧನ ಆಧ್ಯಾತ್ಮಿಕ ಮುಖ ಅಲ್ಲಮನಾದರೆ; ಸಾಮಾಜಿಕ ಮುಖ ಬಸವಣ್ಣ. ಬೌದ್ಧರ ತ್ರಿಶರಣ ಪರಿಕಲ್ಪನೆಯಾದ, ಬುದ್ಧ, ಧಮ್ಮ, ಸಂಘಗಳಂತೆಯೇ ಲಿಂಗವಂತರಿಗೆ ಗುರು, ಲಿಂಗ, ಜಂಗಮ ಎಂಬ ತ್ರಿವಿಧ ಭಕ್ತಿಯಿದೆ. ಇದನ್ನು ಕುರಿತ ಷಣ್ಮುಖಸ್ವಾಮಿಯವರ ಷಟ್‌ಸ್ಥಳ ವಚನ ವೊಂದು ಹೀಗಿದೆ:

ತನುವ ಗುರುವಿಂಗೆ ಕೊಟ್ಟು ಗುರು ಭಕ್ತನಾಗಬೇಕು
ಮನವ ಲಿಂಗಕ್ಕೆ ಕೊಟ್ಟು ಲಿಂಗ ಭಕ್ತನಾಗಬೇಕು
ಧನವ ಜಂಗಮಕ್ಕೆ ಕೊಟ್ಟು ಜಂಗಮ ಭಕ್ತನಾಗಬೇಕು
ಇಂತೀ ತ್ರಿವಿಧ ಭಕ್ತಿಯ ಮರ್ಮವನರಿಯದವರ ಮೆಚ್ಚ
ನಮ್ಮ ಅಂಖಂಡೇಶ್ವರ. (ಸಂ.ವ.ಸಂ. 2677)

ಸೃಷ್ಟಿಗೆ ಕಾರಣವಾದ ದೇವರ ಸಾಂಕೇತಿಕ ಸ್ವರೂಪವನ್ನು ಇಷ್ಟಲಿಂಗವೆಂದು, ಲಿಂಗದ ಬಗ್ಗೆ ನಂಬುಗೆಯನ್ನು, ಜ್ಞಾನವನ್ನು ಕೊಡುವವನು ಗುರು ಎಂದು ಮತ್ತು ಆ ಗುರುವಿನ ಜ್ಞಾನದ ಪ್ರಸಾರ ಮಾಡುವವನೇ ಜಂಗಮನೆಂದು ಲಿಂಗಾಯತ ಧರ್ಮ ಹೇಳುತ್ತದೆ. ಆದ್ದರಿಂದ ಲಿಂಗಾಯತರ ಧರ್ಮದ ಚಾಲಕ ಶಕ್ತಿಗಳಾಗಿ ಗುರು, ಲಿಂಗ, ಜಂಗಮಗಳಿವೆ. ಬಸವಣ್ಣನವರಿಂದಲೇ ಪ್ರಸ್ತುತವಾದ ಧರ್ಮಕ್ಕೆ ಗುರುವಾಗಿರುವವರೂ ಅವರೇ. ಆದ್ದರಿಂದ ಬುದ್ಧನ ಅಂದರೆ ಗುರುವಿನ ಸ್ಥಾನದಲ್ಲಿ ಬಸವಣ್ಣನೂ, ಧರ್ಮದ ಸ್ಥಾನದಲ್ಲಿ ಲಿಂಗವೂ ಅಂದರೆ ಬಸವಾದಿ ಪ್ರಮಥರ ಬೋಧೆ ಲಿಂಗಸ್ವರೂಪದಲ್ಲಿಯೂ, ಸಂಘವನ್ನು ಪ್ರತಿನಿಧಿಸುವ ಬಿಕ್ಕುವಿನ ಸ್ಥಾನದಲ್ಲಿ ಜಂಗಮನೂ ಸಮಾನಾರ್ಥಕವಾಗಿ ನಿಲ್ಲುತ್ತಾರೆ. ಅಲ್ಲಮನ ಅನುಭವ ಮಂಟಪದ ಪರಿಕಲ್ಪನೆ ಬುದ್ಧನ ಸಂಘದ ಪರಿಕಲ್ಪನೆಯೇ ಆಗಿದೆ. ಕಾಲಾಂತರದಲ್ಲಿ ಇವು ಮಠಗಳಾಗಿ, ಆ ಮೂಲಕ ಲಿಂಗಾಯತ ಧರ್ಮ ಸಾಂಸ್ಥೀಕರಣಕ್ಕೆ ಒಳಗಾದಮೇಲೆ ಮೂಲ ಆಶಯಗಳಿಂದ ದೂರವಾದುದು ಬೇರೆಯ ಮಾತು.

ಹುಟ್ಟಿನಿಂದ ಮರಣಿಸುವವರೆಗೆ ಜಾತಿಯೆಂಬ ಬಂಧನದೊಳಗೆ ಅವಮಾನಿತರಾಗಿ ಬದುಕುತ್ತಿದ್ದ ಕೆಳಜಾತಿ ಶೂದ್ರವರ್ಗಕ್ಕೆ ಲಿಂಗಾಯತ ಧರ್ಮ ಒಂದು ಬಿಡುಗಡೆಯ ಹಾದಿಯಾಗಿ ಸಿಕ್ಕಿತು. ಎಚ್ಚೆತ್ತ ಜನರು ಓಡೋಡಿ ಬಂದು ಅಪ್ಪಿಕೊಂಡರು. ಇಂಥ ಬಿಡುಗಡೆ ಹಿಂದೂ ಧರ್ಮದಲ್ಲಿ ಸತ್ತಮೇಲೆಯೇ ಮುಂದಿನ ಜನ್ಮದಲ್ಲಿ ಸಿಗಬಹುದೆಂಬ ಭ್ರಮೆಯಾಗಿದೆ. ವಚನಕಾರರ ವಿಪುಲವಾದ ಸಾಹಿತ್ಯವನ್ನು ನೋಡಿದರೆ ಮಾರ್ಕ್ಸ್‌ವಾದೀ ಬೀಜಗಳು, ಫ್ರೆಂಚ್ ಕ್ರಾಂತಿಯ ಪ್ರೇರಣೆಗಳು ನಮ್ಮ ಕನ್ನಡ ನೆಲದ ವಚನ ಸಾಹಿತ್ಯದಲ್ಲಿ ಮೊದಲೇ ಕಾಣಿಸಿಕೊಂಡಿದ್ದವು ಎನ್ನುವುದು ಹೆಮ್ಮೆಯ ವಿಚಾರ.

ಒಂದು ಧರ್ಮಕ್ಕೆ ಒಳಗೊಳ್ಳುವಿಕೆ (inclusiveness) ಇಲ್ಲದಿದ್ದರೆ ಅದು ಧರ್ಮವೆನಿಸಿಕೊಳ್ಳವುದಿಲ್ಲ. ಲಿಂಗಾಯತ ಧರ್ಮಕ್ಕೆ 'ಇವ ನಮ್ಮವ ಇವ ನಮ್ಮವ' ಎಂದು ಬಾಚಿ ತಬ್ಬಿಕೊಳ್ಳುವ ವಿಶಾಲ ತೆಕ್ಕೆ ಇದೆ. ವೈದಿಕ ಧರ್ಮ 'ಇವ ಯಾರವ, ಇವ ಯಾರವ' ಎಂದು ಜಾತಿ

ಹಿಂದೂ-ಬ್ರಾಹ್ಮಣ ಧರ್ಮದಲ್ಲಿ ಪ್ರತಿಪಾದಿತವಾಗಿರುವ ಕರ್ಮ ಸಿದ್ಧಾಂತವು ವಿಧಿಲಿಖಿತವನ್ನು ಹೇಳುತ್ತದೆ. ಆದ್ದರಿಂದ ಅದು ಮನುಷ್ಯನ ಸೃಜನಶಕ್ತಿಯ ವಿಸ್ಮಯ ಕಾರಕ ಸಾಧ್ಯತೆಗಳನ್ನು ನಾಶಮಾಡುತ್ತದೆ, ನೈತಿಕ ಬಲವನ್ನು ಕುಗ್ಗಿಸುತ್ತದೆ. ಅಂದರೆ, ಕೆಳಜಾತಿಯ ವ್ಯಕ್ತಿ ತನಗೆ ಒದಗಿ ಬಂದ ಗತಿ ಅದು ತನ್ನ ಹಿಂದಿನ ಜನ್ಮದ ಕರ್ಮ ಫಲವೆಂದು ತಿಳಿದು ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಅಡಿಯಾಳಾಗಿ ಬದುಕುವುದನ್ನು ಕಲಿತುಕೊಳ್ಳುತ್ತಾನೆ. ಅವನನ್ನು ಇನ್ನೂ ಹೆಚ್ಚು ಮೆದುವಾಗಿಸಲು, ವಿಧೇಯನಾಗಿಸಲು ಪುನರ್‌ಜನ್ಮದ ಅಸ್ತ್ರವನ್ನು ಬಿಡಲಾಗಿದೆ. ಈ ಜನ್ಮದಲ್ಲಿ ಬ್ರಾಹ್ಮಣರ ಅಥವಾ ಮೇಲುಜಾತಿಯ ಸೇವೆ ಮಾಡಿದರೆ ಮರುಜನ್ಮದಲ್ಲಿ ಅವನಿಗೆ ಒಳ್ಳೆಯ ಸ್ಥಿತಿ ಲಭಿಸುತ್ತದೆ ಎಂದು ನಂಬಿಸಿ ಬ್ರಾಹ್ಮಣ ಧರ್ಮದ ಸಾತತ್ಯವನ್ನು ಕಾಪಾಡಿಕೊಂಡು ಬರಲಾಗಿದೆ.

ಮೂಲವನ್ನು ತಿಳಿದುಕೊಳ್ಳಲು ಪ್ರಶ್ನಿಸುತ್ತಲೇ ಇರುತ್ತದೆ. ಬ್ರಾಹ್ಮಣ ಧರ್ಮಕ್ಕೆ ಮಡಿ ಮೈಲಿಗೆ ಎಂಬ ಅಸಹನೆ ಇದ್ದರೆ ಶರಣ ಧರ್ಮಕ್ಕೆ 'ಆವ ಕುಲವಾದಡೇನು ಶಿವಲಿಂಗವಿದ್ದವನೆ ಕುಲಜನು' ಎಂಬ ಸಹನೆ ಇದೆ. ಪ್ರತ್ಯೇಕತೆಯೇ ಜಾತಿ ಧರ್ಮದ ಮೂಲ ಮಂತ್ರ. ಎಲ್ಲರನ್ನೂ ಒಂದುಗೂಡಿಸುವುದೇ ಲಿಂಗ ಧರ್ಮ. ಚಾತುರ್ವರ್ಣದ ಇತಿಹಾಸವೆಂದರೆ ಶೂದ್ರರು ಮತ್ತು ಮಹಿಳೆಯರ ಶೋಷಣೆಯ ಇತಿಹಾಸ ಎಂದು ಹಿಂದೂ ಇತಿಹಾಸಜ್ಞರಾದ ರಾಜವಾಡೆ ಅವರೇ ಹೇಳುತ್ತಾರೆ. ಎಲ್ಲ ರೀತಿಯ ಶೋಷಣೆಗಳಿಂದಲೂ ಮುಕ್ತಗೊಳಿಸುವುದೇ ಬಸವ ಧರ್ಮ.

ನಿರ್ಜಾತೀಕರಣ ಅಥವಾ ಜಾತಿ ವಿನಾಶ

ಲಿಂಗಾಯತ ಧರ್ಮದ ದೊಡ್ಡ ಕೊಡುಗೆ ಎಂದರೆ ನಿರ್ಜಾತೀಕರಣ, ಆ ಮೂಲಕ ಜಾತಿಗಳ ನಾಶ. 'ಎನಗಿಂತ ಕಿರಿಯರಿಲ್ಲ' ಎನ್ನುವ ಬಸವಣ್ಣ ವಿನಯವನ್ನು ಸಮರ್ಥವಾಗಿ ಪ್ರದರ್ಶಿಸುತ್ತಾರೆ. ಹಾಗೆಯೇ ನಿರ್ಜಾತೀಕರಣದಿಂದ ಸಮಾಜವನ್ನು ಜಾತಿಯಿಂದ ಹೊರಕ್ಕೆ ತರುತ್ತಾರೆ. ಜಾತಿ ವಿನಾಶಕ್ಕಾಗಿ ಬಸವಣ್ಣ ಆಯ್ಕೆ ಮಾಡಿಕೊಂಡ ಮೊದಲ ಕ್ರಿಯೆ ಅಂತರ್‌ಜಾತಿ ಮದುವೆ. ಮಧುವರಸನ ಮಗಳಿಗೂ ಹರಳಯ್ಯನ ಮಗನಿಗೂ ಮದುವೆ ಮಾಡಿಸಿದ ಬಸವಣ್ಣ ಕ್ರಾಂತಿಯೋಗಿ ಎನಿಸಿಕೊಳ್ಳುತ್ತಾರೆ. 'ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಕೊಡುವುದು ಕೊಂಬುವುದು ಸದಾಚಾರ, ಉಳಿದುದೆಲ್ಲಾ ಅನಾಚಾರ' ಎಂಬ ಚನ್ನಬಸವಣ್ಣನ ಮಾತು ಅರ್ಥಗರ್ಭಿತವಾಗಿದೆ. ಈ ಕೊಡುವ ಕೊಂಬುವ ಸದಾಚಾರ ಅಂದರೆ ಹೊಕ್ಕು ಬಳಕೆ ಹಿಂದೂ ಧರ್ಮದ ಸಂರಚನೆಯಲ್ಲಿ ಜಾತಿಯಿಂದ ಹೊರಗೆ ಕಾಣಬರುವುದಿಲ್ಲ. ಇದೇ ಅಸ್ತ್ರವನ್ನು ಜಾತಿ ವಿನಾಶಕ್ಕಾಗಿ ಬಾಬಾಸಾಹೇಬ್ ಅಂಬೇಡ್ಕರ್‌ರವರು ಬಳಸುತ್ತಾರೆ. ಅಂತರ್ಜಾತೀಯ ಮದುವೆ, ಅಂತರ್ಜಾತೀಯ ಸಹ ಭೋಜನವನ್ನು ಪ್ರಬಲವಾಗಿ ಪ್ರತಿಪಾದಿಸಿದವರು ಅಂಬೇಡ್ಕರ್.

ಹಿಂದೂ-ಬ್ರಾಹ್ಮಣ ಧರ್ಮದಲ್ಲಿ ಪ್ರತಿಪಾದಿತವಾಗಿರುವ ಕರ್ಮ ಸಿದ್ಧಾಂತವು ವಿಧಿಲಿಖಿತವನ್ನು ಹೇಳುತ್ತದೆ. ಆದ್ದರಿಂದ ಅದು ಮನುಷ್ಯನ ಸೃಜನಶಕ್ತಿಯ ವಿಸ್ಮಯ ಕಾರಕ ಸಾಧ್ಯತೆಗಳನ್ನು ನಾಶಮಾಡುತ್ತದೆ, ನೈತಿಕ ಬಲವನ್ನು ಕುಗ್ಗಿಸುತ್ತದೆ. ಅಂದರೆ, ಕೆಳಜಾತಿಯ ವ್ಯಕ್ತಿ ತನಗೆ ಒದಗಿ ಬಂದ ಗತಿ ಅದು ತನ್ನ ಹಿಂದಿನ ಜನ್ಮದ ಕರ್ಮ ಫಲವೆಂದು ತಿಳಿದು ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಅಡಿಯಾಳಾಗಿ ಬದುಕುವುದನ್ನು ಕಲಿತುಕೊಳ್ಳುತ್ತಾನೆ. ಅವನನ್ನು ಇನ್ನೂ ಹೆಚ್ಚು ಮೆದುವಾಗಿಸಲು, ವಿಧೇಯನಾಗಿಸಲು ಪುನರ್‌ಜನ್ಮದ ಅಸ್ತ್ರವನ್ನು ಬಿಡಲಾಗಿದೆ. ಈ ಜನ್ಮದಲ್ಲಿ ಬ್ರಾಹ್ಮಣರ ಅಥವಾ ಮೇಲುಜಾತಿಯ ಸೇವೆ ಮಾಡಿದರೆ ಮರುಜನ್ಮದಲ್ಲಿ ಅವನಿಗೆ ಒಳ್ಳೆಯ ಸ್ಥಿತಿ ಲಭಿಸುತ್ತದೆ ಎಂದು ನಂಬಿಸಿ ಬ್ರಾಹ್ಮಣ ಧರ್ಮದ ಸಾತತ್ಯವನ್ನು ಕಾಪಾಡಿಕೊಂಡು ಬರಲಾಗಿದೆ.

ಅವನು ಜಾತಿ ಕಾನೂನನ್ನು ಮುರಿಯಲಾಗದಂತೆ ಶಾಸ್ತ್ರಗಳು ಸೃಷ್ಟಿಯಾಗಿವೆ. 'ಪುನರ್‌ಜನ್ಮ ಎಂಬ ಕಾನೂನು ಮನುಷ್ಯನನ್ನು ಮತ್ತೆ ಕೆಳಗೆ ಜಗ್ಗಿ ನಾಯಿಯ ಕರುಳಿನಲ್ಲಿಯ ಹುಳುವಿನ ಜನ್ಮಕ್ಕೆ ತಂದಿರಿಸುತ್ತದೆ' ಎಂಬ ಮ್ಯಾಕ್ಸ್‌ವೆಬರ್‌ನ ಮಾತು ಇಲ್ಲಿ ಉಲ್ಲೇಖನೀಯ. ಇಂತಹ ಹೇಯವಾದ ಕರ್ಮಸಿದ್ಧಾಂತವನ್ನು ಮತ್ತು ಪುನರ್‌ಜನ್ಮವನ್ನು ನಿರಾಕರಿಸಿದವರು ಬಸವಣ್ಣ. ಅವರ ಉದ್ದೇಶ ಮಾನವ ಸಂಬಂಧಗಳನ್ನು ಸಮಾನತೆಯ ಆಧಾರದ ಮೇಲೆ ನೆಲೆಗೊಳಿಸುವುದೇ ಆಗಿತ್ತು. ವೃತ್ತಿ ನಮ್ಮನ್ನು ಹುಟ್ಟಿನ ಕಾರಣಗಳಿಂದ ಆರಿಸಿಕೊಳ್ಳುವುದನ್ನು ಬಿಡದೆ ನಾವೇ ವೃತ್ತಿಯನ್ನು ಆರಿಸಿಕೊಳ್ಳುತ್ತೇವೆ ಎಂದು ಸಾರಿ ವೃತ್ತಿ ಮತ್ತು ಜಾತಿಯ ಸಂಬಂಧಗಳನ್ನು ಒಡೆದುದು ಬಸವಣ್ಣನವರ ಸಾಧನೆ. ಬಾಲ್ಯದಲ್ಲಿಯೇ ತನ್ನ ಮೈಮೇಲಿನ ಜನಿವಾರವನ್ನು ಕರ್ಮಲತೆಯೆಂದು ಸರಿದು ಹಾಕುವ ಮೂಲಕ ಬ್ರಾಹ್ಮಣಧರ್ಮದ ಸಾರವಾದ ಮಡಿ ಮೈಲಿಗೆಗಳ ಭೇದವನ್ನು ಅಲ್ಲಗಳೆದವರು ಬಸವಣ್ಣ.

ಅಸ್ಪೃಶ್ಯತೆ ನಿವಾರಣೆಯ ಹೋರಾಟ

ಕರ್ನಾಟಕದಲ್ಲಿ ಅಸ್ಪೃಶ್ಯತೆ ನಿವಾರಣೆಯ ಹೋರಾಟ ಶರಣರಿಂದಲೇ ಪ್ರಾರಂಭವಾಯಿತು. ವೇದ ಕಾಲಾನಂತರ ಸ್ಮೃತಿಗಳ ಕಾಲಕ್ಕೆ ಜನ್ಮದಿಂದಲೇ ವರ್ಣವನ್ನು ಗುರುತಿಸುವ ಕ್ರಮ ಆರಂಭವಾಗಿ ವೃತ್ತಿಗಳು ಟಿಸಿಲೊಡೆದು ಕ್ರಮೇಣ ಜಾತಿಗಳಾಗಿ ಬೆಳೆಯತೊಡಗಿದವು. ಉತ್ತಮ ವೃತ್ತಿ ಶ್ರೇಷ್ಠ, ಕೀಳು ವೃತ್ತಿ ಕನಿಷ್ಠ ಎಂಬ ಭಾವನೆ ಬೆಳೆದು ಬ್ರಾಹ್ಮಣ ಮೇಲು, ಶೂದ್ರ ಕೀಳು ಎಂಬ ಕ್ರೂರ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಿತು. ಈ ವ್ಯವಸ್ಥೆ ಪೂರ್ಣ ಅನುಷ್ಠಾನಕ್ಕೆ ಬಂದಿದ್ದು ಗುಪ್ತರ ಕಾಲದಲ್ಲಿ ಎಂದು ಇತಿಹಾಸ ಹೇಳುತ್ತದೆ. ಈ ಜಾತಿ ಜಾಲ ಎಷ್ಟು ವಿಶಾಲವಾಗಿ ಬೆಳೆದಿದೆ ಎಂದರೆ ಭಾರತದಲ್ಲಿ ಇಂದು 6000ಕ್ಕೂ ಮಿಕ್ಕು ಜಾತಿಗಳು ಅಸ್ತಿತ್ವದಲ್ಲಿ ಇವೆ ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಹೀಗೆ ಬಹುಸಂಖ್ಯಾತರಾಗಿರುವ ಶೂದ್ರವರ್ಗಕ್ಕೆ ಸ್ಮೃತಿಗಳ ಆಧಾರದ ಮೇಲೆ ಕಾನೂನುಗಳನ್ನು ರಚಿಸಿ ಶತ ಶತಮಾನಗಳಿಂದ ವಿದ್ಯೆಯ ಹಕ್ಕು, ಸಂಪ

ತ್ತಿನ ಹಕ್ಕುಗಳನ್ನು ನಿರಾಕರಿಸಲಾಯಿತು. ಈ ಸಮಾಜ ದ್ರೋಹಿ ನಿಯಮಗಳನ್ನು ಆಧರಿಸಿ ಬೆಳೆದ ಹಿಂದೂ ಧರ್ಮದ ಪಾದಗಳಿಗೆ (ಪಾದದಲ್ಲಿ ಹುಟ್ಟಿದವರಿಗೆ) ಪಾರ್ಶ್ವ ವಾಯು ಬಡಿದಿತ್ತು. ಅಂತಹ ದುಷ್ಟವ್ಯವಸ್ಥೆಯನ್ನು ಭೇದಿಸುವಲ್ಲಿ ಬಸವಪ್ರಣೀತವಾದ ಲಿಂಗದೀಕ್ಷೆ ಬಹುಜನ ವಲಯದಲ್ಲಿ ಒಂದು ಕ್ರಾಂತಿಯನ್ನೇ ಮಾಡಿತು. ಊರನ್ನು ಪ್ರವೇಶಿಸುವುದು ದುರ್ಲಭವಾಗಿದ್ದ ಅಸ್ಪೃಶ್ಯರಿಗೆ ಕಲ್ಯಾಣ ಕೇರಿಗಳಲ್ಲಿ ಮುಕ್ತವಾಗಿ ಪ್ರವೇಶ ದೊರಕಿತು. ಸ್ಪೃಶ್ಯರಾಗಿದ್ದ ಶರಣರು ಅಸ್ಪೃಶ್ಯರ ಕೇರಿಗೆ ಹೋಗುತ್ತಿದ್ದರು. 'ಕಂಡ ಭಕ್ತರಿಗೆ ಕೈ ಮುಗಿಯುವುವಾತನೆ ಭಕ್ತ' ಎಂಬುದು ಮಂತ್ರವಾಗಿ ಸ್ಪೃಶ್ಯರು ಅಸ್ಪೃಶ್ಯರಿಗೆ ಮತ್ತು ಅಸ್ಪೃಶ್ಯರು ಸ್ಪೃಶ್ಯರಿಗೆ ಕೈಮುಗಿದು 'ಶರಣು' ಹೇಳುವುದು ಆಚರಣೆಗೆ ಬಂದಿತು. ಸಾರ್ವತ್ರಿಕವಾಗಿ ಜಾರಿಗೆ ಬಂದ ಈ ಕ್ರಿಯೆಯನ್ನು ನೋಡಿ ಹಿಂದೂ ಬ್ರಾಹ್ಮಣ ಧರ್ಮೀಯರಿಗೆ ನಡುಕ ಹುಟ್ಟಿತು. ಹರಳಯ್ಯ, ಮಾದಾರ ಚನ್ನಯ್ಯ, ಮಾದಾರ ಧೂಳಯ್ಯ, ಡೋಹರ ಕಕ್ಕಯ್ಯ, ಉರಿಲಿಂಗ ಪೆದ್ದಿ, ಕಾಳವ್ವೆ, ನುಲಿಯ ಚಂದಯ್ಯ, ಮುಂತಾದ ಅಸ್ಪೃಶ್ಯರು ಈ ಸಾಮಾಜಿಕ ಕ್ರಾಂತಿಯಲ್ಲಿ ಭಾಗಿಯಾಗಿದ್ದರು. ಆ ಕಾಲದಲ್ಲಿ ಅಸ್ಪೃಶ್ಯರಿಗೆ ಅಕ್ಷರ ಕಲಿಯುವ ಅನುಕೂಲತೆಗಳನ್ನು ಒದಗಿಸಿದವರು ಶರಣರು. ಅಸ್ಪೃಶ್ಯ ಶರಣರನ್ನು 'ಹಿರಿಯ ಮಾಹೇಶ್ವರರು' ಎಂದು ಕರೆದರು. ಅವರ ಕೀಳರಿಮೆಯನ್ನು ಹೋಗಲಾಡಿಸಲು ಸಹಾಯ ಮಾಡಿದರು.

ಇಂಥ ಮಹತ್ಕ್ರಾಂತಿಗೆ ಬುನಾದಿ ಹಾಕಿದವರು ಬಸವಣ್ಣ. ಒಮ್ಮೆ ರಾಜನ ಆಸ್ಥಾನಕ್ಕೆ ಹೊರಟಿದ್ದಾಗ ದೂರದಲ್ಲೆಲ್ಲೊ ಶಿವಸ್ತೋತ್ರ ಕೇಳಿಸಿತು. ಯಾರೋ ಶಿವಪೂಜೆಯಲ್ಲಿ ತೊಡಗಿದ್ದಾರೆಂದು ಸುಳುಹು ಹಿಡಿದು ಹೋದಾಗ ಸಿಕ್ಕಿದ್ದು ಹೊಲೆಯನಾದ ಸಂಬೋಳಿ ನಾಗಿದೇವನ ಮನೆ. ಆ ಕಾಲದಲ್ಲಿ ಹೊಲೆಯ ಬೀದಿಯಲ್ಲಿ ಹೊರಟನೆಂದರೆ 'ಸಂಬೋಳಿ, ಸಂಬೋಳಿ' ಎಂದು ಕೂಗಿಕೊಂಡು ಹೋಗಬೇಕಾಗಿತ್ತು. ಯಾಕೆಂದರೆ ಅವನು ಅಶುದ್ಧವೂ, ಅಪವಿತ್ರವೂ, ಅಪಶಕುನವೂ ಆದ ಜನ್ಮ ಎಂದು ಪರಿಗಣಿಸಲ್ಪಟ್ಟಿತ್ತು. ಅವನನ್ನು ಜಾತಿಜನ ನೋಡಲಾರರು, ಅದರಲ್ಲೂ ಮೇಲ್ಜಾತಿ ಜನರಿಗೆ ಅವನು ಮೈಲಿಗೆ. ಅಂಥವನ ಮನೆಗೆ ಹೋಗಿ ಬಸವಣ್ಣ ನೋಡುತ್ತಾರೆ, ನಾಗಿದೇವ ಇಷ್ಟಲಿಂಗಪೂಜೆಯಲ್ಲಿ ತೊಡಗಿದ್ದಾನೆ. ಆ ಮನೆಯಲ್ಲಿ ಪೂಜೆಯ ನಂತರ ಪ್ರಸಾದ ಸ್ವೀಕರಿಸದಿರುವುದು ಹೇಗೆ? ಬಸವಣ್ಣ ಊಟಮಾಡಿಯೆ ಬರುತ್ತಾರೆ. ಇದನ್ನು ಬ್ರಾಹ್ಮಣರು ದೊಡ್ಡ ಸುದ್ದಿಯನ್ನಾಗಿ ಮಾಡಿ ರಾಜನಿಗೆ ದೂರು ಹೇಳುತ್ತಾರೆ. ಬಿಜ್ಜಳನು ನಡು ಬೀದಿಯಲ್ಲಿ ನ್ಯಾಯವಿಚಾರಣೆ ನಡೆಸುತ್ತಾನೆ. ರಾಜ ಕೊನೆಯವರೆಗೂ ಪರಿವರ್ತನೆಯಾಗಲಿಲ್ಲ; ಅದು ಇತಿಹಾಸ. ಆದರೆ ಜನರು ಪರಿವರ್ತನೆಯಾಗಿ ಶರಣರಾಗುತ್ತಾರೆ. ಸಂಸ್ಕೃತಿಯನ್ನು, ಧರ್ಮವನ್ನು ಜತೆಜತೆಗೆ ಕಟ್ಟುತ್ತಾರೆ.

ಇಂಥದೇ ಒಂದು ಘಟನೆ ಬುದ್ಧನಿಗೂ ಎದುರಾಗುತ್ತದೆ. ಆನಂದ, ಸ್ವಾಮಿಕಾರ್ಯಕ್ಕಾಗಿ ಹೊರಟಿರುವಾಗ ಒಮ್ಮೆ ಬಾಯಾರಿಕೆಯಾಗಿ ನೀರು ಕುಡಿಯಲೆಂದು ಹಳ್ಳಿಯ ಹತ್ತಿರವೇ ಇದ್ದ ಬಾವಿಯ ಬಳಿಗೆ ಬರುತ್ತಾನೆ. ಅಲ್ಲಿ ಪಾಕತಿ ಎಂಬ ಮಾತಂಗ ಕನ್ಯೆಯೊಬ್ಬಳು ನೀರು ಸೇದುತ್ತಿರುತ್ತಾಳೆ. ಆನಂದ, ಪಾಕತಿಯನ್ನು ಕುರಿತು ಕುಡಿಯಲೊಂದಿಷ್ಟು ನೀರು ಕೊಡು ತಾಯಿ ಎಂದು ಕೇಳುತ್ತಾನೆ. ಪಾಕತಿಗೆ ಆಶ್ಚರ್ಯವಾಗಿ 'ಓ ಬ್ರಾಹ್ಮಣ, ನನ್ನ ಕೈಯಲ್ಲಿ ನೀರು ಕುಡಿದರೆ ನಿನ್ನ ಪಾವಿತ್ರ್ಯ ಹಾಳಾಗುತ್ತದೆ, ನಾನು ಮಾತಂಗ ಕನ್ಯೆ' ಎಂದು ಹೇಳುತ್ತಾಳೆ. ಅದಕ್ಕೆ ಆನಂದ 'ನಾನು ಕೇಳಿದ್ದು ಕುಡಿಯಲು ನೀರನ್ನು, ನಿನ್ನ ಜಾತಿಯನ್ನಲ್ಲ' ಎಂದು ಹೇಳುತ್ತಾನೆ.

ಪಾಕತಿಗೆ ಅತೀವ ಸಂತೋಷವಾಗಿ ಕುಡಿಯಲು ನೀರು ಕೊಡುತ್ತಾಳೆ. ಆನಂದ ನೀರು ಕುಡಿದು ಹೊರಡುತ್ತಾನೆ. ಆದರೆ ಅವಳು ಆನಂದನನ್ನು ಹಿಂಬಾಲಿಸುತ್ತಾಳೆ. ಆನಂದ ಬುದ್ಧನ ಶಿಷ್ಯನೆಂದು ತಿಳಿದು ಮತ್ತೂ ಸಂತೋಷದಿಂದ 'ನಾನು ಆನಂದನನ್ನು ಪ್ರೀತಿಸುತ್ತೇನೆ, ಅವನ ಕೂಡ ಇರುವುದಕ್ಕೆ ಅವಕಾಶ ಕೊಡು' ಎಂದು ಬುದ್ಧನನ್ನು ಬೇಡುತ್ತಾಳೆ. ಅದಕ್ಕೆ ಬುದ್ಧನ ಉತ್ತರ ಹೀಗಿದೆ. 'ಪಾಕತಿ ನಿನ್ನ ಹೃದಯ ಪ್ರೀತಿಯಿಂದ ತುಂಬಿದೆ. ನಿನ್ನ ಭಾವನೆಗಳು ನಿನಗೆ ಅರ್ಥವಾಗುತ್ತಿಲ್ಲ. ನೀನು ಪ್ರೀತಿಸುತ್ತಿರುವುದು ಆನಂದನನ್ನಲ್ಲ, ಅವನು ನಿನಗೆ ತೋರಿದ ದಯೆಯನ್ನು. ನೀನು ಅವನಂತೆ ಇತರರಲ್ಲಿ ದಯೆಯನ್ನು ಬೆಳೆಸಿಕೊ' ಮುಂದುವರೆದು ಬುದ್ಧ ಹೇಳುವ ಮಾತು ಮಾರ್ಮಿಕವಾಗಿದೆ. ರಾಜನು ತನ್ನ ಸೇವಕರಿಗೆ ತೋರುವ ದಯೆಯಲ್ಲಿ ಉದಾರ ಗುಣವಿದೆ (merit) ಆದರೆ ಸೇವಕನಾದವನು ರಾಜನ ತಪ್ಪನ್ನು ಮನ್ನಿಸಿ ದಯೆ ತೋರುವುದರಲ್ಲಿ ಮಹಾ ಉದಾರ ಗುಣವಿದೆ (greater merit) ಎಂದು ಹೇಳುತ್ತಾನೆ.

ಈ ಎರಡೂ ಘಟನೆಗಳು ಶರಣರಿಗೆ ಮಾದರಿಯಾಗಿವೆ. ಒಮ್ಮೆ ಶರಣರಾದರೆಂದರೆ ತಮ್ಮನ್ನು ಬಿಡುಗಡೆ ಮಾಡಿಕೊಳ್ಳುವುದಷ್ಟೆ ಅಲ್ಲ ತಮ್ಮ ಶೋಷಕರನ್ನು, ಅವರ ಪೂರ್ವಿಕರನ್ನು ಕ್ಷಮಿಸುತ್ತಾರೆ ಮತ್ತು ದಯೆ ನೀಡುವ ಉದಾರಗುಣಿಗಳಾಗುತ್ತಾರೆ.

ಇಂದಿಗೂ ಪ್ರಚಲಿತವಿರುವ ಅಸ್ಪೃಶ್ಯತೆ

ಅಸ್ಪೃಶ್ಯತೆ ನಿವಾರಣೆಗೆ ಹೋರಾಟ ನಡೆಸಿದ ಧರ್ಮದೊಳಗೆ ಅಸ್ಪೃಶ್ಯತೆ ಆಚರಣೆ ನುಸುಳುವುದು ಎಂತಹ ವಿಪರ್ಯಾಸದ ಸಂಗತಿ. ಮಠಗಳು ಮನಸ್ಸು ಮಾಡಿದರೆ ಅಸ್ಪೃಶ್ಯತೆಯಂಥ ಕೀಳು ಆಚರಣೆಯನ್ನು ಹೋಗಲಾಡಿಸಬಹುದು ಎಂದು ಭಾಲ್ಕಿ ಮಠದ ಪೂಜನೀಯ ಶ್ರೀ ಚನ್ನಬಸವ ಪಟ್ಟದೇವರು ಮತ್ತು ಗದಗ - ಡಂಬಳ ಮಠದ ಶ್ರೀ ತೋಂಟದ ಸಿದ್ಧಲಿಂಗಸ್ವಾಮೀಜಿಯವರ ಅನುಭವಕ್ಕೆ ಬಂದ, ದಾಖಲಾಗಿರುವ ಎರಡು ಘಟನೆಗಳನ್ನು ನೆನಪಿಸುತ್ತೇನೆ. ನಾಗನೂರು ಗ್ರಾಮದಲ್ಲಿ ಶಿವಾನುಭವ ಪ್ರವಚನ ಮುಗಿಸಿದ ಮೇಲೆ ದೂರದಲ್ಲಿ ಕೆಳಗಡೆ ಕುಳಿತಿದ್ದ ದಲಿತರು ಹತ್ತಿರ ಬರದೆ ಅಲ್ಲಿಂದಲೇ ನಮಸ್ಕಾರ ಮಾಡಿ ಹೊರಡುವವರಿದ್ದರು. ಆಗ ಭಾಲ್ಕಿ ಜಂಗಮರು 'ನೀವು ಮೇಲೆ ಬಂದು ಪ್ರಸಾದ ತೆಗೆದುಕೊಳ್ಳುವವರೆಗೂ ನಾವು ಇಲ್ಲಿಂದ ಏಳುವುದಿಲ್ಲ' ಎಂದು ಹಠ ಹಿಡಿದರು. ಆಗ ಅವರು ಮೇಲೆ ಬಂದು ಆಶೀರ್ವಾದ ಪಡೆದುಕೊಂಡರು.

ಊರಿನ ಲಿಂಗಾಯತರು ಸಿಟ್ಟಾಗುತ್ತಾರೆಂದು ದಲಿತರು ಹಾಗೆ ಮಾಡಿದ್ದರು. ಇನ್ನೊಮ್ಮೆ ಗದಗ ಸಮೀಪದ ದೋಣಿ ಹಳ್ಳಿಯ ದಲಿತರ ಕೇರಿಯಲ್ಲಿ ಭಜನಾ ಮಂಡಳಿಗೆ ನಾಮಕರಣ ಮಾಡಲು ಹೋದರೆಂಬ ಕಾರಣಕ್ಕೆ ನೀಲಕಂಠ ಎಂಬ ಜಂಗಮರನ್ನು ಲಿಂಗಾಯತರು ಅವಮಾನ ಮಾಡಿದರು. ಆ ಕಾರಣಕ್ಕೆ ಗದುಗಿನ ತೋಂಟದಾರ್ಯ ಸ್ವಾಮಿಗಳು ಆ ಊರಿಗೆ ಭಿಕ್ಷೆಗೆ ಹೋಗುವುದನ್ನು ನಿಲ್ಲಿಸಿದರು. ನಾಯಿ, ಬೆಕ್ಕು, ಹಂದಿಗಳನ್ನು ಮುಟ್ಟುತ್ತೀರಿ, ಮನುಷ್ಯರನ್ನು ಮುಟ್ಟುವುದಿಲ್ಲ ಎಂದು ಅವರನ್ನು ತಿರಸ್ಕರಿಬಿಟ್ಟಿದ್ದರು. ಆ ಜನ ತಾವು ಮಾಡಿದ ತಪ್ಪನ್ನು ಒಪ್ಪಿಕೊಂಡು ಈಗ ಪರಸ್ಪರ ಸಹಕಾರ ಭಾವನೆಯಿಂದ ಇದ್ದಾರೆಂದು ವರದಿಯಾಗಿದೆ. ಹೀಗೆ ಸಮಾಜಪರ ಕಾರ್ಯಗಳಿಗೆ ತೊಡಗಿ ನಮ್ಮ ಸಂಸ್ಕೃತಿಯನ್ನು ಉನ್ನತೀಕರಿಸುವ ಮನಸ್ಸಿದ್ದರೆ ಮಠಾಧಿಪತಿಗಳು ಬದಲಾವಣೆ ತರಲು ಸಾಧ್ಯವಿದೆ. ಇಂತಹ ಮನುಷ್ಯ ಪರ ವಿಚಾರಗಳತ್ತ ಗಮನ ಕೊಡದೇ ಲಿಂಗಾಯತ ಮಠಗಳು ಸಂಸ್ಕೃತವನ್ನು ಕಲಿಸುವುದು, ವೇದ ಪಾಠಗಳನ್ನು ಹೇಳಿಕೊಡುವಂಥ ನಿರರ್ಥಕ ಕೆಲಸಗಳಲ್ಲಿ ತೊಡಗಿರುವುದು ವಿಪರ್ಯಾಸದ ಸಂಗತಿ.

ಇದೇ ಗುಲ್ಬರ್ಗ ಜಿಲ್ಲೆಯ ಕೂಡ್ಲಾವಲ್ಲಿ ಉರಿಲಿಂಗಪೆದ್ದಿ ಮಠ ಇದೆ. ಅಲ್ಲಿಗೆ ನಡೆದುಕೊಳ್ಳುವ ನಾನು ಬಲ್ಲ ಅನೇಕ ಗೆಳೆಯರಿದ್ದಾರೆ. ಅವರೆಲ್ಲರೂ ಅಪ್ಪಟ ಸಸ್ಯಾಹಾರಿ ಕುಟುಂಬಗಳು ಮತ್ತು ಇಷ್ಟಲಿಂಗದ ಧಾರಣೆ ಮತ್ತು ಪೂಜೆಯನ್ನು ನಿತ್ಯನೇಮವಾಗಿ ಪರಿಪಾಲಿಸಿಕೊಂಡು ಬಂದವರು. ಆದರೆ, ಅವರೊಡನೆ ಇತರ ಲಿಂಗಾಯತ ಉಪಪಂಗಡಗಳು ಪರಸ್ಪರ ಕೊಡುಕೊಳ್ಳುವುದನ್ನು ಮಾಡುವುದಿಲ್ಲ. ಉತ್ತರ ಕರ್ನಾಟಕದ ಅಸಂಖ್ಯಾತ ಹಿಂದುಳಿದ ಜಾತಿಗಳು ಲಿಂಗಧಾರಣೆ ಮಾಡುತ್ತಾರೆ. ಆದರೆ, ಕೊಡುಕೊಳ್ಳುವುದನ್ನು ತಮ್ಮ ಮೂಲ ಜಾತಿಗಳಿಗೆ ಮಾತ್ರ ನಿರ್ಬಂಧಿಸಿಕೊಂಡಿದ್ದಾರೆ. ಇದು ಸ್ವತಂತ್ರ ಲಿಂಗಾಯತ ಧರ್ಮದ ಮೇಲೆ ಜಾತಿ ಧರ್ಮದ ಗೆಲುವು.

ಲಿಂಗಾಯತ ಧರ್ಮ ಸ್ವತಂತ್ರ ಧರ್ಮವಾಗಿ ನಿಲ್ಲಬೇಕು

ಕಾಲದ ಪ್ರವಾಹದಲ್ಲಿ ಇಂತಹ ಉದಾತ್ತ ಸಂಸ್ಕೃತಿಯುಳ್ಳ ಶರಣರ ಧರ್ಮವನ್ನು ಹಿಂದೂ ಬ್ರಾಹ್ಮಣ ಧರ್ಮ ಜೀರ್ಣ ಮಾಡಿಕೊಂಡಿತು ಅಥವಾ ನುಂಗಿ ನೀರು ಕುಡಿಯಿತು ಎನ್ನಬಹುದು. ಜಾತಿ ಧರ್ಮದಲ್ಲಿ ಮೇಲು ಕೀಳಿನ ಪ್ರಭಾವ ಎಷ್ಟು ಪ್ರಬಲವಾಗಿದೆ ಎಂದರೆ ಅದು ಭಾರತದಲ್ಲಿ ಹುಟ್ಟಿದ ಎಲ್ಲ ಶ್ರಮಣ ಧಾರೆಗಳನ್ನು ನುಂಗಿ ನೀರು ಕುಡಿದಿದೆ. ಬೌದ್ಧಧರ್ಮವನ್ನು ಎದುರಿಸ

ಗುಲ್ಬರ್ಗ ಜಿಲ್ಲೆಯ ಕೂಡ್ಲಾದಲ್ಲಿ ಉರಿಲಿಂಗಪೆದ್ದಿ ಮಠ ಇದೆ. ಅಲ್ಲಿಗೆ ನಡೆದುಕೊಳ್ಳುವ ನಾನು ಬಲ್ಲ ಅನೇಕ ಗೆಳೆಯರಿದ್ದಾರೆ. ಅವರೆಲ್ಲರೂ ಅಪ್ಪಟ ಸಸ್ಯಾಹಾರಿ ಕುಟುಂಬಗಳು ಮತ್ತು ಇಷ್ಟಲಿಂಗದ ಧಾರಣೆ ಮತ್ತು ಪೂಜೆಯನ್ನು ನಿತ್ಯನೇಮವಾಗಿ ಪರಿಪಾಲಿಸಿಕೊಂಡು ಬಂದವರು. ಆದರೆ, ಅವರೊಡನೆ ಇತರ ಲಿಂಗಾಯತ ಉಪಪಂಗಡಗಳು ಪರಸ್ಪರ ಕೊಡುಕೊಳ್ಳುವುದನ್ನು ಮಾಡುವುದಿಲ್ಲ. ಉತ್ತರ ಕರ್ನಾಟಕದ ಹಿಂದುಳಿದ ಜಾತಿಗಳು ಲಿಂಗಧಾರಣೆ ಮಾಡುತ್ತಾರೆ. ಆದರೆ, ಕೊಡುಕೊಳ್ಳುವುದನ್ನು ತಮ್ಮ ಮೂಲ ಜಾತಿಗಳಿಗೆ ಮಾತ್ರ ನಿರ್ಬಂಧಿಸಿಕೊಂಡಿದ್ದಾರೆ.

ಲಾಗದೆ ಹಿಂದೂ ರಾಜನಾದ ಪುಷ್ಯಮಿತ್ರ ಬೌದ್ಧರ ವಿರುದ್ಧ ಉಗ್ರ ಹಿಂಸಾತ್ಮಕ ಆಂದೋಲನವನ್ನೇ ಆರಂಭಿಸಿದ. ಅವನೆಂತಹ ಕ್ರೂರಿ ಮತ್ತು ನಿರ್ದಯಿಯಾಗಿದ್ದನೆಂದರೆ, ಒಬ್ಬ ಬೌದ್ಧಭಿಕ್ಕುವಿನ ತಲೆಗೆ ನೂರು ಚಿನ್ನದ ನಾಣ್ಯಗಳ ಬೆಲೆ ಕಟ್ಟಿದ್ದ ಎಂದು ಅಂಬೇಡ್ಕರ್ ಬರೆಯುತ್ತಾರೆ. ಬೌದ್ಧಧರ್ಮ ಭಾರತದ ಹೊರಗೆ ವ್ಯಾಪಕವಾಗಿ ಬೆಳೆದಿರುವುದು ಅದರ ಶಕ್ತಿ ಸಾಮರ್ಥ್ಯವನ್ನು ಸೂಚಿಸುತ್ತದೆ. ಆದರೆ, ಶರಣಧರ್ಮಕ್ಕೆ ಅಂತಹ ಸ್ಥಿತಿ ಒದಗಿ ಬರಲಿಲ್ಲವಾದರೂ ಒಡಲಿನಿಂದಲೇ ಮೂಡಿಬಂದ ಮೂಲಭೂತವಾದಿಗಳ ಆಕ್ರಮಣ ಶರಣ ಧರ್ಮವನ್ನು ಜಾತಿಯ ಮಟ್ಟದಲ್ಲಿ ನಿಲ್ಲುವಂತೆ ಮಾಡಿತು. ಆದಾಗ್ಯೂ 21ನೇ ಶತಮಾನದ ಆದಿಯಲ್ಲಿ ಹಲವಾರು ಪ್ರಗತಿಪರ ಮನಸ್ಸುಗಳ ಸತ್ಪ್ರಯತ್ನದ ಫಲವಾಗಿ ಲಿಂಗಾಯತ ಧರ್ಮ ಮತ್ತೆ ಸ್ವತಂತ್ರ ಧರ್ಮವಾಗಿ ನಿರೂಪಿಸಿಕೊಳ್ಳುತ್ತಿರುವುದು ಹೆಮ್ಮೆಯ ವಿಷಯ.

ಶಿವನನ್ನು ಪೂಜಿಸುವ ಶೈವ ಪಂಗಡದಲ್ಲಿ ಪಾಶುಪತ, ಲಕುಲೀಶ, ಕಾಳಾಮುಖ, ಕಾಪಾಲಿಕ, ಹೀಗೆ ಅನೇಕ ಗುಂಪುಗಳಿದ್ದವು. 12ನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಲಿಂಗವಂತರ ಹೊಸಧರ್ಮ ಪ್ರಾರಂಭವಾದಾಗ ಕರ್ನಾಟಕದಲ್ಲಿದ್ದ ಪಾಶುಪಥ, ಕಾಳಾಮುಖ ಶೈವರು ಗತ್ಯಂತರವಿಲ್ಲದೆ ಲಿಂಗಧಾರಿಗಳಾದರು. ತಮ್ಮ ಹಳೆಯ ಪರಂಪರೆಯನ್ನು ಬಿಡದ ಇವರು ಜನಿವಾರವನ್ನು, ಇಷ್ಟಲಿಂಗದ ಜೊತೆಗೆ ಧರಿಸುತ್ತಿದ್ದರು. ಸ್ಥಾವರ ಲಿಂಗಪೂಜೆಯನ್ನು ಮಾಡುತ್ತಿದ್ದರು. ಕಾಲಾಂತರದಲ್ಲಿ ಇವರು ವೀರಶೈವ ಲಿಂಗಾಯತರು ಎಂದು ಗುರುತಿಸಿಕೊಳ್ಳತೊಡಗಿದರು. ಆದರೆ, ಇವರ ಜೊತೆಗೆ ಉಳಿದ ಲಿಂಗಾಯತರು ಸಹ ಸ್ಥಾವರ ಲಿಂಗಗಳಿರುವ ಪುಣ್ಯಕ್ಷೇತ್ರಗಳಿಗೆ ತೀರ್ಥಯಾತ್ರೆ ಕೈಗೊಳ್ಳುವುದು, ಉಳಿದ ಹಿಂದೂ ದೇವತೆಗಳನ್ನು ಪೂಜಿಸುವುದು ಬಸವಧರ್ಮದ ಹಿಮ್ಮುಖ ಚಲನೆಗೆ ಕಾರಣವಾಯಿತು.

ಲಿಂಗವನ್ನೇ ಶಿವನೆಂದು ತಿಳಿದ ಲಿಂಗಾಯತರು ಶಿವನ ಮಗನಾದ ಗಣಪತಿಯನ್ನು, ಸರ್ಪರೂಪಿಯಾದ ಸುಬ್ರಹ್ಮಣ್ಯನನ್ನು ಪೂಜಿಸತೊಡಗಿ ಹಿಂದೂ ಲಿಂಗಾಯತರಾಗಿಬಿಟ್ಟರು. ವೇದಕ್ಕೆ ಒರೆಯ ಕಟ್ಟಿ, ಆಗಮದ ಮೂಗು ಕೊಯ್ದ ಬಸವಣ್ಣನಿಗೆ ಅಪಮಾನವೆಸಗಿದರು. ಈ ವಿಚಾರವಾಗಿ ಚರ್ಚೆಗಳು ನಿರಂತರವಾಗಿ ನಡೆದಿವೆ. ಖ್ಯಾತ ಸಂಶೋಧಕ ಡಾ.ಎಂ.ಎಂ. ಕಲ್ಬುರ್ಗಿ ಅವರು ಹೇಳುವಂತೆ ಆಂಧ್ರಪ್ರದೇಶದಿಂದ ದಕ್ಷಿಣ ಕರ್ನಾಟಕಕ್ಕೆ ಬಂದ ಆರಾಧ್ಯ ಜಂಗಮರ ಪ್ರಭಾವಕ್ಕೆ ಉತ್ತರ ಕರ್ನಾಟಕದ ಶರಣ ಜಂಗಮರು ಒಳಗಾಗಿ ತಮ್ಮ ಶರಣ ತತ್ವ-ಆಚರಣೆಗೆ ಬದಲು ಆರಾಧ್ಯರ ತತ್ವ-ಆಚರಣೆಗಳನ್ನು ನಂಬುವ, ಅವರ ಜಗದ್ಗುರುಗಳನ್ನು ತಮ್ಮ ಜಗದ್ಗುರುಗಳೆಂದು ಒಪ್ಪಿಕೊಳ್ಳುವ, ತಮ್ಮ ಧರ್ಮಕ್ಕೆ ಅವರು ಬಳಸಿದ ವೀರಶೈವ ಪದವನ್ನು ಸ್ವೀಕರಿಸುವ ತಪ್ಪು ಮಾಡಿದರು. ಕಲ್ಯಾಣದ ನಾಡಿನಲ್ಲಿ ಉದಯಿಸಿದ ಅಪ್ಪಟ ಮಾನವ ಧರ್ಮಕ್ಕೆ ಇಂತಹ ಗತಿ ಒದಗಿ ಬಂದುದು ವಿಷಾದನೀಯ ಸಂಗತಿ.

ಜಾತಿಧರ್ಮದ ಪ್ರಭಾವವನ್ನು ಮೀರಬೇಕು

ಕೆಲ ವರ್ಷಗಳ ಹಿಂದೆ 'ಅನು ದೇವಾ ಹೊರಗಣವನು' ಎಂಬ ಪುಸ್ತಕ ಬಂದಾಗ ಲಿಂಗಾಯತ ಸಮಾಜ ಬೆಚ್ಚಿಬಿದ್ದಂತೆ ಕಣಿಸಿತು. ಆ ಪುಸ್ತಕದಲ್ಲಿ ಬಸವಣ್ಣನನ್ನು ಮಾದಿಗನಿರಬಹುದೆಂದು ಆರೋಪಿಸಲಾಗಿತ್ತು.

ಶಿವನನ್ನು ಪೂಜಿಸುವ ಶೈವ ಪಂಗಡದಲ್ಲಿ ಪಾಶು ಪತ, ಲಕುಲೀಶ, ಕಾಳಾಮುಖ, ಕಾಪಾಲಿಕ, ಹೀಗೆ ಅನೇಕ ಗುಂಪುಗಳಿದ್ದವು. 12ನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಲಿಂಗವಂತರ ಹೊಸ ಧರ್ಮ ಪ್ರಾರಂಭವಾದಾಗ ಕರ್ನಾಟಕದಲ್ಲಿದ್ದ ಪಾಶುಪಥ, ಕಾಳಾ ಮುಖ ಶೈವರು ಗತ್ಯಂತರವಿಲ್ಲದೆ ಲಿಂಗಧಾರಿಗಳಾದರು. ತಮ್ಮ ಹಳೆಯ ಪರಂಪರೆಯನ್ನು ಬಿಡದ ಇವರು ಜನಿವಾರವನ್ನು, ಇಷ್ಟಲಿಂಗದ ಜೊತೆಗೆ ಧರಿಸುತ್ತಿದ್ದರು. ಸ್ಥಾವರ ಲಿಂಗ ಪೂಜೆಯನ್ನು ಮಾಡುತ್ತಿದ್ದರು. ಕಾಲಾಂತರದಲ್ಲಿ ಇವರು ವೀರಶೈವ ಲಿಂಗಾಯತರು ಎಂದು ಗುರುತಿಸಿ ಕೊಳ್ಳತೊಡಗಿದರು.

ಕೇವಲ ಆರೋಪಕ್ಕೆ ಇಡೀ ಸಮಾಜ ಅಲ್ಲೋಲ ಕಲ್ಲೋಲ ಎಬ್ಬಿಸಿತು. ಈ ಘಟನೆ ನನಗೆ ಯಾಕೆ ಮುಖ್ಯವಾಗಿ ಕಂಡಿತು ಎಂದರೆ, ಬಸವಣ್ಣ ಯಾವ ಜಾತಿಗೆ ಸೇರಿದವನು ಎನ್ನುವುದಕ್ಕಿಂತಲೂ ನಮ್ಮ ಸಮಾಜದಲ್ಲಿ ಜಾತಿಪ್ರಜ್ಞೆ ಎಷ್ಟು ಆಳವಾಗಿ ಬೇರೂರಿದೆ ಎಂಬ ಕಾರಣಕ್ಕೆ. ಹೊಲೆಯ, ಮಾದಿಗ ಅಥವಾ ಅಸ್ಪೃಶ್ಯ ಎನ್ನುವುದು ಒಂದು ಕಳಂಕ (stigma), ಅದನ್ನು ಬಸವಣ್ಣನಂಥ ಒಬ್ಬ ಯುಗಪ್ರವರ್ತಕ ಧರ್ಮಸಂಸ್ಥಾಪಕನಿಗೆ ಅಂಟಿಸುವುದಕ್ಕೆ ಒಂದು ವರ್ಗದ ಲಿಂಗಾಯತರಿಗೆ ಸಾಧ್ಯವಾಗಲಾರದು. ಜಾತಿಯ ಕಲ್ಪನೆಯೆ ತುಚ್ಛ, ಅರ್ಥಹೀನ ಎಂಬ ಅರಿವಾಗಲು ಭಾರತೀಯರಿಗೆ ಇನ್ನೂ ಎಷ್ಟು ವರ್ಷಗಳು ಬೇಕಾಗಬಹುದು? "ಮನುಷ್ಯ ಜಾತಿ ತಾನೊಂದೆ ವಲಂ" ಎಂದ ಪಂಪನ ಈ ನಾಡಿನಲ್ಲಿ ಜಾತಿಭ್ರಮೆಯ ಪಿಡುಗು ಪೆಡಂಭೂತವಾಗಿ ಈ ಸಮಾಜವನ್ನು ಕಾಡುತ್ತಿದೆ. 'ಅಪ್ಪನು ನಮ್ಮ ಮಾದರ ಚೆನ್ನಯ್ಯ, ಬಪ್ಪನು ನಮ್ಮ ಡೋಹರ ಕಕ್ಕಯ್ಯ' ಎಂಬ ಮಾತುಗಳು ಗ್ರಂಥಸ್ಥವಾಗಿ ಉಳಿದಿವೆ. ವೇದ ಆಗಮಗಳನ್ನು ಪ್ರಶ್ನಿಸಿದ ಲಿಂಗಾಯತ ಧರ್ಮವು ಅವೈದಿಕ ಧರ್ಮ. ಸಕಲ ಜೀವಾತ್ಮರಿಗೆ ಲೇಸನು ಬಯಸುವವನೆ ಕುಲಜನು ಎಂದು ಹೇಳಿದ ಉತ್ಕೃಷ್ಟ ಧರ್ಮವಾಗಿದೆ. ಅಂಧಶ್ರದ್ಧೆ, ಮೂಢ ನಂಬಿಕೆಗಳನ್ನು ಖಂಡಿಸುತ್ತದೆ. ಇವತ್ತಿನ ಪರಿಸ್ಥಿತಿಯನ್ನು ಗಮನಿಸಿದರೆ ಶರಣಧರ್ಮವನ್ನು ಹಂಗಿಸುವಂತೆ ಜಾತಿಧರ್ಮ ತನ್ನ ಅಂಧಶ್ರದ್ಧೆ, ಮೂಢ ನಂಬಿಕೆಗಳನ್ನು ಜನರ ಮೇಲೆ ಹೇರಿ ಅಟ್ಟಹಾಸದಿಂದ ಕೇಕೆ ಹಾಕುತ್ತಿದೆ. ಕಳೆದ ಡಿಸೆಂಬರ್ ತಿಂಗಳಿನಲ್ಲಿ ನಡೆದ ಎದೆ ನಡುಗಿಸುವ ಒಂದು ಘಟನೆ ಹೀಗಿದೆ. ಕಲ್ಯಾಣ ನಾಡಿನ ಹೃದಯ ಭಾಗವಾದ ಪಕ್ಕದ ಬಿಜಾಪುರ ಜಿಲ್ಲೆಯ ಇಂಡಿ ಪಟ್ಟಣದ ಶಾಂತೇಶ್ವರ ದೇವಸ್ಥಾನದ ಮೇಲೆ ನಿಂತು 20 ಅಡಿಯಿಂದ ಮಕ್ಕಳನ್ನು, ಹಸುಗೂಸುಗಳನ್ನು ಕೆಳಗೆ ಎಸೆದು ತಂದೆ ತಾಯಿಯರು ಹರಕೆ ತೀರಿಸಿಕೊಳ್ಳುತ್ತಾರೆ. ಮೇಲಿನಿಂದ ಎಸೆಯುವ ಹಸುಳೆಗಳನ್ನು ಹಿಡಿಯಲು ಕೆಳಬದಿಯಲ್ಲಿ ದೇವಸ್ಥಾನದ ಮುಂದೆ 20 ಮಂದಿ ಕಂಬಳಿಯನ್ನು ಹಿಡಿದು ನಿಂತಿರುತ್ತಾರೆ. ಎಸೆದ ಹಸುಗೂಸುಗಳು ಕಂಬಳಿಯಲ್ಲಿ ಬಂದು ಬೀಳುತ್ತವೆ. ಸಂತಾನ ಫಲವಿಲ್ಲದ ದಂಪತಿಗಳು ಪುತ್ರ ಸೌಭಾಗ್ಯ ನೀಡುವಂತೆಯೂ, ಕೆಲವರು ಗಂಡು ಸಂತಾನಕ್ಕಾಗಿಯೂ ಹರಕೆ ಹೊರತ್ತಾರೆಂದು ಪ್ರತೀತಿಯಿದೆ. ಇತ್ತೀಚಿನ ವರ್ಷಗಳಲ್ಲಿ ಈ ಹರಕೆ ಹೆಚ್ಚಾಗುತ್ತಲೇ ಇದೆಯಂತೆ!

ಕೃತಜ್ಞತೆಯ ಋಣಭಾರವನ್ನು ಸ್ವಲ್ಪವೇ ಇಳಿಸಿಕೊಳ್ಳಲು ಉರಿಚಮ್ಮಾಳಿಗೆಯನ್ನು ತಲೆಯಮೇಲೆ ಹೊತ್ತು ಕೊಂಡು ಮೆರೆದ ಬಸವಣ್ಣನ ನಾಡಿನಲ್ಲಿ ಇನ್ನೂ ತಲೆಯ ಮೇಲೆ ಮಲ ಹೊರುವ ಪದ್ಧತಿ ಇದೆ ಎಂದರೆ ಆಶ್ಚರ್ಯವಾದೀತು. ಸಹಮಾನವರನ್ನು ಇಷ್ಟು ನಿಕೃಷ್ಟವಾಗಿ ಕಾಣುವ, ಅನುಕಂಪವೆಂದರೇನೆಂದು ತಿಳಿಯದ ಜಾತಿಭ್ರಮೆಯ ಜನರಿಂದ ಈ ಪದ್ಧತಿ ಇನ್ನೂ ಜೀವಂತವಾಗಿದೆ. ರಾಷ್ಟ್ರದಲ್ಲಿ ಪ್ರಸ್ತುತ 1,15,000 ಮಲ ಮೂತ್ರ ತೆಗೆಯುವ ಕಾರ್ಮಿಕರಿದ್ದಾರೆ ಎಂದು ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವರಾದ ಮುಕುಲ್ ವಾಸ್ನಿಕ್ ರಾಜ್ಯ ಸಭೆಗೆ ತಿಳಿಸಿದ್ದಾರೆ. (ಪ್ರ.ವಾ.27-7-09) ಆದರೆ, ಸಫಾಯಿ ಕರ್ಮಚಾರಿಗಳಿಗೆ ಸಂಬಂಧಿಸಿದ ಯೋಜನಾ ಆಯೋಗದ ಉಪ ಸಮಿತಿ ಸಂಚಾಲಕ ಬೆಜ್ವಾಡ್ ವಿಲ್ಸನ್ ಅವರ ಪ್ರಕಾರ ದೇಶದಲ್ಲಿ ಪ್ರಸ್ತುತ 13,00,000 ಲಕ್ಷ ಇಂತಹ ಕಾರ್ಮಿಕರಿದ್ದಾರೆ. ಇದು ಕಳೆದ 4 ವರ್ಷಗಳಲ್ಲಿ 9 ರಾಜ್ಯಗಳಲ್ಲಿ ಕೈಗೊಂಡ ಸಮೀಕ್ಷೆಯ ವರದಿ ಎಂದು ಅವರು ಹೇಳಿದ್ದಾರೆ. ನಾಗರಿಕ ಜನಾಂಗ ತಲೆ ತಗ್ಗಿಸುವ ಇಂತಹ ವಿಚಾರಗಳ ನಡುವೆಯೂ ಕೆಲವು ಜನರು ಭಾರತ ಬೆಳಗುತ್ತಿದೆ ಎಂದು ಹೇಳಿಕೊಳ್ಳುತ್ತಾರೆ. ದೇಶದಾದ್ಯಂತ ನಮ್ಮ ಹಳ್ಳಿಗಾಡಿನ ಹೆಣ್ಣು ಮಕ್ಕಳು ಒಂದು ತಂಬಿಗೆ ಜೊತೆಗೆ ಕೈಯಲ್ಲಿ ಒಂದು ಕೋಲು ಹಿಡಿದು ರಾತ್ರಿಗಾಗಿ ಕಾಯ್ದಿದ್ದು ಬಹಿರ್ದೆಶೆಗೆ ಹೋಗುತ್ತಾರೆ. ಕೋಲು ತಮ್ಮ ಆಹಾರಕ್ಕಾಗಿ ಮುಗಿ ಬೀಳುವ ಹಂದಿಗಳನ್ನು ಓಡಿಸುವ ಸಲುವಾಗಿ. ದೇಶದಲ್ಲಿ ಪ್ರತಿ ಮನೆಯಲ್ಲೂ ಶೌಚಾಲಯವಿರುವಂತೆ ನೋಡಿಕೊಳ್ಳುವವರೆಗೂ ದೇಶ ಬೆಳಗುವ ಮಾತಿರಲಿ, ಆರೋಗ್ಯವಾಗಿರಲು ಸಾಧ್ಯವಿಲ್ಲ.

ಸಮಾರೋಪ.

ಮೊದಲೇ ಹೇಳಿದಂತೆ ಕಲ್ಯಾಣವೆಂದರೆ ಮಂಗಳ ನಾಡು, ಸದಾಚಾರ, ಸದ್ಗುಣ, ಸಂಪನ್ನತೆಗಳನ್ನು ಮೆರೆಯುವ ನಾಡು. ಇವು ಮರೆಯಾದಾಗಲೆಲ್ಲ ಹೊಸದೊಂದು ರೂಪದಲ್ಲಿ ಕಲ್ಯಾಣ ಅವತರಿಸುತ್ತದೆ. ಸೂಫಿ ಸಂತರು, ತತ್ತ್ವಪದಕಾರರು ಹಾಗೆಯೆ ಸಂಭವಿಸಿ ಈ ನಾಡಿನ ಪಾವಿತ್ರ್ಯವನ್ನು ಉಳಿಸಿದ್ದಾರೆ. ಎಲ್ಲರೂ ಗಮನಿಸಿರುವಂತೆ ಇತ್ತೀಚೆಗೆ ಗುಲ್ಬರ್ಗಾ ನಗರದಲ್ಲಿ ದಕ್ಷಿಣ ಭಾರತದಲ್ಲಿಯೆ ಶಿಖರಪ್ರಾಯವಾಗಿರುವ ಬೌದ್ಧವಿಹಾರ ತಲೆಯೆತ್ತಿ ಕಂಗೊಳಿಸುತ್ತಿದೆ. ಹಸಿದವರನ್ನೂ, ಅವಮಾನಿತರನ್ನೂ ಕೈಬೀಸಿ ಕರೆಯುತ್ತಿದೆ. ವಿಶ್ವದ ಪ್ರವಾದಿಗಳ ಗುರು ಎನಿಸಿರುವ ಬುದ್ಧ ತನ್ನ ಮಂದಹಾಸದಿಂದಲೇ ಜಾತಿಕುಲದ ಕೊಳೆಯನ್ನು ತೊಳೆಯಬಲ್ಲವನಾಗಿದ್ದಾನೆ. ಒಂದು ಕಡೆ ಶರಣ ಬಸವೇಶ್ವರರ ಜಂಗಮತತ್ತ್ವ, ಇನ್ನೊಂದು ಕಡೆ ಖ್ವಾಜಾ ಬಂದೇನವಾಜ್ ಪ್ರೇರಿತ ಉದಾರವಾದೀ ಸೂಫಿ ಸಂತರು ಮತ್ತೊಂಗೆಡೆ[illegible] ಈ ನಾಡನ್ನು ಪಸರಿಸಿ ಮಾನವತೆಯನ್ನು ಬಯಸುವ

(44ನೇ ಪುಟಕ್ಕೆ)

ಅಸಮಾನ ಭಾರತ

ಭಾರತದ ಇಂದಿನ ರಾಜಕೀಯ ವಾಸ್ತವವನ್ನು ಸರಳವಾಗಿ ಹೀಗೆ ಹೇಳಬಹುದು. ಇಲ್ಲಿರುವುದು ಆಳುವ ವರ್ಗ ಮತ್ತು ಆಳಿಸಿಕೊಳ್ಳುವ ಜಾತಿಗಳು. ಇಂತಹ ವಾಸ್ತವದೊಂದಿಗೆ ಮುಖಾಮುಖಿಯಾಗುವ ಸಂಕೀರ್ಣ ಸಂದರ್ಭದಲ್ಲಿದ್ದೇವೆ. ಭಾರತದ ರಾಜಕೀಯ ನಡೆಗೆ ಯಾವಾಗಲೂ ಜನರ ಅಭಿವೃದ್ಧಿಯ ಹಾಗೂ ಸಮುದಾಯಗಳ ಉದ್ಧಾರದ ನೆಲೆಯಿರುವುದಿಲ್ಲ. ಬದಲಿಗೆ, ಬಂಡವಾಳ ಶಾಹಿ ಹಾಗೂ ಪುರೋಹಿತಶಾಹಿಯ ಓಲೈಕೆಯೊಂದಿಗೆ ಸಂಸ್ಕೃತಿಯಂತಹ ಸೂಕ್ಷ್ಮ ಸಂಗತಿಗಳ ತಳ ಕುಹಾಕುವ ಪ್ರಕ್ರಿಯೆಯು ಸಾಗುತ್ತಿರುತ್ತದೆ.

ಭಾರತದ ಜನಗಣತಿಯ ಈ ಸಂದರ್ಭದಲ್ಲಿ ಚರ್ಚೆಯಾಗುತ್ತಿರುವ ಮುಖ್ಯ ಸಂಗತಿಗಳನ್ನೇ ತೆಗೆದುಕೊಂಡು ಟಿಪ್ಪಣಿ ನೀಡಬಹುದು. ಭಾರತದ ಜನಗಣತಿಗೆ 130 ವರ್ಷಗಳ ದೊಡ್ಡ ಇತಿಹಾಸವಿದೆ. 1872ರಿಂದ ತಾಂತ್ರಿಕವಾಗಿ 'ಜನಗಣತಿ' ಎಂಬುದು ಆರಂಭಗೊಂಡರೂ, 1881ರಲ್ಲಿ ಅದು ಅತ್ಯಂತ ವೈಜ್ಞಾನಿಕವಾಗಿ ಕೈಗೊಂಡಿತು. ಗಣತಿಯು ಸದಾ ರಾಜಕೀಯ ಪ್ರೇರಿತವಾದುದು. ಬ್ರಿಟಿಷ್ ಸಾಮ್ರಾಜ್ಯಶಾಹಿಯಿಂದ ಶುರುವಾದ ಈ ಇಂಪೀರಿಯಲ್ ಆಲೋಚನೆಯ ಹಿಂದೆ ಪ್ರಭುತ್ವದ ಹಿತಾಸಕ್ತಿ ಇದ್ದರೂ ಅದರಿಂದ ಸಾಮಾಜಿಕ ಹಾಗೂ ರಾಜಕೀಯ ಸ್ಥಿತಿಗಳ ಅರಿವೂ ಸ್ಪಷ್ಟವಾಗಿತ್ತಿತ್ತು.

ಶ್ರೇಣೀಕೃತ ಭಾರತದ ಸಾಮಾಜಿಕ ಸ್ಥಿತಿಯನ್ನು ಅಷ್ಟು ಸುಲಭವಾಗಿ ಅರ್ಥೈಸುವುದು ಕಷ್ಟ. ಭಾರತಕಂಡ ಅಪ್ರತಿಮಾ ಸಮುದಾಯ ಚಿಂತಕ ಡಾ.ಅಂಬೇಡ್ಕರ್‌ರವರೊಬ್ಬರೇ ಈ ಸಮಾಜದ ನಾಡಿಮಿಡಿತಗಳನ್ನು ಕಂಡುಕೊಂಡಿದ್ದರು. ಆ ಕಾರಣಕ್ಕೆ ಅವರು ರಚಿಸಿದ ಸಂವಿಧಾನದಲ್ಲಿ ರಾಜ್ಯ ನಿರ್ದೇಶಕ ತತ್ವಗಳ ಜೊತೆಗೆ ಕೆಲವು ಮೀಸಲಾತಿಗಳ ಪ್ರಸ್ತಾಪವೂ ಕಂಡುಬರುತ್ತದೆ. ಜನಗಣತಿಯೊಂದಿಗೆ ಈ ಬಾರಿ 'ಜಾತಿಗಣತಿಗೆ' ತೊಡಗಿರುವುದು ಸ್ವಾಗತಾರ್ಹ. ಈವರೆಗಿನ ಜನಗಣತಿಯ ಆಧಾರದಿಂದ ಕೇವಲ ಆರ್ಥಿಕ ಸೌಲತ್ತು ಮತ್ತು ಬಂಡವಾಳದ ಕೇಂದ್ರೀಕರಣ ನಡೆಸಲಾಗುತ್ತಿತ್ತು.

ಆದರೆ ಒಂದು ರಾಷ್ಟ್ರದ ಏಳ್ಗೆ ಮತ್ತು ಅದರ ಸ್ವಾಭಿಮಾನಕ್ಕೆ ಕುಂದುತರುವ ಸಾಮಾಜಿಕ ವ್ಯವಸ್ಥೆಯ ಬಗ್ಗೆ ಗಣತಿಯಲ್ಲಿ ಸಾಧ್ಯವಾಗುತ್ತಿರಲಿಲ್ಲ, ಏಕೆಂದರೆ ಮಾಧ್ಯಮಗಳೇ ಬಿಂಬಿಸುತ್ತಿರುವಂತೆ ಭಾರತವು 'ಜಾತ್ಯಾತೀತರಾಷ್ಟ್ರ', ಇಂತಹ ರಾಷ್ಟ್ರದಲ್ಲಿ ಜಾತಿಗಣತಿಯ ಮೂಲಕ ಮತ್ತಷ್ಟು ಜಾತಿ ಪ್ರಜ್ಞೆಯು ಜಾಗೃತಗೊಂಡು ರಾಷ್ಟ್ರೀಯ ಐಕ್ಯತೆಗೆ ಭಂಗ ಬರುತ್ತದೆ ಎಂದು ಹುಯ್ಲಿಡಲಾಗುತ್ತಿದೆ. ಹಾಗಾದರೆ ಅಲಕ್ಷಿತ, ಅಲೆಮಾರಿ, ನೋಡಬಾರದ ಕೇಳಿರದ ಅನೇಕ ಸಮುದಾಯಗಳಿಗೆ ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ ಸ್ವಾವಲಂಬನೆಯು ಬೇಡವೆ? ಎಲ್ಲಾ ಸಮುದಾಯಗಳ ಜಾತಿಗಣತಿ ಮಾಡುವ ಮೂಲಕ ಅವರು ಈವರೆಗೆ ಪಡೆದಿರುವ ಸೌಲತ್ತು–ಸೌಕರ್ಯಗಳ ಸಮೀಕ್ಷೆ ಸಾಧ್ಯ, ಇಂತಹ ಸಾಧ್ಯತೆಯನ್ನೇ ಅಲ್ಲಗಳೆಯುತ್ತಿರುವ ಮಾಧ್ಯಮಗಳು ಮತ್ತು ಅದರ ಹಿಂದಿನ ಪುರೋಹಿತಶಾಹಿ ಹಿತಾಸಕ್ತಿಗೆ ಕೆಲವು ಸಂಗತಿಗಳ ಬಗ್ಗೆ ಮೌಢ್ಯವಿದೆ. ಜಾತಿನಾಶವಾಗುವುದು ಜಾತಿ ಕುರುಡಿ ನಿಂದಲ್ಲ ಅದಕ್ಕೆ ಮುಖಾಮುಖಿಯಾಗುವ ಮೂಲಕ ಜಾತಿಯನ್ನು ಎದುರಿಸಬೇಕು. ಅದನ್ನು ತಿಳಿದುಕೊಳ್ಳಬೇಕು.

ಇದನ್ನು ಮಾಡುತ್ತಲೇ ಜಾತಿಯ ನಾಶಕ್ಕೆ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ಶತಮಾನಗಳಿಂದ ಸಮುದಾಯಗಳ ಮುಗ್ಧತೆಯನ್ನು ಶಾಶ್ವತ ಹಿತಕ್ಕಾಗಿ ದುರ್ಬಳಕೆ ಮಾಡಿಕೊಳ್ಳುತ್ತಿರುವ ವ್ಯವಸ್ಥೆಯ ಅಪಾಯವನ್ನು ಅರ್ಥೈಸಲು ಸಾಧ್ಯವಾಗುವುದಿಲ್ಲ. ಕೆಲವು ಉದಾಹರಣೆಗಳನ್ನು ಗಮನಿಸುವುದಾದರೆ. ಜಾತಿಯ ಹೆಸರಿನಲ್ಲಿ ಸವಲತ್ತಿಗಾಗಿ ತಮ್ಮ ಮೂಲವನ್ನೇ ಮರೆಮಾಚಿ ಪರಿಶಿಷ್ಟರ ಸೌಲಭ್ಯವನ್ನು ಲಪಟಾಯಿಸಿ ಸುಳ್ಳು ಜಾತಿಪತ್ರದೊಂದಿಗೆ ಸರ್ಕಾರಿ ನೆಲೆಕಂಡು ಕೊಂಡಿರುವವರ ಆತ್ಮಸಾಕ್ಷಿಯನ್ನು ಈಗ ಕೆದಕಬಹುದಾಗಿದೆ. ಹಿಂದೆ ಎಲ್ಲಾ ಜಾತಿಗಳಿಂದ ಬಹಿಷ್ಕರಿಸಲ್ಪಟ್ಟ 'ಬಾಂಧಿ' ಎನ್ನುವ ಜಾತಿ ಯೊಂದಿತ್ತು. ಸಂವಿಧಾನದಲ್ಲಿ 'ಬಾಂಧಿ' ಎಂಬ ಪರಿಶಿಷ್ಟ ಜಾತಿಯೊಂದಿದೆ. ಈ ಶಬ್ದದ ದುರ್ಬಳಕೆ ಮಾಡಿಕೊಂಡು ಅನೇಕ ಓಬಿಸಿಗಳು 'ಬಾಂಧಿ' ಫಲಾನುಭವಿಗಳಾದರು.

ಉಡುಪಿ–ಕೊಳ್ಳೆಗಾಲದ ಕಡೆ ಮೊಲ ಹಿಡಿದು ಜೀವನ ಸಾಗಿಸುವ 'ಮೊಗೇರ' ಎಂಬ ಪರಿಶಿಷ್ಟ ಜಾತಿಯ ಸೌಕರ್ಯವನ್ನು ಮೀನುಗಾರರು–ವ್ಯವಸಾಯ ವೃತ್ತಿಯ ಅದೇ ಹಿಂದುಳಿದ ವರ್ಗದ 'ಎ' ಪ್ರವರ್ಗದವರು ಹೊಡೆದು ಕೊಂಡಿದ್ದಾರೆ. ಕೋಟೆಕಾರ ಕ್ಷತ್ರಿಯ ಸಮುದಾಯವು ಪರಿಶಿಷ್ಟರಾದ 'ಕೊಟ್ಟೆಕಾರ'ರ ಅನ್ನಕ್ಕೆ ಕೈಹಾಕಿ ಕೂತಿದ್ದಾರೆ. ದಕ್ಷಿಣ ಕನ್ನಡದ ಮಾಲೇರು–ಮಲೇರು–ಗಳಾಗಿ ಸುಖವಾಗಿದ್ದಾರೆ. ಇವರ್‍ಯಾರಿಗೂ ಜಾತಿಯಿಂದ ಅವಮಾನವಿಲ್ಲ; ವೃತ್ತಿ ಅದಾಗಿರುವುದಿಲ್ಲ. ಆದರೆ 'ಜಾತಿ' ಪ್ರಮಾಣ ಪತ್ರದ ಕಾರಣಕ್ಕೆ ಸಂವಿಧಾನವು ನೀಡುವ ಎಲ್ಲಾ ಬಗೆಯ ರಕ್ಷಣೆಗೆ ಮತ್ತು ಸೌಲತ್ತುಗಳಿಗೆ ಭಾಜನರಾಗಿರುವ ಲಕ್ಷಾಂತರ ಜನ ಇಂಡಿಯಾದ 'ಜಾತ್ಯಾತೀತ ರಾಷ್ಟ್ರದಲ್ಲಿ' ವಿರಾಜಮಾನರಾಗಿದ್ದಾರೆ. ಆದರೂ ಇದು ಅಸಮಾನ ಭಾರತ. ಏಕೆಂದರೆ ಯಾರಿಗೆ–ಯಾವುದು ತಲುಪಬೇಕಿತ್ತು ಅದಿನ್ನೂ ದೂರದ ಕನಸು–ಪ್ರತಿಭಾವಂತರಿಗೆ ಓದಲು ಸೀಟಿಲ್ಲ, ಅಂಕಗಳಿಸಿದ ನಗರಕೇಂದ್ರಿತ ಮೇಲ್ ಮಧ್ಯಮ ವರ್ಗವೇ ವಿಜೃಂಭಿಸುತ್ತಿರುವ ಕ್ಷೇತ್ರಗಳಲ್ಲಿ ಪ್ರತಿಭೆಯ ಹೆಸರಿನಲ್ಲಿ ಕೂಡ ಮಹಾದ್ರೋಹವು ನಡೆಯುತ್ತಿದೆ.

ಖಾಸಗಿ ಕ್ಷೇತ್ರವಂತೂ ಸಂವಿಧಾನದ ಎಚ್ಚರಿಕೆಯನ್ನು ಮರೆತಿದೆ. ವ್ಯವಸ್ಥೆ ಕೂಡ ಇದ್ಯಾವುದರ ಬಗ್ಗೆನೂ ಯೋಚಿಸದೇ ಗಂಗಾಜಲ ಹಂಚಿಕೆ ಅಲ್ಪಸಂಖ್ಯಾತರ ತುಚ್ಛೀಕರಣ–ಮೀಸಲಾತಿಗೆ ಪರೋಕ್ಷ ದ್ರೋಹದ ಕಾರ್ಯಕ್ಕೆ ಕೈ ಹಾಕಿರುವಾಗ, ಯುಜಿಸಿ ಅಧ್ಯಕ್ಷರಾದ ಸುಖದೇವ್ ಥೋರಟರು ನಡೆಸಿದ 'ಅಕೆಡೆಮಿಕ್ ಸ್ಟ್ರಿಂಗ್ ಆಪರೇಷನ್' ಅಂತಹ ಪ್ರಯೋಗವು ಈ ದೇಶದ 'ಅಸಮಾನ ದ್ರೋಹದ ಚಿತ್ರಣವನ್ನು ನೀಡುತ್ತದೆ. ಶಿವಸುಂದರ್ ತಮ್ಮ ಲೇಖನದಲ್ಲಿ ಮಾರ್ಕ್ಸ್‌ವಾದಿಗಳ ವೈರುಧ್ಯ ಹಾಗೂ ಮೀಸಲಾತಿಯ ಬಗೆಗಿನ ಚಿಂತನಾರ್ಹ ಸಂಗತಿಗಳನ್ನು ನೀಡುತ್ತಾ ಥೋರಾಟ್‌ರವರ ಈ ಪ್ರಯೋಗವನ್ನು ಉಲ್ಲೇಖಿಸಿದ್ದಾರೆ. 'ಭಟ್, ಶರ್ಮ, ಕಾಮತ್–ದ್ವಿವೇದಿ, ಚಟರ್ಜಿ, ಪುರೋಹಿತ್' ಇತ್ಯಾದಿ ಹೆಸರಿನಲ್ಲಿಯೇ ಬ್ರಾಹ್ಮಣರೆಂದು ಸೂಚಿತವಾಗುವಂತಹ, ಹಾಗೂ ಯಾದವ್, ನಾಯ್ಡು, ಗೌಡ, ಶೆಟ್ಟಿ ಎಂಬಂತೆ ಹಿಂದುಳಿದ ವರ್ಗಗಳಿಗೆ ಅನ್ವಯವಾಗುವಂತಹ ಕೆಲವು ಅರ್ಜಿಗಳು ಮತ್ತು ಮಾದಿಗ, ಹೊಲೆಯ, ಇತ್ಯಾದಿ ಪರಿಶಿಷ್ಟ ಜಾತಿ ವರ್ಗದ ಅನೇಕ ಅರ್ಜಿಗಳು, ಹಾಗೂ ಮುಸಲ್ಮಾನರ ಹೆಸರಿನ ಅರ್ಜಿಗಳು ಹೀಗೆ 500 ಅರ್ಜಿಗಳನ್ನು ತಾವೇ ತಯಾರಿಸಿ ಅವರೆಲ್ಲರಿಗೂ ಎಂಟೆಕ್ ಫಸ್ಟ್‌ಕ್ಲಾಸ್ ವಿದ್ಯಾರ್ಹತೆಯನ್ನು ತುಂಬಿ, ದೇಶದ 500 ಪ್ರಮುಖ ಖಾಸಗಿ ಉದ್ಯಮಪತಿಗಳಿಗೆ ಕಳುಹಿಸುತ್ತಾರೆ.

ಎಂಎನ್‌ಸಿಗಳು ನಿಜಕ್ಕೂ ಪ್ರತಿಭೆಗೆ ಅವಕಾಶ ನೀಡುವುದೇ ಆಗಿದ್ದರೆ ಎಲ್ಲರಿಗೂ ಸಂದರ್ಶನಕ್ಕೆ ಕರೆಯಬೇಕಿತ್ತು. ಆದರೆ ಪ್ರತಿಭೆಯನ್ನು–ಮರೆಮಾಚಿ ಜಾತಿ ಸೂಚಕ ಹೆಸರುಗಳನ್ವಯಿಸಿ, ಬ್ರಾಹ್ಮಣರ ಹೆಸರುಹೊತ್ತ ಎಲ್ಲ ಅರ್ಜಿಗಳಿಗೂ ಸಂದರ್ಶನದ ಕರೆಬರುತ್ತದೆ. ಹಿಂದುಳಿದವರ್ಗ ಸೂಚಕ ಹೆಸರಿದ್ದ ಅರ್ಜಿಗಳಲ್ಲಿ ಶೇ. 70ಜನರಿಗೂ, ದಲಿತಸೂಚಕ ಹೆಸರಿದ್ದ ಅರ್ಜಿಗಳಲ್ಲಿ ಶೇ.30 ಜನರಿಗೂ, ಮುಸ್ಲಿಂ ಸೂಚಕ ಹೆಸರಿದ್ದ ಅರ್ಜಿಗಳಿಗೆ ಶೇ. 10ರಷ್ಟು ಜನರಿಗೆ ಮಾತ್ರ ಸಂದರ್ಶನದ ಕರೆಬಂದಿರುತ್ತದೆ.

ಈ ಪ್ರಯೋಗದಿಂದ ಥೋರಟ್ ದಿಗಿಲಾಗುತ್ತಾರೆ. ಮಾತೆತ್ತಿದರೆ ಈ ದೇಶದಲ್ಲಿ ಮೀಸಲಾತಿಯಿಂದ ಪ್ರತಿ

ಪುಸ್ತಕ ಅವಲೋಕನ



ಸಂ: ಡಾ. ಎಚ್. ಎಸ್. ಅನುಪಮಾ
ಡಾ. ಕೃಷ್ಣ .ಜಿ
ಕೆ. ಎಲ್. ಚಂದ್ರಶೇಖರ್ ಐಜೂರ್
ಬೆಲೆ : ರೂ ೧೫೦/–
ಪ್ರ : ಲಡಾಯಿ ಪ್ರಕಾಶನ, ಗದಗ

ಡಾ. ಕುಂಸಿ ಉಮೇಶ್

ಭಾವಂತರಿಗೆ ಅನ್ಯಾಯವಾಗುತ್ತಿದೆ. 'ಪ್ರತಿಭೆ ಎಂದರೆ ಅಂಕಗಳನ್ನು ಪರಿಗಣಿಸಬೇಕು. ಸಾಮಾಜಿಕ ನ್ಯಾಯವೆಂಬ ತಾರತಮ್ಯ ನೀತಿಯನ್ನಲ್ಲ' ಎಂದು ಬೊಬ್ಬಿಟ್ಟು ಮೈಸುಟ್ಟುಕೊಂಡು ಚರಿತ್ರೆಗೆ ಅಪಮಾನವೆಸಗುವ ಮಂದಿ ಈ 'ಅಕೆಡೆಮಿಕ್ ಸ್ಟ್ರಿಂಗ್ ಆಪರೇಷನ್‌ನ್ನು' ಸರಿಯಾಗಿ ಅಭ್ಯಾಸ ಮಾಡಬೇಕು. ಇದನ್ನೇ ಖಾಸಗಿ ಕ್ಷೇತ್ರದ ಮೀಸಲಾತಿಗೆ ಮೀಟುಗೋಲು ಮಾಡಿಕೊಂಡು ಅವರನ್ನು ಪ್ರಭುತ್ವವು ಬಗ್ಗಿಸಬೇಕಿದೆ, ದುರಂತವೆಂದರೆ ಇಂಡಿಯಾದಲ್ಲಿ ಪ್ರಭುತ್ವವೇ ಖಾಸಗಿ ಕ್ಷೇತ್ರದ ದಣಿಗಳೆದುರು ಮಂಡಿಯೂರಿ ಕೂತಿದೆ. ಕಾರಣ ಈ ಹೊತ್ತಿನಲ್ಲಿ ರಾಜಕಾರಣಿಗಳು ಖಾಸಗಿ ಕ್ಷೇತ್ರದ ದಣಿಗಳಾಗುತ್ತಿದ್ದರೆ, ಅಲ್ಲಿನ ಹಣವಂತರು ರಾಜಕಾರಣಿಗಳಾಗುತ್ತಿದ್ದಾರೆ. ಇವರೆಲ್ಲರ Understanding ಒಂದೇ 'ನಾವು ನಾವುಗಳೇ ಸುಖವಾಗಿರಬೇಕು' ಎಂಬ ನಿಲುವು.

ಇಂತಹ ಹೀನ ಸ್ಥಿತಿಯಲ್ಲಿ, ಅಸಮಾನ ಭಾರತದ ಬಗ್ಗೆ ಮೊದಲಿನಿಂದಲೂ ಪ್ರಯೋಗ ಹಾಗೂ ಪ್ರಾಕ್ಟೀಸ್ ಮೂಲಕ ಸಂವಿಧಾನದ ರಕ್ಷಣೆಯನ್ನು ನೀಡಲು ನಿರಾಕರಿಸುವ ಪ್ರಭುತ್ವಕ್ಕೆ ಜನಹೋರಾಟಗಳು ಎಚ್ಚರಿಕೆಯನ್ನು ನೀಡುತ್ತಲೇ ಬಂದಿವೆ. ಅದು ಅಂಬೇಡ್ಕರ್‌ರವರಿಂದ ಆಧುನಿಕ ರಾಜಕಾರಣ-ಜಾತಿಕಾರಣದ ಮೂಲಭೂತ ಪ್ರಶ್ನೆಗಳಿಗೆ ಪ್ರತಿರೋಧವು ಶುರುವಾದ ದಿನದಿಂದಲೂ ನಡೆಯುತ್ತಿದ್ದರೂ ಈ ನಾಡಿನಲ್ಲಿ ಅಸಮಾನತೆಗೆ ಕುಂದು ಬಂದಿಲ್ಲ. ಗಾಯಮಾಡುವವರ ಸಂಖ್ಯೆಗೆ ಕೊನೆ ಇಲ್ಲವಾಗಿದೆ. ಅಸಮಾನತೆಯಿರುವ ಸಮಾಜದಲ್ಲಿ ಎಲ್ಲರೂ ಸಮಾನರು ಎಂದು ಬರೀ ಭಾವನಾತ್ಮಕ ಹೇಳಿಕೆ ಮಾಡುವುದು ಇಲ್ಲಿರುವ ಸಾಮಾಜಿಕ ಅಸಮಾನತೆಯನ್ನು ಮುಂದುವರೆಸುವ ಹುನ್ನಾರವೇ ಆಗಿದೆ. ಅಂಬೇಡ್ಕರ್ ಕೂಡ ಇದನ್ನ ಪ್ರತಿಪಾದಿಸಿದ್ದಾರೆ. 'ಸಮಾನತೆ ಇಲ್ಲದ ಸಮಾಜದಲ್ಲಿ ಸ್ವಾತಂತ್ರ್ಯವು ಉಳ್ಳವರ ಸ್ವಾತ್ರಂತ್ಯವನ್ನು ಮಾತ್ರ ಮುಂದುವರೆಸುತ್ತದೆ. ಈ ಸಲುವಾಗಿ ಮೀಸಲಾತಿ ಹಾಗೂ ಇನ್ನಿತರೆ ವಿಶೇಷ ಆದ್ಯತಾ ಕ್ರಮಗಳನ್ನು ಸಂವಿಧಾನವು 'ಸಕಾರಾತ್ಮಕ ತಾರತಮ್ಯ' ಎಂದು ಕರೆಯುತ್ತದೆ.

ಅಸಮಾನತೆಯಿರುವ ಸಮಾಜದಲ್ಲಿ ಎಲ್ಲರೂ ಸಮಾನರು ಎಂದು ಬರೀ ಭಾವನಾತ್ಮಕ ಹೇಳಿಕೆ ಮಾಡುವುದು ಇಲ್ಲಿರುವ ಸಾಮಾಜಿಕ ಅಸಮಾನತೆಯನ್ನು ಮುಂದುವರೆಸುವ ಹುನ್ನಾರವೇ ಆಗಿದೆ. ಅಂಬೇಡ್ಕರ್ ಕೂಡ ಇದನ್ನ ಪ್ರತಿಪಾದಿಸಿದ್ದಾರೆ. 'ಸಮಾನತೆ ಇಲ್ಲದ ಸಮಾಜದಲ್ಲಿ ಸ್ವಾತಂತ್ರ್ಯವು ಉಳ್ಳವರ ಸ್ವಾತ್ರಂತ್ಯವನ್ನು ಮಾತ್ರ ಮುಂದುವರೆಸುತ್ತದೆ. ಈ ಸಲುವಾಗಿ ಮೀಸಲಾತಿ ಹಾಗೂ ಇನ್ನಿತರೆ ವಿಶೇಷ ಆದ್ಯತಾ ಕ್ರಮಗಳನ್ನು ಸಂವಿಧಾನವು 'ಸಕಾರಾತ್ಮಕ ತಾರತಮ್ಯ' ಎಂದು ಕರೆಯುತ್ತದೆ.

ಭಾರತದಂತಹ ಬಹು ಧರ್ಮೀಯ ಮತ್ತು ಶುದ್ಧಾಂಗ ಅಂಧ ಆಚರಣಾತ್ಮಕ ದೇಶದಲ್ಲಿ ಸರ್ವಸಮ್ಮತ ಕಾನೂನು ಹಾಗೂ ಸಕಾರಾತ್ಮಕ ತಾರತಮ್ಯವನ್ನು ಎತ್ತಿ ಹಿಡಿಯುವ ಸಂವಿಧಾನದ ಬಾಳಿಕೆಯೇ ಕಷ್ಟಕರವಾದುದು, ಏಕೆಂದರೆ ಆಳುವ ವರ್ಗಕ್ಕೆ ಕನಸುಗಳಿಲ್ಲ, ಮತ್ತು ಪ್ರಾಪಂಚಿಕ ನೆಲೆಗಳ ಚಾರಿತ್ರಿಕ ನೆನಪುಗಳೂ ಇಲ್ಲ. ಹೀಗೆ ಇಲ್ಲಗಳ ನಡುವೆ ಆಡಳಿತ ನಡೆಸುವ ಪ್ರಭುತ್ವವು ಬದುಕು ಕಳೆದುಕೊಂಡು ಕೊರಗಿ-ಕೊರಗಿ ದುಡಿವವರ್ಗದ ಹೃದಯಗಳಲ್ಲಿ ರಣಗಾಯವಾದವರ ಪರವಾಗಿ ನಿಲ್ಲುವ ತಾಕತ್ತು ಅವರಿಗಿರುವುದಿಲ್ಲ. ರಾಜಕಾರಣವು ವೃತ್ತಿಯಾಗಿರುವ ಈ ದಿನಗಳಲ್ಲಿ ಮತ್ತು ಮೂಲಭೂತವಾದ ಹಾಗೂ ಕೋಮುಶಕ್ತಿಗಳ ದಾಷ್ಟ್ಯದ ಚರಿತ್ರೆ ಹೊತ್ತಿರುವ ಭಾರತದಲ್ಲಿ ಕೇವಲ ಜನಗಣತಿಯಿಂದ ಯಾವುದೇ ಲಾಭವಿಲ್ಲ. ಅದು ಜಾತಿಗಣತಿಯೂ ಆಗಿ ಪರಿವರ್ತಿತವಾದಾಗ ಮಾತ್ರ ಅನೇಕ Unseeable and Untouchable ವರ್ಗವು ತಳಹತ್ತಿ ಸೀದು ಕರಕಲಾಗಿಹೋಗಿರುವ ಸಾವಿರಾರು ಸಮುದಾಯಗಳಿಗೆ ಬಾಳ್ವೆಯು ದೊರಕಬಹುದೆಂದು ಆಶಿಸಲಾಗಿದೆ.

ಅನೇಕ ಅಲಕ್ಷಿತ ಸಮುದಾಯಗಳೊಂದಿಗೆ ಸಮುದಾಯ ಸಂಕಥನವನ್ನು ನಡೆಸುವ ನಿಟ್ಟಿನಲ್ಲಿ ಸಿ.ಎಸ್.ದ್ವಾರಕ ನಾಥ್‌ರವರು ಹಿಂದುಳಿದ ವರ್ಗದ ಆಯೋಗದ ಅಧ್ಯಕ್ಷರಾಗಿ, ಕರ್ನಾಟಕದ ಮೂಲೆ ಮೂಲೆಗೆ ತಿರುಗಿ, ಕರಗಿ, ಕರಕಲಾದ, ಸೀದು ತಳಹಿಡಿದು ಪ್ರಾಣಿಗಳಿಗಿಂತ ಕನಿಷ್ಟವಾಗಿ ಬದುಕುತ್ತಿರುವ ಮತ್ತು ಪ್ರಭುತ್ವದ ಕಾನೂನು ಮತ್ತು ಕೋಪಕ್ಕೆ ಗುರಿಯಾಗಿ ನಿರ್ಜೀವವಾಗಿರುವ ಕರ್ಕರ, ಮುಂಡಿ, ಕಾಪಾಳರು, ಮನುಷರು, ದಕ್ಕಲರು, ಜಾತಗಾರರು, ಸಿಕ್ಕಲಿಗರು, ದೊಂಬಾರಿಗಳು ಮತ್ತು ಲಾಡ್ ಹಾಗೂ ಬಾಂದಿ, ದನಗಾರ, ಕರಡಿ ಕಲಂದರ ಸಮುದಾಯದ ನಿಜವಾದ ಸಂಕಟವನ್ನು ತಮ್ಮ ವರದಿಯಲ್ಲಿ ತೆರೆದಿಟ್ಟಿದ್ದಾರೆ. ಸಮುದಾಯದ ಮುಗ್ಧತೆಯು ಅಧಿಕಾರಿವರ್ಗದ ಮೂಲಕ ಪ್ರಭುತ್ವಕ್ಕೆ ಶಾಶ್ವತ ಹಿತಕ್ಕಾಗಿ ದುರ್ಬಳಕೆಯಾಗುತ್ತಿರುವ ಆಪಾಯವನ್ನು ಮನಶಾಸ್ತ್ರೀಯ ಹಾಗೂ ಸಮಾಜಶಾಸ್ತ್ರೀಯ ನೆಲೆಯಲ್ಲಿ ಅರ್ಥೈಸಿದ್ದಾರೆ.

ಸಾಮ್ರಾಜ್ಯಶಾಹಿ ನೀತಿಯಿಂದ ಬೀದಿಗೆ ಬಿದ್ದು ಹೋದ ಕರಡಿ ಕಲಂದರ್‌ಗಳು ಏನೇ ದಂಬಾಲು ಬಿದ್ದರೂ, ಅವರ ದುಃಖವನ್ನು ಕೇಳಿಸಿಕೊಳ್ಳಲಾರದ ವ್ಯವಸ್ಥೆಯ ವ್ಯಂಗ್ಯವನ್ನು ರಹಮತ್‌ರವರು ಚಿಂತಿಸಿದ್ದಾರೆ. ಈ ಕೃತಿಯ ಮತ್ತೊಂದು ಮಹತ್ವದ ಲೇಖನ ರಾಜಕೀಯ ಚಿಂತಕ ಮುಸಾಫರ್ ಅಸ್ಸಾದಿಯವರು; ವಸಾಹತುಶಾಹಿ ತಂದು ಹಾಕಿದ ವರ್ಗ, ಜಾತಿ, ಧರ್ಮಗಳ Idientitiy ಯನ್ನು ಪ್ರಶ್ನಿಸುತ್ತಾ ಅಕ್ಷರ-ಜ್ಞಾನದ ಸರ್ಕಾರಿವರ್ಗವು ಹುಟ್ಟುಹಾಕಿದ ಯಡವಟ್ಟುಗಳನ್ನು ಚರ್ಚಿಸುತ್ತಾರೆ ಮತ್ತು Political Correctness ನ ಹೆಸರಿನಲ್ಲಿ ಈ ದೇಶದ ಧಾರ್ಮಿಕ ಚರ್ಚೆಯು ನಡೆಸುತ್ತಿರುವ ಅನರ್ಥಕಾರಿ ಹುನ್ನಾರವನ್ನು ಬಯಲುಮಾಡಿ ಜಾತಿಗಣತಿಯ ಅಗತ್ಯವನ್ನು ಅನೇಕ ಪ್ರಮೇಯದ ಮೂಲಕ ಚರ್ಚಿಸಿದ್ದಾರೆ.

ಕ್ವಿಟ್ ಇಂಡಿಯಾದ ನಂತರದ , plit india ಎಂಬಂತೆ ಹುಯ್ಯಲಿಡುವ ಮಾಧ್ಯಮಗಳಿಗೆ ಜಾತಿಗಣತಿ ಎಂದರೇನೆಂದು ಸ್ಪಷ್ಟವಾಗಿ ಅರ್ಥವೇ ಆಗಿಲ್ಲ. ಅಭಿವೃದ್ಧಿ ಮೀಮಾಂಸೆಯ ಪರಿಭಾಷೆಯೆಂದರೆ ಅದು ಪ್ರಭುತ್ವದ ಮುಖವಾಣಿಯ ನಿಲುವಿನದಾಗಿರುತ್ತದೆ. ಮಾಧ್ಯಮಗಳು ಕೂಡ ವ್ಯವಸ್ಥೆಯ ಅಭಿವೃದ್ಧಿ ಪರಿಭಾಷೆಯನ್ನೇ ಸತ್ಯದ ಒರೆಗಲ್ಲು ಎಂದು ಪರಿಗಣಿಸುತ್ತಿರುವ ಈ ಹೊತ್ತಿನಲ್ಲಿ Rural Societyಯ ಕರುಣಾಜನಕ ಸ್ಥಿತಿಯು ಯಾರಿಗೂ ಅರ್ಥವೇ ಆಗುವುದಿಲ್ಲ. ಇಂತಹ ಸೊಸೈಟಿ ಮತ್ತು ಅಧಿಕಾರದ ಅಭಿವೃದ್ಧಿ ಚಿಂತನೆಗಳನ್ನು ಮುಖಾಮುಖಿಗೊಳಿಸಿ ಗ್ರಾಮೀಣ ಅಸಮಾನ ಭಾರತದ ಅಸ್ಮಿತೆಯನ್ನು ಜನಗಣತಿ ಹಾಗೂ ಜಾತಿಗಣತಿಯ ಮೂಲಕ political ಸಂಗತಿಯೊಂದಿಗೆ ಟಿ.ಆರ್.ಚಂದ್ರಶೇಖರ್ ಚಿಂತಿಸಿದ್ದಾರೆ.

ಭಾರತದ ಪ್ರಖರ ದಲಿತ ಚಿಂತಕ ಡಾ.ಆನಂದ್ ತೇಲ್ತುಂಬ್ಡೆಯವರು ತಮ್ಮ ಲೇಖನದಲ್ಲಿ 'ಷಾ'ರವರ Caste and Democretic practice in india ಎಂಬ ಪುಸ್ತಕದ ನೆರವಿನಿಂದ ಭಾರತದ ಶಕ್ತಿಹೀನ ನೆಲೆಗೆ ಶಕ್ತಿ ತುಂಬಲು ಈ ಗಣತಿ ಅನಿವಾರ್ಯ ಎಂಬ ಡಿಸ್ಕೊರ್ಸ್‌ನ್ನು ಮುಂದಿಡುತ್ತಾರೆ. ಈ ಕೃತಿಯ ಅತಿಮುಖ್ಯ ಲೇಖನಗಳಲ್ಲಿ ಕಾಂಚಾಐಲಯ್ಯರವರದೂ ಒಂದಾಗಿದೆ. ಅಂಬೇಡ್ಕರ್ School of thoughtನ ನೆಲೆಯಲ್ಲಿ ಖಚಿತವಾಗಿ ಜಾತಿ ತಾರತಮ್ಯವನ್ನು ವಿವೇಚಿಸಿದ್ದಾರೆ. ಹಾಗೂ ಅಲಕ್ಷಿತರ ನೋವಿಗೆ ಈ ಗಣತಿಯ ಅನಿವಾರ್ಯತೆಯನ್ನು ವಿವರಿಸಿದ್ದಾರೆ. ಲಂಕೇಶ್-ನಂಜುಂಡ ಸ್ವಾಮಿಯವರ ಲೇಖನಗಳು ಸಮಾಜವಾದಿ ಚಿಂತನೆಯ ಉಪಕ್ರಮದಿಂದ ಬಂದವಾದರೂ ಜಾತಿವಿನಾಶದ ವೈಯಕ್ತಿಕ ಚಿಂತನೆಗಳ ಮಾರ್ಗೋಪಾಯಗಳನ್ನು ವಿವರಿಸುತ್ತಲೇ ಜಾತಿವಾದಿಗಳಿಗೆ ಕೆಲವು ನೀತಿ ಸಂಹಿತೆಗಳನ್ನು ಮುಂದಿಟ್ಟಿದ್ದಾರೆ.

ನಂಜುಂಡಸ್ವಾಮಿಯವರು ಪ್ರಾಕ್ಟಿಕಲ್ ಆದ ಚಿಂತನೆ ಅನೇಕ ಅಂಕಿಅಂಶಗಳ ಮುಖಾಂತರ ಜನಬಂಡಾಯದ ಅನಿವಾರ್ಯವನ್ನು ಅಂದೇ ವಿವರಿಸಿದ ಪ್ರೊಫೇಸರ್‌ರವರ ಚಿಂತನೆಯ ಮುಂದೆ ಎಂದಿನ ತಮ್ಮ ಪುಣ್ಯಕೋಟಿ ದಾರಿಯ ದೇವನೂರು ಮಾದೇವ ಹಾಗೂ ಗಾಂಧೀ ಲೋಹಿಯಾ ಪ್ರಣೀತ ನೆಲೆಯಲ್ಲಿ ಜಾತಿಗಣತಿಯ ಪ್ರಸ್ತುತತೆಯನ್ನು ಚಿಂತಿಸುವ ಡಿ.ಎಸ್.ನಾಗಭೂಷಣ.. ಹೀಗೆ, ಈ ಕೃತಿಯ ತುಂಬಾ ಅಂದಂದೇ ಹುಟ್ಟಿದ ಅನೇಕ ಚಿಂತನೆಗಳು ಮತ್ತು ಕಾಲದ ವಾಹಕಕ್ಕೆ ಸಿಕ್ಕರೂ ಮುಕ್ಕಾಗದ ಅನೇಕ ಹಿಂದಿನ ಲೇಖನಗಳು ಹಾಗೂ ಅನು ವಾದಿತ-ಸಂಗ್ರಹಿತ ಲೇಖನಗಳೂ ಇವೆ. ಬಸು (ಸೂಳಿಬಾವಿ) ಇಂತಹ ದೊಂದು ಚಿಂತನಾಕ್ರಮವನ್ನು ನಿರ್ವಚಿಸಲು ತಮ್ಮ ಪ್ರಕಾಶನ ಸಂಸ್ಥೆಯಿಂದ ಅಸಮಾನ ಭಾರತವನ್ನು ಪ್ರಕಟಿಸುತ್ತಿರುವುದು ಈ ಹೊತ್ತಿಗೆ ಕರ್ನಾಟಕದ ಓದಿನ ಜರೂರಿಗೆ ಸಾಕ್ಷಿಯಾಗಿದೆ.

ಡಾ. ಅನುಪಮಾ ತಮ್ಮ ಲೇಖನದಲ್ಲಿ ಕೇಳಿದಂತೆ. ಆ ಕಾಲದ ಸಂಕಥನವೆಂದರೆ... ಎಲ್ಲರ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಬೇಕಿದೆ. ಇದು ಉತ್ತರ ಹುಡುಕುವ ಕಾಲ. ಉತ್ತರವು?! ಈ ಪುಸ್ತಕದಲ್ಲಿ ಮಾತ್ರವಲ್ಲ ಅದು ಜನಬಂಡಾಯ ಹಾಗೂ ಹಕ್ಕೊತ್ತಾಯದ ಪ್ರಜಾಸತ್ತಾತ್ಮಕ ಹೋರಾಟದಲ್ಲಿದೆ. ಈ ಹೊತ್ತಿಗೆ ಅದನ್ನು ಸಾದೃಶ್ಯಗೊಳಿಸುವ ವಿಧಾನದ ಬಗ್ಗೆ ನಾವೆಲ್ಲ ಯೋಚಿಸಬೇಕಿದೆ.

(ಕನ್ನಡದ ಅಪರೂಪದ ಪುಸ್ತಕ 'ಅಸಮಾನ ಭಾರತ'-ಲಡಾಯಿ ಪ್ರಕಾಶನವು ಪ್ರಕಟಿಸಿದ ಈ ಪುಸ್ತಕವು ಇತ್ತೀಚೆಗೆ ಹೊನ್ನಾವರದಲ್ಲಿ ಬಿಡುಗಡೆಗೊಂಡಿತು. ಆ ಸಂದರ್ಭದಲ್ಲಿ ಚಿಂತಕ ಡಾ. ಕುಂಸಿ ಉಮೇಶ್ ಪುಸ್ತಕ ಕುರಿತು ಮಾತನಾಡಿರುವುದನ್ನು ಅಕ್ಷರರೂಪಕ್ಕಿಳಿಸಿ ಪತ್ರಿಕೆಗೆ ನೀಡಿದ್ದಾರೆ) ☐

ದಲಿತ ಜಾಗೃತಿ: ಒಂದು ಚಿಂತನ

ಗಿರಿಧರ್. ಎಸ್

ಸ್ವತಂತ್ರ್ಯ ಭಾರತ ಸಂವಿಧಾನದ ಪ್ರಕಾರ ಸರ್ವರೂ ಸಮಾನರೇ. ನಾವಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆದ್ದರಿಂದ ಜಾತಿಯ ಬಗ್ಗೆ ಪ್ರಸ್ತಾಪಿಸುವುದಾಗಲೀ, ಮೇಲು ಕೀಳು ಭಾವನೆಗೆ ಇಂಬು ಕೊಡುವುದಾಗಲಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ಶೋಭೆಯಲ್ಲ. ಈ ಅರಿವಿನ ಅಭಾವದಿಂದಲೇ ಇಂದಿಗೂ ಸಹ ದಲಿತರ ಮೇಲಿನ ದೌರ್ಜನ್ಯ, ಶೋಷಣೆಗಳು ಕಡಿಮೆಯಾಗಿಲ್ಲ.

ಸ್ವಾತಂತ್ರ್ಯೋತ್ತರ ಯುಗದ ಶ್ರೇಷ್ಠ ಮೌಲ್ಯಗಳಾದ ಸಮಾನತೆ, ಸ್ವಾತಂತ್ರ್ಯ ಹಾಗೂ ಮನುಷ್ಯ ಪ್ರೇಮಗಳನ್ನು ಗರ್ಭದಲ್ಲಿಟ್ಟುಕೊಂಡೇ ಭಾರತೀಯ ಸಮಾಜ ತನ್ನ ಒಡಲಲ್ಲಿ ಅನ್ಯಾಯ, ಅಸಮಾನತೆ, ತುಳಿತ, ಶೋಷಣೆ, ಅಪನಂಬಿಕೆ, ದ್ವೇಷ, ಸಣ್ಣತನ ಹಾಗೂ ಕೀಳರಿಮೆ ಮೊದಲಾದ ಎಲ್ಲಾ ಬಗೆಯ ದೋಷಗಳನ್ನು ಒಳಗೊಂಡಿರುವುದು ಖೇದದ ಸಂಗತಿ.

'ದಲಿತ' ಎಂಬುದು ಶಾಸನ ಸಮ್ಮತ ಪದವಲ್ಲವಾದ್ದರಿಂದ ದಲಿತರೆಂದರೆ ಯಾರು? ಎಂಬುದನ್ನು ನಿಷ್ಕರ್ಷೆ ಮಾಡುವುದು ಕಷ್ಟದ ಕೆಲಸ. ಇದು ಒಂದು ಸಾಮಾಜಿಕ ಕಲ್ಪನೆಯಾಗಿದ್ದು, ಶೋಷಿತರ ಜಾಗೃತಿಯಿಂದ ಉದ್ಭವವಾದ ಶಬ್ಧ ಎನ್ನಬಹುದು. ದಲಿತ ಎಂಬುದು ಎಲ್ಲಾ ಬಗೆಯ ಶೋಷಿತರನ್ನು ಒಳಗೊಂಡ ಪರಿಕಲ್ಪನೆ. ಸಾಮಾನ್ಯವಾಗಿ ಹೇಳುವುದಾದರೆ, ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದಿರುವ ಶೋಷಿತ (ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳನ್ನೊಳಗೊಂಡಂತೆ) ಜನ ಸಮುದಾ ಯಗಳನ್ನು ದಲಿತರೆನ್ನಬಹುದು.

ಮನುಷ್ಯನನ್ನು ಹುಟ್ಟಿನ ಮೂಲಕ ಅಳೆಯುತ್ತಾ ಅವಮಾನಿಸಿದ ಭಾರತೀಯ ಜಾತಿವ್ಯವಸ್ಥೆಯಲ್ಲಿ ದಲಿತರನ್ನು ಹೇಗೆ ಜೀವಿಸುವಂತೆ ಮಾಡಲಾಗಿತ್ತು ಎಂಬ ಕಲ್ಪನೆ ಇರುವವರಿಗೆ ಅದರ ವಿವರಣೆ ನೀಡುವ ಅಗತ್ಯವಿಲ್ಲ. ಆದರೆ ಇಷ್ಟೆಲ್ಲ ಅಸಮಾನತೆಗಳು ತುಂಬಿರುವ ಈ ವ್ಯವಸ್ಥೆಯು ಹೇಗೆ ಉಳಿದು ಬಂದಿತೆಂಬುದು ಕೆಲವರಿಗೆ ಆಶ್ಚರ್ಯವೆನ್ನಿಸಬಹುದು. ಆದರೆ ಅದನ್ನು ಬೆಂಬಲಿಸುವ ಶಕ್ತಿಗಳು ಹಲವು.

ಇಷ್ಟೆಲ್ಲಾ ವಿವರಣೆಯನ್ನು ನೀಡುವ ಉದ್ದೇಶ ಇಷ್ಟೇ? ಆರು ದಶಕಗಳ ಹಿಂದೆ ಇದ್ದಂತಹ ಪರಿಸ್ಥಿತಿಯ ಯಾವುದಾದರೊಂದು ಬದಲಾವಣೆ ನಮ್ಮ ಸಮಾಜದಲ್ಲಿ ಕಂಡು ಬಂದಿದೆಯೇ? ಇಂತಹ ಕ್ರೂರ ಕೃತ್ಯಗಳು ಇಂದಿಲ್ಲವಾದರೆ ಹಿಂದುಗಳಾಗಿಯೇ ಹುಟ್ಟಿರುವ ದಲಿತರ ಮೇಲೆ ಎಲ್ಲಾ ಕ್ಷೇತ್ರಗಳಲ್ಲಿ ನಡೆಯುತ್ತಿರುವ ಶೋಷಣೆಗಳು ದಿನಂಪ್ರತಿ ಒಂದಲ್ಲ ಒಂದು ಕಡೆ ಕಂಡುಬರುವುದಾದರು ಏಕೆ? ಕಾರಣವಿಷ್ಟೇ. ದಲಿತರಲ್ಲಿನ ಸಂಘಟನೆ ಮತ್ತು ಜಾಗೃತಿಯ ಕೊರತೆ.

ಶೋಷಣೆಯ ವಿವಿಧ ಆಯಾಮಗಳನ್ನು ಪರಿಶೀಲಿಸಿದಾಗ ಶೋಷಣೆ ಎಂಬುದು ಬರೀ ದಲಿತರಿಗೆ ಮಾತ್ರ ಸೇರಿದ್ದಲ್ಲ. ಎಲ್ಲಿಯವರೆಗೆ ಜಾತಿ ಪ್ರಶ್ನೆ ಜೀವಂತವಾಗಿರುತ್ತದೆಯೋ ಅಲ್ಲಿಯವರೀಗೂ ಶೋಷಣೆ ಇದ್ದೆ ಇರುತ್ತದೆ. ಪ್ರತಿಯೊಂದು ಮೇಲ್ಜಾತಿಗೂ ಅವರ ಕೆಳಜಾತಿಯವರು ಶೋಷಿತರೇ. ಒಟ್ಟಾರೆ ಜಾತಿಪದ್ಧತಿ ಮತ್ತು ಶೋಷಣೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ.

ಪಿಎಚ್.ಡಿ., ಸಂಶೋಧನಾ ವಿದ್ಯಾರ್ಥಿ, ಸಮಾಜಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ.

ಪ್ರಾಚೀನ ಭಾರತೀಯ ಇತಿಹಾಸದಲ್ಲಿ ಮನುಷ್ಯನನ್ನು ಮತ್ತೊಬ್ಬ ಮನುಷ್ಯ ಗುಲಾಮನಾಗಿ, ಹಂದಿ ನಾಯಿಗಳಿಗಿಂತಲೂ ಕೀಳಾಗಿ ಕಾಣುತ್ತಿದ್ದ ಎಂಬುದಂತು ಸತ್ಯ. ಇಂತಹ ಕ್ರೂರ ಸಾಮಾಜಿಕ ವ್ಯವಸ್ಥೆಯಲ್ಲಿ ತುಳಿತಕ್ಕೊಳಪಟ್ಟವರಿಗೆ ಪ್ರಜ್ಞೆ ಹುಟ್ಟಿಸಿ, ಸ್ವಾಭಿಮಾನ, ಆತ್ಮ ಗೌರವ ತುಂಬಿಸಿ ತುಳಿಯುವ ಸಮಾಜದ ವಿರುದ್ಧ ದಲಿತರನ್ನು ಸಂಘರ್ಷಕ್ಕೆ ಸಿದ್ಧಗೋಳಿಸಬೇಕಾದ ಅನಿವಾರ್ಯತೆ ಇದೆ. ಅಲ್ಲದೆ ತಮ್ಮ ಹಕ್ಕುಗಳಿಗಾಗಿ ಮತ್ತು ಸಾಮಾಜಿಕ ಸ್ಥಾನ ಮಾನಕ್ಕಾಗಿ ಹೋರಾಡುವ ಹಾಗೆ ಮಾಡಬೇಕಾದ ಜವಬ್ದಾರಿ ಪ್ರಜ್ಞಾವಂತರಾದ ನಮ್ಮ ನಿಮ್ಮೆಲ್ಲರ ಮೇಲಿದೆ.

ಸ್ವಾತಂತ್ರ್ಯ ಬಂದು ಈ ದೇಶಕ್ಕೆ 64 ವರ್ಷ ಪೂರ್ಣಗೊಂಡಿದೆ. ವಿಜ್ಞಾನ, ತಾಂತ್ರಿಕತೆ ಮತ್ತು ಆಧುನೀಕರಣದಲ್ಲಿ ಸಾಕಷ್ಟು ಮುಂದು ವರೆದಿದ್ದೆವೆ. ಆದರೆ ಇಂದಿಗೂ ದಲಿತರು ತಮ್ಮ ವೃತ್ತಿ, ರೂಢಿ– ಸಂಪ್ರದಾಯ, ಆಚರಣೆಗಳನ್ನು ಮುಂದುವರೆಸಿಕೊಂಡು ಬಂದಿದ್ದು, ಜಾತಿ ರೋಗದಿಂದ ಗುಣಮುಖರಾಗದೆ ಅದರ ಕರಾಳ ಛಾಯೆಗೆ ಹುಟ್ಟಿದ ವಿಭಿನ್ನ ಹೆಸರಿನ ಉಪಜಾತಿಗಳಾಗಿ, ಜನಬಲ ಧನಬಲ, ಬುದ್ಧಿಬಲ ಹೀಗೆ ಮೂರು ಬಲಗಳಿಲ್ಲದೆ ಊರು ಕೇರಿಗಳಲ್ಲಿ ಚೆಲ್ಲಿ ಹೋಗಿ ಶೋಷಿತರಾಗಿಯೇ ಬದುಕುತಿದ್ದಾರೆ. ಅಸಂಘಟಿತರಾದ ದಲಿತರನ್ನು ಒಟ್ಟುಗೂಡಿಸಿ ಅವರಿಗೆ ಸಂಘಟನೆಯ ಅರಿವು ಮೂಡಿಸಿ ರಾಜ್ಯದ್ಯಾಂತ ದೌರ್ಜನ್ಯಗಳಿಂದ ಹೆದರಿ ನರಳುತ್ತಿರುವ ಶೋಷಿತರಿಗೆ ಧೈರ್ಯ,

ಪ್ರಾಚೀನ ಭಾರತೀಯ ಇತಿಹಾಸದಲ್ಲಿ ಮನುಷ್ಯನನ್ನು ಮತ್ತೊಬ್ಬ ಮನುಷ್ಯ ಗುಲಾಮನಾಗಿ, ಹಂದಿ ನಾಯಿಗಳಿಗಿಂತಲೂ ಕೀಳಾಗಿ ಕಾಣುತ್ತಿದ್ದ ಎಂಬುದಂತು ಸತ್ಯ. ಇಂತಹ ಕ್ರೂರ ಸಾಮಾಜಿಕ ವ್ಯವಸ್ಥೆಯಲ್ಲಿ ತುಳಿತಕ್ಕೊಳಪಟ್ಟವರಿಗೆ ಪ್ರಜ್ಞೆ ಹುಟ್ಟಿಸಿ, ಸ್ವಾಭಿಮಾನ, ಆತ್ಮ ಗೌರವ ತುಂಬಿಸಿ ತುಳಿಯುವ ಸಮಾಜದ ವಿರುದ್ಧ ದಲಿತರನ್ನು ಸಂಘರ್ಷಕ್ಕೆ ಸಿದ್ಧಗೋಳಿಸಬೇಕಾದ ಅನಿವಾರ್ಯತೆ ಇದೆ. ಅಲ್ಲದೆ ತಮ್ಮ ಹಕ್ಕುಗಳಿಗಾಗಿ ಮತ್ತು ಸಾಮಾಜಿಕ ಸ್ಥಾನ ಮಾನಕ್ಕಾಗಿ ಹೋರಾಡುವ ಹಾಗೆ ಮಾಡಬೇಕಾದ ಜವಬ್ದಾರಿ ಪ್ರಜ್ಞಾವಂತರಾದ ನಮ್ಮ ನಿಮ್ಮೆಲ್ಲರ ಮೇಲಿದೆ.

ಸ್ವಾಭಿಮಾನವನ್ನು ತುಂಬಬೇಕಾದ ಕೆಲಸವನ್ನು ದಲಿತ ಮುಖಂಡರು ಮಾಡಬೇಕಾಗಿದೆ.

ದಲಿತರೆನಿಸಿಕೊಂಡವರು ಯಾರಲ್ಲೂ ಪಾಲು ಕೊಡಬೇಕೆಂದಾಗಲಿ, ತಮ್ಮ ಜಾತಿಗೆ ಸೇರಿಸಿಕೊಳ್ಳಬೇಕೆಂದಾಗಲಿ ದುಂಬಾಲು ಬೀಳುವುದಿಲ್ಲ. ಅವರಿಗೆ ಬೇಕಾಗಿರುವುದು ಸಾಮಾಜಿಕ ಸ್ಥಾನಮಾನ. ದೌರ್ಜನ್ಯರಹಿತ, ಸೌಜನ್ಯಸಹಿತ, ನೀತಿ ಆಧಾರಿತ ಸಮಾಜದ ನಿರ್ಮಾಣವೇ ಎಲ್ಲ ಆದರ್ಶ ವ್ಯಕ್ತಿಗಳ ಆಶಯವಾಗಿದೆ. ಅವರ ಆಶಯಗಳಿಗೆ ಒತ್ತು ಕೋಡಬೇಕಾದದ್ದು ಎಲ್ಲರ ಆದ್ಯ ಕರ್ತವ್ಯದಾದಾಗಲೇ ಮಹಾತ್ಮರ ಜಯಂತಿ, ಪುಣ್ಯ ದಿನಗಳ ಆಚರಣೆಗೆ ಒಂದು ಅರ್ಥ ಬರುತ್ತದೆ. ಇದುವೇ ಪ್ರಜಾಪ್ರಭುತ್ವ ವ್ಯವಸ್ಥೆಗೆ ಸಲ್ಲಿಸುವ ನಿಜವಾದ ಗೌರವವಾಗಿದೆ.

"ನಾವು ಸಮಾನತೆಯನ್ನು ಎಲ್ಲಿಯವರೆಗೆ ನಿರಾಕರಿಸುತ್ತೇವೆಯೋ ಅಲ್ಲಿಯವರೆಗೆ ನಮ್ಮ ಪ್ರಜಾಪ್ರಭುತ್ವವನ್ನು ಗಂಡಾಂತರಕ್ಕೆ ಸಿಲುಕಿಸುತ್ತೇವೆ. ನಾವು ಈ ವಿರೋಧಾಬಾಸವನ್ನು ಆದಷ್ಟು ಬೇಗ ತೊಡೆದು ಹಾಕಬೇಕು. ಇಲ್ಲವಾದರೆ ಈ ಅಸಮಾನತೆಯಿಂದ ತೊಳಲುವ ಜನರು ಪ್ರಜಾಸತ್ತೆಯ ವ್ಯವಸ್ಥೆಯನ್ನು ಧ್ವಂಸ ಮಾಡುತ್ತಾರೆ." – ಡಾ. ಬಿ. ಆರ್. ಅಂಬೇಡ್ಕರ್.

ಅಸ್ಪೃಶ್ಯತೆಯ ನಿವಾರಣೆಯ ಕಾನೂನು ಮತ್ತು ಇದರ ಬಗ್ಗೆ ಸರಕಾರ ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಂಡ ನಂತರವೂ, ಇಂತಹ ಪ್ರಸಂಗಗಳು ಚದುರಿದಂತೆ, ಆಗೊಮ್ಮೆ ಈಗೊಮ್ಮೆ ಈ ವಿಶಾಲ ದೇಶದ ಯಾವುದೋ ಮೂಲೆಯಲ್ಲಿ ನಡೆಯುತ್ತಿರುತ್ತವೆ. ಎಂಬುದನ್ನು ಒಪ್ಪಿದರೂ ಸಹ, ಅಸ್ಪೃಶ್ಯತೆಯ ಆಚರಣೆ ಇಂದಿಗೂ ಮುಂದುವರೆದಿದೆ ಎನ್ನುವುದೂ ವಾಸ್ತವ ಸಂಗತಿ.

ದಲಿತರ ಹತ್ಯಾಕಾಂಡ ಹಾಗೂ ಇತರ ಅಪರಾಧಗಳಿಗೆಲ್ಲ ಬಿಹಾರ ಮತ್ತು ಉತ್ತರ ಪ್ರದೇಶಗಳನ್ನು ಅನಾಗರಿಕ ರಾಜ್ಯಗಳೆಂದು ಬೊಟ್ಟು ಮಾಡುವ ಕಾಲ ಬದಲಾಗಿ ಅಂತಹ ಘಟನೆಗಳ ಸಾಲಿಗೆ ಕರ್ನಾಟಕವನ್ನು ಉದಾಹರಿಸುವ ಘಟನೆಗಳು ಈ ರಾಜ್ಯದಲ್ಲಿ ನಡೆದಿವೆ. ಉದಾ: ಕೋಲಾರ ಜಿಲ್ಲೆಯ ಕಂಬಾಲಪಲ್ಲಿಯಲ್ಲಿ ಏಳು ಜನ ದಲಿತರ ಸಜೀವ ದಹನ, ಬಳ್ಳಾರಿ ಜಿಲ್ಲೆಯ ವಣೆನೂರಿನಲ್ಲಿ ದಲಿತ ಮಹಿಳೆಯ ಬೆತ್ತಲೆ ಪ್ರಕರಣ, ಚಿತ್ರದುರ್ಗ ಜಿಲ್ಲೆಯ ಉಪರಿಗೆನಹಳ್ಳಿಯಲ್ಲಿ ದಲಿತ ಮಹಿಳೆಯ ಅರೆಬೆತ್ತಲೆ ಪ್ರಕರಣ, ಬೆಳಗಾಂ ಜಿಲ್ಲೆಯ ಬೆಂಡಿಗೇರಿ ಗ್ರಾಮದ ದಲಿತರಿಗೆ ಮಲ ತಿನ್ನಿಸಿದ ಪ್ರಕರಣ, ಚಿಕ್ಕಮಗಳೂರು ಜಿಲ್ಲೆಯ ಖಾಂಡ್ಯ ಹೋಬಳಿ, ಕಾಸರಗೋಡು ಗ್ರಾಮದಲ್ಲಿ ದಲಿತರಿಗೆ ದೇವಾಲಯ ಪ್ರವೇಶಿಸದಂತೆ ಬಹಿಷ್ಕಾರ, ರಾಮನಗರದ ದಲಿತ ಯುವತಿಯ ಮಾನಭಂಗ, ಹೊಸಕೋಟೆ ತಾಲ್ಲೂಕಿನ ನಂದಗುಡಿಯಲ್ಲಿ ದಲಿತ ಮುಖಂಡನ ಕೊಲೆ, ತುಮಕೂರು ಜಿಲ್ಲೆಯ ಪಾಲಸಂದ್ರ ಗ್ರಾಮದಲ್ಲಿ ದಲಿತರಿಗೆ ಸಾಮಾಜಿಕ ಬಹಿಷ್ಕಾರ (ದಿನಪತ್ರಿಕೆಗಳಿಂದ ಬಂದಂತಹ ಮಾಹಿತಿಯ ಆಧಾರದ ಮೇಲೆ) ಇನ್ನೂ ಇಂತಹ ಉದಾಹರಣೆಗಳು ಸಾಕ್ಷಿಯಾಗಿವೆ. ನಾವು ಇಂತಹ ವ್ಯವಸ್ಥೆಗಳ ಮಧ್ಯೆ ಸಮಾನತೆ ಮತ್ತು ದಲಿತರ ಅಭಿವೃದ್ಧಿಯ ಬಗ್ಗೆ ಮಾತನಾಡುತ್ತೇವೆ. ಹೀಗೆ ಮಾತನಾಡುವ ಸಂದರ್ಭದೊಳಗೆ ಹಲವಾರು ರೀತಿಯ ಶೋಷಣೆಗಳು, ದೌರ್ಜನ್ಯಗಳು, ತಾರತಮ್ಯಗಳು ನಡೆಯುತ್ತಲೇ ಇವೆ. ಆದರೂ, ದಲಿತರ ಸ್ಥಿತಿಗತಿ ಬದಲಾಗುತ್ತಿದೆ, ಸುಧಾರಿಸುತ್ತಿದೆ ಎಂಬ ಆಶಾಭಾವನೆಯನ್ನು ಇಟ್ಟುಕೊಂಡಿದ್ದೇವೆ. ಒಟ್ಟಿನಲ್ಲಿ ದಲಿತರ ಸ್ಥಿತಿಗಳನ್ನು ಸುಧಾರಿಸಬೇಕಾದರೆ ನಮ್ಮೊಳಗೆ ವ್ಯವಸ್ಥೆ ಸರಿಯಾಗಬೇಕು. ಅಲ್ಲದೇ ತಮ್ಮ ಹಕ್ಕು ಬಾಧ್ಯ ತೆಗಳನ್ನು ಕೇಳುವ ಹಾಗೂ ಪಡೆದುಕೊಳ್ಳುವ ದಿಕ್ಕಿನಲ್ಲಿ ದಲಿತರು ದಿಟ್ಟ ಹೆಜ್ಜೆಗಳನ್ನು ಇಡಬೇಕಾಗಿದೆ.

ದಲಿತರ ಮೇಲೆ ನಡೆಯುವ ದೌರ್ಜನ್ಯ ಪ್ರಕರಣಗಳು ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದ ನಂತರವಾದರೂ ಕಡಿಮೆಯಾಗಬೇಕಾಗಿತ್ತು. ಆದರೆ ಪರಿಸ್ಥಿತಿ ಇದಕ್ಕೆ ತದ್ವಿರುದ್ಧವಾಗಿದೆ. ಸಾಮಾಜಿಕವಾಗಿ ತುಳಿತಕ್ಕೊಳಗಾದವರು ಶಿಕ್ಷಣದ ಮೂಲಕ ಹೊಸ ತಿಳುವಳಿಕೆ ಪಡೆದು ಸಾಮಾಜಿಕ ನ್ಯಾಯದ ತಮ್ಮ ಹಕ್ಕನ್ನು ರೂಢಿಸಿಕೊಳ್ಳುವ ಒಂದು ಹಂತಕ್ಕೆ ಬಂದಾಗ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿರುವುದು ಗಮನಾರ್ಹ ಅಂಶ. ನಾವುಗಳು ಗ್ರಾಮಗಳ ಅಭಿವೃದ್ಧಿಯಲ್ಲಿ 10ನೇ ಪಂಚವಾರ್ಷಿಕ ಯೋಜನೆಯನ್ನು ಪೂರ್ಣಗೊಳಿಸಿ, 11ನೇಯ ಪಂಚವಾರ್ಷಿಕ ಯೋಜನೆಯಲ್ಲಿ ಮುನ್ನಡೆದಿದ್ದೇವೆ. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಹೆಚ್ಚಿನ ಸ್ವಾವಲಂಬನೆ ಹಾಗೂ ಅಪಾರ ಯಶಸ್ಸು ಸಾಧಿಸಿದ್ದೇವೆ. ಆದರೆ, ಈ ದೇಶದ ನೆಲದಲ್ಲಿ ನೆಲಸಿರುವ, ಇಲ್ಲಿಯ ಗಾಳಿ ಬೆಳಕಿನಲ್ಲಿಯೇ ಬದುಕುವ ದಲಿತರಿಗೆ ಮಾತ್ರ ಸಾಮಾಜಿಕ ಸಮಾನತೆ ಸಾಧ್ಯವಾಗಿಲ್ಲ. ಪ್ರತಿದಿನ ಒಂದಲ್ಲ ಒಂದು ಕಡೆ ಈ ವರ್ಗದ ಜನರ ಕೊಲೆ, ಸಜೀವದಹನ, ದೌರ್ಜನ್ಯ, ಮಹಿಳೆಯರ ಮೇಲೆ ಅತ್ಯಾಚಾರ, ಅರೆಬೆತ್ತಲೆಗಳಂತಹ ಬರ್ಬರ ಕೃತ್ಯಗಳು ಅವ್ಯಹತವಾಗಿ ಕಂಡುಬರುತ್ತಿವೆ.

ದಲಿತರ ಹಿತರಕ್ಷಣೆಯನ್ನು ಕಾಪಾಡುವ ನಿಟ್ಟಿನಲ್ಲಿ ಹಲವಾರು ಶಾಸನಗಳು, ಕಾನೂನುಗಳ ಜೊತೆಗೆ ಸಮಾಜ ಸುಧಾರಕರು ಹಾಗೂ ರಾಜಕೀಯ ನಾಯಕರುಗಳ ಮದ್ಯೆ ಮಾತುಕತೆಗಳು, ಸಂಧಾನಗಳು ನಡೆಯುತ್ತಿರುತ್ತವೆ. ಆದರೆ, ಇವುಗಳು ಯಾವುವೂ ಇದುವರೆಗೆ ಫಲ ನೀಡಿಲ್ಲ. ಇಲ್ಲಿ ಎಲ್ಲ ಸ್ವೇಚ್ಛಾನುಸಾರವಾಗಿ ನಡೆಯುವುದರಿಂದ ಸುಧಾರಣೆ ಸುಲಭ ಸಾಧ್ಯವಲ್ಲ. ಜೊತೆಗೆ, ದಲಿತರು ತಮಗೆ ಅನ್ವಯಿಸುವ ಕಾಯ್ದೆಗಳು, ಕಾನೂನುಗಳು ಮತ್ತು ನಿಯಮಗಳನ್ನು ತಿಳಿದಿಲ್ಲದಿರುವುದು ಇನ್ನೊಂದು ವಿಶೇಷ.

ಟಾಲ್‌ಸ್ಟಾಯ್ ಬಹಳ ವರ್ಷಗಳ ಹಿಂದೆಯೇ ಹೇಳಿದಂತೆ, "ರೋಮ್ ಮತ್ತು ಅಮೇರಿಕಾದಲ್ಲಿ ಗುಲಾಮಗಿರಿ ನಿಷೇಧಿಸಲಾಯಿತು. ಆದರೆ ಕೇವಲ ಶಬ್ದಗಳಲ್ಲಿ ಮತ್ತು ಕಾನೂನಿನಲ್ಲಿದೆಯೇ ವಿನಃ ನೈಜವಾಗಿ ನಿಷೇಧವಾಗಿಲ್ಲ". ಇದೇ ಮಾತು ಭಾರತದಂತಹ ಪ್ರಜಾಪ್ರಭುತ್ವ ರಾಷ್ಟ್ರಕ್ಕೂ ಅನ್ವಯಿಸುತ್ತದೆ. ಭಾರತದ ಸಂವಿಧಾನದಲ್ಲಿ ಅಸ್ಪೃಶ್ಯತೆ ಶಿಕ್ಷಾರ್ಹ ಅಪರಾಧ ಎಂಬ ಕಾನೂನು ಇದೆ. ಆದರೆ ಆ ಕಾನೂನು ಬರಿ ಕಾನೂನಾಗಿ ಉಳಿದಿದೆ ವಿನಃ ನೈಜ ಕಾರ್ಯರೂಪಕ್ಕೆ ಬಂದಿಲ್ಲ ಎಂಬುದು ಈ ವರ್ಗಗಳ ಮೇಲೆ ನಡೆದಿರುವ ಶೋಷಣೆ ಹಾಗೂ ದೌರ್ಜನ್ಯ ಕಂಡುಕೊಂಡಾಗ ತಿಳಿಯುತ್ತದೆ. ಇಂದಿನ ಆಧುನಿಕ ಸಮಾಜದ ಬದಲಾವಣೆಯ ಬಿರುಗಾಳಿಯ ವೇಗಕ್ಕೆ ಸರಿಸಮನಾದ ಓಟವನ್ನು ಭಾರತೀಯ ದಲಿತರು ಮೈಗೂಡಿಸಿಕೊಳ್ಳದೇ ಹೋದರೆ ಡಾ.ಬಿ.ಆರ್. ಅಂಬೇಡ್ಕರ್‌ರವರು ಕಂಡ ಕನಸು, ಹಾಕಿ ಕೊಟ್ಟ ಮಾರ್ಗದರ್ಶನಗಳಿಗೆ ಸಾರ್ಥಕತೆ ಸಿಗುವುದಿಲ್ಲ. ಇಂದಿನ ವಿಜ್ಞಾನ, ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಆಗುತ್ತಿರುವ ರಾಕೇಟ್ ವೇಗದ ಬದಲಾವಣೆಗೆ ದಲಿತವರ್ಗವನ್ನು ಸಜ್ಜುಗೊಳಿಸಬೇಕಾದ ಜವಾಬ್ದಾರಿಯೂ ಸಮಾಜ ಮತ್ತು ಸರ್ಕಾರದ ಮೇಲಿದೆ.

ಇತ್ತೀಚಿನ ದಿನಗಳಲ್ಲಿ ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಪ್ರಕ್ರಿಯೆಗಳು ದಲಿತರಿಗೆ ಹೊಸ ಹೊಸ ಸವಾಲುಗಳನ್ನು ಒಡ್ಡುತ್ತಿವೆ. ಈ ಸವಾಲುಗಳನ್ನು ಇತರೆ ವರ್ಗದವರಂತೆ ಯಶಸ್ವಿಯಾಗಿ ನಿಭಾಯಿಸುವ ತಂತ್ರಗಾರಿಕೆ, ಕೌಶಲ್ಯತೆಯ ಜ್ಞಾನವನ್ನು ದಲಿತವರ್ಗದ ಯುವಜನತೆ ಮೈಗೂಡಿಸಿಕೊಳ್ಳುವ ಅನಿವಾರ್ಯತೆಯಿದೆ. ಇತ್ತೀಚೆಗೆ ಕೇಳಿ ಬರುತ್ತಿರುವ ಮೀಸಲಾತಿ ವಿರೋಧಿ ಕೂಗುಗಳು, ಬಲಪಂಥಿಯ ಸಂಘಟನೆಗಳ ಆರ್ಭಟ, ಬದಲಾಗುತ್ತಿರುವ ರಾಜಕೀಯ ಪಕ್ಷಗಳ ಸಿದ್ಧಾಂತಗಳು, ಸರ್ಕಾರದ ನೀತಿ ನಿಯಮಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತಿರುವ ಮೇಲ್ವರ್ಗದ ಹುನ್ನಾರ, ಇವೇ ಮುಂತಾದ ಪ್ರಬಲ ಶಕ್ತಿಗಳನ್ನು ಎದುರಿಸುವ ಮನೋಭಾವನೆ ಹಾಗೂ ದಲಿತವರ್ಗದವರು ಸಂಘಟಿತರಾಗಬೇಕಾದ ಅನಿವಾರ್ಯತೆ ಮತ್ತೊಂದೆಡೆ ಇದೆ.

ನಮ್ಮ ಹೆಮ್ಮೆಯ ಘನತೆವೆತ್ತ ಮಾಜಿ ರಾಷ್ಟ್ರಪತಿಗಳಾದ ಡಾ. ಎ.ಪಿ.ಜೆ ಅಬ್ದುಲ್ ಕಲಾಂರವರು ಭಾರತವು 2020ರ ಹೊತ್ತಿಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ಸರ್ವಾಂಗೀಣ ಅಭಿವೃದ್ಧಿ ಹೊಂದುವ ಕನಸು ಕಾಣುತ್ತಾ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಯೋಜಿಸಿದ್ದಾರೆ. ಇವರ ಹಾದಿಯಲ್ಲಿಯೇ ನಮ್ಮ ರಾಷ್ಟ್ರದ ಅನೇಕ ವಿಜ್ಞಾನಿಗಳು, ತಂತ್ರಜ್ಞರು, ಸರ್ಕಾರ ಮತ್ತು ಆಡಳಿತಗಾರರು ವಿಶೇಷವಾಗಿ ದಲಿತರ ಸ್ಥಾನಮಾನಗಳನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಆಧುನಿಕ ಭಾರತದ ಅಭಿವೃದ್ಧಿಯೂ ನಿರೀಕ್ಷಿತ ಯಶಸ್ಸನ್ನು ಕಾಣಬೇಕಾದರೆ ಭಾರತದ ದಲಿತ ವರ್ಗದವರ ಅಭಿವೃದ್ಧಿಯನ್ನು ಪ್ರಥಮ ಆದ್ಯತೆಯನ್ನಾಗಿ ಪರಿಗಣಿಸಬೇಕಾಗಿದೆ. ಆಗಾದಾಗ ಮಾತ್ರ ಕಾರ್ಲ್‌ಮಾರ್ಕ್ಸ್‌ರವರ ಸಮಾನತೆಯಿಂದ ಕೂಡಿದ ಸಮಾಜದ ಸ್ಥಾಪನೆಯ ಕನಸು ನನಸಾಗುತ್ತದೆ. ಜೊತೆಗೆ, ಜನರಲ್ಲಿ ಮೇಲು–ಕೀಳು ಎಂಬ ಬೇಧವಿಲ್ಲದೆ, ಎಲ್ಲರೂ ಒಂದೇ ಎಂಬ ಭಾವನೆ ಮೂಡಬೇಕು. ಸ್ಪರ್ಶ–ಅಸ್ಪೃಶ್ಯ ಎಂಬ ಅಸಮಾನತೆಯ ಚಿಂತನೆಗಳನ್ನು ದೂರ ಮಾಡಬೇಕು. ಸಂವಿಧಾನದ ಮೂಲತತ್ವಗಳಿಗೆ ಬೆಲೆ ನೀಡಬೇಕು. ದಲಿತರ ಜೀವನ ವಿಧಾನವನ್ನು ವಿನಾಕಾರಣ ಪ್ರಶ್ನಿಸುವ ಮತ್ತು ಪರಿಹಾಸ್ಯ ಮಾಡುವ ಮೇಲ್ವರ್ಗದ ಜನರ ಮನೋಭಾವನೆ ಬದಲಾಗಬೇಕು. ದಲಿತರ ಸಂಬಂಧಿತ ಪೂರ್ವಗ್ರಹ ಚಿಂತನೆಗಳನ್ನು ದೂರಮಾಡಿ, ಅವರ ಸಾಮರ್ಥ್ಯ, ಧೈರ್ಯ, ಕೌಶಲ್ಯ, ಜ್ಞಾನವನ್ನು ಪ್ರೋತ್ಸಾಹಿಸುವ ಕಾರ್ಯ ಆಗಬೇಕು. ಹಾಗಾದಾಗ ಮಾತ್ರ ದಲಿತರು ಉತ್ತಮ ಸ್ಥಾನಗಳನ್ನು ಗಳಿಸಿ ಕುಟುಂಬವನ್ನು, ನೆರೆಹೊರೆಯನ್ನು, ಅಂತಿಮವಾಗಿ ಸಮಾಜವನ್ನು ಉದ್ಧರಿಸುವ ಕಾಲ ದೂರವಿರುವುದಿಲ್ಲ. ಇಂತಹ ಸನ್ನಿವೇಶಕ್ಕಾಗಿ ಎಲ್ಲರೂ ನಿರೀಕ್ಷೆಯನ್ನು ಇಟ್ಟುಕೊಂಡು ಕಾರ್ಯಪ್ರವೃತ್ತರಾಗೋಣ. □

ಒಂದಾನೊಂದು ಕಾಲದಲ್ಲಿ
ಕೊಲ್ಲೋರಾಯನ ಪಾಳೆಯದಲ್ಲಿ
ಕತ್ತಲ ಕಾಲುವೆ ಉತ್ತರ ದಡದಲಿ
ಒಬ್ಬಾನೊಬ್ಬ ರಾಜನಿದ್ದ

ಸದಾಕಾಲವು ಯುದ್ದಕೆ ಸಿದ್ದ
ಸಾವಿರ ವರ್ಷವು ಅವನೆ ಇದ್ದ
ಗೆದ್ದವ ಸೋತ ಸೋತವ ಸತ್ತ
ಊರಿನ ತುಂಬ ಸಾವಿನ ಹುತ್ತ

ರಾಜ್ಯದ ಎಲ್ಲೆ ಅರ್ಧ ಧರಣಿ
ಆಳುತ್ತಿದ್ದರು ರಾಜರಾಣಿ
ಇನ್ನೂ ಅರ್ಧ ಅದಕೆ ಯುದ್ದ
ಯುದ್ದ ಯುದ್ದ ಯುದ್ದ

ನಾಡಿನ ಕಣ್ಣಿಗೆ ಕಾಡಿನ ಕಾಲಿಗೆ
ಗಾಯ ಗಾಯ ಗಾಯ
ನೀರಿನ ತಾಣಕೆ ಊರಿನ ಪ್ರಾಣಕೆ
ಗಾಯ ಗಾಯ ಗಾಯ

ಹಸಿರಿನ ಹೊಲದಲಿ ಹಸಿದ ರೈತರು
ಬೆಳೆದದ್ದೆಲ್ಲ ರಾಜರ ಪಾಲು
ಹಸಿದ ಮಕ್ಕಳ ಖಾಲಿ ತಟ್ಟೆ
ಅರಮನೆಯೊಂದು ಡೊಳ್ಳು ಹೊಟ್ಟೆ

ಏಳು ಸುತ್ತಿನ ಮಲೆದುರ್ಗ
ಏಳು ಸುತ್ತಿನ ಜಲದುರ್ಗ
ಏಳು ಸುತ್ತಿನ ಏಳು ಕೋಟೆಗಳು
ಕಾಯುತ್ತಿದ್ದವು ರಾಜ್ಯವನು

ಅರಮನೆಯೊಳಗಿನ ಆಟಗಳು
ಭೋಪರಾಕಿನ ಕೂಟಗಳು
ಸದಾ ತುಂಬಿದ ತಟ್ಟೆಗಳು
ಭಲೇ ಬೊಜ್ಜಿನ ಹೊಟ್ಟೆಗಳು

ಮಿರಮಿರ ಮಿರಮಿರ ಮಿಂಚುತ್ತಲ್ಲ
ಚಿನ್ನ ಬೆಳ್ಳಿಗೆ ಬರವಿರಲಿಲ್ಲ
ತನನ ತಾನಕೆ ಕೊನೆ ಇರಲಿಲ್ಲ
ಓ ನಾಮಕೆ ಎಣೆ ಇರಲಿಲ್ಲ

ಚಿನ್ನದ ಹೂವು ಚಿನ್ನದ ಎಕ್ಕಡ
ಅರಮನೆಗೆಲ್ಲ ಚಿನ್ನದ ಬಗ್ಗಡ
ರಾಜ್ಯವೆಂಬುದು ಭಲಾ ಭಲಾ
ಏಳು ಲಕ್ಷ ಚದುರಂಗಬಲ

2

ಹೀಗಿರಲಾಗಿ ಹಾಗಿರಲಾಗಿ
ಯುದ್ದವು ರೋಗವೆ ಆಗಿರಲಾಗಿ
ರಕ್ತದ ಆಟವೆ ಕೆಮ್ಮುಗಿಲಾಗಿ
ಸುಡು ಸುಡು ಸುಡು ಸುಡುಗಾಡಾಗಿ

ಕುಂತು ಉಣ್ಣುವವರೆಚ್ಚಾಗಿ
ಕುಡಿಕೆಯ ಹೊನ್ನು ಸಾಲದೆ ಹೋಗಿ
ಮೋಡಗಳೆಲ್ಲ ಬಡವಾಗಿ
ಮಳೆಸುರಿಸುವುದೆ ಮರೆತೇಹೋಗಿ

ಅಗೋ ಬಂದಿತು ಇಗೋ ಬಂದಿತು
ಬರಗಾಲದ ಬರೆ ಹಾಕುವೆನೆಂದಿತು
ಮಕ್ಕಳು ಮರಿಗಳ ಬಲಿಯ ಕೇಳಿತು
ಏಳು ಕೋಟೆಯ ಕೆಡವಿ ನುಗ್ಗಿತು

ಗರಿಕೆಯ ಬೇರು ಗಿರಿಚಿಕೊಂಡವು
ಗೆಡ್ಡೆ ಗೆಣಸು ಕರಕಲಾದವು
ಕೆರೆಗಳೆಲ್ಲವು ಹೊತ್ತಿ ಉರಿದವು
ವಾಡೆ ಮೂಡೆ ಲೊಡಲೊಡ ಎಂದವು

ಚಿನ್ನದ ರಾಜ್ಯದಲನ್ನವೆ ಇಲ್ಲ
ಅರಮನೆಯಲ್ಲಿ ಅಂದವೆ ಇಲ್ಲ
ಮಹಾರಾಜನು ಬಡವಾದ
ಅವನೆ ಹಸಿದ ನಾಯಾದ

ಮಹಾರಾಣಿಯ ಬೆಕ್ಕು ಸತ್ತಿತು
ಸಾಕಿದ ನಾಯಿ ಕದ್ದು ಹೋಯಿತು
ಸುಖ ಸುಪ್ಪತ್ತಿಗೆ ಮುಳ್ಳಿನ ಬುತ್ತಿ
ಮುರಿದು ಬಿದ್ದಿತು ಮಂತ್ರಿಯ ಕತ್ತಿ

ರೈತರು ಕೆಟ್ಟರು ಬೀಜವ ಬಿತ್ತಿ
ಮೀರಿದ ಸಹನೆಗೆ ಕಟ್ಟೆಯ ಕಟ್ಟಿ

ಮಾತಿಗೆ ಮಾತು ಮಾತಿಗೆ ಬಿದ್ದು
ಹಸಿವಿಗೆ ಅನ್ನ ಒಂದೇ ಮದ್ದು

ದಂಗೆ ಎದ್ದರು ಮೇಲೆ ಬಿದ್ದರು
ಮಕ್ಕಳು ಅತ್ತರು ಮುದಕರು ಸತ್ತರು
ಹೆಂಗಸರೆಲ್ಲ ರೊಚ್ಚಿಗೆದ್ದರು
ರೊಟ್ಟಿಗೆ ಅರಮನೆ ಮುತ್ತಿದರು

ಕಾರೇ ಗಿಡಗಳು ಈಚಲು ಮರಗಳು
ಅರಮನೆ ಮೇಲೆ ಹೋಗಿ ಬಿದ್ದವು
ಹಕ್ಕಿಗಳೆಲ್ಲ ರೊಚ್ಚಿಗೆದ್ದವು
ಅರಮನೆ ನೆತ್ತಿಯ ಕುಕ್ಕಿದವು

ದನಕರುಗಳು ಕುರಿಗಳು ಮರಿಗಳು
ಅರಮನೆ ಗುರುಮನೆ ಗುದ್ದಿದವು
ಅರಮನೆಯಾಯಿತು ಬೆಂಕಿಯ ಕುಂಡ
ಯಜ್ಞಯಾಗ ಶಾಸ್ತ್ರಪುರಾಣ
ಭವಿಷ್ಯಕಾರರ ಸುಳ್ಳಿನ ಬಾಣ
ಆದವು ದಂಡ

3

ಎದ್ದುಬಿದ್ದು ಓಡುತ ಬಂದ
ರಾಜನು ಬಂದ ಅರಮನೆಯಿಂದ
ಯಾರು ಯಾರು ಯಾರು ಎಂದ
ಬರಗಾಲದ ಉರಿ ಮನೆಯಿಂದ
ಬಿಡಿಸುವರಾರು ಆರು ಎಂದ
ಹಸಿವಿನ ಹಗ್ಗದ ನೇಣಿಂದ

ಅರ್ಧ ರಾಜ್ಯವ ಕೊಡುವೆನು ಎಂದ
ಅರ್ಧ ಕೋಶವ ಕೊಡುವೆನು ಎಂದ
ಅರಮನೆ ಗುರುಮನೆ ಅರ್ಧಕ್ಕರ್ಧ
ಚಿನ್ನವ ಕೊಡುವೆ ಅನ್ನವ ಕೊಡಿರಿ

ಕತ್ತಲ ಕಾಂಡ (ರೂಪಕ)

ಕೈಕೈ ಮುಗಿದ ಟಾಂ ಟಾಂ ಹೊಡೆಸಿದ
ದೂರ ದೂರಕೆ ದೂತರ ಅಟ್ಟಿದ
ಹಸಿವಿಗೆ ಅನ್ನದ ಗೋಪುರ ಕಟ್ಟಿದ
ಕೂಗಿದ ಕೂಗಿದ ಕೂಗೇ ಕೂಗಿದ

ತಿಂದು ತೇಗಿದ ದರ್ಬಾರು
ಜ್ಯೋತಿಷಿ ವರ್ತಕ ಗುಡಿ ಗೌಡರು
ಇಲ್ಲ ಇಲ್ಲ ಯಾರು ಇಲ್ಲ
ರಾಜನ ಕೂಗಿಗೆ ಓಗೊಡಲಿಲ್ಲ
ಮಂತ್ರಿಮಂಡಲ ಸೇರಲೆ ಇಲ್ಲ
ಕವಿಮುನಿಸಂತರ ಉಸಿರೆ ಇಲ್ಲ

ಭರವಸೆ ಸತ್ತು ಹೋಗುವ ಹೊತ್ತು
ಕಪ್ಪು ಮೋಡದ ಮಧ್ಯೆ ಮಿಂಚಿತು
ತಣ್ಣನೆ ಮಣ್ಣಿನ ಗಾಳಿ ಬೀಸಿತು
ಕತ್ತೆಯ ಹಾಡು ತೇಲಿ ಬಂದಿತು

ನಿಗೂಢ ನಿಲುವಿನ ನಡೆಯಿಂದ
ಪವಾಡ ಬಯಲಿನ ಕಡೆಯಿಂದ
ಹುಲಿಯ ಮರಿಗಳು ಹುಲ್ಲೇ ಕರುಗಳು
ಇರುವೆಯ ಮರಿಗಳು ಕರೆದು ತಂದವು
ಕತ್ತೆಗೆ ಕಷ್ಟ ಗೊತ್ತಿತ್ತು

ಆನೆಯ ಮರಿಗಳು ಇರುವೆಯ ಸಾಲು
ಕುರಿಗಳು ಮರಿಗಳು ಕಪ್ಪೆಯ ಕೊರಳು
ನಾಗರ ಹಾವು ಕಣಿಗಿಲೆ ಹೂವು
ಅಳಿಲಿನ ಮರಿಗಳು ಕರೆದು ತಂದವು
ಕತ್ತೆಗೆ ಹಸಿವಿನ ಅರಿವಿತ್ತು

ಆಲದ ಬಿಳಲು ಅರಳಿಯ ನೆರಳು
ಚಿಗುರು ಕಡ್ಡಿಗಳು ಕರೆದು ತಂದವು
ಎಲ್ಲಿದ್ದಿತೊ ಅದು ಏನೋ ಎಂತೋ
ಕತ್ತೆಯ ಬರವಿನ ನಿಲುವು ಅದೆಂತೊ

ಬಿಸಿಲಿನ ಹೂವನು ಮುಡಿಯುತ ಬಂತು
ಬೆವರಿನ ನದಿಯಲಿ ಈಜುತ ಬಂತು
ಮಳೆ ಬೀಜವನು ಚೆಲ್ಲುತ ಬಂತು

ಒಣಗಿದ ಕೊರಡು ಕೊನರುವ ಹಾಗೆ
ಹೋದ ಜೀವವು ಮರಳುವ ಹಾಗೆ
ಮರಳಲಿ ನೀರು ಉಕ್ಕುವ ಹಾಗೆ

ಜಲಜಲ ಜಲಜಲ ಜಲಾ ಜಲ
ತಿನ್ನುವ ಅನ್ನ ಭಲಾ ಭಲಾ
ಬಂತೋ ಬಂತೋ ಕತ್ತೆಯು ಬಂತು
ಎಲಿದ್ದವೊ ಅವು ಏನೋ ಎಂತೋ

ಕತ್ತೆಗೆ ಕತ್ತೆಯು ಸೇರಿ
ಸಾವಿರ ಸಾವಿರ ಸಾವಿರ ಮೀರಿ
ಜನಜನ ಜನಜನ ಜನಸೇರಿ
ಸಾವಿರ ಸಾವಿರ ನೋವನು ಮೀರಿ
ಕತ್ತೆ ಗುರುವಿನ ಬಳಿ ಸಾರಿ

ಕತ್ತೆ ಬ್ರಹ್ಮ ಕತ್ತೆ ವಿಷ್ಣು
ಕತ್ತೆ ದೇವೋ ಮಹೇಶ್ವರಹ
ಕತ್ತೆ ಸಾಕ್ಷಾತ್ ಪರ ಬ್ರಹ್ಮ
ತಸ್ಮೈ ಶ್ರೀ ಕತ್ತೇ ನಮಃ

ಗುರುವಿನ ಗ್ಯಾನ ಮುಗಿಲು ಮುಟ್ಟಿತು
ರಾಜನರಮನೆ ಬಾಗಿಲು ತಟ್ಟಿತು
ಭೂಮಂಡಲದ ಆ ತುದಿಯಿಂದ
ಭೂಮಂಡಲದ ಈ ತುದಿವರೆಗೆ

ಬೆವರಿನ ಹೊಟ್ಟೆಯ ಪಾಡು ಗುರು
ಲೋಕದ ಬಟ್ಟೆಯ ಹೊತ್ತ ಗುರು
ಗುರುಗುರು ಗುರುಗುರು ಕತ್ತೆ ಗುರು
ಬುದ್ದನ ಸಂಘದಲಿದ್ದ ಗುರು

ಕ್ರಿಸ್ತನ ಕಷ್ಟಗಳೊತ್ತ ಗುರು
ದುಡಿತದ ಹೇರನು ಹೊತ್ತ ಗುರು
ಅರಬರ ನಾಡಿಗೆ ಚೀನಾ ಊರಿಗೆ
ಬುದ್ಧಿಯ ಬೀಜಗಳೊತ್ತ ಗುರು

ಗುರುವಿನ ಗ್ಯಾನ ಮುಗಿಲು ಮುಟ್ಟಿತು
ರಾಜನರಮನೆ ಬಾಗಿಲು ತಟ್ಟಿತು

ರಾಜ ರಾಣಿ ಅರಮನೆಯಿಂದ
ರಾಜ ರಾಣಿ ಜನರೊಳಗಿಂದ
ರಾಜ ರಾಣಿ ಮನದೊಳಗಿಂದ
ಮಂದಿಯ ಮುಂದೆ ಬಂದು ನಿಂತರು

ದಂಡ ನಾಯಕರು ದಂಡ ಸೈನಿಕರು
ರಾಜಗುರುಗಳು ಕವಿದರ್ಬಾರು
ಇಲ್ಲ ಇಲ್ಲ ಅಲ್ಲಾ ಇಲ್ಲ
ಶಿವನೂ ಇಲ್ಲ ನೀನೆ ಎಲ್ಲ

ಬರಗಾಲದ ಸೆರೆಮನೆಯಿಂದ
ಹಸಿವಿನ ಹಗ್ಗದ ನೇಣಿಂದ
ಬಿಡಿಸು ಗುರು ನುಡಿಸು ಗುರು
ನೇಣಿನ ಕುಣಿಕೆಯ ಅಳುಚು ಗುರು

ಬಲಗೈ ಭಾಷೆಯ ಕೊಡು ಜನಕೆ
ಎಡಗೈ ಭಾಷೆಯ ಕೊಡು ಮನಕೆ

ಅರ್ಧ ರಾಜ್ಯದ ಗೊಡವೆಯು ಯಾಕೊ
ಅರ್ಧ ಅರಮನೆ ಯಾರಿಗೆ ಬೇಕೊ
ಇರುವೆಂಬತ್ತು ಕೋಟಿ ಜೀವಗಳು
ಹೇಳಿದ ಹಾಗೆ ಕೇಳೋ ರಾಜ

ಜಗವ ಗೆಲ್ಲುವ ಕನಸು ಬಿಡೊ
ಯುದ್ಧದ ಮಾತು ಬಿಟ್ಟು ಬಿಡೊ
ಶೂಲಕೆ ಜೀವ ತಡೆಯುವುದಿಲ್ಲ
ಮದ್ದು ಗುಂಡಿಗೆ ಕರುಳೇ ಇಲ್ಲ

ಸುಡುನೆಲದಲ್ಲಿ ಕಾಲು ನೆಡೊ
ಬುದ್ಧನ ಜೊತೆಯಲಿ ಇದ್ದು ಬಿಡೊ

ಹೌದು ಹೌದು ಹೌದು ಎಂದಿತು
ಜನರ ಕೂಗಿಗೆ ಮುಗಿಲು ಜರುಗಿತು
ಜನರೊಳಗಿಂದ ರಾಜನು ಬಂದ
ಗುರುವಿನ ಮಾತಿಗೆ ಬದ್ಧ ಎಂದ

ಚಿನ್ನದ ಬಾಗಿಲು ಚಿನ್ನದ ಮೆಟ್ಟಿಲು
ಸುಟ್ಟುಬಿಡೊ ಸುಟ್ಟುಬಿಡೊ
ಬೂದಿಯ ಹೊಲಕೆ ಚೆಲ್ಲಿಬಿಡೋ
ಕೋಟೆಯ ಆಟ ನಡೆಯುವುದಿಲ್ಲ
ಕೋಟೆಯ ನೆಲಸಮ ಮಾಡಿಬಿಡೋ
ಸೈನ್ಯಕೆ ಊಟ ತಡೆಯುವುದಿಲ್ಲ
ಹೊಲಗದ್ದೆಗಳಿಗೆ ಅಟ್ಟಿಬಿಡೊ
ಅರಮನೆ ಗುರುಮನೆ ಕೆಡವಿಬಿಡೊ

ಸೆರೆಮನೆ ಬಾಗಿಲು ತೆರೆದುಬಿಡೊ
ಬೆತ್ತಲೆಯಾಗಿ ಹೊರಟುಬಿಡೊ
ದುಡಿಯುವ ಜನರಿಗೆ ದಾರಿಬಿಡೊ

ಹೌದು ಹೌದು ಹೌದು ಎಂದಿತು
ಲೋಕದ ಕೂಗು ಮುಗಿಲು ಮುಟ್ಟಿತು
ಜನಮನದಿಂದ ರಾಜನು ಬಂದ
ಹೌದು ಗುರುವೆ ಆಯಿತು ಎಂದ

ಭೂ ಮಂಡಲದ ಆ ತುದಿಯಿಂದ
ಭೂ ಮಂಡಲದ ಈ ತುದಿವರೆಗೆ
ಬೆವರಿನ ಹೊಟ್ಟೆಯ ಪಾಡು ಗುರು
ಲೋಕದ ಬಟ್ಟೆಯ ಹೊತ್ತ ಗುರು



ಗುರು ಗುರು ಗುರು ಕತ್ತೆ ಗುರು
ಕೊರಳನು ಎತ್ತಿತು ಕತ್ತೆ ಗುರು
ಒಮ್ಮೆ ಕೂಗಿತು ಕತ್ತೆ ಗುರು
ನೀರಿನ ದೇವರು ಆಟ ಶುರು
ಎಲ್ಲಿದ್ದವೊ ಅವು ಓಡುತ ಬಂದವು
ಎಲ್ಲಿದ್ದವೊ ಅವು ನೆಗೆಯುತ ಬಂದವು
ಎಲ್ಲಿದ್ದವೊ ಅವು ಕುಣಿಯುತ ಬಂದವು

ಕುದುರೆಗಳೆಲ್ಲ ಕತ್ತೆಗಳಾದವು
ಆನೆಗಳೆಲ್ಲ ಕತ್ತೆಗಳಾದವು
ಒಂಟೆಗಳೆಲ್ಲ ಕತ್ತೆಗಳಾದವು

ಸೈನಿಕರೆಲ್ಲ ಕತ್ತೆಗಳಾದರು
ರಾಜ ರಾಣಿ ಕತ್ತೆಗಳಾದರು
ಮಂತ್ರಿಗಳೆಲ್ಲ ಕತ್ತೆಗಳಾದರು

ಅರಮನೆಯಾಯಿತು ಕತ್ತೆಯ ಲಾಯ
ಗುರುಮನೆಯಾಯಿತು ಕತ್ತೆಯ ಲಾಯ
ಸೆರಮನೆಯಾಯಿತು ಕತ್ತೆಯ ಲಾಯ
ಮದ್ದು ಗುಂಡು ಫಿರಂಗಿಯೆಲ್ಲ ಮಾಯ
ಮಾಯ ಮಾಯ

ಕೊರಳನು ಎತ್ತಿತು ಕತ್ತೆ ಗುರು
ಮಳೆಯ ದೇವರ ಆಟ ಶುರು

ಗುರುವಿನ ಕೂಗಿನ ಅರಿವಾಗಿ
ಗುರುವಿನ ಕೂಗಿಗೆ ಕರುವಾಗಿ
ಕತ್ತೆಗಳೆಲ್ಲ ಗುರುವೇ ಆಗಿ

ಕೂಗಿಗೆ ಕೂಗು ಎಂಥ ಬೆರಗು
ಕಲ್ಲಿನ ಮೋಡವೇ ಕರಗು ಕರಗು
ಉಸಿರು ಉಸಿರಿಗೆ ಉಸಿರು ಸೇರಿತು
ಬಿಸಿಯ ಉಸಿರು ಬಿರುಗಾಳಿಯಾಯಿತು

ಗಿರಗಿರ ಮೋಡ ತಿರುಗಿದವು
ಫಳ್ ಫಳಾರನೆ ಮಿಂಚಿದವು
ಗುಡುಗಿನ ಹಾಡು ಹಾಡಿದವು
ಕಲ್ಲಿನ ಮೋಡ ಚಿತ್ರ ಬರೆದವು

ಮುನಿಸಿನ ಮುಸಿಮುಸಿ ಮೋಡಗಳು
ಎಲ್ಲಿದ್ದವು ಅವು ಜಲ ಮಂಟಪಗಳು

ಹಸಿರಿಗೆ ಹೆಸರ ಬರೆವವರು

ಮಣ್ಣನು ಅನ್ನವ ಮಾಡುವ ಜನರು
ಮುಗಿಲಿನ ಕಡೆಗೆ ನೋಡಿದರು
ಹಾಡನು ಹಾಡಿ ಬೇಡಿದರು

ಬಾನ ತುಂಬ ಹರವಿಕೊಂಡು
ಭೂಮಿ ತುಂಬ ಚೆಲ್ಲಿಕೊಂಡು
ಹುಯ್ಯೋ ಹುಯ್ಯೋ ಮಳೆ ರಾಯ
ಹಸಿದ ಹೊಟ್ಟೆಗೆ ಹಿಟ್ಟಿಲ್ಲ
ಹನಿಯೊ ಹನಿಯೊ ಮಳೆರಾಯ
ಹಕ್ಕಿಗೆ ಗುಟುಕು ನೀರಿಲ್ಲ
ಕೆಚ್ಚೊ ಕೆಚ್ಚೊ ಮಳೆರಾಯ
ಕೆರೆಯಲಿ ಒಂದ್ ತೊಟ್ ನೀರಿಲ್ಲ

ಗುರುವಿನ ಕೂಗಿನ ಅರಿವಾಗಿ
ಗುರುವಿನ ಕೂಗಿಗೆ ಕರುವಾಗಿ
ಕೂಗಿಗೆ ಕೂಗು ಎಂಥ ಬೆರಗು
ಮಾಯದ ಮೋಡವೆ ಕರಗು ಕರಗು

ಕಪ್ಪು ಮೋಡವು ಕಪ್ಪು ದೀಪವು
ಸುರಿಸಿತು ಮಳೆಯ ಬೆಳ್ಳಂ ಬೆಳಕು
ಇಳಿದವು ನೆಲಕೆ ಜೀವದ ನಾವೆ
ಗುಟ್ಟಿನ ಬೀಜ ಹುಟ್ಟಿದವಲ್ಲೆ

ಗುಡುಗಿನ ಅಬ್ಬರ ಹಬ್ಬವಾಯಿತು
ಮಿಂಚಿನ ಬಳ್ಳಿ ಹೂವು ಬಿಟ್ಟಿತು
ಹಸಿವಿನ ಬಲೆಯು ಹರಿದು ಹೋಯಿತು
ರಕ್ತದ ಕಲೆಯು ತೊಳೆದು ಹೋಯಿತು

ಮಳೆಯ ದಾರಿಯಲಿ ನೀರೆ ನೀರು
ನೀರಿನ ಊರಲಿ ಊರೆ ನೀರು
ಕರುಣೆ ತೋರಿತು ಮಳೆಯ ದೇವರು
ಇಗೋ ಬಂದರು ಅನ್ನ ದೇವರು
ಎದ್ದು ಕುಣಿಯಿತು ಊರಿಗೆ ಊರು

ಬಂದ ದಾರಿಯ ಹಿಡಿಯಿತು ಕತ್ತೆ
ಯಾವಾಗಾದರು ಬರುವೆನು ಮತ್ತೆ
ಕೊರಳನು ಎತ್ತಿತು ಕತ್ತೆ ಗುರು
ಹುಡುಕುತ ಹೊರಟಿತು ಮುಂದಿನ ಊರು

ಜನಜನ ಜನಜನ ಜನಾ ಜನ
ಕತ್ತೆಯ ಕಾಲನು ಹಿಡಿದು ಜನ
ಕತ್ತೆ ಗುರುವನು ಮುತ್ತಿ ಹಿಡಿದರು
ಗುರುವಿನ ಹಾದಿಗೆ ಅಡ್ಡಲಾದರು
ಗುರುವೇ ನೀನು ಜೊತೆಯಲಿರು

ರಾಜ ಮಂತ್ರಿ ರಾಕ್ಷಸರು
ಬೂದಿಯಿಂದಲೆ ಎದ್ದು ಬರುವರು
ರಾಜ ಭಯ ನಿಜ ಮಂತ್ರಿ ಭಯ
ನೌಕರ ತಂತ್ರಿ ಸೈನಿಕರು
ಬೆಂಕಿಯಿಂದಲೆ ನೆಗೆದು ಬರುವರು
ಹೋಗದಿರು ನೀ ಹೋಗದಿರು

ದುಡಿಯುವ ಜನರಿಗೆ ನೀನೆ ಬೇರು
ಮತ್ತೆ ಮತ್ತೆ ನೀನುಟ್ಟುತಿರು
ನಮ್ಮ ಜೊತೆಯಲಿ ಇದ್ದೆ ಇರು
ಅರಳಿ ಆಲ ಹುಣಿಸೆ ಬೇವು
ಓತಿಕ್ಯಾತ ಕಪ್ಪೆ ಹಾವು
ಕತ್ತೆ ಹೋದರೆ ಸತ್ತೇ ಬಿಡುವೆವು
ಬೇರೆ ದಾರಿಯು ಇಲ್ಲದೆ ಹೋಯಿತು
ಮರು ಮಾತಿಲ್ಲದೆ ಕತ್ತೆಯು ಒಪ್ಪಿತು
ಧ್ಯಾನಕೆ ಇಳಿಯಿತು ಗುರು ಕತ್ತೆ
ಅಂತರಂಗದೊಳಗಿಳಿಯಿತು ಮತ್ತೆ
ಓಂ ನೀರಾಯನಮಹ
ಓಂ ಬೇರಾಯನಮಹ
ಓಂ ಕಾಡಾಯನಮಹ
ಓಂ ಬೆಟ್ಟಾಯನಮಹ
ಓಂ ಆಕಾಶಾಯನಮಹ

ಧ್ಯಾನದ ಮೆಟ್ಟಿಲ ಮೇಲೆ ಕುಳಿತಿತು
ಆಗಲಿ ಆಗಲಿ ಆಗಲಿ ಎಂದಿತು
ಮಣ್ಣಿನ ದಾರಿ ಸಾಗಲಿ ಎಂದಿತು
ಚಿನ್ನದ ರಾಜ್ಯ ಅಳಿಯಲಿ ಎಂದಿತು

ರಾಜನು ಇಲ್ಲ ಬೀಜವೆ ಎಲ್ಲ
ಎರೆಯ ಹುಳುವಿನ ಸರಕಾರ
ಗಿಡಮರಗಳೆ ಮಂತ್ರಿ ಮಂಡಲ
ಹಕ್ಕಿಪಕ್ಷಿಗಳ ಅಧಿಕಾರ

ಬೆವರೇ ರಾಜ ಬೆವರೇ ಮಂತ್ರಿ
ಬೆವರಿನ ರಾಜ್ಯಕೆ ಬೆವರಿನ ಬಾವುಟ
ಅಗುಳು ಅಗುಳಿಗು ಬೆವರಿನ ಮುದ್ರೆ
ಲದ್ದಿಯೆ ಬುದ್ದಿ ಸಗಣಿಯೆ ದೇವರು

ಕೊರಳನು ಕೂರಿಗೆ ಮಾಡಿ
ಬೆರಳನು ಕುಂಟೆಯ ಮಾಡಿ
ಮಣ್ಣಿಗೆ ಬೀಜ ಬಿತ್ತಲೆಬೇಕು
ಪ್ರೀತಿಯ ತೇವಕೆ ಬೆಳೆ ಬರಬೇಕು

ಉಳುವವರಷ್ಟೆ ಭೂಮಿಯ ಒಡೆಯರು
ಕುಂತು ಉಣ್ಣುವ ಜನರೆ ಕಳ್ಳರು
ಹೌದು ಹೌದು ಹೌದಲ್ಲವೆ ಗುರು
ಒಕ್ಕೊರಲಿಂದ ಕೂಗಿತು ಊರು

ಸಾಕು ಎಂದರೆ ಸಾವುಕಾರರು
ಬೇಕು ಎಂದರೆ ಅವರೆ ಬಡವರು
ಒಕ್ಕೊರಲಿಂದ ಕೂಗಿತು ಊರು
ಒಂದೇ ಗೂಡು ಒಂದೆ ಹಾಡು
ಯಾರಿಗು ಇಲ್ಲ ಜೈಕಾರ
ಒಂದೇ ಜಾತಿ ಒಂದೇ ನೀತಿ
ಯಾರಿಗು ಇಲ್ಲ ಅಧಿಕಾರ

ಹೌದು ಹೌದು ಹೌದಲ್ಲವೆ ಗುರು
ಒಕ್ಕೊರಲಿಂದ ಕೂಗಿತು ಊರು
ಬುದ್ಧನ ಬುದ್ಧಿ ಲೋಕವ ಆಳಲಿ
ಕತ್ತೆಯ ಲದ್ದಿ ಮಣ್ಣಿಗೆ ಸಿಗಲಿ

ಮಂಗಳವಾಗಲಿ ಮಂಗಳವಾಗಲಿ
ಗಿಡಗಳ ಹಸಿರು ಹಸಿರಾಗಿರಲಿ
ಆಕಾಶದ ನೆಲ ಸುಮ್ಮನೆ ಸುರಿಸಲಿ
ಮಕ್ಕಳು ನೆನೆಯಲಿ ಮನಸು ಚಿಗುರಲಿ

ನದಿಗಳ ನೀರು ಬತ್ತದೆ ಇರಲಿ
ಸಾಗರ ಸಾವನು ಅಪ್ಪದೆ ಇರಲಿ
ಮಣ್ಣು ಅನ್ನವ ಹುಟ್ಟಿಸುತಿರಲಿ
ಮಂಗಳವಾಗಲಿ ಮಂಗಳವಾಗಲಿ

○ ಕೃಷ್ಣಮೂರ್ತಿ ಬಿಳಿಗೆರೆ

ಮತಾಂತರ-ಒಂದು ಪರಂಪರಾನುಗತ ಸಾಮಾಜಿಕ ಪ್ರಕ್ರಿಯೆ

ಅನಾದಿ ಕಾಲದಿಂದ ಮಾನವ ಸಮಾಜದಲ್ಲಿ 'ಧರ್ಮ' ಹಲವಾರು ರೂಪಗಳಲ್ಲಿ ಚಾಲ್ತಿಯಲ್ಲಿದೆ. ಆದಿ ಮಾನವನಿಗೆ ಹುಟ್ಟು ಮತ್ತು ಸಾವುಗಳು ಬಹಳ ದೊಡ್ಡ ರಹಸ್ಯಗಳಾಗಿ ತೋಚಿದ್ದರಿಂದ, ಅವು ಅವನ ಕೈಯಳತೆಯನ್ನು ಮೀರಿದ ವಿದ್ಯಮಾನಗಳಂತೆ ಕಂಡಿದ್ದರಿಂದಲೇ ಧರ್ಮವನ್ನು ಕುರಿತ ಆಲೋಚನೆಗಳು ಆರಂಭವಾಗಿರಬೇಕು. ಗರ್ಭಿಣಿಯನ್ನು ಪೂಜಿಸುವುದು, ಹುಟ್ಟಿಗೆ ಕಾರಣವಾಗುತ್ತವೆಂದು ಕಂಡುಬಂದ ಶಿಶ್ನ ಮತ್ತು ಯೋನಿಗಳ ಪ್ರತಿರೂಪಗಳನ್ನು ಪೂಜಿಸುವುದು, ರಕ್ತವನ್ನು ಬಹಳ ಶಕ್ತಿಶಾಲಿಯಾದ ಧಾತುವನ್ನಾಗಿ ಭಾವಿಸಿಕೊಂಡು ಅದನ್ನೊಂದು ಪವಿತ್ರ ಪೂಜಾ ವಸ್ತುವಾಗಿ ಬಳಸುವುದು ಮುಂತಾದವುಗಳೆಲ್ಲ ಬಹುಪಾಲು ಪ್ರಾಚೀನ ಸಂಸ್ಕೃತಿಗಳಲ್ಲಿ ಕಂಡುಬರುವ ಮೂಲ ಆಚರಣೆಗಳಾಗಿವೆ.

ನಮ್ಮ ಕಾಲಘಟ್ಟದಲ್ಲಿ ಮತಾಂತರವನ್ನು ಕುರಿತಂತೆ ಬಹಳ ಉದ್ವಿಗ್ನತೆಯ ಚರ್ಚೆಗಳು ನಡೆಯುತ್ತಿವೆ. ಮತಾಂತರಗೊಳ್ಳುವುದನ್ನು ಭಾರತೀಯ ಸಂವಿಧಾನ ಒಂದು ಮೂಲಭೂತ ಹಕ್ಕನ್ನಾಗಿ ಗುರುತಿಸಿದೆ. ಆ ರೀತಿಯಲ್ಲಿ ಮತಾಂತರಗೊಳ್ಳಲು ಅವಕಾಶವಿರಬಾರದು ಎಂದು ಕೆಲವರು ತಗಾದೆ ತೆಗೆಯುತ್ತಿದ್ದಾರೆ. ಈ ಬಗೆಯ ತಗಾದೆಗಳ ಹಿಂದೆ ಮುಖ್ಯವಾಗಿ ಕೋಮುವಾದಿ ರಾಜಕಾರಣದ ಆಯಾಮವಿರುವುದನ್ನು ನಾವು ಗಮನವಿಟ್ಟು ಗ್ರಹಿಸಬೇಕಾಗಿದೆ. ಈ ಬಗೆಯ ಧರ್ಮಾಭಿಮಾನವನ್ನು ಅಲ್ಲಮನ ಮಾತುಗಳಲ್ಲಿ 'ಭಕ್ತಿಯೆಂಬುದು ತೋರುಂಬ ಲಾಭ' ಎಂದೋ ಅಥವಾ ದಾಸರ ಮಾತುಗಳಲ್ಲಿ 'ಉದರ ವೈರಾಗ್ಯವಿದು ನಮ್ಮ ಪದುಮನಾಭನಲಿ ಲೇಶ ಭಕುತಿಯಿಲ್ಲ' ಎಂದೋ ಅರ್ಥೈಸಬಹುದೇ ಹೊರತು ಅದರಲ್ಲಿ ಧಾರ್ಮಿಕತೆಯ ಅಂಶಗಳನ್ನು ಕಾಣಲಾಗುವುದಿಲ್ಲ.

ಮತಾಂತರ ಎನ್ನುವುದು ಹೊಸ ವಿದ್ಯಮಾನವಲ್ಲ ಎಂಬುದು ಚರಿತ್ರೆಯ ಪ್ರಾಥಮಿಕ ತಿಳಿವಳಿಕೆಯಿಂದಲೇ ನಮಗೆ ಗೊತ್ತಾಗುತ್ತದೆ. ಇದು ಭಾರತದಲ್ಲಿ ಮಾತ್ರವಲ್ಲ ಪ್ರಪಂಚದ ಬಹಳ ದೇಶಗಳಲ್ಲಿ ಸಂಭವಿಸಿದ ಹಾಗೂ ಸಂಭವಿಸುತ್ತಿರುವ ವಿದ್ಯಮಾನ. ಈಗಲೂ ಹೊಸ ಧಾರ್ಮಿಕ ಪಂಥಗಳು ಹುಟ್ಟುತ್ತಿವೆ. ಮುಂದೆ ಕೂಡ ಹುಟ್ಟಲಿವೆ. ಇದನ್ನೊಂದು ಭಯಂಕರ ಸಾಮಾಜಿಕ ಸಮಸ್ಯೆ ಎಂದು ಬಿಂಬಿಸುತ್ತಾ ಅದರ ವಿರುದ್ಧ ಆಂದೋಲನ ರೂಪಿಸಿಕೊಂಡು ಹೊರಟಿರುವವರು ಸಮಸ್ಯೆಯ ಬೇರುಗಳನ್ನು ಗಮನಿಸುತ್ತಿಲ್ಲ ಅಥವಾ ಅವರಿಗೆ ಸಮಸ್ಯೆಯ ಮೂಲ ಏನೆಂಬುದು ಗೊತ್ತಿದ್ದರೂ ಜನಸಾಮಾನ್ಯರಿಗೆ ಅದು ಗೊತ್ತಾಗಬಾರದೆಂದು ಮುಚ್ಚಿಡುತ್ತಿದ್ದಾರೆ.

ಅನಾದಿ ಕಾಲದಿಂದ ಮಾನವ ಸಮಾಜದಲ್ಲಿ 'ಧರ್ಮ' ಹಲವಾರು ರೂಪಗಳಲ್ಲಿ ಚಾಲ್ತಿಯಲ್ಲಿದೆ. ಆದಿ ಮಾನವನಿಗೆ ಹುಟ್ಟು ಮತ್ತು ಸಾವುಗಳು ಬಹಳ ದೊಡ್ಡ ರಹಸ್ಯಗಳಾಗಿ ತೋಚಿದ್ದರಿಂದ, ಅವು ಅವನ ಕೈಯಳತೆಯನ್ನು ಮೀರಿದ ವಿದ್ಯಮಾನಗಳಂತೆ ಕಂಡಿದ್ದರಿಂದಲೇ ಧರ್ಮವನ್ನು ಕುರಿತ ಆಲೋಚನೆಗಳು ಆರಂಭವಾಗಿರಬೇಕು. ಗರ್ಭಿಣಿಯನ್ನು ಪೂಜಿಸುವುದು, ಹುಟ್ಟಿಗೆ ಕಾರಣವಾಗುತ್ತವೆಂದು ಕಂಡುಬಂದ ಶಿಶ್ನ ಮತ್ತು ಯೋನಿಗಳ ಪ್ರತಿರೂಪಗಳನ್ನು ಪೂಜಿಸುವುದು, ರಕ್ತವನ್ನು ಬಹಳ ಶಕ್ತಿಶಾಲಿಯಾದ ಧಾತುವನ್ನಾಗಿ ಭಾವಿಸಿಕೊಂಡು ಅದನ್ನೊಂದು ಪವಿತ್ರ ಪೂಜಾ ವಸ್ತುವಾಗಿ ಬಳಸುವುದು ಮುಂತಾದವುಗಳೆಲ್ಲ ಬಹುಪಾಲು ಪ್ರಾಚೀನ ಸಂಸ್ಕೃತಿಗಳಲ್ಲಿ ಕಂಡು ಬರುವ ಮೂಲ ಆಚರಣೆಗಳಾಗಿವೆ.

ಸೃಷ್ಟಿಯೆನ್ನುವುದೊಂದು ನಿಗೂಢ ರಹಸ್ಯ. ಈ ಮೊದಲು ಇಲ್ಲಿ ಇಲ್ಲದವರು ಈ ಲೋಕಕ್ಕೆ ಬರುವುದು ಹಾಗೂ ಇಲ್ಲಿ ಇದ್ದವರು ಇನ್ನಿಲ್ಲದಂತಾಗುವುದು ಹೇಗೆ ಎಂಬ ಚೋದ್ಯವನ್ನು ಕುರಿತು ಹುಟ್ಟಿದ ಜಿಜ್ಞಾಸೆಗಳಲ್ಲಿ ಬಹುಪಾಲು ಧರ್ಮ ದರ್ಶನಗಳು ರೂಪು ತಳೆದಿವೆ. ದೇವರೆಂಬುವವನೊಬ್ಬನಿದ್ದು ಅವನ ಲೀಲೆಯ ಕಾರಣದಿಂದ ಇವೆಲ್ಲ ಹುಟ್ಟಿಕೊಂಡವೆಂದು ವಾದಿಸುವವರು ತಮ್ಮ ತಮ್ಮ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ದೇವರಿಗೊಂದು ರೂಪ ಮತ್ತು ಪ್ರತಾಪಗಳನ್ನು ಜೋಡಿಸಿದರು. ಇವರ ಜೊತೆಜೊತೆಯಲ್ಲಿಯೇ ದೇವರೆಂಬ ಶಕ್ತಿ ಯಾವುದೂ ಇಲ್ಲ. ಈ ಸೃಷ್ಟಿ ಆದಿ ಹಾಗೂ ಅಂತ್ಯವಿಲ್ಲದ್ದು. ಹುಟ್ಟುವುದು ಸಾಯುವುದೆಲ್ಲ ನಿಸರ್ಗ ಶಕ್ತಿಯ ಫಲವಾಗಿ ಸಂಭವಿಸುವ ಅವಿರತ ಕ್ರಿಯೆಗಳು. ಇದಕ್ಕೆ ಯಾವ ಉದ್ದೇಶವೂ ಇಲ್ಲ. ಆದ್ದರಿಂದ ನಾವು ಬಯಸಿದಂತೆ ಇವುಗಳನ್ನು ನಿಯಂತ್ರಿಸಲು ಸಾಧ್ಯವಿಲ್ಲ ಎಂಬ ಮತ್ತೊಂದು ಚಿಂತನೆಯೂ ಸಮಾನಾಂತರವಾಗಿ ಬೆಳೆದುಕೊಂಡು ಬಂತು.

ಈ ಎರಡು ಸ್ಥೂಲ ವಿಭಾಗಗಳಲ್ಲಿ ಇನ್ನೂ ನೂರಾರು ವೈವಿಧ್ಯತೆಯ ವಾದಗಳು ಹುಟ್ಟಿ ದರ್ಶನಗಳು ಕವಲುಗಳಾದವು. ಬೇರೆ ಬೇರೆ ದರ್ಶನದ ಕವಲುಗಳನ್ನು ನಂಬುವವರು ಹಾಗೂ ಆಚರಿಸುವವರು ಒಂದೊಂದು ಮತ ಗುಂಪುಗಳಾದರು. ಒಂದು ಮತ ಗುಂಪಿನಲ್ಲಿದ್ದವರು ತಮ್ಮ ಆಲೋಚನೆ ಹಾಗೂ ಅವಶ್ಯಕತೆಗಳ ಆಧಾರದಲ್ಲಿ ಮತ್ತೊಂದು ಮತದವರಾಗಿ ಬದಲಾಗುವುದನ್ನು ನಾವು ಚರಿತ್ರೆಯಲ್ಲಿ ಬಹಳ ಹಿಂದಿನಿಂದಲೂ ಗುರುತಿಸಬಹುದಾಗಿದೆ. ಅದು ಹೊಸ ಸಾಮಾಜಿಕ ವ್ಯವಸ್ಥೆ ಬೇಕೆಂಬ ಬಯಕೆಯಿರಬಹುದು, ಇರುವ ಸಾಮಾಜಿಕ ವ್ಯವಸ್ಥೆಯಲ್ಲೇ ಪಡೆದುಕೊಳ್ಳಬಯಸುವ ಹೊಸ ಸ್ಥಾನಮಾನದ ಪ್ರಶ್ನೆಯಿರಬಹುದು, ಆಚಾರ ವಿಚಾರಗಳ ಕಠೋರತೆಯಿಂದ ಬೇಸರ ಹುಟ್ಟಿರಬಹುದು ಅಥವಾ ಹೊಸ ಆಚಾರಗಳು ಹೆಚ್ಚು ಅರ್ಥಪೂರ್ಣವೆನಿಸಿದ್ದರಿಂದ ಕೂಡ ಇರಬಹುದು-ಹೀಗೆ ಬಗೆಬಗೆಯ ಕಾರಣಗಳಿಂದ ಮತಾಂತರಗಳು ನಡೆಯುತ್ತಾ ಬಂದಿವೆ.

ಭಾರತೀಯ ಉಪಖಂಡದ ಚರಿತ್ರೆಯಲ್ಲಿ ಹೀಗೆ ಧರ್ಮಗಳು ಹುಟ್ಟಿರುವುದನ್ನು, ಬೆಳೆದಿರುವುದನ್ನು, ಬದಲಾಗಿರುವುದನ್ನು, ನಾಶವಾಗಿರುವುದನ್ನು ಹುಡುಕಿ ಹೊರಟರೆ ಅದರ ಪಟ್ಟಿ ಬಹಳ ಉದ್ದವಾಗುತ್ತದೆ. ಮೊದಲಲ್ಲಿದ್ದ ಬುಡಕಟ್ಟು ಜನರ ನಿಸರ್ಗಾರಾಧನೆ, ಪಿತೃ ಆರಾಧನೆಗಳ ಸ್ಥಾನವನ್ನು ವೈದಿಕ ಧರ್ಮ ಅಥವಾ ಬ್ರಾಹ್ಮಣ ಧರ್ಮ ಎಂಬುದು ಆಕ್ರಮಿಸಿಕೊಂಡಿತು. ವೈದಿಕ ಧರ್ಮ ಎಂದು ಕರೆಯುವಾಗ ನಾವು ಅದನ್ನು ವೇದಗಳಲ್ಲಿ ಪ್ರತಿಪಾದಿತವಾಗಿರುವ ಧರ್ಮ ಎಂದು ಅರ್ಥ ಮಾಡಿಕೊಳ್ಳುವ ಸಾಧ್ಯತೆಯಿದ್ದರೂ, ನಂತರದ ಬ್ರಾಹ್ಮಣ ಧರ್ಮ ಆ ವೇದಕಾಲೀನ ಧರ್ಮದ ಪ್ರತಿರೂಪವಲ್ಲ. ಆದ್ದರಿಂದ ಇದನ್ನು ವರ್ಣಾಶ್ರಮ ಧರ್ಮ ಎಂದು ಕರೆಯಬಹುದೇ ಎಂದು ನೋಡಿದರೆ ಆರಂಭಿಕ ವರ್ಣ ವ್ಯವಸ್ಥೆಯ ಸೂತ್ರಗಳನ್ನು ಕೂಡ ಇದು ಉಳಿಸಿಕೊಂಡಿಲ್ಲ. ಅವೆರಡರ ಕೆಲವು ಅಂಶಗಳನ್ನು ಒಳಗೊಂಡಿರುವಂತೆ ಕಂಡರೂ, ಅವುಗಳ ನೆಲೆಯಿಂದ ಭಿನ್ನವಾದ ಜಾತಿ ಏಣಿಶ್ರೇಣಿಯ ನಿಯಮಾವಳಿಗಳಾಗಿ, ಅದನ್ನೊಂದು ಭದ್ರ ಸಾಮಾಜಿಕ ವ್ಯವಸ್ಥೆಯನ್ನಾಗಿ ನೆಲೆಗೊಳಿಸುವುದನ್ನೇ ಮುಖ್ಯ ಉದ್ದೇಶವಾಗಿಟ್ಟುಕೊಂಡಿರುವ ಒಂದು ಆಚಾರಸಂಹಿತೆ ಎಂದು ಮಾತ್ರ ಕಂಡು ಬರುತ್ತದೆ. ಈ ಅಂಶವನ್ನು ಸ್ವಾಮಿ ವಿವೇಕಾನಂದ, ಬಾಬಾ ಸಾಹೇಬ್ ಅಂಬೇಡ್ಕರ್ ಮುಂತಾದವರೆಲ್ಲ ಗುರುತಿಸಿದ್ದಾರೆ.

ಈ ಜಾತಿಸಂಹಿತೆ ಧರ್ಮದ ಮುಖ್ಯ ಸೂತ್ರವೆಂದರೆ ತನ್ನ

ಪ್ರಭಾವ ವಲಯದೊಳಗಿರುವ ಬೇರೆ ಬೇರೆ ಸಮುದಾಯಗಳನ್ನು ಸ್ವಯಾವೃತ ಪಂಗಡಗಳನ್ನಾಗಿಸಿ ಒಂದರಿಂದ ಮತ್ತೊಂದನ್ನು ಹೊರಗುಳಿಸುವುದು ಹಾಗೂ ಉತ್ಪಾದನಾ ವ್ಯವಸ್ಥೆಯ ಜಾಲದಿಂದ ಹೊರಹೋಗದಂತೆ ಹಿಡಿದಿಡುವುದು. ಈ ಹಿಡಿದಿಡುವಿಕೆಯ ಕ್ರಮದಲ್ಲಿ ಅನುಲ್ಲಂಘನೀಯ ಏಣಿಶ್ರೇಣಿಯನ್ನು ಏರ್ಪಡಿಸುವುದು. ಈ ವಿವಿಧ ಹಂತಗಳ ಪಾಲ್ಗೊಳ್ಳುವಿಕೆ ಎನ್ನಲಾಗುವುದಿಲ್ಲ. ಯಾಕೆಂದರೆ ಪ್ರತಿಯೊಂದು ಸಮುದಾಯವೂ ಅದರ ಸ್ಥಾನ-ಮಾನ ಬಿಂದುವಿನಿಂದ ಕದಲದಂತೆ ಹಾಗೂ ಅದರ ಸ್ಥಾನಬಿಂದುವಿಗೆ ನಿಗದಿಪಡಿಸಲಾಗಿರುವ ಜೀವನ ನಿರ್ವಹಣಾ ಭತ್ಯೆಗಿಂತ ಹೆಚ್ಚಿನದನ್ನು ಕೆಳ ಹಂತದವರು ಪಡೆಯಲಾಗದಂತೆ ನಿರ್ಬಂಧಿಸಲಾಗಿದೆ. ಆದ್ದರಿಂದಲೇ ಈ ಧರ್ಮವೆಂದು ಕರೆಯಲ್ಪಡುವ ಸಾಮಾಜಿಕ ಚೌಕಟ್ಟಿನಲ್ಲಿ ಆಂತರಿಕ ಬಂಡಾಯಗಳು ಹಾಗೂ ಮಾನಸಿಕ ಹೊರಗುಳಿದಿರುವಿಕೆಗಳು ಅತ್ಯಂತ ಹೆಚ್ಚಾಗಿ ಸಂಭವಿಸಿವೆ.

ಈ ಹಿನ್ನೆಲೆಯಲ್ಲಿ ಮತಾಂತರ ಎನ್ನುವ ಪ್ರಕ್ರಿಯೆಯನ್ನು ನಾವು ನೋಡಬೇಕಾಗಿದೆ. ಕ್ರಿ.ಪೂ. 600ರ ಹೊತ್ತಿಗೆ ಭಾರತದ ಉತ್ತರ ಭಾಗ, ದಕ್ಷಿಣ ಭಾಗ ಹಾಗೂ ಪೂರ್ವ ಭಾಗಗಳು ಈ ಬಗೆಯದೊಂದು ಧಾರ್ಮಿಕಾಚರಣೆಯ ಹೊರ ಕವಚದಿಂದ ಆವೃತವಾಗಿದ್ದವು. ಅದರ ವಲಯದಿಂದ ಹೊರಗಡೆ ಉಳಿದಿದ್ದ ಜನಸಂಖ್ಯೆ ವಿಸ್ತಾರವಾಗಿತ್ತಾದರೂ ಅವೆಲ್ಲ ಬಿಡಿಬಿಡಿ ಘಟಕಗಳಾಗಿ ಉಳಿದುಕೊಂಡಿದ್ದರಿಂದ ಈ ಧಾರ್ಮಿಕಾಚರಣೆಯೊಂದೇ ಪ್ರಧಾನ ಆಕೃತಿಯಾಗಿ ಗೋಚರವಾಗುತ್ತಿತ್ತು. ಈ ಬಗೆಯ ನಾಲ್ಕು ವಿಭಾಗಗಳ ಮೇಲುಕೀಳಿನ ಶ್ರಮ ವಿಭಜನೆಯನ್ನಾಧರಿಸಿದ ಉತ್ಪಾದನಾ ವ್ಯವಸ್ಥೆಯನ್ನು ಅವಲಂಬಿಸಿಕೊಂಡು ಆರಂಭಿಕ ಸಾಮ್ರಾಜ್ಯಗಳು ರೂಪುಗೊಂಡವು. ಆದ್ದರಿಂದ ಅದು ರಾಜ್ಯಧರ್ಮವೆಂದು ಮಾನ್ಯಗೊಂಡಿತು.

ಮಗಧ, ಕೋಸಲ, ಅವಂತಿ ಹಾಗೂ ವತ್ಸ ಸಾಮ್ರಾಜ್ಯಗಳು ನಿರಂತರವಾಗಿ ಆ ಕಾಲಘಟ್ಟದಲ್ಲಿ ತಮ್ಮ ತಮ್ಮೊಳಗೆ ಹೊಡೆದಾಡಿಕೊಳ್ಳುತ್ತಲೇ, ಸುತ್ತಮುತ್ತಲ ವನವಾಸಿ ಜನರನ್ನು ಖೈದು ಮಾಡಿಕೊಂಡು ತಂದು ಅವರನ್ನು ಈ ಉತ್ಪಾದನಾ ವ್ಯವಸ್ಥೆ ಚಾಕರರಾಗಿ, ದಾಸರಾಗಿ, ಜೀತಗಾರರಾಗಿ ಮಾರ್ಪಡಿಸಿಕೊಂಡವು. ಬೆಳೆಯುತ್ತಿದ್ದ ಸಾಮ್ರಾಜ್ಯದ ರೀತಿ ನೀತಿಗಳು ಗಣ ವ್ಯವಸ್ಥೆಯ ಬುಡಕಟ್ಟು ಸಮಾನತೆಯ ರಿವಾಜುಗಳಿಗಿಂತ ಭಿನ್ನವಾಗಿದ್ದುದರಿಂದ, ಸಂಪತ್ತಿನ ಹಂಚಿಕೆಯಲ್ಲಿ ಅಪಾರ ಅಸಮಾನತೆ ಹೊಂದಿದ್ದರಿಂದ ನಿರ್ಬಂಧಕ್ಕೊಳಗಾಗಿದ್ದ ಪಂಗಡಗಳು ಹೊರದಾರಿಗಾಗಿ ಹುಡುಕುತೊಡಗಿದವು. ಬೌದ್ಧ, ಜೈನ, ವೈಷ್ಣವ ಹಾಗೂ ಭಾಗವತ ಎಂಬ ನಾಲ್ಕು ಮುಖ್ಯ ಪಂಥಗಳು ಈ ಸಮಯದಲ್ಲಿ ಭಿನ್ನ ಧಾರ್ಮಿಕ ದರ್ಶನಗಳಾಗಿ ಒಡಮೂಡಿದವು. ಆ ಅವಧಿಯಲ್ಲಿ ವೈದಿಕ ಧರ್ಮ ಎಂದು ಕರೆಸಿಕೊಳ್ಳುತ್ತಿದ್ದ ಈ ಸಾಮಾಜಿಕ ಸಂಹಿತೆಯ ಆಚಾರ ವಿಚಾರಗಳನ್ನು ವಿರೋಧಿಸಿದ 60ಕ್ಕೂ ಹೆಚ್ಚು ಧಾರ್ಮಿಕ ದರ್ಶನಗಳು ಹುಟ್ಟಿಕೊಂಡಿದ್ದವು ಎಂಬುದನ್ನು ದೇಬಿಪ್ರಸಾದ್ ಚಟ್ಟೋಪಾಧ್ಯಾಯ ಮುಂತಾದವರು ಉಲ್ಲೇಖಿಸಿದ್ದಾರೆ.

ಮೊದಲ ಬಾರಿಗೆ ಭಾರತದ ಇತಿಹಾಸದಲ್ಲಿ ಬುಡಕಟ್ಟು ಆಚಾರ-ವಿಚಾರಗಳಿಂದ ಬಲಾತ್ಕಾರವಾಗಿ ನೂರಾರು ಪಂಗಡಗಳನ್ನು ವೈದಿಕ ಧರ್ಮದ ವ್ಯಾಪ್ತಿಯೊಳಕ್ಕೆ ಮತಾಂತರಿಸಿದ ಪ್ರಕ್ರಿಯೆ ಸಂಭವಿಸಿತು. ಈ ವಿಧಾನದಲ್ಲಿ ಆಕ್ರಮಣದ ಅಂಶಗಳು ಪ್ರಧಾನ ಪಾತ್ರ ನಿರ್ವಹಿಸಿದವು. ಇದಕ್ಕೆ ಉದಾಹರಣೆಯಾಗಿ ರಾಮ ಮತ್ತು ವಾಲಿ ನಡುವಿನ ಸಂಘರ್ಷದ ಹಿನ್ನೆಲೆಯನ್ನು ಪರಿಶೀಲಿಸಬಹುದು. ತನಗೆ ಮರೆಯಲ್ಲಿ ನಿಂತು ಬಾಣ ಹೊಡೆದ ರಾಮನನ್ನು ವಾಲಿ ಕೇಳುತ್ತಾನೆ-ನನಗೂ ನಿನಗೂ ಈ ಮೊದಲೇ ಯಾವುದೇ ಬಗೆಯ ವೈರತ್ವವಿರಲಿಲ್ಲ. ಆದರೂ ನೀನು ನನ್ನನ್ನು ಯಾಕೆ ಕೊಲ್ಲ ಬಯಸಿದೆ? ಅದಕ್ಕೆ ರಾಮ ಉತ್ತರಿಸುತ್ತಾನೆ-ನೀನು ಧರ್ಮವನ್ನು ಉಲ್ಲಂಘಿಸಿದ್ದೀಯ. ನಮ್ಮ ಧರ್ಮದ ನೀತಿಗಳ ಪ್ರಕಾರ ಸೋದರನ ಹೆಂಡತಿಯೊಂದಿಗೆ ಸಂಬಂಧವಿಟ್ಟುಕೊಳ್ಳುವುದು ಅಪರಾಧ. ಈ ಅಪರಾಧಕ್ಕಾಗಿ ನಾನು ನಿನ್ನನ್ನು ಶಿಕ್ಷಿಸಿದೆ. ವಾಲಿ ಇದಕ್ಕೆ ಕೇಳುತ್ತಾನೆ-ನಾನು ನಿನ್ನ ಸಾಮ್ರಾಜ್ಯದ ಪ್ರಜೆಯಲ್ಲ.

ಆದ್ದರಿಂದ ನನ್ನನ್ನು ಶಿಕ್ಷಿಸುವ ಅಧಿಕಾರ ನಿನಗೆ ಎಲ್ಲಿಂದ ಬಂತು. ಅದಕ್ಕೆ ರಾಮ ಉತ್ತರಿಸುತ್ತಾನೆ - ಇಡೀ ಭೂಮಂಡಲಕ್ಕೆಲ್ಲಾ ಇಕ್ಷ್ವಾಕು ವಂಶದವರೇ ರಾಜರು. ಇದು ದೇವರೇ ಅವರಿಗೆ ಕೊಟ್ಟಿರುವ ರಾಜ್ಯಾಧಿಕಾರ. ಆದ್ದರಿಂದ ಮನುಕುಲದಲ್ಲಿ ಯಾರೇ ಧರ್ಮೋಲ್ಲಂಘನೆ ಮಾಡಿದರೂ ಅವರನ್ನು ಶಿಕ್ಷಿಸಿ ಧರ್ಮವನ್ನು ರಕ್ಷಿಸುವ ಹೊಣೆ ನಮ್ಮ ಮೇಲಿದೆ. ವಾಲಿ ಇದಕ್ಕೆ ಪ್ರತಿಯಾಗಿ ಕೇಳುತ್ತಾನೆ-ನಿನಗೆ ನನ್ನನ್ನು ಶಿಕ್ಷಿಸುವ ಅಧಿಕಾರವಿರುವುದಾದರೆ ಮರೆಯಲ್ಲಿ ನಿಂತು ಬಾಣ ಹೊಡೆಯಬೇಕಾದ ಅಗತ್ಯವೇನಿತ್ತು. ಮರೆಯಲ್ಲಿ ನಿಂತು ವಧಿಸುವುದು ಧರ್ಮಯುದ್ಧವಲ್ಲವೆಂದು ನಿನಗೆ ತಿಳಿದಿಲ್ಲವೇ? ಇದಕ್ಕೆ ರಾಮ ಕೊಡುವ ಉತ್ತರ- ನೀನು ವಾನರ. ಪ್ರಾಣಿಜಾತಿಗೆ ಸೇರಿದವನು. ಪ್ರಾಣಿಯನ್ನು ಮರೆಯಲ್ಲಿ ನಿಂತು ಕೊಲ್ಲುವುದು ಧರ್ಮದ ಉಲ್ಲಂಘನೆಯಾಗುವುದಿಲ್ಲ. ಅಲ್ಲಿಂದ ಮುಂದಕ್ಕೆ ಸಂವಾದ ರಾಮನ ಗುಣಗಾನದ ಕಡೆಗೆ ತಿರುಗುತ್ತದೆ.

ರಾಮನ ಪ್ರಕಾರ ಶಿಕ್ಷಿಸಿದ ಕಾರಣ ಧರ್ಮಾಚರಣೆಯನ್ನು ವಾಲಿ ಉಲ್ಲಂಘಿಸಿದ್ದು. ಅಂದರೆ ಮಾನವ ಸಮಾಜದ ಧರ್ಮಸೂತ್ರಗಳನ್ನು ಅವನು ಪಾಲಿಸಿಲ್ಲ. ವಾಲಿ ಕಿಷ್ಕಿಂದೆಯ ರಾಜ. ಹಾಗಿದ್ದರೂ ಇಡೀ ಭೂಮಂಡಲ ಇಕ್ಷ್ವಾಕುಗಳ ರಾಜ್ಯಭಾರಕ್ಕೆ ದೇವರು ವಹಿಸಿಕೊಟ್ಟಿದ್ದಾನೆಂದು ರಾಮ ಹೇಳುತ್ತಾನೆ. ಅಂದರೆ ವಾಲಿಗೆ ಕಿಷ್ಕಿಂದೆಯ ರಾಜ್ಯಭಾರ ವಹಿಸಿದ ದೇವರು ಬೇರೆ. ರಾಮನ ವಂಶಕ್ಕೆ ರಾಜ್ಯಭಾರ ವಹಿಸಿಕೊಟ್ಟ ದೇವರು ಬೇರೆ. ಹಾಗೆ ನೋಡಿದರೆ ವಾಲಿಯ ದೇವರು ಇಡೀ ಭೂಮಂಡಲಕ್ಕೆ ನೀನೇ ರಾಜ ಎಂದು ಹೇಳುವ ದಾರ್ಷ್ಟ್ಯವನ್ನು ತೋರಿಲ್ಲ. ರಾಮನ ದೇವಲು ಹೇಳಿದ ಮಾತನ್ನು ವಾಲಿಯ ದೇವರು ಯಾಕೆ ಮಾನ್ಯ ಮಾಡಬೇಕು ಎಂಬ ಪ್ರಶ್ನೆಗೆ ಇಲ್ಲಿ ಅವಕಾಶವೇ ಇಲ್ಲ.

ಇದಾದ ನಂತರ ಎದುರಿಗೆ ಬಂದು ನನ್ನ ತಪ್ಪಿಗೆ ಶಿಕ್ಷೆ ವಿಧಿಸಬಹುದಾಗಿತ್ತು ಎಂದು ಕೇಳಿದರೆ ವಾನರನಾದ ನೀನು ಪ್ರಾಣಿ ಸಮಾನ. ಮರೆಯಲ್ಲಿ ನಿಂತು ಕೊಲ್ಲುವುದು ತಪ್ಪಲ್ಲ ಎನ್ನುತ್ತಾನೆ ರಾಮ. ವಾನರನಾದ ವಾಲಿಗೆ ರಾಮ ಅನ್ವಯಿಸುವುದು ಕೋಸಲ ಸಾಮ್ರಾಜ್ಯದಲ್ಲಿರುವ ನರರು ಪಾಲಿಸುತ್ತಿರುವ ಧರ್ಮಸೂತ್ರಗಳನ್ನು. ರಾಮನ ಪ್ರಕಾರ ಪ್ರಾಣಿ ಸಮಾನನಾದ ವಾಲಿ ಸೋದರನ ಹೆಂಡತಿ ಜೊತೆ ಸಂಸಾರ ಮಾಡಿದರೆ ಅದು ಹೇಗೆ ಧರ್ಮದ ಉಲ್ಲಂಘನೆಯಾಗುತ್ತದೆ. ರಾಮನ ರಾಜ್ಯದಲ್ಲಿರುವ ಎಲ್ಲ ಪ್ರಾಣಿಗಳು ರಾಮ ಪ್ರತಿಪಾದಿಸುತ್ತಿರುವ ಶಾಸ್ತ್ರಾಚಾರಗಳನ್ನು ಪಾಲಿಸುತ್ತಿದ್ದವೇ ಎಂಬ ಪ್ರಶ್ನೆ ಹುಟ್ಟಿಕೊಳ್ಳುತ್ತದೆ. ಹಾಗಿಲ್ಲದಿದ್ದಲ್ಲಿ ಕಿಷ್ಕಿಂದೆಯನ್ನು ತನ್ನ ಸಾಮ್ರಾಜ್ಯ ಹಾಗೂ ಧರ್ಮಾಚರಣೆಗಳಿಗೆ ಅಡಿಯಾಳು ಮಾಡಿಕೊಳ್ಳುವ ಆಕ್ರಮಣಕಾರಿ ಉದ್ದೇಶಕ್ಕೆ ವಿತಂಡವಾದ ಮಾಡುತ್ತಿದ್ದಾನೆ ಎಂಬುದು ಗೊತ್ತಾಗುತ್ತದೆ.

ಇದು ಆ ಕಾಲಘಟ್ಟದಲ್ಲಿ ನಡೆದ ಸಾವಿರಾರು ವಿದ್ಯಮಾನಗಳಲ್ಲಿ ಒಂದರ ಉದಾಹರಣೆ ಮಾತ್ರ. ರಾಮಾಯಣದಲ್ಲಿ ಮಾರೀಚನನ್ನು ಕೊಂದಿದ್ದು, ಕಾಕಾಸುರನನ್ನು ಕೊಂದಿದ್ದು, ಕಬಂದಾಸುರನನ್ನು ಕೊಂದಿದ್ದು, ರಾವಣನನ್ನು ಕೊಂದು ಲಂಕೆಯನ್ನು ಆಕ್ರಮಿಸಿದ್ದು, ಶಂಭೂಕನನ್ನು ವಧಿಸಿದ್ದು ಮುಂತಾದವುಗಳೆಲ್ಲ ಈ ಬಗೆಯ ಧಾರ್ಮಿಕ ನೀತಿಗಳ ಹೇರಿಕೆ ಮತ್ತು ಸಾಮ್ರಾಜ್ಯ ವಿಸ್ತರಣೆಯ ಅಂಗವಾಗಿ ನಡೆದ ಸಂಘರ್ಷಗಳೆಂದು ಅರ್ಥ ಮಾಡಿಕೊಳ್ಳಬಹುದಾಗಿದೆ. ಇದು ಆ ಕಾಲದಲ್ಲಿ ಬಹಳ ವ್ಯಾಪಕವಾಗಿ ನಡೆದ ಬಲಾತ್ಕಾರದ ಧರ್ಮ ಹೇರಿಕೆಯ ಪ್ರಕ್ರಿಯೆ. ವ್ಯವಸಾಯಿಕ ಉತ್ಪಾದನಾ ವ್ಯವಸ್ಥೆಯ ವಿಸ್ತರಣೆಗಾಗಿ ಇದನ್ನು ನಡೆಸಲಾಯಿತೇ ಹೊರತು ಜನರಿಗೆ ದೇವರ ಸಾಕ್ಷಾತ್ಕಾರವನ್ನು ತೋರಿಸಲಿಕ್ಕಲ್ಲ ಎಂಬುದನ್ನು ನಾವಿಲ್ಲಿ ಗಮನಿಸಬೇಕು. ಈ ಸಾಮಾಜಿಕ ವ್ಯವಸ್ಥೆಯ ಅಂಗವಾಗಿ ಬಹಳ ಕಾಲ ಉಳಿದುಕೊಂಡ ಕಾರಣದಿಂದ ಹಿಡಿದಿಡಲ್ಪಟ್ಟಿದ್ದ ಪಂಗಡಗಳಿಗೆ ವೈದಿಕ ಧರ್ಮಾಚರಣೆಯ ಕೆಲವಂಶಗಳು ಮೈಗಂಟಿಕೊಂಡವು.

ಹಾಗೆ ಮೈಗಂಟಿಸಿ ಕೊಂಡರೂ ಮಾನಸಿಕ ದೂರವನ್ನು ಅನುಭವಿಸಿಕೊಂಡು ಬಂದಿದ್ದ ಹಲವಾರು ಪಂಗಡಗಳು ಹಾಗೂ ವೈದಿಕಧರ್ಮ ಪ್ರತಿಪಾದಿಸುತ್ತಿದ್ದ ಉತ್ಪಾದನಾ ವ್ಯವಸ್ಥೆಯಲ್ಲಿ ಅಧೋಗತಿಗೆ ನೂಕಲ್ಪಟ್ಟಿದ್ದ ವ್ಯಕ್ತಿಗಳು ಸ್ವಯಂ ಪ್ರೇರಣೆಯಿಂದ ಬೌದ್ಧ, ಜೈನ ಮತಗಳಿಗೆ

ಮೊದಲ ಬಾರಿಗೆ ಭಾರತದ ಇತಿಹಾಸದಲ್ಲಿ ಬುಡಕಟ್ಟು ಆಚಾರ- ವಿಚಾರಗಳಿಂದ ಬಲಾತ್ಕಾರವಾಗಿ ನೂರಾರು ಪಂಗಡಗಳನ್ನು ವೈದಿಕ ಧರ್ಮದ ವ್ಯಾಪ್ತಿಯೊಳಕ್ಕೆ ಮತಾಂತರಿಸಿದ ಪ್ರಕ್ರಿಯೆ ಸಂಭವಿಸಿತು. ಈ ವಿಧಾನದಲ್ಲಿ ಆಕ್ರಮಣದ ಅಂಶಗಳು ಪ್ರಧಾನ ಪಾತ್ರ ನಿರ್ವಹಿಸಿದವು. ಇದಕ್ಕೆ ಉದಾಹರಣೆಯಾಗಿ ರಾಮ ಮತ್ತು ವಾಲಿ ನಡುವಿನ ಸಂಘರ್ಷದ ಹಿನ್ನೆಲೆಯನ್ನು ಪರಿಶೀಲಿಸಬಹುದು. ತನಗೆ ಮರೆಯಲ್ಲಿ ನಿಂತು ಬಾಣ ಹೊಡೆದ ರಾಮನನ್ನು ವಾಲಿ ಕೇಳುತ್ತಾನೆ-ನನಗೂ ನಿನಗೂ ಈ ಮೊದಲೇ ಯಾವುದೇ ಬಗೆಯ ವೈರತ್ವ ವಿರಲಿಲ್ಲ. ಆದರೂ ನೀನು ನನ್ನನ್ನು ಯಾಕೆ ಕೊಲ್ಲ ಬಯಸಿದೆ? ಅದಕ್ಕೆ ರಾಮ ಉತ್ತರಿಸುತ್ತಾನೆ-ನೀನು ಧರ್ಮವನ್ನು ಉಲ್ಲಂಘಿಸಿದ್ದೀಯ.

ಮತಾಂತರ ಹೊಂದಿದರು. ವೈದಿಕೀಕರಣದ ಪ್ರಕ್ರಿಯೆಯಲ್ಲಿ ಕಂಡುಬರುವ ಬಲಾತ್ಕಾರದ ಅಂಶ ಬೌದ್ಧ-ಜೈನ ಧರ್ಮಗಳಿಗೆ ಆದ ಮತಾಂತರಗಳ ಸಂದರ್ಭದಲ್ಲಿ ಕಂಡುಬರುವುದಿಲ್ಲ ಎಂಬುದಿಲ್ಲಿ ಗಮನಾರ್ಹ.

ಚರಿತ್ರೆಯ ಗತಿಯಲ್ಲಿ ಮತವನ್ನು ನೆಲೆಗೊಳಿಸುವ ಪ್ರಕ್ರಿಯೆಯನ್ನು ಗಮನಿಸಿದರೆ ಅಂದಿನಿಂದ ಇಂದಿನವರೆಗೂ ಬೇರೆ ಬೇರೆ ಕಾಲಘಟ್ಟಗಳಲ್ಲಿ ಸನಾತನ ಧರ್ಮ ಎಂದು ಕರೆದುಕೊಳ್ಳುವ ಮತ ವ್ಯವಸ್ಥೆಯ ಚೌಕಟ್ಟಿನಲ್ಲಿ ಹಿಡಿದಿರಿಸಲ್ಪಟ್ಟಿದ್ದ ಪಂಗಡಗಳು ಹಾಗೂ ವ್ಯಕ್ತಿಗಳು ತಮ್ಮ ಬಿಡುಗಡೆಯ ಆಸೆ ಹೊತ್ತು ಬೇರೆ ಮತಾವಲಂಬಿಗಳಾಗಿರುವುದನ್ನು ಕಾಣಬಹುದಾಗಿದೆ. ಅದರ ಚಾರಿತ್ರಿಕ ನಡಿಗೆಯಲ್ಲಿ ಇಂದು ಮತಾಂತರದ ಬಗ್ಗೆ ಹುಯ್ಯಲೆಬ್ಬಿಸುತ್ತಿರುವ ಹಿತಾಸಕ್ತಿಗಳೇ ಈ ಧರ್ಮದ ಹೆಸರಿನ ಸೆರೆಮನೆಯ ಪಾರುಪತ್ಯಗಾರರಾಗಿದ್ದರು.

ಭಾರತದಲ್ಲಿ ಬೌದ್ಧ, ಜೈನಗಳು ಮಾತ್ರವಲ್ಲದೆ ಅಲ್ಲಲ್ಲಿ ಪ್ರಾದೇಶಿಕವಾಗಿ ಬೇರೆ ಧರ್ಮದರ್ಶನಗಳು ಕೂಡ ಈ ಬಿಡುಗಡೆಯ ಸಾಧ್ಯತೆಗಳನ್ನು ಜನರಿಗೆ ತೋರಿಸಿದ್ದವು. ವರ್ಣಾಶ್ರಮಾತೀತರೆಂದು ಕರೆಸಿಕೊಳ್ಳುವ ಶಾಕ್ತ್ಯ, ಕಾಪಾಲಿಕ, ಕಾಳಾಮುಖ, ನಾಥ, ಸಿದ್ಧ, ಅವಧೂತ, ಆರೂಢ ಮುಂತಾದ ಹಲವಾರು ನಾಮ-ಉಪನಾಮಗಳಲ್ಲಿ ನೆಲೆಗೊಂಡ ಇವುಗಳು ನಿಜವಾದ ಅರ್ಥದಲ್ಲಿ ಜನಸಾಮಾನ್ಯರು ಒಪ್ಪಿ ಆಚರಿಸಿದ ಧರ್ಮಗಳಾಗಿದ್ದವು. ಈ ಬಗೆಯ ಮತಾಚರಣೆಗಳಿಗೆ 10ನೇ ಶತಮಾನದವರೆಗೂ ಯಾವುದೇ ರಾಜ್ಯಧರ್ಮದ ಸ್ಥಾನವಾಗಲೀ, ರಾಜಬೆಂಬಲವಾಗಲೀ ಇರಲಿಲ್ಲ. ಕರ್ನಾಟಕದಲ್ಲಿ ಈ ಪಂಥಗಳು ಒಂದುಮಟ್ಟಿಗೆ ಮುಖ್ಯ ಮತಪಂಥಗಳಾಗಿ ರಾಜಾಶ್ರಯ ಪಡೆದಿದ್ದು 10ನೇ ಶತಮಾನದ ಈಚೆಗೆ ಮಾತ್ರ. ಕಾಳಾಮುಖ ಶೈವರು ಹಾಗೂ ನಾಥಸಿದ್ಧರು ರಾಜಾಶ್ರಯವನ್ನು ಸಾಕಷ್ಟು ವ್ಯಾಪಕವಾಗಿ ಪಡೆದುಕೊಂಡ ವೈದಿಕೇತರ ಮತಪಂಥಗಳಾಗಿದ್ದವು.

ಅದರ ಮುಂದಿನ ಹಂತದಲ್ಲಿ ಮೂಡಿಬಂದ ವೀರಶೈವ-ಲಿಂಗಾಯತ ಧರ್ಮವೂ 14-15ನೇ ಶತಮಾನದ ಹೊತ್ತಿಗೆ ಅತ್ಯಂತ ಜನಪ್ರಿಯ ಧರ್ಮದರ್ಶನವಾಗಿ ಪ್ರಚಲಿತಗೊಂಡಿತು. ವೀರಶೈವ-ಲಿಂಗಾಯತ ಧರ್ಮಕ್ಕೆ ಮತಾಂತರಗೊಂಡ ಜನಸಮೂಹಗಳು ಯಾವುದೇ ಒತ್ತಾಯದಿಂದ ಹಾಗೆ ಮಾಡಲಿಲ್ಲ. 12ನೇ ಶತಮಾನದಲ್ಲಿ ಶರಣ ಧರ್ಮಾನುಯಾಯಿಗಳ ಮೇಲೆ ರಾಜ್ಯ ವ್ಯವಸ್ಥೆ ನಡೆಸಿದ ದಾಳಿಗಳನ್ನು ನೋಡಿದರೆ, ಸನಾತನ ಧರ್ಮದ ಸೆರೆಮನೆಯಿಂದ ಪಾರಾಗಲು ಸ್ವಯಮಿಚ್ಛೆಯಿಂದ ಗಡಿಗೋಡೆಗಳನ್ನು ದಾಟಿದ್ದ ಜನರ ಬಗ್ಗೆ ರಾಜ್ಯ ಧರ್ಮಕ್ಕೆ ಎಂತಹ ಆಕ್ರೋಶವಿತ್ತೆಂಬುದು ತಿಳಿಯುತ್ತದೆ. ಶರಣರು ಬಿಟ್ಟಿಚಾಕರಿ ಮಾಡಲು ಇಚ್ಛಿಸಲಿಲ್ಲ. ತಮ್ಮ ಶ್ರಮಶಕ್ತಿಯನ್ನು ಮಾಂಡಲೀಕರಿಗೆ, ಮಠಾಧೀಶರಿಗೆ, ತುಂಡರಸರಿಗೆ ಅಡವಿಡಲು ಬಯಸಲಿಲ್ಲ.

ಅವರ ದೇವರು ಮತ್ತು ಧರ್ಮಾಚರಣೆ ಇವರನ್ನು ಹೊರಗಿಟ್ಟು ನಡೆಸಿಕೊಂಡಿದ್ದಕ್ಕೆ ಪರ್ಯಾಯವಾಗಿ ದೇಹವೇ ದೇಗುಲ ಎಂದೂ, ದೇಹ ವೆಂಬ ದೇಗುಲ ನಡೆಸುವ ಕಾಯಕವೇ ಪೂಜೆಯೆಂದೂ ಪ್ರತಿಪಾದಿಸಿದವು. ಜಾತಿ ಶ್ರೇಣೀಕರಣದ ವಿರುದ್ಧ, ಕಾಯಕಗಳನ್ನು ಶ್ರೇಷ್ಠ, ಕನಿಷ್ಠ ಎಂದು ವಿಂಗಡಿಸುವ ವೈದಿಕ ಧರ್ಮದ ವಿರುದ್ಧ ಹುಟ್ಟಿಕೊಂಡ ಶರಣರ ಧಾರ್ಮಿಕ ಬಂಡಾಯ ಸಮಾಜಿಕ ಸಮಾನತೆಯನ್ನು ಪ್ರತಿಪಾದಿಸುತ್ತಿತ್ತು. ಆದ್ದರಿಂದಲೇ ಶರಣರಾಗುವುದು ದಮನಿತ ಜನವರ್ಗಗಳಿಗೆ ಬಹಳ ದೊಡ್ಡ ವಿಮೋಚನೆಯಾಗಿ ಕಂಡಿತ್ತು.

ಏರ್ಪಡುತ್ತಿದ್ದ ಸಂತೆಗಳು, ಪಟ್ಟಣಗಳು, ಪ್ರದೇಶಾಂತರ ವ್ಯಾಪಾರ ವಹಿವಾಟುಗಳು ಕಾಯಕ ಜೀವಿಗಳು ಮತ್ತವರ ಉತ್ಪನ್ನಗಳಿಗೆ ಊಳಿಗಮಾನ್ಯ ಹಿಡಿತದಿಂದ ಹೊರಗಿದ್ದ ಮಾರುಕಟ್ಟೆಯನ್ನು ಸೃಷ್ಟಿಮಾಡತೊಡಗಿದ್ದವು. ಹೊಸ ಸನ್ನಿವೇಶದಲ್ಲಿ ಹಳೆಯ ಸಂಕೋಲೆಗಳ ಜೊತೆ ಬಾಳಲು ಇಚ್ಛಿಸದ ಜನರೆಲ್ಲ ಶರಣರಾದರು. ಸಮಾನತೆಯ ಆಶಯದ ಭ್ರಾತೃತ್ವ ಘೋಷಿಸಿದರು. ತಮ್ಮ ಮತಾಚರಣೆಯನ್ನು ರಕ್ಷಿಸಿಕೊಳ್ಳಲು ಗಣಾಚಾರವನ್ನೂ ಕಟ್ಟಿಕೊಂಡರೆಂಬುದನ್ನು ನೋಡಿದರೆ ರಾಜ್ಯಧರ್ಮದಿಂದ ಎದುರಾಗಿದ್ದ ಕಿರುಕುಳದ ಪರಿಸ್ಥಿತಿಯನ್ನು ನಾವು ಅರ್ಥಮಾಡಿಕೊಳ್ಳಬಹುದು.

ಕರ್ನಾಟಕದಲ್ಲಿ ಇರುವ ಅತ್ಯಂತ ದೊಡ್ಡ ಜಾತಿ ಪಂಗಡವಾಗಿರುವ ವೀರಶೈವ-ಲಿಂಗಾಯತರು ಹೀಗೆ ವೈದಿಕ ಧರ್ಮದಿಂದ ಮತಾಂತರ ಹೊಂದಿದವರೇ ತಾನೆ. ದಾಸ ಪಂಥವೆಂದು ಕರೆಸಿಕೊಳ್ಳುವ ಮತಕ್ಕೆ ನಡೆದುಕೊಳ್ಳುವವರೆಲ್ಲ, ಬ್ರಾಹ್ಮಣ ಪೌರೋಹಿತ್ಯಕ್ಕೆ ಬದಲಾಗಿ ತಮ್ಮ ತಮ್ಮ ಜಾತಿಯಲ್ಲೇ ದಾಸಯ್ಯಗಳನ್ನು ರೂಪಿಸಿಕೊಂಡು ವೈದಿಕ ಜಾತಿ ಕಟ್ಟಳೆ ಉಲ್ಲಂಘಿಸಿದವರೇ ತಾನೆ. ಚರಿತ್ರೆಯಲ್ಲಿ ಗತಿಸಿಹೋದ ಈ ಬಗೆಯ ನೂರಾರು ಪ್ರಕ್ರಿಯೆಗಳನ್ನು ಅಯಾ ಸನ್ನಿವೇಶದ ಪ್ರೇರಣೆಯಿಂದ ನಡೆದುಕೊಂಡು ಬಂದ ಸ್ವಯಮಿಚ್ಛೆಯ ಮತಾಂತರಗಳೆಂಬುದನ್ನು ಗುರುತಿಸಬೇಕು.

ಭಾರತದಲ್ಲಿ ಬೌದ್ಧ, ಜೈನಗಳು ಮಾತ್ರವಲ್ಲದೆ ಅಲ್ಲಲ್ಲಿ ಪ್ರಾದೇಶಿಕವಾಗಿ ಬೇರೆ ಧರ್ಮದರ್ಶನಗಳು ಕೂಡ ಈ ಬಿಡುಗಡೆಯ ಸಾಧ್ಯತೆಗಳನ್ನು ಜನರಿಗೆ ತೋರಿಸಿದ್ದವು. ವರ್ಣಾಶ್ರಮಾತೀತರೆಂದು ಕರೆಸಿಕೊಳ್ಳುವ ಶಾಕ್ತ್ಯ, ಕಾಪಾಲಿಕ, ಕಾಳಾಮುಖ, ನಾಥ, ಸಿದ್ಧ, ಅವಧೂತ, ಆರೂಢ ಮುಂತಾದ ಹಲವಾರು ನಾಮ-ಉಪನಾಮಗಳಲ್ಲಿ ನೆಲೆಗೊಂಡ ಇವುಗಳು ನಿಜವಾದ ಅರ್ಥದಲ್ಲಿ ಜನಸಾಮಾನ್ಯರು ಒಪ್ಪಿ ಆಚರಿಸಿದ ಧರ್ಮಗಳಾಗಿದ್ದವು. ಈ ಬಗೆಯ ಮತಾಚರಣೆಗಳಿಗೆ 10ನೇ ಶತಮಾನದವರೆಗೂ ಯಾವುದೇ ರಾಜ್ಯಧರ್ಮದ ಸ್ಥಾನವಾಗಲೀ, ರಾಜಬೆಂಬಲವಾಗಲೀ ಇರಲಿಲ್ಲ. ಕರ್ನಾಟಕದಲ್ಲಿ ಈ ಪಂಥಗಳು ಒಂದುಮಟ್ಟಿಗೆ ಮುಖ್ಯ ಮತಪಂಥಗಳಾಗಿ ರಾಜಾಶ್ರಯ ಪಡೆದಿದ್ದು 10ನೇ ಶತಮಾನದ ಈಚೆಗೆ ಮಾತ್ರ. ಕಾಳಾಮುಖ ಶೈವರು ಹಾಗೂ ನಾಥಸಿದ್ಧರು ರಾಜಾಶ್ರಯವನ್ನು ಸಾಕಷ್ಟು ವ್ಯಾಪಕವಾಗಿ ಪಡೆದುಕೊಂಡ ವೈದಿಕೇತರ ಮತಪಂಥಗಳಾಗಿದ್ದವು.

ಸಿಖ್ ಪಂಥ, ವಾರಕರಿ ಪಂಥ, ಕಬೀರ ಪಂಥ ಮುಂತಾದವುಗಳೆಲ್ಲ ಮತಾಂತರದ ಬೇರೆ ಬೇರೆ ಪ್ರಮಾಣದ ನಿದರ್ಶನಗಳೇ. ಈ ಎಲ್ಲ ಸಂದರ್ಭಗಳಲ್ಲಿ ಮತಾಂತರ ಹೊಂದಿದ ಜನವರ್ಗಗಳ ಯಾದಿಯನ್ನು ನೋಡಿದರೆ ವೈದಿಕ ಧರ್ಮದ ನೊಗ ಯಾರ ಹೆಗಲ ಮೇಲಿತ್ತೋ ಅಂತಹ ಜನವರ್ಗಗಳು ಈ ಶೋಷಣೆಯಿಂದ ಬಿಡುಗಡೆ ಹೊಂದಲು ಯತ್ನಿಸಿರುವುದನ್ನು ಕಾಣುತ್ತೇವೆ. ಹೊಸ ಧರ್ಮಗಳ ದರ್ಶನಕ್ಕೆ ಮನಸೋತು ವೈದಿಕ ಧರ್ಮದ ಆಳುವ ಸ್ತರದಲ್ಲಿದ್ದ ಕೆಲವು ವ್ಯಕ್ತಿಗಳೂ ಕೂಡ ಮತಾಂತರ ಹೊಂದಿರಬಹುದು. ಆದರೆ ಬಹುಸಂಖ್ಯಾತ ಮತಾಂತರಿಗಳು ಕಾಯಕ ಜೀವಿಗಳು, ಕುಶಲಕರ್ಮಿಗಳು, ವ್ಯಾಪಾರಿಗಳು ಹಾಗೂ ವೈದಿಕ ಧರ್ಮದ ಸಾಮಾಜಿಕ ಪರಿಗಣನೆಯಲ್ಲಿ ನಿಕೃಷ್ಟವಾಗಿ ಕಾಣಲ್ಪಟ್ಟದ್ದವರು ಎಂಬುದು ತಿಳಿಯುತ್ತದೆ.

ಇದೇ ಪ್ರಕ್ರಿಯೆ ಮುಂದುವರಿದು ಆಧುನಿಕ ಯುಗದಲ್ಲೂ ಮತಾಂತರಗಳಾಗಿವೆ. ಇಸ್ಲಾಂ ಧರ್ಮ ಅನುಸರಿಸುತ್ತಿದ್ದ ಅರಸೊತ್ತಿಗೆಗಳ ಕಾಲದಲ್ಲಿ ಇಸ್ಲಾಂ ಧರ್ಮಕ್ಕೆ, ಕ್ರಿಶ್ಚಿಯನ್ ಧರ್ಮ ಅನುಸರಿಸುತ್ತಿದ್ದ ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ ಕ್ರಿಶ್ಚಿಯನ್ ಧರ್ಮಕ್ಕೆ, ಸ್ವತಂತ್ರ ಭಾರತದ ಹಿಂದೂಗಳ ಆಳ್ವಿಕೆಯ ಕಾಲದಲ್ಲಿ ಬಾಬಾಸಾ ಹೇಬ್ ಅಂಬೇಡ್ಕರ್ ನೇತೃತ್ವದಲ್ಲಿ ಬೌದ್ಧ ಧರ್ಮಕ್ಕೆ ಮತಾಂತರಗಳು ನಡೆದಿವೆ. ಈ ಮತಾಂತರಗಳ ಸಂದರ್ಭದಲ್ಲಿ ಯಾವ ಪ್ರಮಾಣದ ಬಲಾತ್ಕಾರ ಅಥವಾ ಆಮಿ ಷಗಳು ಕ್ರಿಯಾಶೀಲವಾಗಿದ್ದವು ಹಾಗೂ ಯಾವ ಪ್ರಮಾಣದಲ್ಲಿ ಸ್ವಯಮಿಚ್ಛೆಯಿಂದ ಮತಾಂತರಗಳಾದವು ಎಂಬುದನ್ನು ವಸ್ತುನಿಷ್ಠವಾಗಿ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಮುಸ್ಲಿಂ ಅರಸೊತ್ತಿಗೆಗಳು ಬಲಾತ್ಕಾರದ ಮತಾಂತರ ನಡೆಸಿದವು ಎನ್ನುವ ಆಪಾದನೆಯನ್ನು ಕೆಲವು ಬಿಡಿ ಘಟನೆಗಳ ಉಲ್ಲೇಖದೊಂದಿಗೆ ಮಾಡಲಾಗುತ್ತಿರುತ್ತದೆ. ಮುಸ್ಲಿಂ ಅರಸೊತ್ತಿಗೆಗಳ ಕಾಲದಲ್ಲಿ ಆದ ಮತಾಂತರಗಳು ಬಹುಪಾಲು ಪಟ್ಟಣ ಮತ್ತು ನಗರ ಪ್ರದೇಶಗಳಲ್ಲೇ ಆದವು ಹಾಗೂ ಹಾಗೆ ಮತಾಂತರ ಗೊಂಡ ಜನವರ್ಗಗಳಲ್ಲಿ ಬಹುಪಾಲು ಜನ ನೇಕಾರ, ಪಾಂಚಾಳ, ಬಡಗಿ, ಮೋಚಿ, ಕಸಾಯಿ, ನಾಯಿಂದ ಮುಂತಾದ ಕುಶಲ ಕರ್ಮಿಗಳು, ಸೈನಿಕರು ಹಾಗೂ ಚಿಲ್ಲರೆ ವ್ಯಾಪಾರ ವಹಿವಾಟುಗಳಲ್ಲಿ ತೊಡಗಿದ್ದ ವ್ಯಾಪಾರಿಗಳು, ಹೊಸದಾಗಿ ತೋಟಗಾರಿಕೆ ಬೆಳೆಗಳ ಕೃಷಿಗೆ ತೊಡಗಿ ಕೊಂಡಿದ್ದ ಸಣ್ಣ ರೈತ ಸಮುದಾಯದವರೇ ಆಗಿರಲು ಕಾರಣವೇನು ಎಂಬುದನ್ನು ವಿಶ್ಲೇಷಿಸಿ ನೋಡದೆ ಈ ಮತಾಂತರದ ಹಿಂದಿನ ಪ್ರೇರಣೆಗಳನ್ನು ಅರ್ಥಮಾಡಿಕೊಳ್ಳಲು ಆಗುವುದಿಲ್ಲ.

ಈ ಮೊದಲಿನ ಮತಾಂತರಗಳಿಗೂ ಮುಸ್ಲಿಂ ಮತಾಂತರಗಳಿಗೂ ಹೊರ ರೂಪದಲ್ಲಿ ಒಂದು ವ್ಯತ್ಯಾಸ ಇದೆ. ಬೌದ್ಧ, ಜೈನ, ನಾಥಸಿದ್ಧ, ಕಾಳಾಮುಖ, ವೀರಶೈವ-ಲಿಂಗಾಯತ, ಹರಿದಾಸ ಪಂಥ ಹಾಗೂ ಸಿಖ್ ಮತಾಂತರದ ಸಂದರ್ಭಗಳಲ್ಲಿ ಮತಾಂತರಗೊಂಡ ಜನವರ್ಗ ಇಟ್ಟುಕೊಳ್ಳುತ್ತಿದ್ದ ಹೆಸರುಗಳು ಮತ್ತು ಅನುಸರಿಸುತ್ತಿದ್ದ ಹಬ್ಬಗಳು, ಒಂದು ಮಟ್ಟಿನ ಪೂಜಾವಿಧಿಗಳು ಸಾಂಸ್ಕೃತಿಕವಾಗಿ ಈ ಮೊದಲೆಲ್ಲಾ ಇಲ್ಲಿರುವ ಬೇರೆಯ

ವರಿಗೆ ಬಳಕೆಯಲ್ಲಿದ್ದವುಗಳೇ ಆಗಿದ್ದವು. ಈ ಪಂಥಗಳ ಮತಾಚರಣೆ ಹಾಗೂ ಸಾಮಾಜಿಕ ವ್ಯವಸ್ಥೆಯ ನಂಬಿಕೆಗಳಲ್ಲಿ ಇರುವ ಭಿನ್ನತೆ ಗೋಚರ ಸ್ವರೂಪಿಗಳಲ್ಲ. ಈ ಯಾವುದೇ ಮತಾಂತರ ಸಂದರ್ಭಗಳಲ್ಲಿ ಇಲ್ಲದ ಗೋಚರ ಭಿನ್ನತೆ ಮುಸ್ಲಿಂ ಧರ್ಮದ ಸಂದರ್ಭದಲ್ಲಿ ಕಾಣಿಸಿಕೊಂಡಿತು. ಹೆಸರುಗಳು, ಪೂಜಾವಿಧಿ, ಹಬ್ಬಗಳ ಆಚರಣೆಯಲ್ಲಿ ಈ ಭಿನ್ನತೆ ಎದ್ದು ಕಾಣುತ್ತಿತ್ತು. ಕರ್ನಾಟಕದಲ್ಲಿ ಮುಸ್ಲಿಂ ಧರ್ಮಕ್ಕೆ ಮತಾಂತರಗೊಂಡವರು ದಖನಿ ಉರ್ದುವನ್ನು ತಮ್ಮ ಪಂಗಡದ ಭಾಷೆಯಾಗಿ ಬಳಸಿಕೊಂಡರು. ಇದರಿಂದ ಅವರೊಂದು ಪ್ರತ್ಯೇಕ ಧಾರ್ಮಿಕ ಪಂಗಡವೆಂದು ಗುರುತಿಸಿ ನೋಡಲು ಹಾಗೂ ಹೊರರೂಪ ಲಕ್ಷಣಗಳ ಆಧಾರದಲ್ಲಿ ವಿಂಗಡಿಸಿ ತೋರಿಸಲು ಸಾಧ್ಯವಾಯಿತು.

ಮುಸ್ಲಿಂ ಅರಸೊತ್ತಿಗೆಗಳ ಕಾಲದಲ್ಲಿ ಮೂಲೆಗುಂಪಾಗಿದ್ದ ಪಾಳೆಯಗಾರರು, ತುಂಡರಸರು, ಮಾಂಡಲಿಕ ಮಾನ್ಯರು ಬ್ರಿಟಿಷ್ ಆಳ್ವಿಕೆಯಲ್ಲಿ ಮತ್ತೆ ಬೇರೆ ಬೇರೆ ಬಗೆಯ ಆಸ್ತಿವಂತ ವರ್ಗವಾಗಿ ಪ್ರವರ್ಧಮಾನಕ್ಕೆ ಬಂದರು. ಈ ಆಸ್ತಿವಂತ ವರ್ಗಗಳ ಬಿಟ್ಟಿ ಚಾಕರಿಗೆ ಮುಸ್ಲಿಂ ಧರ್ಮಾನುಯಾಯಿಗಳಾಗಿದ್ದ ಕುಶಲಕರ್ಮಿ ಹಾಗೂ ಕಸುಬುದಾರ ವರ್ಗಗಳು ಸಿಕ್ಕದೇ ಹೋದರು. ಮೊಗಲ್ ರಾಜ ವ್ಯವಸ್ಥೆಯ ಬದಲಾಗಿ ತಮ್ಮ ವಸಾಹತುಶಾಹಿ ವ್ಯವಸ್ಥೆಯನ್ನು ನೆಲೆಗೊಳಿಸಬೇಕಿದ್ದ ಬ್ರಿಟಿಷರು ಸಮಾಜದಲ್ಲಿ ಮೂಲೆಗುಂಪಾಗಿದ್ದ ಪಾರಂಪರಿಕ ಶೋಷಕ ವರ್ಗಗಳಿಗೆ ಮತ್ತೆ ಜನರನ್ನು ಲೂಟಿ ಹೊಡೆಯಲು ಅವಕಾಶಗಳನ್ನು ಕಲ್ಪಿಸಿದರು. ಮತ್ತು ವಸಾಹತುಶಾಹಿ ಆಡಳಿತಕ್ಕೆ ಜನವಿರೋಧ ಹಬ್ಬಬಾರದೆಂದು ಮುಸ್ಲಿಂ–ಹಿಂದೂ ಜನಸಮುದಾಯಗಳ ನಡುವೆ ಅಪನಂಬಿಕೆಯ ಬೀಜಗಳನ್ನು ಬಿತ್ತಿ ಬೆಳೆಸುತ್ತಾ ಹೋದರು. ಈ ಎರಡೂ ಧರ್ಮದ ಅನುಯಾಯಿಗಳ ನಡುವೆ ಧಾರ್ಮಿಕ ನಂಬುಗೆಗಳ ಹೊಂದಾಣಿಗೆಗಳು ಹಾಗೂ ವೈರುಧ್ಯಗಳು ಎರಡೂ ಅಷ್ಟಷ್ಟು ಪ್ರಮಾಣದಲ್ಲಿದ್ದುದೇನೋ ಹೌದು. ಆ ಬಗೆಯ ಸನ್ನಿವೇಶ ಜೈನರಿಗೂ ಶೈವರಿಗೂ ಇತ್ತು, ವೈಷ್ಣವರಿಗೂ ಶೈವರಿಗೂ ನಡುವೆ ಇತ್ತು. ಧಾರ್ಮಿಕ ಪಂಥಾಧಾರಿತ ಸಂಘರ್ಷಗಳು ಮುಸ್ಲಿಮರು ಮತ್ತು ಇತರರ ನಡುವೆಯೇ ಮೊಟ್ಟ ಮೊದಲು ಹುಟ್ಟಿಕೊಂಡಿದ್ದು ಎಂಬ ಹಾಗೆ ಕತೆಗಳನ್ನು ವ್ಯಾಪಕವಾಗಿ ಹಬ್ಬಿಸಲಾಯಿತು. ಆದರೆ ಅದು ವಾಸ್ತವವಾಗಿರಲಿಲ್ಲ.

ಮುಸ್ಲಿಂ ಅರಸೊತ್ತಿಗೆಗಳ ಆಡಳಿತ ಬ್ರಿಟಿಷರ ಕಾಲದಲ್ಲಿ ಪೂರ್ಣವಾಗಿ ಮೂಲೆಗೆ ತಳ್ಳಲ್ಪಟ್ಟಿತು. ಹಾಗೆ ತಳ್ಳಿದ್ದಾದ ಮೇಲೆ ಕ್ರಿಶ್ಚಿಯನ್ ಧರ್ಮಕ್ಕೆ ಜಾಗತಿಕ ಮಟ್ಟದಲ್ಲಿ ಮುಸ್ಲಿಂ ಧರ್ಮದ ಬಗ್ಗೆ ಇದ್ದ ಪೂರ್ವಾಗ್ರಹಗಳನ್ನು ಭಾರತದಲ್ಲೂ ವ್ಯಾಪಕವಾಗಿ ಹರಡಲಾಯಿತು. ಇದು ವಸಾಹತುಶಾಹಿ ಆಡಳಿತವು ಜನರನ್ನು ಒಡೆದು ಆಳುವ ನೀತಿಯ ಅಂಗವಾಗಿ ಕೈಗೊಂಡ ಪ್ರಚಾರಾಂದೋಲನದ ಒಂದು ಮುಖ. ಇದರಿಂದಾಗಿ ಬ್ರಿಟಿಷ್ ಆಳ್ವಿಕೆಯ ವಿರುದ್ಧ ಸಿಪಾಯಿ ದಂಗೆಯ ಸಮಯದಲ್ಲಿ ಒಂದಾಗಿ ಹೋರಾಡಿದ ಹಿಂದೂ–ಮುಸ್ಲಿಂ ಸೈನಿಕರು ಹಾಗೂ ಕೆಲವು ಪ್ರಾಂತ್ಯಗಳ ಜನ ಸಾಮಾನ್ಯ ಗುಂಪುಗಳು ಕ್ರಮೇಣ ಬೇರೆ ಬೇರೆಯಾದವು.

ಮುಸ್ಲಿಂ ಅರಸೊತ್ತಿಗೆಗಳ ಕಾಲದಲ್ಲಿ ಮೂಲೆ ಗುಂಪಾಗಿದ್ದ ಪಾಳೆಯಗಾರರು, ತುಂಡರಸರು, ಮಾಂಡಲಿಕ ಮಾನ್ಯರು ಬ್ರಿಟಿಷ್ ಆಳ್ವಿಕೆಯಲ್ಲಿ ಮತ್ತೆ ಬೇರೆ ಬೇರೆ ಬಗೆಯ ಆಸ್ತಿವಂತ ವರ್ಗವಾಗಿ ಪ್ರವರ್ಧಮಾನಕ್ಕೆ ಬಂದರು. ಈ ಆಸ್ತಿವಂತ ವರ್ಗಗಳ ಬಿಟ್ಟಿ ಚಾಕರಿಗೆ ಮುಸ್ಲಿಂ ಧರ್ಮಾನುಯಾಯಿಗಳಾಗಿದ್ದ ಕುಶಲಕರ್ಮಿ ಹಾಗೂ ಕಸುಬುದಾರ ವರ್ಗಗಳು ಸಿಕ್ಕದೇ ಹೋದರು. ಮೊಗಲ್ ರಾಜ ವ್ಯವಸ್ಥೆಯ ಬದಲಾಗಿ ತಮ್ಮ ವಸಾಹತುಶಾಹಿ ವ್ಯವಸ್ಥೆಯನ್ನು ನೆಲೆಗೊಳಿಸಬೇಕಿದ್ದ ಬ್ರಿಟಿಷರು ಸಮಾಜದಲ್ಲಿ ಮೂಲೆಗುಂಪಾಗಿದ್ದ ಪಾರಂಪರಿಕ ಶೋಷಕ ವರ್ಗಗಳಿಗೆ ಮತ್ತೆ ಜನರನ್ನು ಲೂಟಿ ಹೊಡೆಯಲು ಅವಕಾಶಗಳನ್ನು ಕಲ್ಪಿಸಿದರು.

ಇದೇ ಸಮಯದಲ್ಲಿ ಬ್ರಿಟಿಷ್ ಆಡಳಿತ ಸಮಾಜದ ತಳ ವರ್ಗಗಳಿಗೆ ಶಿಕ್ಷಣ ಮತ್ತು ಸರ್ಕಾರಿ ಸೇವೆಗಳಲ್ಲಿ ಅವಕಾಶಗಳನ್ನು ಕಲ್ಪಿಸಿತು. ಕ್ರಿಶ್ಚಿಯನ್ ಧರ್ಮಕ್ಕೆ ಸೇರಿಕೊಂಡರೆ ತಮಗಿದ್ದ ಭೂಮಿಕಾಣಿಯ ಒಡೆತನಗಳನ್ನು ಹಾಗೆಯೇ ಉಳಿಯಗೊಡುತ್ತಾರೆಂಬ ಆಸೆಯಿಂದ ಆಸ್ತಿವಂತ ವರ್ಗಗಳ ಹಲವಾರು ಕುಟುಂಬಗಳು ಮತಾಂತರಗೊಂಡವು. ಮತ್ತೊಂದು ಕಡೆ ಅಸ್ಪೃಶ್ಯತೆ ಹಾಗೂ ಬೇರ್ಪಡಿಸುವಿಕೆಯಿಂದ ಬಳಲಿದ್ದ ಕೆಳಜಾತಿಗಳು ಮತ್ತು ವನವಾಸಿ ಪಂಗಡಗಳು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳ್ಳತೊಡಗಿದವು.

ಆಧುನಿಕ ಸುಧಾರಿತ ಜೀವನ ಕ್ರಮವನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುವುದೆಂಬ ಆಸೆ ಹಾಗೂ ಉಚಿತ ಶಿಕ್ಷಣ ಮತ್ತು ಸರ್ಕಾರಿ ನೌಕರಿಗಳಲ್ಲಿ ಸೇರುವ ಅವಕಾಶಗಳು ಲಭ್ಯವಾಗುತ್ತವೆಂಬ ಆಸೆಗಳು ಕೆಳಜಾತಿ ಮತ್ತು ಪಂಗಡಗಳನ್ನು ಪ್ರೇರೇಪಿಸಿದ್ದಿರಬಹುದು. ಆದರೆ ಅದೇ ಮುಖ್ಯ ಕಾರಣವಲ್ಲ. ಆ ಸಮುದಾಯಗಳು ಜೀವಿಸುತ್ತಿದ್ದ ತೀವ್ರ ಬಡತನ ಹಾಗೂ ಅವಮಾನದ ಸಾಮಾಜಿಕ ಪರಿಸ್ಥಿತಿಗಳು ಮತಾಂತರದ ಹಿಂದಿನ ಮುಖ್ಯ ಕಾರಣವಾಗಿದ್ದವು. ಆ ಸಮುದಾಯಗಳು ಅಂತಹ ಹಿಂದುಳಿದಿರುವಿಕೆಯನ್ನು ಅನುಭವಿಸುವುದಕ್ಕೆ ವೈದಿಕ ಧರ್ಮದ ನಿಯಮಾವಳಿಗಳು ಕಾರಣವಾಗಿವೆ ಎಂದು ಕಂಡಿಲ್ಲದಿದ್ದರೆ, ಅವರಿದ್ದ ಧಾರ್ಮಿಕ ಚೌಕಟ್ಟಿನಲ್ಲಿ ಅವರಿಗೆಲ್ಲ ಸಮಾನತೆಯ ಹಾಗೂ ಜೀವನ ಪರಿಸ್ಥಿತಿಗಳ ಮುನ್ನಡೆಯ ಅವಕಾಶಗಳು ಲಭ್ಯವಾಗಿದ್ದಿದ್ದರೆ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳ್ಳಬೇಕಾದ ಅಗತ್ಯ ಹುಟ್ಟುತ್ತಿರಲಿಲ್ಲವೆಂದು ಊಹಿಸಬಹುದಾಗಿದೆ.

ಯಾವುದಾದರೂ ಧರ್ಮ ಹಾಗೂ ಅವರ ಚಿಂತನೆಗಳು ನಿರ್ದಿಷ್ಟ ಜನವರ್ಗಕ್ಕೆ ಬಿಡುಗಡೆಯ ಆಸೆ ಹುಟ್ಟಿಸುವುದಾದರೆ ಅಂತಹ ಜನವರ್ಗಗಳು ಪರಲೋಕದಲ್ಲಿ ತಾವು ಹೊಂದಬಹುದಾದ ಸಾಯುಜ್ಯ ಪದವಿಯ ನಿರೀಕ್ಷೆಗಿಂತಲೂ, ತಾವು ಬದುಕಿರುವ ಸನ್ನಿವೇಶದಲ್ಲಿ ಒದಗುವ ಬದಲಾವಣೆಗಳ ಕಾರಣಕ್ಕೆ ಮತಾಂತರ ಹೊಂದುವ ದಾರಿ ಹಿಡಿಯುತ್ತಾರೆ. ಮಾನವನ ಘನತೆ ಮತ್ತು ಅವಕಾಶಗಳ ಲಭ್ಯತೆಯನ್ನು ಶಾಸ್ತ್ರಾಚಾರಗಳ ಹೆಸರಲ್ಲಿ ದಮನಿಸುವ ಯಾವುದೇ ಧರ್ಮಗಳನ್ನು ಹಾಗೆ ದಮನಕ್ಕೊಳಗಾದವರು ಆದರಿಸುತ್ತಾ ಇರಬೇಕೆಂದು ನಿರೀಕ್ಷಿಸುವುದೇ ಮನುಷ್ಯ ವಿರೋಧಿಯಾದುದು.

ಧರ್ಮವನ್ನು ಬಿಟ್ಟು ಹೋಗಬೇಡಿ ಎಂದು ಪ್ರಚಾರ ಮಾಡುವ ಸ್ವಹಿತಾಸಕ್ತ ವರ್ಗಗಳು, ತಮ್ಮ ಧರ್ಮದಲ್ಲಿರುವ ಯಾವ ಯಾವ ಆಚಾರ–ವಿಚಾರಗಳು ತಾರತಮ್ಯ ನೀತಿ ಅನುಸರಿಸುತ್ತಿವೆ ಹಾಗೂ ಕೆಳಜಾತಿಗಳವರ ಲೌಕಿಕ ಬದುಕಿನ ಉನ್ನತಿಗೆ ಅಡತಡೆಯೊಡ್ಡುತ್ತಿವೆ ಎಂಬುದನ್ನು ಸಾರಾಸಗಟಾಗಿ ಪರಿಶೀಲಿಸಲು ಯಾಕೆ ಮುಂದಾಗಬಾರದು. ಅವುಗಳನ್ನು ನಿವಾರಿಸಿ ಸಮಾನತೆಯ ತಳಹದಿಯ ಮೇಲೆ ಹೊಸ ಬದುಕಿಗೆ ಅನುವು ಮಾಡಿಕೊಡುವ ಧಾರ್ಮಿಕ ಆಚಾರ ವಿಚಾರಗಳನ್ನು ನಿರ್ಮಾಣ ಮಾಡುವುದಕ್ಕೆ ಸಿದ್ಧರಿಲ್ಲದೆ, ತಾವು ಪ್ರತಿಪಾದಿಸುವ ಕಂದಾಚಾರದ, ಮೇಲು–ಕೀಳಿನ ಪ್ರತಿಪಾದನೆಯ ಮೌಲ್ಯಗಳಿಗೆ ಕಟ್ಟುಬಿದ್ದು ಬದುಕಿರಬೇಕೆಂದು ಆಗ್ರಹಪಡಿಸುವುದು ಜೀವ ವಿರೋಧಿಯಾದ ನಿಲುವು ಎಂಬುದನ್ನು ಮೊದಲು ಅರ್ಥಮಾಡಿಕೊಳ್ಳಬೇಕು.

ಈಗಿರುವ ಸನ್ನಿವೇಶದಲ್ಲಿ ಧರ್ಮ ಎನ್ನುವುದು ಕೇವಲ ಶ್ರದ್ಧೆಯ ವಿಷಯವಾಗಿ ಉಳಿದಿಲ್ಲ. ಈ ಮೊದಲೂ ಕೂಡ ಅದು ಕೇವಲ ಪಾರಲೌಕಿಕ ವಿಷಯಕ್ಕೆ ಸಂಬಂಧಿಸಿದ ಚಿಂತನೆಯಾಗಿತ್ತು ಎಂಬುದಕ್ಕೆ ಸಾಕಷ್ಟು ಸಮರ್ಥನೆಗಳಿಲ್ಲ. ಧರ್ಮ ನಿನ್ನೆಯ ರಾಜಕೀಯವಾಗಿತ್ತು. ರಾಜಕೀಯ ಇವತ್ತಿನ ಧರ್ಮವಾಗಿದೆ ಎಂಬ ಪ್ರಸಿದ್ಧ ಹೇಳಿಕೆಯಲ್ಲಿನ ವಾಸ್ತವಾಂಶವನ್ನು ನಾವು ಗ್ರಹಿಸಿಕೊಂಡರೆ ಧರ್ಮವೆನ್ನುವುದು ಅದರ ಪೋಷಾಕಿನಲ್ಲಿ ಅಧ್ಯಾತ್ಮಿಕತೆಯನ್ನು ಹೊಂದಿದ್ದರೂ ಅದರ ದೇಹ ರಚನೆಯಲ್ಲಿ ಲೌಕಿಕ ವ್ಯವಹಾರಗಳ ಚೌಕಟ್ಟನ್ನು ಹೊಂದಿರುತ್ತದೆನ್ನುವುದು ತಿಳಿಯುತ್ತದೆ. ಕೇವಲ ಆಧ್ಯಾತ್ಮ ಮಾತ್ರವಾಗಿದ್ದಿದ್ದರೆ ಅದು 'ದರ್ಶನ' ಅಥವಾ ತತ್ವಶಾಸ್ತ್ರವಾಗಿ ಮಾತ್ರ ಉಳಿದುಕೊಂಡಿರುತ್ತಿತ್ತು. ಆಧ್ಯಾತ್ಮಿಕ ದರ್ಶನವೊಂದು ಧರ್ಮದ ರೂಪ ಧರಿಸಿಕೊಂಡಾಗ ಅದರ ಮುಖ್ಯ ಸ್ವಭಾವ ಸಾಮಾಜಿಕ ವ್ಯವಹಾರವಾಗಿ ಮಾರ್ಪಡುತ್ತದೆ.

ಧರ್ಮ ಎನ್ನುವುದು ಒಂದು ಸಾಮಾಜಿಕ ಸಂಸ್ಥೆ. ಅದು ನಿರ್ವಹಣೆಗೊಳ್ಳುವುದಕ್ಕೆ ಬೇಕಾದ ಸಾಮಾಜಿಕ ಸಂರಚನೆಯಿಲ್ಲದೆ ಒಂದು ಸಂಸ್ಥೆಯಾಗಿ ಉಳಿದುಕೊಳ್ಳಲು ಸಾಧ್ಯವಿಲ್ಲ. ವಿವಿಧ ಸಾಮಾಜಿಕ ಸಂರಚನೆಗಳ ಮತ್ತು ಹಿತಾಸಕ್ತಿಗಳ ನಡುವಿನ ಸಂಘರ್ಷಗಳೇ ಧಾರ್ಮಿಕ ಸಂಘರ್ಷಗಳ ರೂಪದಲ್ಲಿ ಪ್ರಕಟಗೊಂಡವು ಎನ್ನುವುದನ್ನು ಡಿ ಡಿ ಕೋಸಾಂಬಿ ದ್ವೈತ–ಅದ್ವೈತ ಚಿಂತನೆಗಳ ನಡುವಿನ ಹೊಡೆದಾಟವನ್ನು ವಿಶ್ಲೇಷಿಸುವಾಗ ಹೇಳಿದ್ದಾರೆ. ಅದ್ವೈತಿಗಳಾದ ಶೈವರು ದ್ವೈತಿಗಳಾದ ವೈಷ್ಣವರು ಹೊಡೆದಾಡಿಕೊಂಡು ಪ್ರಾಣಬಿಟ್ಟದ್ದಕ್ಕೆ ಕೇವಲ ಆಧ್ಯಾತ್ಮಿಕ ಚಿಂತನೆಗಳಲ್ಲಿ ಇದ್ದ ಭೇದವೊಂದೇ ಕಾರಣವಾಗಿರಲಿಲ್ಲ. ಅವುಗಳು ಪ್ರತಿನಿಧಿಸುತ್ತಿದ್ದ ಊಳಿಗಮಾನ್ಯ ಸಮಾಜದೊಳಗಿನ ಭಿನ್ನ ವರ್ಗ ಹಿತಾಸಕ್ತಿಗಳು ಇಂತಹ ತೀವ್ರ ಸಂಘರ್ಷಕ್ಕೆ ಕಾರಣವಾಗಿದ್ದವು ಎನ್ನುವುದನ್ನು ಅವರು ಸೋದಾಹರಣವಾಗಿ ವಿವರಿಸಿದ್ದಾರೆ.

ಜೈನರು ಶೈವರ ನಡುವಿನ ಸಂಘರ್ಷ, ಶೈವರು ವೈಷ್ಣವರ ನಡುವಿನ ಸಂಘರ್ಷ, ಬೌದ್ಧರು ವೈದಿಕರ ನಡು

(45ನೇ ಪುಟಕ್ಕೆ)

ಚೋಮನ ದುಡಿಯ ಚೋಮ ಮತ್ತು ಗ್ರೆಗೋರಿ ಪತ್ರಾವೋ:
ಮತ್ತೆ ನೆನಪಾಗುವ ದೇವರಾಜ್ ಅರಸ್



ಕಾಲಮಾನ-೧೭

ಡಾ. ಮುಜಾಫ್ಫರ್ ಅಸ್ಸಾದಿ

ಗ್ರೆಗೊಗಿ ಪತ್ರಾವೋ ಚೋಮನಂತೆ ದಲಿತನಲ್ಲ, ಆದರೆ ಅವನಿಗಿದ್ದ ಕನಸು ಚೋಮನಿಗಿಂತ ವಿಭಿನ್ನವಲ್ಲ. ಚೋಮನಿಗೆ ಭೂಮಿಯನ್ನು ಉಳುಮೆ ಮಾಡುವ ಕನಸು ಇದ್ದರೆ ಗ್ರೆಗೋರಿಗೆ ತನ್ನ ಭೂಮಿಯನ್ನು ವಿಶೇಷ ಆರ್ಥಿಕ ವಲಯ ಹಾಗೂ ಎಂಆರ್ ಪಿಯಲ್ ಎಂಬ ದೈತ್ಯ ಕೈಗಾರಿಕೆಯಿಂದ ಉಳಿಸಿಕೊಳ್ಳಬೇಕಿತ್ತು. ವಿಚಿತ್ರ ವೆಂದರೆ ಇಬ್ಬರ ಭೂಮಿಯೂ ಫಲವತ್ತಾದ ಕೃಷಿ ಭೂಮಿ. ಇಬ್ಬರ ಹೋರಾಟವೂ ಒಂದು ದಿನದಲ್ಲಿ ಹುಟ್ಟಿದ ಹೋರಾಟವಲ್ಲ. ಗ್ರೆಗೋರಿಯ ಹೋರಾಟಕ್ಕೆ ಕಡಿಮೆ ಎಂದರೂ ೨೫ ವರುಷದ ಇತಿಹಾಸವಿದೆ. ಅವನು ಎರಡೆರಡು ಬಾರಿ ಭೂಮಿಯನ್ನು ಕಳೆದುಕೊಳ್ಳುತ್ತಾನೆ.

ಚೋಮ ಎಂದಾಗಾಲೆಲ್ಲ ಥಟ್ಟೆಂದು ನೆನಪಾಗುವುದು ಕಡಲ ತೀರದ ಭಾರ್ಗವರೆಂದು ಕರೆಯಲ್ಪಡುವ ಡಾ.ಶಿವರಾಮ ಕಾರಂತ. ಕಾರಂತಜ್ಜನ ಕಾದಂಬರಿಯ ನಾಯಕನೇ ಚೋಮ. ಈತ ಕಾರಂತರ ಕಾದಂಬರಿಯ ಕಾಲ್ಪನಿಕ ವ್ಯಕ್ತಿಯಾದರೂ, 1970ರ ದಶಕದ ತನಕ ಭೂಹೀನರನ್ನು, ಹಿಂದುಳಿದ ವರ್ಗಗಳನ್ನು, ದಲಿತರನ್ನು ಪ್ರತಿನಿಧಿಸುವ ವ್ಯಕ್ತಿ. ಅವನ ವಿಶೇಷ ಗುಣವೆಂದರೆ ಅವನು ತನ್ನ ಜೀವನ ಪೂರ್ತಿ ಜೀತ ಮಾಡುತ್ತಾ ಒಂದು ಕನಸನ್ನು ಕಾಣುತ್ತಾ ಹೋಗುತ್ತಾನೆ. ಆ ಕನಸು ಬೇರೆನು ಅಲ್ಲ ಅದು ತನ್ನ ಭೂಮಿಯಲ್ಲಿ ಉಳುಮೆ ಮಾಡುವ ಕನಸು. ಸಂಕಪ್ಪಯ್ಯನೆಂಬ ಭೂಮಾಲೀಕನಿಂದ ತೆಗೆದುಕೊಂಡ ಇಪ್ಪತ್ತು ರೂಪಾಯಿ ಸಾಲ ಅವನ ಜೀವನದ ದೊಡ್ಡ ಶಾಪವಾಗುತ್ತದೆ. ಅದಕ್ಕಿಂತಲೂ ದೊಡ್ಡ ದುರಂತವೆಂದರೆ ಅವನ ಮಕ್ಕಳ ದುರಂತಮಯ ಸಾವುಗಳು. ಅವನ ಮಗಳು ಬೆಳ್ಳಿಯನ್ನು ಕೈಯಾರೆ ಕೊಲ್ಲುತ್ತಾನೆ. ಒಬ್ಬ ಮಗ ಕಾಲಾರ ರೋಗದಿಂದ ಸಾಯುತ್ತಾನೆ. ಇನ್ನೊಬ್ಬ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದುತ್ತಾನೆ. ಇನ್ನೊಬ್ಬ ನೀರಿನಲ್ಲಿ ಮುಳುಗಿ ಸಾಯುತ್ತಾನೆ. ಇವೆಲ್ಲ ಅವನ ಕಣ್ಣೆದುರು ನಡೆಯುವ ಘಟನೆಗಳು. ಈ ದುರಂತಗಳ ನಡುವೆಯೂ ಅವನ ಕನಸು ಜೀವಂತವಾಗಿರುತ್ತದೆ. ತನ್ನ ಭೂಮಿಯಲ್ಲಿ ಉಳುವ ಕನಸು ಹಾಗೇನೆ ಉಳಿಯತ್ತದೆ. ಈ ಕನಸು ಭಗ್ನಗೊಂಡಾಗ ಅವನು ತನ್ನ ದುಡಿಯನ್ನು ಬಾರಿಸುತ್ತಾ ಹೋಗುತ್ತಾನೆ, ದುಡಿಯ ಬಡಿತದಲ್ಲಿ ಅವನ ಹತಾಶೆ, ಅವನ ಭಗ್ನಗೊಂಡ ಕನಸು, ದುಮ್ಮಾನ ಇತ್ಯಾದಿ ಅಡಗಿರುತ್ತದೆ.

ಇಂತಹ ಕತೆ ಈಗ ಸಿಗಲಾರದು, ಯಾಕೆಂದರೆ ಈ ಕತೆ ಬರೆದ ಕಾಲಮಾನಕ್ಕೂ ಇಂದಿನ ಸ್ಥಿತಿಗತಿಗೂ ಬಹಳ ವ್ಯತ್ಯಾಸವಿದೆ. ಇದನ್ನು ಬರೆದಾಗ ಭಾರತಕ್ಕೆ ಸ್ವಾತಂತ್ರ್ಯ ಇನ್ನೂ ಬಂದಿರಲಿಲ್ಲ. ಇದು ಬರೆದಾಗ ರಾಷ್ಟ್ರೀಯ ಕಾಂಗ್ರೆಸ್ ತನ್ನ ವಿವಿಧ ರಾಷ್ಟ್ರೀಯ ಸಮ್ಮೇಳನಗಳಲ್ಲಿ ಭೂಮಿಯ ಪ್ರಶ್ನೆಯನ್ನು ಚರ್ಚೆಗೆ ಎತ್ತಿಕೊಂಡಿರಲಿಲ್ಲ. ಆದರೆ ವಿಚಿತ್ರವೆಂದರೆ ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ಭಾರತದ ವಿವಿಧೆಡೆ ಗೇಣಿದಾರರ, ಭೂ ಹೀನರ ಹೋರಾಟಗಳು ಸಾಕಷ್ಟು ನಡೆಯುತ್ತಿದ್ದವು. ಅವುಗಳಲ್ಲಿ ಬಹುಮುಖ್ಯವಾದವು ಎಂದರೆ ಮಲಬಾರಿನ ಮಾಪಿಳ್ಳ ಹೋರಾಟ, ಗಾಂಧಿ ನಡೆಸಿದ ಚಂಪಾರಣ್, ಬಾರ್ಡೋಲಿ, ಹಾಗೂ ಖೇಡಾ ಹೋರಾಟ, ಉತ್ತರ ಪ್ರದೇಶದಲ್ಲಿ ನಡೆದ ಗೇಣಿದಾರರ ಹೋರಾಟ. ಇವೆಲ್ಲರ ನಡುವೆ ಗಾಂಧಿ ಗೇಣಿದಾರರು ಹಾಗೂ ಭೂಮಾಲೀಕರ ನಡುವೆ ಸಂಘರ್ಷಗಳಿಲ್ಲದೆ ಸಾಮರಸ್ಯದಲ್ಲಿ ಬಾಳಲು ವಾದಿಸುತ್ತಿದ್ದ ಕಾಲವದು. ಅಲ್ಲದೇ "ಸಬೀ ಭೂಮಿ ಗೋಪಾಲ್ ಕೀ" ಎಂಬ ವಾದವನ್ನು ಮುಂದಿಟ್ಟ ಕಾಲ. ವಾಸ್ತವವಾಗಿ ಚೋಮನ ದುಡಿಯನ್ನು ಕಾರಂತರು ಬರೆದ ಇಸವಿ 1931. ಇದರರ್ಥ ಕತೆಯ ವಸ್ತು ಆ ದಶಕಕ್ಕೆ ಮಾತ್ರ ಸೀಮಿತವಾಗಿತ್ತು ಎಂದರ್ಥವಲ್ಲ. ಆ ಕತೆ ದಿನನಿತ್ಯದ ಕತೆಯಾಗಿ 1970ರ ದಶಕದ ತನಕ ಚಾಲ್ತಿಯಲ್ಲಿತ್ತು. ಈ ದಶಕದ ತನಕ ಕರ್ನಾಟಕಾದ್ಯಂತ ನೂರಾರು, ಸಾವಿರಾರು ಚೋಮನ ಪ್ರತಿಚ್ಛಾಯಗಳಿದ್ದದ್ದು ಕೂಡ ಅಷ್ಟೇ ವಾಸ್ತವ.

ಹೆಚ್ಚು ಕಡಿಮೆ 40 ವರುಷ ನಂತರ, 2010 ಮತ್ತು 2011 ಸುಮಾರಿಗೆ ನಮ್ಮ ನಡುವೆ ಇನ್ನೊಬ್ಬ ಚೋಮನ ಆಗಮನವಾದದ್ದನ್ನು ಬಹಳಷ್ಟು ಜನ ಗಮನಿಸಲಿಲ್ಲವೆಂದೇ ಹೇಳಬೇಕು. ಇವನು ಕಾದಂಬರಿಯ ನಾಯಕನಾಗಿ, ಕಥಾನಕದ ಭಾಗವಾಗಿ ಬರಲಿಲ್ಲ ಹೊರತು ಮೂಳೆ ಮಾಂಸಗಳ ಜೀವಂತ ಚೋಮನಾಗಿ ಚರ್ಚೆಗಳಿಗೆ ಗ್ರಾಸನಾಗುತ್ತಾನೆ. ವಿಚಿತ್ರವೆಂದರೆ ಇವನು ಕೂಡ ಅದೇ ದಕ್ಷಿಣ ಕನ್ನಡ ಜಿಲ್ಲೆಯ ಕಲವಾರ್ ಹಳ್ಳಿಯಲ್ಲಿ ಹುಟ್ಟಿ ಬರುತ್ತಾನೆ. ಇವನು ಬೇರಾರು ಅಲ್ಲ, ಗ್ರೆಗೋರಿ ಪತ್ರಾವೋ ಎಂಬ ರೈತಾಪಿ.

ಗ್ರೆಗೊರಿ ಪತ್ರಾವೋ ಚೋಮನಂತೆ ದಲಿತನಲ್ಲ, ಆದರೆ ಅವನಿಗಿದ್ದ ಕನಸು ಚೋಮನಿಗಿಂತ ವಿಭಿನ್ನವಲ್ಲ. ಚೋಮನಿಗೆ ಭೂಮಿಯನ್ನು ಉಳುಮೆ ಮಾಡುವ ಕನಸು ಇದ್ದರೆ ಗ್ರೆಗೋರಿಗೆ ತನ್ನ ಭೂಮಿಯನ್ನು ವಿಶೇಷ ಆರ್ಥಿಕ ವಲಯ ಹಾಗೂ ಎಂಆರ್ ಪಿಯಲ್ ಎಂಬ ದೈತ್ಯ ಕೈಗಾರಿಕೆಯಿಂದ ಉಳಿಸಿಕೊಳ್ಳಬೇಕಿತ್ತು. ವಿಚಿತ್ರವೆಂದರೆ ಇಬ್ಬರ ಭೂಮಿಯೂ ಫಲವತ್ತಾದ ಕೃಷಿ ಭೂಮಿ. ಇಬ್ಬರ ಹೋರಾಟವೂ ಒಂದು ದಿನದಲ್ಲಿ ಹುಟ್ಟಿದ ಹೋರಾಟವಲ್ಲ. ಗ್ರೆಗೋರಿಯ ಹೋರಾಟಕ್ಕೆ ಕಡಿಮೆ ಎಂದರೂ 25 ವರುಷದ ಇತಿಹಾಸವಿದೆ. ಅವನು ಎರಡೆರಡು ಬಾರಿ ಭೂಮಿಯನ್ನು ಕಳೆದುಕೊಳ್ಳುತ್ತಾನೆ. ಮೊದಲನೆ ಬಾರಿಗೆ 52 ಸೆಂಟ್ಸ್ ಹಿಂದುಸ್ತಾನ್ ಪೆಟ್ರೋಲಿಯಂಗೆ ಕಳೆದುಕೊಂಡರೆ ಎರಡನೇ ಬಾರಿಗೆ ಅವನ ಉಳಿದ 14.7 ಎಕರೆಯಷ್ಟು ಭೂಮಿಯನ್ನು ಎಂಆರ್‌ಪಿಯಲ್‌ನ ಮೊದಲನೇ ಹಂತದ ಬೆಳವಣಿಗೆಗಾಗಿ ಕಳೆದುಕೊಳ್ಳುತ್ತಾನೆ. ಚೋಮ ಸಾಲಕ್ಕಾಗಿ ತನ್ನ ಭೂಮಿಯನ್ನು ಕಳೆದುಕೊಂಡರೆ ಗ್ರೆಗೋರಿ ಪತ್ರಾವೋ ದೇಶದ ಅಭಿವೃದ್ಧಿಯ ಹೆಸರಿನಲ್ಲಿ ಭೂಮಿ ಯನ್ನು ಕಳೆದುಕೊಳ್ಳುತ್ತಾನೆ

ಅವರಿಬ್ಬರ ಹೋರಾಟಗಳಿಗೆ ಒಂದು ಬಹು ಮುಖ್ಯವಾದ ವ್ಯತ್ಯಾಸವಿದೆ. ಚೋಮನ ಹೋರಾಟದ ಧ್ವನಿಗಳು "ದುಡಿ"ಯ ಮುಖಾಂತರ ವ್ಯಕ್ತವಾದರೆ, ಗ್ರೆಗೋರಿಯ ಹೋರಾಟ ಸತ್ಯಾಗ್ರಹ ಮೂಲಕ ವ್ಯಕ್ತವಾಯಿತು. ಅದು ಅಹಿಂಸಾ ರೂಪದಲ್ಲಿ ಹೆಚ್ಚು ಕಡಿಮೆ 3 ತಿಂಗಳಕಾಲ ನಡೆಯಿತು.. ಈ ಏಕ ವ್ಯಕ್ತಿ ಅಹಿಂಸಾ ಹೋರಾಟ ಎಂಆರ್‌ಪಿಯಲ್ ಕಂಪೆನಿಗೆ ಮಾಡಿದ ಒಟ್ಟು ನಷ್ಟ ಬರೋಬ್ಬರಿ 600 ಕೋಟಿ. ಇದನ್ನು ಕಂಪೆನಿಯೇ ಒಪ್ಪಿಕೊಂಡಿತ್ತು. ಚೋಮನಿಂದ ಇದು ಅಸಾಧ್ಯದ ಮಾತು. ಯಾಕೆಂದರೆ ಚೋಮನಿಗೆ ಬೇಕಾದ ಶಕ್ತಿ ಇರಲಿಲ್ಲ, ಬೆಂಬಲಿಗರಿಲ್ಲ, ಗಟ್ಟಿಯಾದ ಸಮುದಾಯವಿರಲಿಲ್ಲ ಗ್ರೆಗೋರಿಗೆ ಬೆಂಬಲಿಗರಿದ್ದರು.. ಸಮುದಾಯವೂ ಇತ್ತು.

ಗ್ರೆಗೋರಿಯ ಹೋರಾಟ ಅಭಿವೃದ್ಧಿಯ ಪರ್ವ ಕಾಲದಲ್ಲಿ ಹಾಗೂ . ಅಭಿವೃದ್ಧಿ ಪರಿಕಲ್ಪನೆಗಳ ಮುಖಾಮುಖಿ ಸಂದರ್ಭದಲ್ಲಿ ಹುಟ್ಟಿಕೊಂಡಿತ್ತು ಅಂದರೂ ತಪ್ಪಾಗಲಾರದು. ಚೋಮನಿದ್ದ ಕಾಲದಲ್ಲಿ ಅಭಿವೃದ್ಧಿಯ ಪರಿಕಲ್ಪನೆ ಇನ್ನೂ ಹುಟ್ಟಿಕೊಂಡಿರಲಿಲ್ಲ. ಸಾಮಾಜಿಕ ಸಂಬಂಧಗಳು ಫ್ಯೂಡಲ್(ಸರಂಜಾಮಶಾಹಿ) ಚೌಕಟ್ಟಿನೊಳಗೆ ಬೆಸೆದುಕೊಂಡಿದ್ದವು. ಆದ ಕಾರಣ ಚೋಮನಿಗೆ ಅಭಿವೃದ್ಧಿ ಒಂದು ಮರೀಚಿಕೆಯಾದರೆ, ಗ್ರೆಗೋರಿಗೆ ಅಭಿವೃದ್ಧಿ ಎಂಬುದು ಮುಖಾಮುಖಿ

ಯಾಗುವ ವಿಷಯ. ಈ ಮುಖಾಮುಖಿಯಲ್ಲಿ ಗ್ರೆಗೋರಿಯ ಐಡೆಂಟಿಯ ಪ್ರಶ್ನೆಗಳಿದ್ದವು. 160 ವರುಷ ದಿಂದಲೂ ಹೆಚ್ಚು ಕಾಲ ಬೇಸಾಯ ಮಾಡುತ್ತಾ ಬಂದಿದ್ದ ಭೂಮಿಯನ್ನು ಉಳಿಸಿಕೊಳ್ಳುವ ಹತಾಶ ಭಾವನೆ ಇತ್ತು. ಗತಕಾಲದ ವೈಭವವನ್ನು ಕಳೆದುಕೊಳ್ಳುವ ಭಯವಿತ್ತು, 600 ವರುಷಕ್ಕು ಹಳೆಯದಾದ ಮನೆಯನ್ನು ಉಳಿಸುವ ಅಧಮ್ಯ ಬಯಕೆ ಇತ್ತು. ಮಂಗಳೂರಿನ ವಿಶೇಷ ಆರ್ಥಿಕ ವಲಯದ ರಾಜಕಾರಣವನ್ನು ಪ್ರಶ್ನಿಸುವ ಹುಮ್ಮಸ್ಸಿತ್ತು.

ಇನ್ನೊಂದು ವ್ಯತ್ಯಾಸವೆಂದರೆ ಚೋಮ ಸ್ವತಂತ್ರ ನಾಗಿರಲಿಲ್ಲ. ಅವನ ಬಿಡುಗಡೆ ಅಥವಾ ಸ್ವಾತಂತ್ರ್ಯ ಅಷ್ಟು ಸುಲಭವಾಗಿರಲಿಲ್ಲ. ಅದು ಅವನ ಮಗಳ ಲೈಂಗಿಕ ಶೋಷಣೆಯ ಮೂಲಕ ಬಂದರೂ, ಅದು ಅವನಿಗೆ ಅಸಹನೀಯವಾಗುತ್ತದೆ.

ಇಷ್ಟೆಲ್ಲವಾದರೂ ಇವರಿಬ್ಬರೂ ಅಂತಿಮವಾಗಿ ಸೋತು ಹೋಗುತ್ತಾರೆ. ಇದರಲ್ಲಿ ಗ್ರೆಗೋರಿ ರಾಜಿಮಾಡಿ ಬಿಡುತ್ತಾನೆ. ಅವನ ಕತೆ ಈ ವರುಷದ ಜನವರಿಯಲ್ಲಿ ಮುಕ್ತಾಯವಾಗುತ್ತದೆ. ಚೋಮ ಹತಾಶೆಯಾಗಿ ಸಾಯುತ್ತಾನೆ. ದುರಂತವೆಂದರೆ ಇವರಿಬ್ಬರೂ ಅಂತಿಮವಾಗಿ ತಮ್ಮ ಭೂಮಿಯನ್ನು ಉಳಿಸಿಕೊಳ್ಳಲು ಅಸಫಲರಾಗುತ್ತಾರೆ.

ಈ ಇಬ್ಬರ ಕತೆ ಕೆಲವು ಪ್ರಶ್ನೆಗಳಿಗೆ ದಾರಿ ಮಾಡಿ ಕೊಡುತ್ತದೆ. ಚೋಮ ಹಾಗೂ ಗ್ರೆಗೋರಿ ಪತ್ರಾವೋರ ವರನ್ನು ಸೋಲಿನಿಂದ ಪಾರು ಮಾಡಲು ನಮಗೇಕೆ ಸಾಧ್ಯವಾಗಲಿಲ್ಲ? ಇವರಿಬ್ಬರು ಏನನ್ನು ಪ್ರತಿನಿಧಿಸುತ್ತಾರೆ? ಒಂದು ದೇಶದ ಅಭಿವೃದ್ಧಿಯನ್ನು ನಿರ್ಧರಿಸುವಲ್ಲಿ ಚೋಮ ಅಥವಾ ಗ್ರೆಗೋರಿ ಪತ್ರಾವೋರವರೇಕೆ ಇರುವುದಿಲ್ಲ? ವಿಶೇಷ ಆರ್ಥಿಕ ವಲಯಗಳು ಮಾಡಿದ ಅವಂತಾರಗಳೇನು? ಈ ಸಂದರ್ಭದಲ್ಲಿ ಮಾಜಿ ಮುಖ್ಯ ಮಂತ್ರಿ ದೇವರಾಜ್ ಅರಸ್ ಯಾಕೆ ಮತ್ತೆ ಮತ್ತೆ ನೆನಪಾಗುತ್ತಾರೆ?

ಭೂಮಿಯ ಪ್ರಶ್ನೆಯನ್ನ ಅಭಿವೃದ್ಧಿಯ ವೈರುಧ್ಯವಾಗಿ ವಾದಿಸಿದವರು ಎಡಪಂಥೀಯರು. ತೆಲಂಗಾಣ ದಿಂದ ಡಾಂತೇವಾಡದ ಹೋರಾಟದಲ್ಲಿ ಈ ವಿಷಯ ನಿಚ್ಚಳವಾಗಿ ಕಂಡು ಬಂದರೂ, ಪಾರ್ಲಿಮೆಂಟರಿ ಸಿದ್ಧಾಂತದಲ್ಲಿ ನಂಬಿಕೆ ಇಟ್ಟವರು ಇದರಿಂದ ಹೊರತಾಗಿರಲಿಲ್ಲ. ಪಶ್ಚಿಮ ಬಂಗಾಳದ ಎಡಪಂಥೀಯ ಸರಕಾರ ಭೂ ಮಸೂದೆಯನ್ನು ವಿಶಿಷ್ಟರೂಪದಲ್ಲಿ ಜಾರಿಗೊಳಿಸಿದ್ದು ತೆರೆದ ವಿಷಯ. ಅದನ್ನು "ಆಪರೇಷನ್ ಭರ್ಗ" ಎಂಬ ಹೆಸರಿನಲ್ಲಿ ಪಂಚಾಯತ್ ಮೂಲಕ ಅಳವಡಿಸಿದ್ದು ಒಂದು ಕ್ರಾಂತಿಕಾರಿ ಹೆಜ್ಜೆಯಾಯಿತಲ್ಲದೇ ಎಡಪಂಥೀಯರಿಗೆ ಇತ್ತೀಚಿನ ತನಕ ಒಂದು ರಾಜಕೀಯ ತಳಹದಿಯನ್ನು ನಿರ್ಮಿಸಿತ್ತು.

ಗಾಂಧಿವಾದಿಗಳು, ಸಮಾಜವಾದಿಗಳು, ಕಾಂಗ್ರೆಸಿಗರು ಕೂಡ ಇದರಿಂದ ಹೊರತಾಗಿರಲಿಲ್ಲ. ಆದರೆ ಅವರು ಎತ್ತಿದ ಪ್ರಶ್ನೆಗಳು ಸಾಕಷ್ಟು ದ್ವಂದ್ವಕ್ಕೆ ದಾರಿ ಮಾಡಿಕೊಟ್ಟಿದ್ದು ನಿರ್ವಿವಾದ. ವಿನೋಬಾ ಭಾವೆಯವರ ಭೂದಾನದ ರಾಜಕಾರಣವನ್ನು ಇಲ್ಲಿ ಉಲ್ಲೇಖಿಸಬೇಕಾಗಿರುವುದು ಅವಶ್ಯಕ. ಅವರ ಭೂದಾನ ಚಳುವಳಿ ಮೂಲತ:ವಾಗಿ ತೆಲಂಗಾಣ ಹೋರಾಟವನ್ನು ತಡೆಗಟ್ಟುವ ಅಜೆಂಡಾವನ್ನು ಹೊಂದಿದ್ದ ಕಾರಣ ಅದು ಸಫಲವಾಗಲಿಲ್ಲ. ಅಲ್ಲದೇ ಅದನ್ನು ಸೋಲಿಸಿದವರು ಬೇರಾರು ಅಲ್ಲ ಭೂಮಿಯನ್ನು ದಾನವಾಗಿ ನೀಡಿದ್ದ ಭೂಮಾಲೀಕರು.

ವಾಸ್ತವವಾಗಿ ಕಾಂಗ್ರೆಸ್‌ಗರು ಹಾಗೂ ಉದಾರವಾದಿಗಳು ಭೂಶಾಸನಗಳನ್ನು ಅತ್ಯಂತ ರೊಮ್ಯಾಂಟಿಕ್ ರೂಪದಲ್ಲಿ ನೋಡಿದರೆ, ದೇವರಾಜ್ ಅರಸ್ ಅದನ್ನು ವಿಭಿನ್ನವಾಗಿ ನೋಡಿದರು. ಕರ್ನಾಟಕ ದಲ್ಲಿ ಹೊಸ ರೂಪದ ಸಾಮಾಜಿಕ ಕ್ರಾಂತಿಯನ್ನೇ ತಂದವರು ಎನ್ನಬಹುದು. 1970ರ ದಶಕ ಕರ್ನಾಟಕದ ಸಂದರ್ಭದಲ್ಲಿ ಮಹತ್ವದ ಕಾಲ. ದೇವರಾಜ್ ಅರಸ್ ಇಡೀ ರಾಜಕಾರಣ ವನ್ನು ಬದಲಾಯಿಸಿದ ಕಾಲವದು. ಅವರ ರಾಜಕಾರಣ ಸಮಾಜವಾದಿಗಳ ಅಜೆಂಡಾವನ್ನೇ ಸಂಪೂರ್ಣವಾಗಿ ನಿರ್ನಾಮ ಮಾಡಿತ್ತು. ಅವರು ಜಾರಿಗೆ ತಂದ ಎರಡು ಮಹತ್ವದ ಕಾನೂನುಗಳು ಕರ್ನಾಟಕದ ರಾಜಕೀಯಕ್ಕೆ ಹೊಸತನ ವನ್ನು ನೀಡುತ್ತವೆ. ಇದರಲ್ಲಿ ಮೀಸಲಾತಿ ಒಂದಾದರೆ, "ಉಳುವವನೇ ಭೂ ಒಡೆಯ" ಇನ್ನೊಂದು.

ಕಾಂಗ್ರೆಸಿಗರ ಅಜೆಂಡಾಕ್ಕೆ ಕೆಲವು ಕಾರಣಗಳಿದ್ದವು. ಒಂದನೇದಾಗಿ ಪ್ರಾಥಮಿಕ ಭೂಮಾಲೀಕರು ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ವಸಹಾತುಶಾಹಿ ಪರವಾಗಿದ್ದದ್ದು ಇಲ್ಲಿ ನೆನಪಿಸಬೇಕು. ಎರಡನೇದಾಗಿ, 1936ರ ಸುಮಾರಿಗೆ ಕಾಂಗ್ರೆಸ್ ಕೂಡ ಭೂ ಮಸೂದೆ ಕುರಿತು ದೃಢವಾದ ನಿರ್ಣಯವನ್ನು ತೆಗೆದುಕೊಂಡಿತ್ತು. ಅದು ಕೂಡ ನೆಹರೂರವರ ಸಮಾಜವಾದಿ ಕಾಳಜಿಗಳು ಇಲ್ಲಿ ಕೆಲಸ ಮಾಡಿದ್ದವು. ಸ್ವಾತಂತ್ರ್ಯದ ನಂತರ ಕಾಂಗ್ರೆಸ್‌ಗೆ ತನ್ನ ಸಾಮಾಜಿಕ ತಳಹದಿಗಳನ್ನು ನಿರ್ಮಿಸಬೇಕಿತ್ತು. ಕೊನೆಯದಾಗಿ, ದೊಡ್ಡ ದೊಡ್ಡ ಭೂಮಾಲೀಕರು ಅಭಿವೃದ್ಧಿಯ ಪಥಕ್ಕೆ ತಡೆ ಎಂಬ ತಾತ್ವಿಕ ನಿಲುವು ಕೂಡ ಇಲ್ಲಿ ಕೆಲಸ ಮಾಡಿತ್ತು.

ಅದೇನೇ ಇದ್ದರೂ ಕರ್ನಾಟಕದಲ್ಲಿ ಸಮಾಜವಾದಿಗಳಿಗೆ ತಳಹದಿಯನ್ನು ನೀಡಿದ್ದು ಇದೇ ಚೋಮ ನಂತಹ ಗೇಣಿದಾರರು. ಆದರೆ 1970ರ ದಶಕದಲ್ಲಿ ಅವರ ಒಂದೇ ಒಂದು ಅಜೆಂಡಾವಾದ "ಗೇಣಿದಾರರಿಗೆ ಭೂಮಿ"ಯನ್ನು ಕಾಂಗ್ರೆಸ್ ಜಾರಿಗೆ ತಂದ ಕಾರಣ ಅವರ ಸಾಮಾಜಿಕ ತಳಹದಿಗಳು ನಷ್ಟವಾದದ್ದು ಎಲ್ಲರಿಗೆ ತಿಳಿದ ವಿಷಯ.

ಈ ಸಂದರ್ಭದಲ್ಲಿ ದೇವರಾಜ್ ಅರಸ್ ನೆನಪಾಗುವುದು ಸಹಜ. ಇದಕ್ಕೆ ಕಾರಣಗಳಿವೆ. ಅಭಿವೃದ್ಧಿ ಹಾಗೂ ಸಾಮಾಜಿಕ ನ್ಯಾಯ ಜೊತೆ ಜೊತೆಯಾಗಿ ಹೋಗಬೇಕೆಂದು ಪ್ರಪ್ರಥಮಬಾರಿಗೆ ವಾದಿಸಿದವರು ಅರಸ್‌ರವರು. ತೀವ್ರತರ ಎಡಪಂಥೀಯರು ಅಭಿವೃದ್ಧಿ ಸಂದರ್ಭದಲ್ಲಿ ಭೂ ಪ್ರಶ್ನೆಯನ್ನು ಅತ್ಯಂತ ಟೀಕಾತ್ಮಕವಾಗಿ ನೋಡಿದರೆ, ಅದನ್ನು ಹಿಂದುಳಿದವರ ದೃಷ್ಟಿಕೋನದಲ್ಲಿ ಸಾಮಾಜಿಕ ಗುರುತಿಸುವಿಕೆಯ ಭಾಗವಾಗಿ ಅರಸ್ ನೋಡಿದರು. ವಾಸ್ತವವಾಗಿ ಕಾಂಗ್ರೆಸ್‌ಗರು ಹಾಗೂ ಉದಾರವಾದಿಗಳು ಭೂಶಾಸನಗಳನ್ನು ಅತ್ಯಂತ ರೊಮ್ಯಾಂಟಿಕ್ ರೂಪದಲ್ಲಿ ನೋಡಿದರೆ, ದೇವರಾಜ್ ಅರಸ್ ಅದನ್ನು ವಿಭಿನ್ನವಾಗಿ ನೋಡಿದರು. ಕರ್ನಾಟಕ ದಲ್ಲಿ ಹೊಸ ರೂಪದ ಸಾಮಾಜಿಕ ಕ್ರಾಂತಿಯನ್ನೇ ತಂದವರು ಎನ್ನಬಹುದು.

1970ರ ದಶಕ ಕರ್ನಾಟಕದ ಸಂದರ್ಭದಲ್ಲಿ ಮಹತ್ವದ ಕಾಲ. ದೇವರಾಜ್ ಅರಸ್ ಇಡೀ ರಾಜಕಾರಣವನ್ನು ಬದಲಾಯಿಸಿದ ಕಾಲವದು. ಅವರ ರಾಜಕಾರಣ ಸಮಾಜವಾದಿಗಳ ಅಜೆಂಡಾವನ್ನೇ ಸಂಪೂರ್ಣವಾಗಿ ನಿರ್ನಾಮ ಮಾಡಿತ್ತು. ಅವರು ಜಾರಿಗೆ ತಂದ ಎರಡು ಮಹತ್ವದ ಕಾನೂನುಗಳು ಕರ್ನಾಟಕದ ರಾಜಕೀಯಕ್ಕೆ ಹೊಸತನವನ್ನು ನೀಡುತ್ತವೆ. ಇದರಲ್ಲಿ ಮೀಸಲಾತಿ ಒಂದಾದರೆ, "ಉಳುವವನೇ ಭೂ ಒಡೆಯ" ಇನ್ನೊಂದು. ಉಳುವವನೇ ಭೂ ಒಡೆಯ ತಂದ ಕಾನೂನು ಕ್ರಾಂತಿಕಾಗಿ ಹೆಜ್ಜೆ ಎಂದರೆ ತಪ್ಪಾಗಲಾರದು.

1974ರ ಭೂ ಮಸೂದೆ ಸಾಕಷ್ಟು ಪ್ರಗತಿಪರ ಅಂಶಗಳನ್ನು ಒಳಗೊಂಡಿತ್ತು. ದಲಿತರಿಂದ ದಲಿತೇತರಿಗೆ ಭೂ ಪರಭಾರೆಯನ್ನು ಹತ್ತು ವರುಷಗಳ ಕಾಲ ನಿಷೇಧಿಸಿತ್ತು, ಗೇಣಿ ಪದ್ಧತಿಯನ್ನು ನಿಷೇಧಿಸಿತ್ತು, ಭೂಮಿಯ ಗರಿಷ್ಟ ಮಿತಿಯನ್ನು ಕಡಿಮೆ ಮಾಡಿತ್ತು. ಭೂಮಿಯನ್ನು ಪುನರ್ ಸ್ವಾಧೀನ ಪಡಿಸುವುದನ್ನು ನಿಷೇಧಿಸಿತ್ತು. ಇದರೊಂದಿಗೆ ಹೆಚ್ಚುವರಿ ಭೂಮಿಯನ್ನು ಸ್ವಾಧೀನ ಪಡಿಸುವುದು ಅಲ್ಲದೇ ಹೆಚ್ಚುವರಿ ಭೂಮಿಯನ್ನು ಭೂ ರಹಿತರಿಗೆ ಹಂಚುವ ಅಂಶಗಳು ಕಾನೂನಿನಲ್ಲಿದ್ದವು. ಉಳುವವನೇ ಒಡೆಯ ಕಾನೂನನ್ನು ಜಾರಿಗೊಳಿಸಲು ದೇವರಾಜ್ ಅರಸ್ ಸರಕಾರಿ ನ್ಯಾಯಾಂಗವನ್ನಾಗಲೀ, ಅಧಿಕಾರ ಶಾಹಿವನ್ನಾಗಲೀ ಉಪಯೋಗಿಸಲಿಲ್ಲ. ಪಶ್ಚಿಮ ಬಂಗಾಳದಲ್ಲಿ ಪಂಚಾಯತ್‌ಗಳ ಮುಖಾಂತರ ಭೂ ಮಸೂದೆ ಕಾನೂನು ಜಾರಿಗೆ ತಂದಂತೆ ಕರ್ನಾಟಕದಲ್ಲಿ ಲ್ಯಾಂಡ್ ಟ್ರಿಬ್ಯೂನಲ್ ಮುಖಾಂತರ ದೇವರಾಜ್ ಅರಸ್ ಜಾರಿಗೆ ತಂದರು.

ಈ ಟ್ರಿಬ್ಯೂನಲ್‌ನಲ್ಲಿ ಪ್ರತೀ ಸಮುದಾಯಗಳಿಗೆ ಪ್ರಾತಿನಿಧ್ಯತೆಯನ್ನು ನೀಡಿದರು, ಅದರಲ್ಲಿ ದಲಿತರು, ಮಹಿಳೆಯರು ಹೊರತಾಗಿರಲಿಲ್ಲ. ಪ್ರಪ್ರಥಮ ಬಾರಿಗೆ ಹೆಚ್ಚು ಕಡಿಮೆ ಮೂರು ಲಕ್ಷಕ್ಕೂ ಹೆಚ್ಚು ಗೇಣಿದಾರರು ಭೂ ಒಡೆಯರಾದರು. ಖ್ಯಾತ ಚಿಂತಕರಾದ ಚಂದ್ರ ಪೂಜಾರಿ ಹೇಳುವಂತೆ," 1974 ರ ಕಾಯಿದೆ ಭೂ ರಹಿತರ ಆಸಕ್ತಿ ರಕ್ಷಿಸಲು ವಿಶೇಷ ಪ್ರಯತ್ನ ಮಾಡಿದೆ. ಹೆಚ್ಚುವರಿ ಭೂಮಿಯಲ್ಲಿ ದಲಿತ ಬುಡಕಟ್ಟು ಜನರಿಗೆ ಶೇಕಡಾ 60ರಷು ಹೋಗಿದೆ" (ಯಾಕೀಗ ಭೂಮಿ ಪ್ರಶ್ನೆ: 82). ಇದರ ಲಾಭದಿಂದ ಶಿವರಾಮ ಕಾರಂತರ ನೂರಾರು ಚೋಮರು ಹೊರತಾಗಿರಲ್ಲಿಲ್ಲ. 1970 ರ ದಶಕದಲ್ಲಿ ಚೋಮನಂತಹ ಗೇಣಿದಾರರಿಗೆ, ಭೂಹೀನರಿಗೆ, ದಲಿತರಿಗೆ ಹೊಸ ಸಾಮಾಜಿಕ ಅಸ್ಮಿತೆಯನ್ನು ದೇವರಾಜ್ ಅರಸ್ ನೀಡಿದ್ದನ್ನು ಮರೆಯಲಾಗದು. ಈ ಕಾಲದಲ್ಲಿ ಹಿಂದುಳಿದ ವರ್ಗಗಳು ಸಾಮಾಜಿಕವಾಗಿ ಗುರುತಿಸಲ್ಪಟ್ಟದ್ದು ಕೂಡ ಹೌದು.

ದುರಂತವೆಂದರೆ ಈ ಪ್ರಗತಿಪರ ಕಾನೂನು ಸಾವಿರಾರು ಜೋಮರನ್ನು ಜೀತದಿಂದ ಮುಕ್ತಿಗೊಳಿಸಿರಬಹುದು, ಆದರೆ ಅದು ದೇವರಾಜ್ ಅರಸ್‌ರವರಿಗೆ ಶಾಶ್ವತವಾದ ರಾಜಕೀಯ ತಳಹದಿಯನ್ನು ನೀಡಲೇ ಇಲ್ಲ. ಅಂದಿನ ಸಂದರ್ಭದಲ್ಲಿ ಅದೂ ಸಾಧ್ಯವೂ ಇರಲಿಲ್ಲ. ಯಾಕೆಂದರೆ ಶಾಸನಗಳನ್ನು ಅವರು ಅನುಷ್ಠಾನಗೊಳಿಸಿದ್ದು ಇಂದಿರಾರವರ ಹೆಸರಿನಲ್ಲಿ ಹಾಗೂ ಕಾಂಗ್ರೆಸ್‌ನ ಹೆಸರಿನಲ್ಲಿ. ಬಾಂಗ್ಲಾ ಯುದ್ಧದ ಜಯಭೇರಿ ನಂತರ ದೇವರಾಜ್ ಅರಸ್‌ರವರು ಇಂದಿರಾ ವ್ಯಕ್ತಿತ್ವದ ಎದುರು ಮುಖಾಮುಖಿಯಾಗಲು ಕಷ್ಟಸಾಧ್ಯವಿತ್ತು. ರಾಜಕಾರಣದಲ್ಲಿ ದೇವರಾಜ್ ಅರಸ್ ಜೋಮನಂತೆ ಸೋತು ಹೋದರೂ ಮತ್ತೆ ಮತ್ತೆ ನೆನಪಾಗುತ್ತಾರೆ.

ರಾಜಕೀಯ ರಂಗದಲ್ಲಿ ದೇವರಾಜ್ ಅರಸ್ 1980ರ ನಂತರ ಮರೆಯಾಗುತ್ತಾ ಹೋದರೂ, ಅವರು ಮತ್ತೆ ಮತ್ತೆ ನೆನಪಾಗುವುದು ಮೂರು ಸಂದರ್ಭದಲ್ಲಿ: 1995ರ ಭೂ ಮಸೂದೆಯ ಕಾಯಿದೆಯ ತಿದ್ದುಪಡಿಯ ಸಂದರ್ಭದಲ್ಲಿ, ವಿಶೇಷ ಆರ್ಥಿಕ ವಲಯಗಳ ಸ್ಥಾಪನೆಯ ಸಂದರ್ಭದಲ್ಲಿ ಹಾಗೂ ಆಧುನಿಕ ಜೋಮನಾಗಿರುವ ಗ್ರೆಗೋರಿಯ ಪತ್ರಾವೋನ ಅಹಿಂಸಾ ಚಳವಳಿಯ ಸಂದರ್ಭದಲ್ಲಿ.

ವಾಸ್ತವವಾಗಿ ದೇವರಾಜ್ ಅರಸ್‌ರವರ ಕನಸುಗಳು ಭಗ್ನಗೊಳ್ಳಲು ಹೆಚ್ಚು ಕಾಲ ಬೇಕಾಗಿರಲಿಲ್ಲ. ಇದರ ಆರಂಭಕ್ಕೆ ತಗಲಿದ ವರುಷಗಳು ಬರೇ 21 ವರುಷ. ಅದು ಆರಂಭಗೊಂಡದ್ದು ಜಾಗತೀಕ ಮಾರುಕಟ್ಟೆಗೆ ಕರ್ನಾಟಕ ಹಾಗೂ ಭಾರತ ತೆರೆದುಕೊಂಡ ಸಂದರ್ಭದಲ್ಲಿ. ಭಾರತದ ವಿವಿಧ ರಾಜ್ಯಗಳು ಭೂ ಮಸೂದೆಯಲ್ಲಿ ತಿದ್ದುಪಡಿಯನ್ನು ತರುತ್ತಿದ್ದ ಸಂದರ್ಭದಲ್ಲಿ ಕರ್ನಾಟಕದಲ್ಲೂ ಇದೇ ರೀತಿಯ ಬದಲಾವಣೆಗಳು ಆದವು. 1995ರ ಭೂ ಕಾಯಿದೆಯ ತಿದ್ದುಪಡಿಯಲ್ಲಿ ಇದನ್ನು ನೋಡಬಹುದು. ಈ ತಿದ್ದುಪಡಿ ಕಾರ್ಪೋರೆಟ್ ಭೂ ಮಾಲೀಕರನ್ನು, ನವ ಗೇಣಿದಾರರನ್ನು, ಕಾಂಟ್ರಕ್ಟ್ ರೈತರನ್ನು, ನಿರ್ಮಿಸಲು ಅವಕಾಶ ಮಾಡಿಕೊಟ್ಟಿದ್ದು ನಿರ್ವಿವಾದ. ಈ ತಿದ್ದುಪಡಿ ಸಾವಿರಾರು ಎಕರೆ ಭೂಮಿ ಪರಬಾರೆ ಮಾಡಲು ಅವಕಾ ಮಾಡಿಕೊಟ್ಟಿತ್ತು. ಈ ಬದಲಾವಣೆ ಜಾಗತೀಕರಣ ಹಾಗೂ ಅಭಿವೃದ್ಧಿಯ ಹೆಸರಿನಲ್ಲಿ ಬಂತು.

"ಪಬ್ಲಿಕ್ ಪರ್ಪಸ್" ಎಂಬ ಹೆಸರಿನಲ್ಲಿ ಸಾವಿರಾರು ರೈತರು, ಹಿಂದುಳಿದ ವರ್ಗಗಳು ತಮ್ಮ ಭೂಮಿಯನ್ನು ಕಳೆದು ಕೊಂಡದ್ದು ತೆರೆದ ಸಂಗತಿ. ಕೆಲವೊಮ್ಮೆ ಹಳ್ಳಿಗಳೂ ಕೂಡ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳಬೇಕಾದ ಸ್ಥಿತಿಗೆ ಬಂದವು. ಬಹುಷಃ ಹೊಸ ಹೊಸ "ಜೋಮ"ಗಳು ಇದೇ ಸಂದರ್ಭದಲ್ಲಿ ಹುಟ್ಟಿಕೊಂಡದ್ದು ಕೂಡ ಅಷ್ಟೇ ಸತ್ಯ. ಅದರಲ್ಲಿ ಗ್ರೆಗೋರಿ ಪತ್ರಾವೋ ಹೊರತಾಗಿರಲಿಲ್ಲ. ದೇವರಾಜ್ ಅರಸ್‌ರವರು ಇದೇ ಸಂದರ್ಭದಲ್ಲಿ ಸಾರ್ವಜನಿಕ ಸ್ಮೃತಿಗಳಿಂದ, ಚರ್ಚೆಗಳಿಂದ ಮರೆಯಾದರು. ಅವರು ತಂದ ಕಾನೂನುಗಳು ಸಂಪೂರ್ಣವಾಗಿ ಮೂಲ ಸ್ವರೂಪವನ್ನೇ ಕಳೆದುಕೊಂಡಿದ್ದವು.

ಇದಕ್ಕೆ ಪೂರಕಕಾಗಿ ಬಂದದ್ದು ವಿಶೇಷ ಆರ್ಥಿಕ ವಲಯಗಳು. ಕರ್ನಾಟಕದಲ್ಲಿ ಇದರ ರಾಜಕಾರಣ ಆರಂಭಗೊಂಡದ್ದು 2003ರಾದರೂ, ಇವತ್ತು ಕರ್ನಾಟಕ ಈ ಆರ್ಥಿಕ ವಲಯಗಳ ಬೆಳವಣಿಗೆಯಲ್ಲಿ ಅತ್ಯಂತ ಮಂಚೂಣಿಯಲ್ಲಿರುವ ರಾಜ್ಯ. ಇವತ್ತು ಕರ್ನಾಟಕದಲ್ಲಿ ಕಡಿಮೆ ಎಂದರೂ 30ಕ್ಕೂ ಹೆಚ್ಚು ವಲಯಗಳಿಗೆ. ಅವುಗಳಿಗೆ ನೀಡಿರುವ ಸೌಲಭ್ಯ ಹಾಗೂ ರಿಯಾಯತಿಗಳನ್ನು ಗಮನಿಸಿದರೆ ಸಾಕು, ಅವುಗಳ ಶಕ್ತಿ ಹಾಗೂ ಪ್ರಭಾವವನ್ನು ನೋಡಬಹುದು. ಕಾನೂನೇ ಹೇಳುವಂತೆ ಇವುಗಳು "ವಿದೇಶಿ ಪ್ರದೇಶಗಳು". ಇಲ್ಲಿ ಕಾರ್ಮಿಕ ಸಂಘಟನೆಗಳಿಗೆ ಅವಕಾಶಗಳಿಲ್ಲ. ಖಾಸಗಿ ಭದ್ರತೆಗೆ ಮಾತ್ರ ಅವಕಾವಿದೆ. ಇವುಗಳಿಗೆ ಪಂಚಾಯತ್ ರಾಜ್‌ನ ಯಾವುದೇ ಕಾನೂನು ಲಾಗುವಾಗುವುದಿಲ್ಲ. ವಾಸ್ತವವಾಗಿ ಆರ್ಥಿಕ ವಲಯಗಳು ಹುಟ್ಟಿಕೊಂಡದ್ದು ವಿದೇಶಿ ಬಂಡವಾಳವನ್ನು ಆಕರ್ಶಿಸಲು. ಆದಕಾರಣ ಇವುಗಳು "ತೀವ್ರತರ ಬಂಡವಾಳ"ಗಳ ಕೇಂದ್ರಗಳಾಗುತ್ತವೆ.

ಎರಡು ಕಾರಣಗಳಿಗಾಗಿ ಆರ್ಥಿಕ ವಲಯಗಳು ಬಹು ಮುಖ್ಯವಾಗುತ್ತವೆ, ಮೊದಲನೇದಾಗಿ ಅವುಗಳು ಪ್ರಾಂತ್ಯದೊಳಗೆ ಪ್ರಾಂತ್ಯಗಳನ್ನು ಸೃಷ್ಟಿಸುತ್ತವೆ. ಕರ್ನಾಟಕವನ್ನು ಇವತ್ತು ಹಳೆಯ ಪ್ರಾಂತ್ಯದ ರೂಪದಲ್ಲಿ, ಅದರಲ್ಲೂ ಹಳೆಯ ಮೈಸೂರು, ಹಳೆಯ ಬಾಂಬೇ ಪ್ರಸಿಡೆನ್ಸಿ ಇತ್ಯಾದಿಗಳ ರೂಪದಲ್ಲಿ ನೋಡಲು ಅಥವಾ ವ್ಯಾಖ್ಯಾನಿಸಲು ಸಾಧ್ಯವಿಲ್ಲ. ವಿಶೇಷ ಆರ್ಥಿಕ ವಲಯಗಳು ಕರ್ನಾಟಕವನ್ನು ಎರಡು ರೀತಿಯಾಗಿ ವಿಭಜಿಸಿವೆ: "ತೀವ್ರತರ ಬಂಡವಾಳ ಅಭಿವೃದ್ಧಿಯ ಪ್ರದೇಶಗಳು" ಹಾಗೂ "ತೀವ್ರತರ ಬಂಡವಾಳೇತರ ಪ್ರದೇಶಗಳು"

ಇದಕ್ಕಿಂತಲೂ ಮುಖ್ಯವಾಗಿರುವುದು ಆರ್ಥಿಕ ವಲಯ ಕಬಳಿಸುವ ಭೂಮಿಯ ವಿಸ್ತೀರ್ಣ, ಅದು ಕೆಲವೊಮ್ಮೆ ಹತ್ತು ಹಲವು ಹಳ್ಳಿಗಳನ್ನು ಕಬಳಿಸುವಷ್ಟು ಶಕ್ತಿಶಾಲಿಯಾಗಿರುವುದು ಸತ್ಯ. ನಂದಿಗುಡಿ ಒಂದೇ ಸಾಕು. ನಂದಿಗುಡಿ ವಿಶೇಷ ವಲಯ ಒಂದು ವೇಳೆ ಅನುಷ್ಠಾನಕ್ಕೆ ಬರುತ್ತಿದ್ದರೆ ಹೆಚ್ಚು ಕಡಿಮೆ 20 ಹಳ್ಳಿಗಳೇ ಭೂಪಟದಿಂದ ನಾಶವಾಗಿ ಹೋಗಿ ಬಿಡುತ್ತಿದ್ದವು.

ಗ್ರೆಗೋರಿ ಪತ್ರಾವೋ ಈ ಸಂದರ್ಭದಲ್ಲಿ ಬಹಳ ಮುಖ್ಯನಾಗುತ್ತಾನೆ. ಮಂಗಳೂರಿನ ವಿಶೇಷ ಆರ್ಥಿಕ ವಲಯಕ್ಕೆ ಬೇಕಾಗಿದ್ದದ್ದು ನಾಲ್ಕು ಸಾವಿರ ಎಕರೆ ಭೂಮಿ. ಇದು ಕೂಡ ಹೆಚ್ಚುಕಡಿಮೆ ಇಪ್ಪತ್ತಕ್ಕೂ ಹೆಚ್ಚು ಹಳ್ಳಿಗಳನ್ನು ಕಬಳಿಸುತ್ತಿದ್ದವು. ಪತ್ರಾವೋರನ್ನು ಹೊರತು ಪಡಿಸಿದರೆ ಉಳಿದವರು ಭೂಮಿಯನ್ನು ವಿಶೇಷ ಆರ್ಥಿಕ ವಲಯಕ್ಕೆ ಮಾರಿಕೊಂಡಿದ್ದರು. ಆದರೆ ಅವನು ತನ್ನ ಭೂಮಿಯನ್ನು ಮಾರಲು ತಯಾರಿರಲಿಲ್ಲ. ಯಾಕೆಂದರೆ ಅದರಲ್ಲಿ ಅವನ ಅಸ್ಮಿತೆ, ಸಂಸ್ಕೃತಿ, ಇತಿಹಾಸ ಸೇರಿ ಕೊಂಡಿತ್ತು. ಅಲ್ಲದೇ ಆರ್ಥಿಕ ವಲಯ ಕಣ್ಣಿಟ್ಟದ್ದು ಅವನ ಫಲವತ್ತಾದ ಕೃಷಿ ಭೂಮಿ ಮೇಲೆ ಹೊರತು ಖರಭ್, ಒಣ ಭೂಮಿಯ ಮೇಲಲ್ಲ. ಈ ವಿಶೇಷ ಆರ್ಥಿಕ ವಲಯದ ಮಾರುಕಟ್ಟೆ ರಾಜಕಾರಣದಲ್ಲಿ ದೇವರಾಜ್ ಅರಸ್‌ರ ಕನಸುಗಳು ಸಾಕಾರಗೊಳ್ಳುವುದೇ ಇಲ್ಲ. ಯಾಕೆಂದರೆ ಅವುಗಳು ಅರಸ್‌ರವರ ಧ್ವಂಸಗೊಂಡ ಆಶಯಗಳ ಮೇಲೆ ವ್ಯವಸ್ಥಿತವಾಗಿ ನಿರ್ಮಿತಿಯಾಗಿದ್ದವು

ಇದಕ್ಕಾಗಿಯೇ ದೇವರಾಜ್ ಅರಸ್ ಮತ್ತೆ ಮತ್ತೆ ನೆನಪಾಗುತ್ತಾರೆ. ನೂರಾರು "ಜೋಮ"ರಿಗೆ, ಹಿಂದುಳಿದ ವರ್ಗಗಳಿಗೆ ಸಾಮಾಜಿಕ ಐಡೆಂಟಿಟಿಯನ್ನು ಹಾಗೂ ಗುರುತಿಸುವಿಕೆಯನ್ನು ನೀಡಿದ ದೇವರಾಜ್ ಅರಸ್ ಗ್ರೆಗೋರಿ ಪತ್ರಾವೋಗೂ ಕೂಡ ಸಾಥ್ ನೀಡುತ್ತಿದ್ದರೋ ಏನೋ? ಎಡಪಂಥೀಯನಾಗದೇ ಪ್ರಗತಿಪರನಾಗುವುದಕ್ಕೆ ದೇವರಾಜ್ ಅರಸ್ ಇತಿಹಾಸಕ್ಕೆ ಉತ್ತಮ ಸಾಕ್ಷಿ ಅಲ್ಲದೇ ಮತ್ತೇನು? □

ಕಲ್ಯಾಣವೆಂಬ ಬೆಡಗು

(29ನೇ ಪುಟದಿಂದ)

ವರು ಕಲ್ಯಾಣದ ಹಾದಿ ಹಿಡಿಯುವಂತಾಗುತ್ತದೆ. ಕವಿರಾಜಮಾರ್ಗಕಾರ ಹೇಳಿದ ಆದರ್ಶನಾಡು, ಅನ್ಯ ವಿಚಾರವನ್ನು, ಅನ್ಯ ಧರ್ಮವನ್ನು ಸಹಿಸಿಕೊಳ್ಳುವ ಕ್ರಸ್ವರ ನಾಡು ಈ ಕಲ್ಯಾಣನಾಡು ಎಂಬುದು ನನ್ನ ಅಚಲವಾದ ನಂಬಿಕೆ.

ನಾನು ಎರಡು ವರ್ಷಗಳ ಕಾಲ ಗುಲ್ಬರ್ಗಾ ವಾಸಿಯಾಗಿದ್ದೆ. ಈ ಕಲ್ಯಾಣ ನಾಡಿನಲ್ಲಿ ಅನೇಕ ಗೆಳೆಯರನ್ನೂ ಸಂಪಾದಿಸಿದೆ. ಆಗ ಕನ್ನಡದ ಶ್ರೇಷ್ಠ ಕಥೆಗಾರರಲ್ಲೊಬ್ಬರಾದ ನಾಡೋಜ ಶಾಂತರಸರು ಗುಲ್ಬರ್ಗಾದಲ್ಲಿಯ ಮಗನ ಮನೆಯಲ್ಲಿ ವಾಸ್ತವ್ಯ ಹೂಡಿದ್ದರು. ನಮ್ಮ ಭೇಟಿ ಅವರ ಮನೆಯಲ್ಲಿ ಅನೂಚಾನವಾಗಿ ನಡೆಯುತ್ತಿತ್ತು. ಸಾಹಿತ್ಯದ ಚರ್ಚೆಗಳು ಸಹಜವಾಗಿದ್ದವು. ಗಜಲ್ ಹಾಡುಗಾರಿಕೆಯೂ ಆಗಾಗ ನಡೆಯುತ್ತಿತ್ತು. ಮಾತಿನ ನಡುವೆ ಒಮ್ಮೆಯಾದರೂ ಶಾಂತರಸರು ಭಾಲ್ಕಿ ಮಠವನ್ನು ನೆನೆಯಲೇಬೇಕಾಗಿತ್ತು. ಪೂಜ್ಯ ಚನ್ನಬಸವ ಪಟ್ಟದೇವರ ಸಾಹಸಗಳು, ರಜಾಕಾರರ ಹಾವಳಿಯಲ್ಲಿಯೂ ಅವರ ಕನ್ನಡ ಪ್ರೀತಿ ಅವರಿಂದಲೇ ನನಗೆ ತಿಳಿದದ್ದು. ಅವರ ಉತ್ತರಾಧಿಕಾರಿಯಾಗಿ ಪೂಜ್ಯಶ್ರೀ ಬಸವಲಿಂಗ ಪಟ್ಟದೇವರು ಆ ಪೀಠವನ್ನು ಅಲಂಕರಿಸಿರುವುದು ಬಸವ ಧರ್ಮದ ಭಾಗ್ಯ, ಕನ್ನಡಿಗರ ಪುಣ್ಯ ಎಂದುಕೊಂಡಿದ್ದೇನೆ. ಅಂತಹ ಈ ಪವಿತ್ರ ಕ್ಷೇತ್ರದಲ್ಲಿ ಸಮ್ಮೇಳನ ಜರುಗುತ್ತಿರುವುದು, ವಚನಗಳನ್ನು ತೊದಲುತ್ತಲೇ ಕವಿಯಾದ ನನ್ನನ್ನು ಸರ್ವಾಧ್ಯಕ್ಷನನ್ನಾಗಿ ಆರಿಸಿರುವುದು ನನ್ನ ಪುಣ್ಯವೇ ಸರಿ. ಇದು ನನ್ನ ವಿನಯವನ್ನು ಹೆಚ್ಚಿಸಿದೆ. ವಿನಯದ ಪರಾಕಾಷ್ಠೆಯನ್ನು ಮೆರೆಯುವ ಬಸವಣ್ಣನವರ ಭಕ್ತನ ಮನೆಯ ಶ್ವಾನವಾಗುತ್ತ ನನ್ನ ಪಯಣವಿರಲಿ, ಭಕ್ತನ ಎಡಗಾಲಿನ ಪಾದರಕ್ಷೆಯ ಕಿರುಕುಣಿಕೆಯಾಗುವ ಅರ್ಹತೆ ಬರಲಿ ಎಂದು ಬಯಸುತ್ತ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

(ಕಲ್ಯಾಣ ನಾಡಿನ ಶರಣ ಸಮ್ಮೇಳನ-2010, ಸರ್ವಾಧ್ಯಕ್ಷರ ಭಾಷಣ)

ಗ್ರಂಥಋಣ.

1. ಡಾ. ವೀರಣ್ಣ ರಾಜೂರ (ಸಂ)-ಸಂಕೀರ್ಣ ವಚನ ಸಂಪುಟ: ಒಂಬತ್ತು ಬಸವೋತ್ತರ ಯುಗ)-ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು-1993
2. ಡಾ. ವೀರಣ್ಣ ರಾಜೂರ (ಸಂ)-ಶಿವಶರಣೆಯರ ವಚನ ಸಂಪುಟ - ಕ.ಸಂ.ಇ. 1993
3. ಹಿರೇಮಲ್ಲೂರ ಈಶ್ವರನ್-ಬಸವಣ್ಣ ಹಾಗೂ ಲಿಂಗಾಯತ ಧರ್ಮ-ಪ್ರಿಯದರ್ಶಿನಿ ಪ್ರಕಾಶನ -1977.
4. ಎಲ್. ಬಸವರಾಜು (ಸಂ), ಅಲ್ಲಮನ ವಚನಗಳು: ಗೀತಾ ಬುಕ್ ಹೌಸ್, ಮೈಸೂರು-1969
5. ಹಿರೇಮಲ್ಲೂರು ಈಶ್ವರನ್, ಲಿಂಗಾಯತ, ಜೈನ ಮತ್ತು ಬ್ರಾಹ್ಮಣ ಧರ್ಮಗಳು: ಮತಗಳ ಒಂದು ತೌಲನಿಕ ಅಧ್ಯಯನ, ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು-1997
6. ಹಿರೇಮಲ್ಲೂರ್ ಈಶ್ವರನ್, ಲಿಂಗಾಯತ ಧರ್ಮ: ಒಂದು ಅಧ್ಯಯನ-ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು-1997.
7. ಡಿ.ಆರ್. ನಾಗರಾಜ್, ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ -ಅಕ್ಷರ ಪ್ರಕಾಶನ, ಹೆಗ್ಗೋಡು-1999.
8. ಡಾ. ಸಾವುಕಾರ್ ಎಸ್. ಕಾಂಬಳೆ, ಲಿಂಗಾಯತ ಅಸ್ಪೃಶ್ಯರು: ಒಂದು ಅಧ್ಯಯನ - ವೀರಶೈವ ಅಧ್ಯಯನ ಸಂಸ್ಥೆ.- ಶ್ರೀ ಜಗದ್ಗುರು ತೋಂಟದಾರ್ಯ ಮಠ, ಗದಗ-2003. □

ಸಾಮಾಜಿಕ ಪ್ರಕ್ರಿಯೆ

(41ನೇ ಪುಟದಿಂದ)

ವಿನ ಸಂಘರ್ಷ ಮುಂತಾದವುಗಳೆಲ್ಲ ಭಾರತದ ಇತಿಹಾಸದಲ್ಲಿ ಹೀಗೆ ಭಿನ್ನ ಸಾಮಾಜಿಕ ಹಿತಾಸಕ್ತಿಗಳ ನಡುವಿನ ಹೋರಾಟಗಳಾಗಿದ್ದವು ಎಂಬುದನ್ನು ಇದೇ ಹಾದಿಯಲ್ಲಿ ನಾವು ಅರ್ಥಮಾಡಿಕೊಳ್ಳಬಹುದು. ಒಂದು ಮತದಲ್ಲಿ ಇರುವುದಕ್ಕೆ ಅಥವಾ ಒಂದು ಮತ ತೊರೆಯುವುದಕ್ಕೆ ಲೋಕಾಸಕ್ತಿಯ ಪ್ರೇರಣೆಗಳು ಬಹಳ ದೊಡ್ಡ ಶಕ್ತಿಯಾಗಿ ಸಮಾಜದಲ್ಲಿ ಕೆಲಸಮಾಡಿವೆ. ಎಲ್ಲೋ ಅರಣ್ಯಗಳಲ್ಲಿ, ಗುಹೆಗಳಲ್ಲಿ ಸರ್ವಸಂಗ ಪರಿತ್ಯಾಗಿಯಾಗಿ ಬಾಳುವ ಸನ್ಯಾಸಿಗಳು, ಮುನಿಗಳು ತಮ್ಮ ತತ್ವ ಜಿಜ್ಞಾಸೆಯ ಕಾರಣಕ್ಕೆ ಮತ ಬದಲಿಸಿರಬಹುದೇ ಹೊರತು, ಒಂದು ಸಾಮಾಜಿಕ ಸನ್ನಿವೇಶದಲ್ಲಿ ಮತಧರ್ಮಗಳ ಅವಲಂಬನೆಯ ಹಿಂದಿನ ಪ್ರೇರಣೆಯಲ್ಲಿ ಹೆಚ್ಚಿನಂಶ ಲೌಕಿಕವಾದುದಾಗಿರುತ್ತದೆ.

ಈಗ ನಾವು ತಾಂತ್ರಿಕತೆಯ ಆಧುನಿಕ ಜೀವನದಲ್ಲಿ ಬದುಕುತ್ತಿದ್ದೇವೆ. ಇತಿಹಾಸದ ಕಾಲಘಟ್ಟಗಳಲ್ಲಿ ಇದ್ದಂತೆ ಬೇರೆ ಬೇರೆ ಧರ್ಮಗಳು ಖಚಿತವಾದ ವರ್ಗ ಹಿತಾಸಕ್ತಿಗಳ ಜೊತೆ ಈಗಲೂ ಸಮೀಕರಣಗೊಂಡಿವೆ ಎಂದು ನಿಶ್ಚಿತಗೊಳಿಸಿ ಹೇಳುವುದಕ್ಕೆ ಸಾಧ್ಯವಿಲ್ಲದಿರಬಹುದು. ಈಗ ಅದೇನಿದ್ದರೂ ಅವರವರ ನಂಬುಗೆಯ, ಅಭಿರುಚಿಯ ಪ್ರಶ್ನೆ. ಬಲಾತ್ಕಾರವಾಗಿ ಯಾರನ್ನೂ ಮತಾಂತರಿಸಲು ಕಾನೂನಿನಲ್ಲಿ ಅವಕಾಶವಿಲ್ಲ. ಪ್ರತಿಯೊಬ್ಬರಿಗೂ ತಮ್ಮ ಧರ್ಮವನ್ನು ಪ್ರಚಾರ ಮಾಡಲು ಹಕ್ಕಿದೆ. ಅದನ್ನು ಮೆಚ್ಚಿಕೊಳ್ಳುವವರು ಒಪ್ಪಿಕೊಳ್ಳುವವರು ಮತಾಂತರ ಹೊಂದುತ್ತಾರೆ ಅಥವಾ ಎಲ್ಲ ಧರ್ಮಗಳ ನೀತಿಸಾರವೂ ಒಂದೇ ಆಗಿದೆಯೆಂಬುದನ್ನು ಅರಿತು ಧರ್ಮಾತೀತ ಧಾರ್ಮಿಕತೆಯನ್ನು ಪಾಲಿಸುತ್ತಾರೆ.

ಆಮಿಷವೊಡ್ಡಿ ಮತಂತರಗೊಳಿಸಲಾಗುತ್ತಿದೆ ಎಂಬ ಆಕ್ಷೇಪಣೆಯಲ್ಲಿ ಹೆಚ್ಚಿನ ಹುರುಳಿಲ್ಲ. ಉಚಿತವಾಗಿ ಶಿಕ್ಷಣ ಕೊಡುತ್ತೇವೆ, ಉದ್ಯೋಗ ಕೊಡುತ್ತೇವೆ, ಮನೆ ಕಟ್ಟಿಸಿ ಕೊಡುತ್ತೇವೆ ಅಥವಾ ಉಚಿತವಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುತ್ತೇವೆ ಎಂದು ಹೇಳಿ ಕ್ರಿಶ್ಚಿಯನ್ನರು ಮತಾಂತರಕ್ಕೆ ಪ್ರೇರೇಪಿಸುತ್ತಿದ್ದಾರೆ ಎಂಬ ಆಪಾದನೆಗಳನ್ನು ಮಾಡಲಾಗುತ್ತದೆ. ಅದು ನಿಜವೇ ಆಗಿದ್ದಲ್ಲಿ, ಅದೇ ಅವಕಾಶಗಳನ್ನು ಹಿಂದೂ ಧರ್ಮದವರೂ ಒದಗಿಸಿಕೊಟ್ಟಲ್ಲಿ ಅವರು ಆಮಿಷಕ್ಕೊಳಗಾಗಿ ಮತಾಂತರಗೊಳ್ಳುವುದು ನಿಲ್ಲುತ್ತದೆಯಲ್ಲವೇ!

ಧರ್ಮ ಎಲ್ಲದಕ್ಕಿಂತ ಉನ್ನತವಾದುದು. ಲೌಕಿಕ ಆಸೆಗಳಿಗೆ ಮಾರುಹೋಗಿ ಅದನ್ನು ಬದಲಿಸಬೇಡಿ ಎಂದು ವಾದ ಮಾಡಿದರೆ ಅವಕಾಶ ವಂಚಿತರಿಗೆ ರುಚಿಸಲು ಸಾಧ್ಯವಿದೆಯೇ. ಹಾಗೊಂದು ವೇಳೆ ಅದು ಅಷ್ಟು ಮಹತ್ವದ್ದಾಗಿದ್ದರೆ ಅದು ಮತಾಂತರ ಹೊಂದಲು ಮನಸ್ಸು ಮಾಡುವವರಿಗೂ ಅರ್ಥವಾಗಬೇಕಿತ್ತಲ್ಲವೇ? ಬೇರೊಂದು ಧರ್ಮಕ್ಕೆ ಹೋದರೆ ಅಷ್ಟಾದರೂ ಲಾಭವಾಗುತ್ತದೆ, ಈ ಧರ್ಮದಲ್ಲೇ ಇದ್ದರೆ ನಮಗೆ ಸಿಕ್ಕುವುದೇನಿದೆ ಎಂದು ಕೆಳ ಜಾತಿಗಳ ಜನ ಕೇಳಿದರೆ ಏನು ಉತ್ತರ ಹೇಳಲು ಸಾಧ್ಯವಿದೆ? ಈ ಧರ್ಮದ ಚೌಕಟ್ಟಿನಲ್ಲಿ ನಮ್ಮ ಜಾತಿ ಪಂಗಡಗಳಿಗೆ ಕನಿಷ್ಠ ಸ್ಥಾನಮಾನ ನಿಗದಿಪಡಿಸಲಾಗಿದೆ, ಗರಿಷ್ಠ ಸೇವೆಯ ಕರ್ತವ್ಯ ಹೊರಿಸಲಾಗಿದೆ, ಈ ಧರ್ಮದ ದೇವರನ್ನು ನಾವು ಗುಡಿಯೊಳಗೆ ಬಂದು ಕಣ್ಣಾರೆ ನೋಡಲು ಅವಕಾಶವಿಲ್ಲ, ಕೈಯಾರೆ ಪೂಜಿಸುವುದಕ್ಕೆ ಅವಕಾಶವಿಲ್ಲ, ಎಲ್ಲರ ಜೊತೆ ಸಾಲಲ್ಲಿ ಕೂತು ಪ್ರಸಾದ ಸ್ವೀಕರಿಸಲು ಅವಕಾಶವಿಲ್ಲ ಎಂದು ಅಸ್ಪೃಶ್ಯ ಜಾತಿಗಳು ಪ್ರಶ್ನೆ ಕೇಳಬಾರದೆಂದಿದೆಯೇ? ಬೇರೆ ಧರ್ಮಗಳಲ್ಲಿ ಸರ್ವ ಸಮಾನತೆ ಇಲ್ಲದಿರಬಹುದು, ಆದರೆ ಕನಿಷ್ಠ ಸಮಾನತೆಯಾದರೂ ಇದೆಯೆಂದು ಅವರಿಗೆ ಅನ್ನಿಸಿದರೆ ತಪ್ಪೆಂದು ವಾದಿಸಲು ಸಾಧ್ಯವಿದೆಯೇ?

ಯಾವುದಾದರೂ ಧರ್ಮದಲ್ಲಿ ಇರುವುದು ಬಿಡುವುದು ಸಂಬಂಧಪಟ್ಟವರಿಗೆ ಬಿಟ್ಟಿದ್ದು. ಹಾಗೆ ಮಾಡಬಾರದು ಎಂದು ಹೇಳುವವರಿಗೆ ಇರುವ ಸಮರ್ಥನೆ ಏನು? ಇದು ಮೊದಲಿನಿಂದಲೂ ಬಂದಿದ್ದು, ಇದು ನಮ್ಮ ಸಂಸ್ಕೃತಿ, ನಮ್ಮ ತಾತ ಮುತ್ತಾತಂದಿರ ಕಾಲದಿಂದಲೂ ಇದೇ ನಮ್ಮನ್ನು ಕಾಪಾಡಿದ್ದು ಎನ್ನುವ ತರ್ಕಗಳು ತಾನೆ? ನಿನ್ನೆಯವರೆಗೆ ಅದು ನಾನೇ ಪ್ರತಿಪಾದಿಸಿದ ಧರ್ಮವಾಗಿದ್ದರೂ ಸರಿ, ಇವತ್ತಿನ ಚಿಂತನೆಯಲ್ಲಿ ಅದು ತಪ್ಪು ಎನ್ನಿಸಿದರೆ ಅದನ್ನು ಬದಲಿಸುವ ಹಕ್ಕಿರಬೇಕಾದುದು ಎಲ್ಲ ನಾಗರಿಕ ಸಮಾಜಗಳ ಅಗತ್ಯ.

ಮತಾಂತರದಿಂದಾಗಿ ಹಿಂದೂಧರ್ಮ ಅಲ್ಪಸಂಖ್ಯಾತ ಧರ್ಮವಾಗಿಬಿಡುತ್ತದೆ, ಬೇರೆ ಧರ್ಮೀಯರು ನಮ್ಮನ್ನು ಆಕ್ರಮಿಸಿಕೊಂಡುಬಿಡುತ್ತಾರೆ ಎನ್ನುವ ಭಯಭ್ರಾಂತಿ ಹರಡುವ ಮುಖಾಂತರ ಹಿಂದೂ ಧರ್ಮ ಕಾಪಾಡಲು ಕೆಲವರು ನೋಡುತ್ತಿದ್ದಾರೆ. ಈ ಧರ್ಮ ಭಾರತದಲ್ಲಿ ಬಹುಸಂಖ್ಯಾತರ ಧರ್ಮವಾಗಿರುವುದರಿಂದ ಲಾಭವಾಗಿರುವುದು ಯಾವ ಜನವರ್ಗಗಳಿಗೆ, ಶೋಷಣೆಯಾಗಿರುವುದು ಯಾವ ಜನವರ್ಗಗಳಿಗೆ ಎಂಬುದನ್ನು ಬಿಡಿಸಿ ನೋಡದ ಹೊರತು ಈ ಪೊಳ್ಳು ಬೆದರಿಕೆಗಳನ್ನು ಪರಿಗಣಿಸಲು ಸಾಧ್ಯವಿಲ್ಲ. ಧರ್ಮವನ್ನು ಬಿಡಬೇಡಿ, ಆಮಿಷಕ್ಕೆ ಬಲಿಯಾಗಿ ಮತಾಂತರಗೊಳ್ಳಬೇಡಿ ಎಂದು ವಾದಿಸುತ್ತಿರುವವರು ಯಾವ ಸಾಮಾಜಿಕ ಸ್ತರಕ್ಕೆ ಸೇರಿದವರು ಹಾಗೂ ಧರ್ಮ ಬಿಟ್ಟು ಹೋಗುತ್ತಿದ್ದಾರೆಂಬ ಆಪಾದನೆಗೆ ಗುರಿಯಾಗುತ್ತಿರುವವರು ಯಾವ ಸಾಮಾಜಿಕ ಸ್ತರಗಳಿಗೆ ಸೇರಿದವರು ಎಂಬುದನ್ನು ತಾಳೆ ನೋಡದೆ ಮತಾಂತರದ ವಿಷಯವನ್ನು ಅರ್ಥಮಾಡಿಕೊಳ್ಳುವುದು ಕಷ್ಟ.

ಸಂಸ್ಕೃತಿ, ವಿಚಾರ, ಆಚಾರ, ನಂಬಿಕೆ ಯಾವುದೂ ನಿಂತ ನೀರಲ್ಲ. ಅವು ಬದಲಾಗುತ್ತಲೇ ಬೆಳೆದಿವೆ. ಬದಲಾಗುತ್ತಲೇ ಹೋಗುತ್ತವೆ. ಯಜ್ಞಯಾಗಾದಿಗಳ ಹೆಸರಿನಲ್ಲಿ ಪಶುಬಲಿ ಕೊಡುತ್ತಿದ್ದ ವೈದಿಕ ಧರ್ಮದ ವಾರಸುದಾರರೇ ಇಂದು ಕುಂಬಳಕಾಯಿ ಒಡೆಯುವ ಹಾಗೂ ನಿಂಬೆಹಣ್ಣು ಕೊಯ್ಯುವ ಬದಲಾವಣೆಗೆ ಒಳಗಾಗಿದ್ದಾರೆ. ವೇದ ಪುರಾಣಗಳಲ್ಲಿ ಶಾಸ್ತ್ರಸಂಹಿತೆಗಳಲ್ಲಿ ಕಂಡುಬರದ 'ಹಿಂದೂ ಧರ್ಮ' ಎಂಬ ನಾಮಧೇಯವನ್ನು ಕೊಟ್ಟುಕೊಂಡಿದ್ದಾರೆ. ಹಾಗಿರುವಾಗ ಯಾರಾದರೂ ತಮ್ಮಿಚ್ಛೆಯಂತೆ ಮತ್ತೊಂದು ಹೆಸರಿನ ಧರ್ಮವನ್ನು ಅಥವಾ ಧಾರ್ಮಿಕಾಚರಣೆಯನ್ನು ಒಪ್ಪಿಕೊಳ್ಳುವುದನ್ನು ತಡೆಯಬೇಕೆಂದು ಹೇಳಿದರೆ ಅದು ನ್ಯಾಯಧರ್ಮದ ಮಾತಾಗುತ್ತದೆಯೇ? □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

ಯುನೈಟೆಡ್ ಸ್ಟೇಟ್ಸ್ ಆಫ್ ಇಂಡಿಯಾ!

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಎಸ್. ಮರಿಸ್ವಾಮಿ

ಅಮೆರಿಕವನ್ನು ಗೆಳೆಯನಾಗಿ ಹೊಂದುವುದು ಮುಖ್ಯವೆಂದು ಡಾ॥ಅಂಬೇಡ್ಕರರು ಅರಿತಿದ್ದರು.

ಎರಡನೆ ಮಹಾಯುದ್ಧದ ನಂತರ (1939-1945) ಜಗತ್ತು ಇಬ್ಭಾಗವಾಯಿತು. ಒಂದು ಭಾಗಕ್ಕೆ ಹಿಂದಿನ ಯು.ಎಸ್.ಎಸ್‌ಆರ್ ಮತ್ತು ಮತ್ತೊಂದು ಭಾಗಕ್ಕೆ ಯು.ಎಸ್ ನಾಯಕರಾಗಿದ್ದವು. ಯುದ್ಧವು 'ಆಕ್ಸಿಸ್' ಶಕ್ತಿಗಳು ಅಂದರೆ ಜರ್ಮನಿ, ಜಪಾನ್ ಮತ್ತು ಇಟಲಿ ಮತ್ತು 'ಅಲ್ಲೀಡ್' ಪಡೆಗಳು ಅಂದರೆ ಬ್ರಿಟನ್, ಫ್ರಾನ್ಸ್, ಯು.ಎಸ್, ಹಿಂದಿನ ಯು.ಎಸ್.ಎಸ್‌ಆರ್, ಮತ್ತು ಸ್ವಲ್ಪ ಮಟ್ಟಿಗೆ ಚೈನ ಇವುಗಳ ಮಧ್ಯೆ ನಡೆಯಿತು. ಜಗತ್ತಿನ ಎಲ್ಲಾ ದೇಶಗಳೂ ಒಂದಲ್ಲ ಒಂದು ರೀತಿಯಲ್ಲಿ ಈ ಯುದ್ಧದೊಳಗೆ ಎಳೆಯಲ್ಪಟ್ಟಿದ್ದುವು ಮತ್ತು ಸಾವು ನೋವಿಗೆ ತುತ್ತಾದುವು.

ಕೆಲವು ಚಿಂತಕರು ಬ್ರಿಟನ್, ಯು.ಎಸ್ ಮತ್ತು ಫ್ರಾನ್ಸ್ ಪ್ರಭಲವಾಗಿ ಆಕ್ರಮಿಸಿಕೊಂಡಿದ್ದ ಜಗತ್ತಿನ ಮಾರುಕಟ್ಟೆಯಲ್ಲಿ ಜರ್ಮನಿ, ಇಟಲಿ ಮತ್ತು ಜಪಾನ್ ಭಾಗ ಕೇಳಿದ್ದರಿಂದ ಎರಡನೆ ಮಹಾಯುದ್ಧ ನಡೆಯಿತು ಎನ್ನುತ್ತಾರೆ.

ಬಂಡವಾಳಶಾಹಿ ರಾಷ್ಟ್ರಗಳಾದ ಬ್ರಿಟನ್, ಫ್ರಾನ್ಸ್ ಮತ್ತು ಯು.ಎಸ್‌ಗಳಂತ ರಾಷ್ಟ್ರಗಳ ಜೊತೆ ಹಿಂದಿನ ಯು.ಎಸ್.ಎಸ್‌ಆರ್ ನಂತ ಕಮ್ಯೂನಿಸ್ಟ್ ರಾಷ್ಟ್ರ ಹೇಗೆ ಈ ಯುದ್ಧದಲ್ಲಿ ಕೈ ಜೋಡಿಸಿತು ಎಂಬುದು ಅನೇಕ ಯುವ ಓದುಗರಿಗೆ ನಿಗೂಢವೆನಿಸಬಹುದು. ಅಡಾಲ್ಫ್ ಹಿಟ್ಲರ್ ಶ್ರೇಷ್ಠವೆಂದುಕೊಂಡಿದ್ದ ಎಲ್ಲ ವಸ್ತುಗಳೂ ಮನುಕುಲಕ್ಕೆ ಕೆಟ್ಟದಾಗಿತ್ತು. 'ಆಕ್ಸಿಸ್' ಶಕ್ತಿಗಳ ನಾಯಕನಾಗಿ ಅವನು ಬಂಡವಾಳಶಾಹಿ ಮತ್ತು ಸಮಾಜವಾದಿ ಶಕ್ತಿಗಳ ನಾಶವನ್ನು ತನ್ನ ಗುರಿಯಾಗಿಸಿಕೊಂಡ. ಕೊನೆಯಲ್ಲಿ ಎಲ್ಲವನ್ನೂ ಕಳೆದುಕೊಂಡ.

ಎರಡನೇ ಮಹಾಯುದ್ಧದಲ್ಲಿ ಮತ್ತು ನಂತರ ಉಂಟಾದ ಬೆಳವಣಿಗೆಗಳು ಪೂರ್ವ ಯುರೋಪ್ ಮತ್ತು ಪೂರ್ವ ಏಷ್ಯದ ಮೇಲೆ ತಮ್ಮ ಪರಿಣಾಮ ಬೀರಿದುವು. 'ಆಕ್ಸಿಸ್' ಶಕ್ತಿಗಳನ್ನು ಸೋಲಿಸಿದ ಕೂಡಲೆ ಯಾವ ಯಾವ ವಲಯಗಳಲ್ಲಿ ಯಾರ್‍ಯಾರು ಪ್ರಭಾವ ಹೊಂದಬೇಕೆಂಬುದರ ಬಗ್ಗೆ 'ಅಲ್ಲೀಡ್' ಶಕ್ತಿಗಳಲ್ಲಿ ಒಳ ಜಗಳ ಉಂಟಾಯಿತು. 'ಆಕ್ಸಿಸ್' ಶಕ್ತಿಗಳಿಂದ ಸೋವಿಯತ್ ಯೂನಿಯನ್ ಸ್ವತಂತ್ರಗೊಳಿಸಿದ ಪೂರ್ವ ಯೂರೋಪ್‌ನ ಬಹು ಭಾಗ ಕಮ್ಯೂನಿಸ್ಟ್‌ಮಯವಾಯಿತು. ಪಶ್ಚಿಮ ಯೂರೋಪ್ ಬಂಡವಾಳಶಾಹಿಯಾಯಿತು.

ಪೂರ್ವ ಏಷಿಯಾ ಅಂದರೆ ಚೈನ ಮತ್ತು ಕೊರಿಯಾ, ಯು.ಎಸ್ ಮತ್ತು ಸೋವಿಯತ್ ಯೂನಿಯನ್ ನಡುವೆ ಸ್ಪರ್ದೆಯ ಕೇಂದ್ರಗಳಾದವು. ಮಾವೊತ್ಸೆ ತುಂಗನ ಹೊಸ ಪ್ರಜಾತಾಂತ್ರಿಕ ಕ್ರಾಂತಿ ಅಂದರೆ ಪಾರಂಪರಿಕವಲ್ಲದ ಕಮ್ಯೂನಿಸ್ಟ್ ಕ್ರಾಂತಿ ಚೈನಾದಲ್ಲಿ ಯಶಸ್ವಿಯಾಗಿತ್ತು. ಚೈನಾದ ಹಿಂದಿನ ನಾಯಕ ಚಿಯಾಂಗ್ ಕೈ-ಷೇಕ್ ಚೈನಾದ ಭಾಗವಾಗಿದ್ದ ಟೈವಾನ್ ಎಂಬ ದ್ವೀಪವನ್ನು ತನ್ನ ದೇಶವನ್ನಾಗಿ ಮಾಡಿಕೊಂಡನು.

ಎರಡನೇ ಮಾಹಾಯುದ್ಧದ ಸಮಯದಲ್ಲಿ ಮತ್ತು ನಂತರ 'ಅಲ್ಲೀಡ್' ಶಕ್ತಿಗಳ ಬೆಂಬಲದಿಂದ ಟೈವಾನನ್ನು ಪ್ರತ್ಯೇಕ ರಾಷ್ಟ್ರ ಎಂದು ಒಪ್ಪಿಕೊಳ್ಳಬೇಕಾಯಿತು. ಏಕೆಂದರೆ ಚಿಯಾಂಗ್ ಕೈ ಶೇಖನು 'ಅಲ್ಲೀಡ್' ಗುಂಪನ್ನು ಬೆಂಬಲಿಸಿದ್ದು ಉತ್ತರ ಅಮೆರಿಕ ಚಿಯಾಂಗ್ ಕೈ ಶೇಖನನ್ನು ಚೀನಾ ಜನರ ನಿಜವಾದ ಪ್ರತಿನಿಧಿ ಎಂದು ಗುರುತಿಸಿ ಅವನೊಡನೆ ಸೇರಿಕೊಂಡಿತು. ಆಗ ಅದು ಮಾವುತ್ಸೆ ತುಂಗನ ಆಡಳಿತ ಕೊನೆಯಾಗುತ್ತದೆ ಎಂದು ನಂಬಿತ್ತು.

ಸಂಯುಕ್ತ ರಾಷ್ಟ್ರ ಸಂಸ್ಥೆ ಅಕ್ಟೋಬರ್ 1945ರಲ್ಲಿ ಯುದ್ಧ ಮುಗಿದ ಎರಡು ತಿಂಗಳ ನಂತರ ಅಸ್ಥಿತ್ವಕ್ಕೆ ಬಂತು. ಸಂಸ್ಥೆಯ ರಕ್ಷಣಾ ಮಂಡಳಿಯ ಪ್ರಮುಖವಾದ ಶಾಶ್ವತ ಪ್ರತಿನಿಧಿಗಳ ಸ್ಥಾನವನ್ನು ಯು.ಎಸ್, ಯು.ಎಸ್.ಎಸ್.ಆರ್, ಬ್ರಿಟನ್, ಫ್ರಾನ್ಸ್ ಮತ್ತು ಚೈನಾ ಇವು ಪಡೆದುವು. ಒಂದು ರಾಷ್ಟ್ರ ತನ್ನದೇ ಪ್ರಜೆಗಳ ಮೇಲೆ ಅಥವಾ ಬೇರೊಂದು ರಾಷ್ಟ್ರದ ಮೇಲೆ ಯುದ್ಧ ಮಾಡಿದರೆ ಅದನ್ನು ಯಾರು ತಡೆಯಬೇಕು? ರಾಷ್ಟ್ರಗಳ ಮಧ್ಯದ ಇಂತಹ ತಂಟೆ ತಕರಾರುಗಳನ್ನು ತಡೆಯುವ ಜಗತ್ತಿನ ವ್ಯವಸ್ಥೆಯಾಗಿ ಸಂಯುಕ್ತರಾಷ್ಟ್ರ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಶಾಶ್ವತ ಪ್ರತಿನಿಧಿಗಳು ವೀಟೋ ಶಕ್ತಿಯನ್ನು ಹೊಂದಿದ್ದು ಜಗತ್ತನ್ನು ಯುದ್ಧಗಳಿಂದ ರಕ್ಷಿಸುವ ಜವಾಬ್ದಾರಿಯನ್ನು ತಮ್ಮ ಮೇಲೆ ತೆಗೆದುಕೊಂಡವು. ಸಂಯುಕ್ತರಾಷ್ಟ್ರ ಸಂಸ್ಥೆಯ ಎಲ್ಲ ಅಂಗಗಳಲ್ಲಿ ಚೈನಾದ ಸ್ಥಾನವನ್ನು ಪ್ರಾರಂಭದಿಂದಲೂ ರಿಪಬ್ಲಿಕ್ ಆಫ್ ಚೈನಾ ಆಕ್ರಮಿಸಿತ್ತು. ನಂತರ 1971ರಲ್ಲಿ ಆ ಸ್ಥಾನವನ್ನು ಪೀಪಲ್ಸ್ ರಿಪಬ್ಲಿಕ್ ಆಫ್ ಚೈನಾ ಪಡೆಯಿತು. ಹೀಗೆ ಕಮ್ಯೂನಿಸ್ಟ್ ಚೈನಾ ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ತನ್ನ ಸ್ಥಾನವನ್ನು ಮತ್ತು ರಕ್ಷಣಾ ಮಂಡಳಿಯಲ್ಲಿ ಶಾಶ್ವತ ಸದಸ್ಯತ್ವವನ್ನು ಕಳೆದುಕೊಂಡಿತು.

ಕಮ್ಯೂನಿಸ್ಟ್ ಜಗತ್ತನ್ನು ಬಿಟ್ಟರೆ ಟೈವಾನ್ ಮೇಲೆ ಚೈನಾದ ನ್ಯಾಯಯುತ ಹಕ್ಕನ್ನು ಬೆಂಬಲಿಸಿದ ರಾಷ್ಟ್ರವೆಂದರೆ ಇಂಡಿಯಾ ಒಂದೇ. ಯು.ಎಸ್ ನಾಯಕತ್ವದ ಬಂಡವಾಳಶಾಹಿ ಗುಂಪು ಆಗ ಇಂಡಿಯಾದ ನಡೆಯ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿತ್ತು. ಏಕೆಂದರೆ ಎಲ್ಲಾ ರಾಷ್ಟ್ರಗಳೂ ತಮ್ಮದೆ ವಿದೇಶಾಂಗ ನೀತಿಯನ್ನು ತಮ್ಮ ರಾಷ್ಟ್ರೀಯ ಹಿತಾಶಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ರೂಪಿಸಿಕೊಂಡರೆ ಭಾರತ ಮಾತ್ರ ಹಾಗೆ ಮಾಡಿರಲಿಲ್ಲ.

ಹೊಸದಾಗಿ ಉದಯವಾದ ಕಮ್ಯೂನಿಸ್ಟ್ ರಾಷ್ಟ್ರಗಳು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಆಗ ತಾನೆ ಸ್ವತಂತ್ರವಾಗಿದ್ದ ಭಾರತ ತನ್ನ ರಾಷ್ಟ್ರೀಯ ಆಸಕ್ತಿಗಳನ್ನು ಕಡೆಗಣಿಸಿತು. ಆಶ್ಚರ್ಯವೆಂದರೆ ಯು.ಎಸ್ ಮತ್ತು ಇತರೆ ಬಂಡವಾಳಶಾಹಿ ರಾಷ್ಟ್ರಗಳನ್ನು ಮೂರನೆ ಜಗತ್ತಿನ ಹೆಚ್ಚು ರಾಷ್ಟ್ರಗಳು ಚೋರರಂತೆ ಕಂಡದ್ದು.

ಆ ಸಂದರ್ಭದಲ್ಲಿಯೆ ಅಂಬೇಡ್ಕರ್ ಅವರು ತಮ್ಮ 1951ರ ಚುನಾವಣಾ ಸಂಹಿತೆಯಲ್ಲಿ ಹೀಗೆ ಬರೆದದ್ದು: ಭಾರತ ಸ್ವಾತಂತ್ರ್ಯ ಪಡೆದ ಸಂದರ್ಭದಲ್ಲಿ ಜಗತ್ತಿನ ಎಲ್ಲ ರಾಷ್ಟ್ರಗಳೂ ಅದರ ಸ್ನೇಹಿತರಾಗಿದ್ದುದು ನಿಜ. ಆದರೆ ಇಂದು ಪರಿಸ್ಥಿತಿ ವಿರುದ್ಧವಾಗಿದೆ. ಭಾರತಕ್ಕೆ ಯಾರೂ ಸ್ನೇಹಿತರಿಲ್ಲ. ಪರಿಸ್ಥಿತಿಯಲ್ಲಿನ ಈ ರೀತಿಯ ಬದಲಾವಣೆ ನಮ್ಮ ದೇಶದ ವಿದೇಶಾಂಗ ನೀತಿಯ ನೇರ ಫಲಿತಾ೦ಶವಾಗಿದೆ. ಚೈನಾ ಸಂಯುಕ್ತರಾಷ್ಟ್ರ ಸಂಸ್ಥೆಯ ಅಂಗವಾಗಬೇಕೆಂದು ಬಯಸಿದ್ದು, ಕೊರಿಯಾ ಯುದ್ಧದ ಸಂದರ್ಭದಲ್ಲಿ ತಳೆದ ನಿಲುವು ಇವು ಇದಕ್ಕೆ ಉದಾಹರಣೆಗಳು. ಚೈನಾದ ಯುದ್ಧವನ್ನು ಭಾರತವೇಕೆ ಮಾಡಬೇಕು? ಸದ್ಯದ ಯು.ಎಸ್‌ನ ಇಂಡಿಯಾ ವಿರೋಧಕ್ಕೆ ಭಾರತ ಚೈನಾದ

ಕಮ್ಯೂನಿಸ್ಟ್ ಜಗತ್ತನ್ನು ಬಿಟ್ಟರೆ ಟೈವಾನ್ ಮೇಲೆ ಚೈನಾದ ನ್ಯಾಯಯುತ ಹಕ್ಕನ್ನು ಬೆಂಬಲಿಸಿದ ರಾಷ್ಟ್ರವೆಂದರೆ ಇಂಡಿಯಾ ಒಂದೇ. ಯು.ಎಸ್ ನಾಯಕತ್ವದ ಬಂಡವಾಳಶಾಹಿ ಗುಂಪು ಆಗ ಇಂಡಿಯಾದ ನಡೆಯ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿತ್ತು. ಏಕೆಂದರೆ ಎಲ್ಲಾ ರಾಷ್ಟ್ರಗಳೂ ತಮ್ಮದೆ ವಿದೇಶಾಂಗ ನೀತಿಯನ್ನು ತಮ್ಮ ರಾಷ್ಟ್ರೀಯ ಹಿತಾಶಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ರೂಪಿಸಿಕೊಂಡರೆ ಭಾರತ ಮಾತ್ರ ಹಾಗೆ ಮಾಡಿರಲಿಲ್ಲ. ಆಗ ತಾನೆ ಸ್ವತಂತ್ರವಾಗಿದ್ದ ಭಾರತ ತನ್ನ ರಾಷ್ಟ್ರೀಯ ಆಸಕ್ತಿಗಳನ್ನು ಕಡೆಗಣಿಸಿತು. ಆಶ್ಚರ್ಯವೆಂದರೆ ಯು.ಎಸ್ ಮತ್ತು ಇತರೆ ಬಂಡವಾಳಶಾಹಿ ರಾಷ್ಟ್ರಗಳನ್ನು ಮೂರನೆ ಜಗತ್ತಿನ ಹೆಚ್ಚು ರಾಷ್ಟ್ರಗಳು ಚೋರರಂತೆ ಕಂಡದ್ದು.

ಡಾ॥ ಅಂಬೇಡ್ಕರ್ ಅವರ ಯು.ಎಸ್ ಪ್ರೇಮ

ಪರವಾಗಿ ನಿಂತದ್ದೇ ಕಾರಣ. ಈಗ ಅಮೆರಿಕಾದಿಂದ ಹಣಕಾಸಿನ ಮತ್ತು ತಾಂತ್ರಿಕ ಸಹಾಯ ಪಡೆಯಲು ಭಾರತಕ್ಕೆ ಅಸಾಧ್ಯವಾಗಿದೆ (ಪುಟ 395–396, ಸಂಪುಟ 17, ಭಾಗ–1).

ಡಾ॥ ಅಂಬೇಡ್ಕರ್‌ರವರು ಯ.ಎಸ್‌ಅನ್ನು ಸ್ನೇಹಿತನಾಗಿ ಹೊಂದುವುದರ ಪ್ರಾಮುಖ್ಯತೆಯನ್ನು 60ವರ್ಷಗಳ ಹಿಂದೆಯೇ ಅರಿತಿದ್ದರು. ನಮ್ಮ ಇಂದಿನ ನಾಯಕರು ಆ ವಿಚಾರವಾಗಿ ಇನ್ನೂ ಚಿಂತಿಸುತ್ತಿದ್ದಾರೆ.

1946ರಷ್ಟು ಹಿಂದೆಯೇ ಡಾ॥ ಅಂಬೇಡ್ಕರ್ ಅವರು ಅಮೆರಿಕಾ ಕಡೆಗೆ ಎಷ್ಟು ವಾಲಿದ್ದರೆಂದರೆ ಒಂದು ಹಂತದಲ್ಲಿ ಅವರು ಸ್ವಾತಂತ್ರ್ಯಾ ನಂತರ ಭಾರತವನ್ನು 'ಭಾರತ ರಾಜ್ಯಗಳ ಒಕ್ಕೂಟ' ಎಂದು ಕರೆಯ ಬಯಸಿದ್ದರು. ಅವರು ತಾವು ಸ್ಥಾಪಿಸಿದ ರಾಜಕೀಯ ಪಕ್ಷವನ್ನು ಯು.ಎಸ್.ಎ ಯ ರಿಪಬ್ಲಿಕನ್ ಪಾರ್ಟಿಯಿಂದ ಪ್ರೇರೇಪಿಸಲ್ಪಟ್ಟು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಎಂದು ಕರೆದರು. ಡಾ॥ ಅಂಬೇಡ್ಕರ್ ಅವರು ಯು.ಎಸ್ ಬಗ್ಗೆ ಏಕೆ ಅಷ್ಟು ಕಳಕಳಿ ಹೊಂದಿದ್ದರು?

* * * * * * *

ಅಮೆರಿಕಾದ ಬಿಳಿಯರು ಕರಿಯರ ಪರ ಹೋರಾಡಿದರು ಆದರೆ ಹಿಂದುಗಳು ದಲಿತರ ಪರ ಹೋರಾಡಲಿಲ್ಲ

ಅಮೆರಿಕಾದಲ್ಲಿ ಐತಿಹಾಸಿಕ ಮಾಂಟೆಗೊಮೆರಿ ಬಸ್ ಬಹಿಷ್ಕಾರ 1955ರಲ್ಲಿ ಪ್ರಾರಂಭವಾದಾಗ ಅಂಬೇಡ್ಕರ್‌ರವರು ಇನ್ನೂ ಬದುಕಿದ್ದರು. ಅಮೆರಿಕಾದ ಕರಿಯರಿಂದ ನಡೆದ ಈ ಬಹಿಷ್ಕಾರ ಕರಿಯರ ಚಳವಳಿಯ ಇತಿಹಾಸದಲ್ಲಿಯೆ ಅತ್ಯಂತ ಮುಖ್ಯವಾದ ಸಿಡಿ ಬಿಂದುವಾಗಿತ್ತು. ಯಾವುದೇ ಬಿಳಿಯ ಬಸ್ ಹತ್ತಿ ಅಲ್ಲಿನ ಎಲ್ಲಾ ಸೀಟುಗಳೂ ಭರ್ತಿಯಾಗಿದ್ದಲ್ಲಿ ಕರಿಯರ್‍ಯಾರಾದರೂ ಅಲ್ಲಿ ಕುಳಿತಿದ್ದರೆ ಅವರು ತಮ್ಮ ಸೀಟನ್ನು ಬಿಟ್ಟು ಕೊಡಬೇಕಾಗಿತ್ತು. ರೋಸಾ ಪಾರ್ಕ್ಸ್ ಎಂಬ ಮಾಂಟೆಗೊಮೆರಿಯ ಕರಿಮಹಿಳೆ ಬಿಳಿಯ ಪ್ರಯಾಣಿಕರೊಬ್ಬರಿಗೆ ತನ್ನ ಸೀಟನ್ನು ಬಿಟ್ಟು ಕೊಡಲು ನಿರಾಕರಿಸಿದಳು. ಅದರ ಫಲಿತಾಂಶವಾಗಿ ಅವಳನ್ನು ದಸ್ತಗಿರಿ ಮಾಡಲಾಯಿತು. ಇದು ಅಮೆರಿಕದ ಐತಿಹಾಸಿಕ ಸಮಾಜಿಕ ಹಕ್ಕುಗಳ ಚಳವಳಿಗೆ ಎಡೆಮಾಡಿಕೊಟ್ಟಿತು. ಚಳವಳಿಗೆ ಡಾ॥ ಮಾರ್ಟಿನ್ ಲೂಥರ್‌ಕಿಂಗ್ ಜೂನಿಯರ್ ನಾಯಕರಾಗಿದ್ದರು.

ಕಡಿಮೆ ಎಂದರೆ ಅಮೆರಿಕದ 16 ಪಟ್ಟಣ ಮತ್ತು ನಗರಗಳಲ್ಲಿ ಕರಿಯರು ಮತ್ತು ಬಿಳಿಯರ ನಡುವಿನ ಮದುವೆಗಳು ಅಪರಾಧಗಳಾಗಿದ್ದವು. ಅಂಬೇಡ್ಕರ್‌ರವರು ಆ ದೇಶಕ್ಕೆ ಭೇಟಿ ನೀಡಿದಾಗ ರೆಸ್ಟೊರೆಂಟ್‌ಗಳು ಮತ್ತು ಥಿಯೇಟರ್‌ಗಳಲ್ಲಿ ಜನಾಂಗೀಯ ಪ್ರತ್ಯೇಕತೆ ಸಾಮಾನ್ಯವಾಗಿತ್ತು. ಕರಿಯರಿಗೆ ಪ್ರತ್ಯೇಕ ಶೌಚಾಲಯಗಳಿದ್ದವು. ಪ್ರತ್ಯೇಕ ಶಾಲೆಗಳಿದ್ದವು ಆದರೂ ಅಂಬೇಡ್ಕರ್‌ರವರು ಯು.ಎಸ್ ಬಗ್ಗೆ ಬಹಳಷ್ಟು ಒಲವು ಹೊಂದಿದ್ದರು ಮತ್ತು ಭಾರತವನ್ನು ಭಾರತದ ರಾಜ್ಯಗಳ ಒಕ್ಕೂಟ ಎಂದು ಕರೆಯಬೇಕೆಂದಿದ್ದರು. ಏಕೆ? ಈ ಜಗತ್ತಿನ ಪ್ರತಿಯೊಂದು ಇನ್ನೊಂದರ ಸಂಬಂಧದಲ್ಲೆ ಅಸ್ತಿತ್ವದಲ್ಲಿದೆ.

ಅಮೆರಿಕದ 16 ಪಟ್ಟಣ ಮತ್ತು ನಗರಗಳಲ್ಲಿ ಕರಿಯರು ಮತ್ತು ಬಿಳಿಯರ ನಡುವಿನ ಮದುವೆಗಳು ಅಪರಾಧಗಳಾಗಿದ್ದವು. ಅಂಬೇಡ್ಕರ್‌ರವರು ಆ ದೇಶಕ್ಕೆ ಭೇಟಿ ನೀಡಿದಾಗ ರೆಸ್ಟೊರೆಂಟ್‌ಗಳು ಮತ್ತು ಥಿಯೇಟರ್‌ಗಳಲ್ಲಿ ಜನಾಂಗೀಯ ಪ್ರತ್ಯೇಕತೆ ಸಾಮಾನ್ಯವಾಗಿತ್ತು. ಕರಿಯರಿಗೆ ಪ್ರತ್ಯೇಕ ಶೌಚಾಲಯಗಳಿದ್ದವು. ಪ್ರತ್ಯೇಕ ಶಾಲೆಗಳಿದ್ದವು ಆದರೂ ಅಂಬೇಡ್ಕರ್‌ರವರು ಯು.ಎಸ್ ಬಗ್ಗೆ ಬಹಳಷ್ಟು ಒಲವು ಹೊಂದಿದ್ದರು ಮತ್ತು ಭಾರತವನ್ನು ಭಾರತದ ರಾಜ್ಯಗಳ ಒಕ್ಕೂಟ ಎಂದು ಕರೆಯಬೇಕೆಂದಿದ್ದರು.

ದಲಿತರು ಮತ್ತು ಭಾರತದ ಬಗ್ಗೆ ಯೋಚಿಸುವಾಗ ಅಂಬೇಡ್ಕರ್‌ರವರು ಯಾವಾಗಲೂ ಅಮೆರಿಕ ಮತ್ತು ಅಲ್ಲಿಯ ಕರಿಯರನ್ನು ತಮ್ಮ ಮನಸ್ಸಿನಲ್ಲಿಟ್ಟುಕೊಂಡಿದ್ದರು.

1492ರಲ್ಲಿ ಕ್ರಿಸ್ಟಫರ್ ಕೊಲೊಂಬಸ್ ಅಮೆರಿಕವನ್ನು ಕಂಡುಹಿಡಿದ ಸುಮಾರು 3 ವರ್ಷಗಳ ನಂತರ ಈ ಹೊಸ ಜಗತ್ತನ್ನು ಯೂರೋಪಿಯನ್ನರು ಪ್ರವೇಶಿಸಿದರು. 1607ರಲ್ಲಿ ಮೊದಲನೆ ಪಟ್ಟಣ–ಜೇಮ್ಸ್ ಟೌನ್‌ನ ಸ್ಥಾಪನೆಯಾಯಿತು (ಇವತ್ತಿನ ವರ್ಜಿನಿಯಾ). 1619ರಲ್ಲಿ 20 ಕರಿಯ ಗುಲಾಮರನ್ನೊತ್ತ ಮೊದಲನೆಯ ಹಡಗು ಅಮೆರಿಕದ ನೆಲವನ್ನು ತಲುಪಿತು. ಬೇರೆ ಭಾಷೆಯಲ್ಲಿ ಹೇಳುವುದಾದರೆ ಅಮೆರಿಕದ ಕರಿಯರ ಇತಿಹಾಸ 1619ರಲ್ಲಿ ಪ್ರಾರಂಭವಾಯಿತು. ಅಂದರೆ ಸುಮಾರು 4 ಶತಮಾನಗಳ ಹಿಂದೆ ಕರಿಯರ ಕಷ್ಟ ಕೋಟಲೆಗಳಿಗೆ ಸಮನಾದುದು ಯಾವುದೂ ಇಲ್ಲ. ಅಮೆರಿಕದ ಬಿಳಿಯರ ಕ್ರೌರ್ಯವನ್ನು ಚೆನ್ನಾಗಿ ದಾಖಲಿಸಿ ಆಗಾಗ್ಗೆ ಬಹಿರಂಗವಾಗಿ ಪ್ರದರ್ಶಿಸಲಾಗುವುದಾದರೂ. ಕರಿಯರ ಬಗ್ಗೆ ಅನುಕಂಪ ಹೊಂದಿದ್ದ ಬಿಳಿಯ ಅಮೆರಿಕನ್ನರ ದೊಡ್ಡ ಗುಂಪಿನ ಬಗ್ಗೆ ಹೆಚ್ಚೇನನ್ನು ಹೇಳಲಾಗುತ್ತಿಲ್ಲ.

ಅಮೆರಿಕದಲ್ಲಿ ಗುಲಾಮಗಿರಿಯನ್ನು ಕೊನೆಗೊಳಿಸಿ ಅಬ್ರಹಾಂ ಲಿಂಕನ್ ಹೊರಡಿಸಿದ ಬಿಡುಗಡೆ ಘೋಷಣೆ 1ನೇ ಜನವರಿ 1863ರಲ್ಲಿ ಹೊರಬಿತ್ತು. ಅಂದರೆ ಎರಡೂವರೆ ಶತಮಾನಗಳಿಗಿಂತ ಕಡಿಮೆ ಸಮಯದಲ್ಲಿ ಅಮೆರಿಕದ ಕರಿಯರು ಸ್ವತಂತ್ರ ಪ್ರಜೆಗಳಾದರು. ಅಸ್ಪೃಶ್ಯತೆ ಎಷ್ಟು ಕಾಲದಿಂದ ಭಾರತದ ಭಾಗವಾಗಿದೆ? ಉತ್ತರ ಅಮೆರಿಕದ (ಯು.ಎಸ್) ಬಿಳಿಯರು ದಕ್ಷಿಣದ ಬಿಳಿಯರ ವಿರುದ್ಧವಾಗಿ ನೀಗ್ರೊಗಳ ಬಿಡುಗಡೆಗಾಗಿ ಯುದ್ಧ ಮಾಡಿದಂತೆ, ದಲಿತರ ಬಗ್ಗೆ ಸಹಾನುಭೂತಿಯುಳ್ಳ ಹಿಂದೂ ಮೇಲ್ಜಾತಿಯ ಜನ ಕೆಳವರ್ಗದವರ ಪರವಾಗಿ ತಮ್ಮ ಹತ್ತಿರದ ಸಂಬಂಧಿಗಳ ಜೊತೆ ಯುದ್ಧ ಮಾಡುವವರೆಗೆ ಕೆಳವರ್ಗದ ಜನ ಅವರ ಸಹಾನುಭೂತಿಯ ಬಗ್ಗೆ ತೃಪ್ತರಾಗುವುದಿಲ್ಲ ಎಂದು ಡಾ॥ ಅಂಬೇಡ್ಕರ್‌ರವರು ಬರೆಯುತ್ತಾರೆ. (ಸಂಪುಟ–5, ಪುಟ–370). ಡಾ॥ ಅಂಬೇಡ್ಕರ್‌ರವರು ಮೇಲಿನ ಸಾಲುಗಳನ್ನು ತಾವು ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಹಡಗಿನಲ್ಲಿ ಲಂಡನ್‌ಗೆ ಹೋಗುತ್ತಿರುವಾಗ ಬರೆದರು.

ಈ ಸಂದರ್ಭವನ್ನು ವಿಷಧೀಕರಿಸಲು ಇಚ್ಛಿಸುತ್ತೇನೆ ಮೆರಿಕದ ಬಿಳಿಯರು ಕರಿಯರಿಗೋಸ್ಕರ ಕಾದಾಡಿದ್ದು, ಹಿಂದೂಗಳು ದಲಿತರಿಗೋಸ್ಕರ ಹಿಂದುಗಳೊಡನೆ ಕಾದಾಡುವುದು ಈ ಹೋಲಿಕೆಯನ್ನು ಹಿಂದು ಸಂಘ ಸಂಸ್ಥೆಗಳು ತಾವೆ ಅಸ್ಪೃಶ್ಯತೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸುವುದಾಗಿ ಭರವಸೆ ನೀಡಿದಾಗ ಡಾ॥ ಅಂಬೇಡ್ಕರ್‌ರವರು ಮಾಡುತ್ತಾರೆ. ಭಾರತದಂತೆ ಯು.ಎಸ್ ಕೂಡ ಜನಸಂಖ್ಯಾಧಾರಿತ ವಿಭಾಗಗಳನ್ನು ಅಂದರೆ ದಕ್ಷಿಣ ಮತ್ತು ಉತ್ತರಗಳನ್ನು ಹೊಂದಿದೆ. ದಕ್ಷಿಣ ಭಾಗ ಪ್ರಮುಖವಾಗಿ ಕೃಷಿಯಾಧಾರಿತವಾಗಿದ್ದು ಜಹಗೀರ್‌ದಾರಿ ಪದ್ಧತಿಯನ್ನು ಹೊಂದಿತ್ತು. ಉತ್ತರದ ಭಾಗದಲ್ಲಿ ಕೈಗಾರಿಕೋದ್ಯಮ, ನಗರೀಕರಣ ಬೆಳೆಯುತ್ತಿದ್ದುವು. ಅದು ಹೆಚ್ಚು ಹೆಚ್ಚು ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ಕಡೆಗೆ ನಡೆದಿತ್ತು.

ಕೈಗಾರಿಕೀಕರಣ, ನಗರೀಕರಣ, ಬಂಡವಾಳ ಹೂಡಿಕೆ ಮತ್ತು ಆಧುನಿಕತೆ ಇವು ಗುಲಾಮಗಿರಿಯ ವಿರೋಧಿಗಳಾಗಿದ್ದು ಈ ಭಾಗ ಗುಲಾಮಗಿರಿಯ ವಿರುದ್ಧ ತನ್ನ ಧ್ವನಿ ಎತ್ತಲು ಪ್ರಾರಂಭಿಸಿತು ಮತ್ತು ಅದರ ನಿರ್ಮೂಲನೆಗೆ ಒತ್ತಾಯಿಸಿತು. ಕೃಷಿ ಆಧಾರಿತ ಜಹಗೀರುದಾರಿ ದಕ್ಷಿಣ ಭಾಗ ಗುಲಾಮಗಿರಿ ಮುಂದುವರೆಯಬೇಕೆಂದು ಒತ್ತಾಯಿಸಿತು.

1860ರ ಅಧ್ಯಕ್ಷೀಯ ಚುನಾವಣೆಗಳಲ್ಲಿ ಡೆಮೊಕ್ರಟರು ಮತ್ತು ರಿಪಬ್ಲಿಕನ್ನರು ಗುಲಾಮಗಿರಿಯ ಉಳಿಯುವಿಕೆ ಮತ್ತು ನಾಶ ಇವುಗಳ ಸುತ್ತ ಚುನಾವಣಾ ಹೋರಾಟ ನಡೆಸಿದರು. ಡೆಮೊಕ್ರಟಿಕ್ ಪಕ್ಷದ ಅಭ್ಯರ್ಥಿ ಸ್ಟೀಫನ್ ಅರ್ನಾಲ್ಡ್ ತಮ್ಮ ಚುನಾವಣಾ ಪ್ರಚಾರದಲ್ಲಿ ಅಬ್ರಹಾಂ ಲಿಂಕನ್‌ರನ್ನು ಕರಿಯ ಗುಲಾಮಗಿರಿ ವಿರೋಧಿ ಎಂದು ಬೊಟ್ಟು ಮಾಡಿ ತೋರಿಸಿದ. ಲಿಂಕನ್ 1860ರ ಚುನಾವಣೆಯನ್ನು ಗೆದ್ದರು ಮತ್ತು ಅಮೆರಿಕದ ಅಂತರ್‌ಯುದ್ಧ 1861ರಲ್ಲಿ ಪ್ರಾರಂಭವಾಯಿತು. ಲಿಂಕನ್‌ನ ಸರ್ಕಾರ ಗುಲಾಮಗಿರಿಯನ್ನು ತೊಡೆದು ಹಾಕಬಹುದೆಂದು ನಂಬಿ ದಕ್ಷಿಣದ ರಾಜ್ಯಗಳು ಯು.ಎಸ್‌ನಿಂದ ಹೊರಹೋಗಲು ತೀರ್ಮಾನಿಸಿದವು ಮತ್ತು ಕಾನ್ಫಿಡರೇಟ್ ಸ್ಟೇಟ್ಸ್ ಆಫ್ ಅಮೆರಿಕ ಎಂದು ತಮ್ಮ ಹೊಸ ದೇಶವನ್ನು ನಾಮಕರಣ ಮಾಡಿದವು.

1861ರಿಂದ 1865ರ ವರೆಗೆ ನಡೆದ ಅಮೆರಿಕ ಅಂತರ್‌ಯುದ್ಧವು ಬಿಳಿಯರು ಮತ್ತು ಬಿಳಿಯರ ಮಧ್ಯೆ ನಡೆಯಿತು. ಈ ಎರಡು ಗುಂಪುಗಳು ಗುಲಾಮರನ್ನು ಹೊಂದಿದ್ದುವು. ಯುದ್ಧದ ಸಮಯದಲ್ಲಿ ಸುಮಾರು 7ಲಕ್ಷ ಅಮೆರಿಕನ್ನರು ಮಡಿದರು ಮತ್ತು ಅನೇಕ ಮಿಲಿಯ ಜನರು ಗಾಯಾಳುಗಳಾದರು. ಆ ಸಮಯದಲ್ಲಿ ಅಮೆರಿಕದ ಕರಿಯರ ಜನಸಂಖ್ಯೆ ಒಟ್ಟು ಜನಸಂಖ್ಯೆ ಸುಮಾರು ಶೇ.10%ರಷ್ಟಿತ್ತು. ಆದ್ದರಿಂದ ಮಡಿದವರು

ಮತ್ತು ಗಾಯಾಳುಗಳಾದವರಲ್ಲಿ ಹೆಚ್ಚು ಬಿಳಿಯರೆ ಇದ್ದರು.

ಡಾ॥ ಅಂಬೇಡ್ಕರ್‌ರವರು ಈ ರೀತಿ ಕರಿಯರ ಜೊತೆ ಬಿಳಿಯರು ಒಟ್ಟಾಗಿ ನಿಂತ ಹಲವಾರು ಉದಾಹರಣೆಗಳನ್ನು ನೀಡುತ್ತಾರೆ. ಕರಿಯರಿಗೆ ಬೆಂಬಲವಾಗಿ ಅಮೆರಿಕದ ಬಿಳಿಯರು ನಿಂತ ಮಟ್ಟಕ್ಕೆ ಹಿಂದುಗಳು ಹೋಗಬಲ್ಲರೆ ಎಂಬುದನ್ನು ಅಂಬೇಡ್ಕರ್‌ರವರು ತಿಳಿಯಲಿಚ್ಛಿಸುತ್ತಾರೆ. 'ಹಿಂದುಗಳು ಮತ್ತು ಅವರಲ್ಲಿನ ಸಾಮಾಜಿಕ ಆತ್ಮಸಾಕ್ಷಿಯ ಕೊರತೆ' ಎಂಬ ತಮ್ಮ ಮಸ್ತಕದಲ್ಲಿ (ಸಂಪುಟ-5, ಪುಟ-82-99) ಅಂಬೇಡ್ಕರ್‌ರವರು 1865ರಿಂದ 1930ರ ವರೆಗೆ ಬಿಳಿಯರು ಕರಿಯರಿಗಾಗಿ ಏನೆಲ್ಲ ಮಾಡಿದರು ಎಂಬ ಬಗ್ಗೆ ವಿವರಗಳನ್ನು ನೀಡುತ್ತಾರೆ. ಹಿಂದುಗಳೇಕೆ ಬಿಳಿಯರಂತೆ ನಡೆದುಕೊಳ್ಳುತ್ತಿಲ್ಲ ಎಂಬುದನ್ನು ವಿವರಿಸುವಾಗ ಡಾ॥ ಅಂಬೇಡ್ಕರ್ ಅಮೆರಿಕನ್ನರಿಗೆ ತಮ್ಮದೆ ಆದ ಸಾಮಾಜಿಕ ಅಂತಃಸಾಕ್ಷಿ ಇತ್ತು ಎಂಬುದನ್ನು ಒತ್ತಿ ಹೇಳುತ್ತಾರೆ.

* * * * * *

ಪಶ್ಚಿಮ ಬಂಗಾಳವನ್ನು ಎಡಪಕ್ಷಗಳು 34 ವರ್ಷ ಆಳಿದವು ಮತ್ತು ಹಿಂದುಳಿದವರನ್ನು ಮೇಲೆ ಎತ್ತುವಲ್ಲಿ ಸೋತವು.

ಎಡಪಕ್ಷಗಳು ಬಿಟ್ಟು ಹೋಗಿರುವ ಕೊಡುಗೆಯನ್ನು ಮತ್ತು ಮಮತಾ ಬ್ಯಾನರ್ಜಿಯವರ ಜಯ ಮತ್ತು ಅದರಿಂದ ಪ್ರಜೆಗಳ ಮೇಲೆ ಆಗಬಹುದಾದ ಹಲ್ಲೆಯನ್ನು ಅರ್ಥಮಾಡಿಕೊಳ್ಳಬೇಕಾದರೆ, ಉತ್ತರ ಮತ್ತು ದಕ್ಷಿಣ ಕೊರಿಯಾಗಳೊಡನೆ ಸ್ವಲ್ಪ ಹೋಲಿಸುವುದು ಅವಶ್ಯಕ. 1948ರ ವರೆಗೆ ಕೊರಿಯಾ ಒಂದೇ ದೇಶವಾಗಿತ್ತು. 1910ರಿಂದ ಅದು ಜಪಾನಿನ ವಸಾಹತು ಆಗಿತ್ತು. 2ನೇ ಮಹಾಯುದ್ಧದ ನಂತರ ಉತ್ತರ ಕೊರಿಯ ಸೋವಿಯತ್ ಒಕ್ಕೂಟದ ಕಮ್ಯೂನಿಸ್ಟ್ ಪ್ರಭಾವಕ್ಕೆ ಒಳಗಾಯಿತು. ದಕ್ಷಿಣ ಕೊರಿಯ ಅಮೆರಿಕಾದ ಪ್ರಭಾವಕ್ಕೆ ಒಳಗಾಗಿ ಬಂಡವಾಳಶಾಹಿ ದಾರಿಯನ್ನು ಆರಿಸಿಕೊಂಡಿತು.

ಆಶ್ಚರ್ಯವೆಂದರೆ ಕೊರಿಯ ಒಟ್ಟಾಗಿದ್ದಾಗ ಅದರ ಉತ್ತರದ ಭಾಗ ದಕ್ಷಿಣದ ಭಾಗಕ್ಕಿಂತ ಸಂಪದ್ಭರಿತವಾಗಿತ್ತು. ಆದರೆ ಇಂದು ಈ ಎರಡೂ ದೇಶಗಳು ಯಾವ ಮಟ್ಟದಲ್ಲಿವೆ?

ಇಂದು ಉತ್ತರ ಕೊರಿಯ ತನ್ನ ಜನರನ್ನು ಉಪವಾಸದಿಂದ ನರಳದಂತೆ ಮಾಡಲು 3 ಲಕ್ಷದ 35 ಸಾವಿರ ಮೆಟ್ರಿಕ್ ಟನ್ ಆಹಾರ ಧಾನ್ಯವನ್ನು ಮಾನವೀಯ ಸಹಾಯದ ರೂಪದಲ್ಲಿ ಪಡೆಯಬೇಕಾಗಿದೆ. ಆದರೆ ದಕ್ಷಿಣ ಕೊರಿಯ ಸಂಪದ್ಭರಿತವಾಗಿದ್ದು ಇತರ ಮೂರನೇ ಜಗತ್ತಿನ ರಾಷ್ಟ್ರಗಳ ಸಹಾಯಕ್ಕೆ ನಿಂತಿದೆ.

ನಾವು ಎರಡೂ ದೇಶಗಳ ಸೂಚ್ಯಂಕಗಳನ್ನು ಗಮನಿಸಿದಾಗ ಅವು ಒಂದು ದೊಡ್ಡ ಕಥೆಯನ್ನೇ ನಮಗೆ ಹೇಳುತ್ತವೆ. ಉತ್ತರ ಕೊರಿಯಾದ ಜಿ.ಡಿ.ಪಿ 28 ಬಿಲಿಯನ್ ಡಾಲರ್ ಆದರೆ ದಕ್ಷಿಣ ಕೊರಿಯಾದ ಜಿ.ಡಿ.ಪಿ 986 ಬಿಲಿಯನ್ ಡಾಲರ್. ಉತ್ತರ ಕೊರಿಯಾದ ವಾರ್ಷಿಕ ತಲಾ ವರಮಾನ 1,800 ಡಾಲರ್ ಆದರೆ ದಕ್ಷಿಣ ಕೊರಿಯಾದ ವಾರ್ಷಿಕ ತಲಾ ವರಮಾನ 30,200 ಡಾಲರ್.

ಉತ್ತರ ಕೊರಿಯಾದ ಶೇ.35ರಷ್ಟು ಜನ ವ್ಯವಸಾಯವನ್ನವಲಂಭಿಸಿದ್ದಾರೆ. ಆದರೆ ದಕ್ಷಿಣ ಕೊರಿಯಾದ ಕೇವಲ ಶೇ.7.3ರಷ್ಟು ಜನ ವ್ಯವಸಾಯದಿಂದ ಬದುಕುತ್ತಾರೆ. ಶೇ.40ರಷ್ಟು ಉತ್ತರ ಕೊರಿಯಾದ ಜನರು ಹಳ್ಳಿಗಳಲ್ಲಿ ವಾಸಿಸುತ್ತಾರೆ. ಆದರೆ ದಕ್ಷಿಣ ಕೊರಿಯಾದ ಶೇ.17ರಷ್ಟು ಜನರು ಹಳ್ಳಿಗಳಲ್ಲಿ ವಾಸಿಸುತ್ತಾರೆ. ಉತ್ತರ ಕೊರಿಯಾದ ಜನರ ಆಯುಷ್ಯ ಪ್ರಮಾಣ 69 ವರ್ಷಗಳಾದರೆ, ದಕ್ಷಿಣ ಕೊರಿಯಾದ ಜನರು ಸರಾಸರಿ 80 ವರ್ಷಗಳು ಬದುಕುತ್ತಾರೆ.

ಆದ್ದರಿಂದ ಒಂದು ಕಾಲದ ಏಕೀಕೃತ ಕೊರಿಯಾ ಈಗ ಎರಡು ವಿಭಾಗಗಳಾದ್ದು, ಈ ಭಾಗಗಳು ತಮ್ಮದೇ ಆದ ಭಿನ್ನತೆಯನ್ನು ಹೊಂದಿವೆ. ಒಂದು ಅಭಿವೃದ್ಧಿ ಹೊಂದಿದ ದೇಶವಾಗಿದೆ. ಮತ್ತೊಂದು ಅಭಿವೃದ್ಧಿ ಮತ್ತು ಹಿಂದುಳಿದಿರುವಿಕೆಯ ನಡುವೆ ಸಿಕ್ಕಿ ಹಾಕಿಕೊಂಡಿದೆ.

ಇದೆಲ್ಲ ನಡೆದಿರುವುದು ಈ ಎರಡು ದೇಶಗಳು ತಾವು ಒಪ್ಪಿಕೊಂಡ ಸಾಮಾಜಿಕ ವ್ಯವಸ್ಥೆಯ ಕಾರಣವಾಗಿ. ಸಮಾಜವಾದದ ಮೂಲಕ ಉತ್ತರ ಕೊರಿಯಾ ಒಂದು ದೀನ ಸಮಾಜವಾಗಿ ಮಾರ್ಪಟ್ಟಿದೆ. ಆದರೆ ದಕ್ಷಿಣ ಕೊರಿಯಾ ಬಂಡವಾಳಶಾಹಿ ಹಾದಿ ತುಳಿದು ಅಭಿವೃದ್ಧಿ ಹೊಂದುತ್ತಾ ಮುನ್ನಡೆದಿದೆ. ಉಳಿದ ಕಮ್ಯೂನಿಸ್ಟ್ ರಾಷ್ಟ್ರಗಳಿಗೂ ಇದನ್ನೇ ಅನ್ವಯಿಸಬಹುದು. ಪೂರ್ವ ಯೂರೋಪ್ ಮತ್ತು ಹಿಂದಿನ ಯು.ಎಸ್.ಎಸ್.ಆರ್ ಇವುಗಳಿಗೆ ಏನಾಗಿದೆ ಎಂಬುದನ್ನು ಮತ್ತೆ ವಿಷದಪಡಿಸಬೇಕಾಗಿಲ್ಲ.

34 ವರ್ಷಗಳ ತಡೆಯಿಲ್ಲದ ಎಡಸಮಾಜವಾದವನ್ನು ಹೊಂದಿದ್ದ ಪಶ್ಚಿಮ ಬಂಗಾಳ ಜಗತ್ತಿನ ಎಲ್ಲೆಡೆ ಎದ್ದು ಕಾಣುವ ಈ ದೈನ್ಯತೆಯ ನೀತಿಯನ್ನು ಅಲ್ಲಗಳೆಯಲಾಗುತ್ತಿತ್ತೆ? ಸಾಮ್ರಾಜ್ಯ ಶಾಹಿಯ ಮೊದಲ ರಾಜಧಾನಿಯಾಗಿ ಮತ್ತು ಕೈಗಾರಿಕಾ ಚಟುವಟಿಕೆಗೆ ಮೊದಲ ರಾಜ್ಯವೆಂದು ಹೆಮ್ಮೆ ಪಟ್ಟುಕೊಳ್ಳುತ್ತಿದ್ದ ಪಶ್ಚಿಮ ಬಂಗಾಳ ಅಕ್ಕ-ಪಕ್ಕದ ರಾಜ್ಯಗಳಿಂದ ಬಂದ ಮಿಲಿಯಗಟ್ಟಲೆ ದೀನ ದಲಿತರಿಗೆ ವಸತಿ ನೀಡಿತು. ಉತ್ತರ ಇಂಡಿಯಾದ ಊಳಿಗಮಾನ್ಯ ಪದ್ಧತಿಯಿಂದ ಉಸಿರು ಕಟ್ಟಿದ ಮಿಲಿಯಗಟ್ಟಲೆ ರೈತ ಕೂಲಿಕಾರರು ಈ ರಾಜ್ಯದ ಕಡೆ ತಮ್ಮ ಮುಕ್ತಿಗಾಗಿ ದೃಷ್ಟಿ ಹಾಯಿಸಿದರು. ದೇಶದುದ್ದಕ್ಕೂ ಅನೇಕ ಜನ ವಲಸೆ ಹೋಗಲು ಆರಿಸಿಕೊಂಡದ್ದು ಒಂದೇ ರಾಜ್ಯ- ಪಶ್ಚಿಮ ಬಂಗಾಳ. ಇವತ್ತಿನ ಮುಂಬಯಿ (ಹಿಂದಿನ ಬಾಂಬೆ)ಗೆ ವಲಸೆ ಪ್ರಾರಂಭವಾದದ್ದು ಸ್ವಾತಂತ್ರ್ಯ ನಂತರ.

ಇಂದು ದೇಶದ ರಾಜಧಾನಿ ದೆಹಲಿ ಪಶ್ಚಿಮ ಬಂಗಾಳದಿಂದ ಬಂದ ಸಾವಿರಾರು ಪರಿಚಾರಿಕೆಯರಿಗೆ ವಸತಿ ನೀಡಿದೆ. ಸುಮಾರು ಒಂದೂವರೆ ದಶಕಕ್ಕೂ ಹಿಂದೆ ಅರ್ಥಶಾಸ್ತ್ರಜ್ಞರು ಎಂದರೆ ಬಂಗಾಳಿಗಳು, ಬಂಗಾಳಿಗಳು ಎಂದರೆ ಅರ್ಥಶಾಸ್ತ್ರಜ್ಞರು ಎಂದು ನಾನೂ ಸಹ ನಂಬಿದ್ದೆ. ಪೂರ್ವ ದೆಹಲಿಯಲ್ಲಿ ಬಂಗಾಲಿಗಳು ಇಂದು ಕಾರ್ ತೊಳೆಯುವವರಾಗಿ, ಸೈಕಲ್ ರಿಕ್ಷಾ ಎಳೆಯುವವರಾಗಿ ಅಥವಾ ಮೀನು ಮಾರುತ್ತಾ ಕಾಲ ಕಳೆಯುತ್ತಿದ್ದಾರೆ.

ಇದೇ ಸಮಯದಲ್ಲಿ ಪುಣೆ ಪಶ್ಚಿಮ ಬಂಗಾಳದ ಎಡ ಆಡಳಿತಕ್ಕೆ ಧನ್ಯವಾಗಿದೆ. ಪಶ್ಚಿಮ ಬಂಗಾಳದಲ್ಲಿ ಬೇಡವೆಂದು ತಳ್ಳಿ ಹಾಕಿದ ಬಹುತೇಕ ಎಲ್ಲಾ ಯೋಜನೆಗಳಿಗೆ ಪುಣೆ ಸ್ಥಳ ನೀಡಿದೆ. ಬಿಹಾರ್, ಉತ್ತರ ಪ್ರದೇಶ ಮತ್ತು ಪಕ್ಕದ ಕರ್ನಾಟಕ ಇಲ್ಲಿಂದ ವಲಸೆ ಹೋಗುವ ಕಾರ್ಮಿಕರು ಈ ಪುಣೆಯೆಂಬ ನಿರ್ಮಾಣ ನಗರದಲ್ಲಿ ಕೆಲಸ ಮಾಡಲು ಇಷ್ಟ ಪಡುವುದಿಲ್ಲ.

ಈ ಎಡ ಪಂಥೀಯ ಆಡಳಿತ ಅನೇಕ ಸಾವಿರ ಯುವಕರನ್ನು ಅಮೆರಿಕ, ಬ್ರಿಟನ್, ದೆಹಲಿ ಮತ್ತು ಜಗತ್ತಿನ ಇತರ ದೇಶಗಳಿಗೆ ವಲಸೆ ಹೋಗುವಂತೆ ಮಾಡಿ ಅವರನ್ನು ಭದ್ರ ಲೋಕದಿಂದ, ರವೀಂದ್ರ ಸಂಗೀತದಿಂದ ಮತ್ತು ಧೋತಿಯಿಂದ ಬಿಡುಗಡೆ ಮಾಡಿರುವುದಕ್ಕೆ ಎಡ ಆಡಳಿತವನ್ನು ದೂಷಿಸುವಹಾಗಿಲ್ಲ.

ದೀನ ದಲಿತ ಬಂಗಾಲಿಗಳು ಮತ್ತೆಲ್ಲಿಯೂ ಹೋಗುವ ಹಾಗಿರಲಿಲ್ಲ. ಹಣವಿಲ್ಲದೆ, ಭಾಷೆಯ ಬಂಧನಕ್ಕೆ ಒಳಪಟ್ಟು ಅವರು ಉಸಿರು ಕಟ್ಟುವ ಆ ವಾತಾವರಣದಲ್ಲಿ ಬದುಕಿದರು. ಆದರೆ ಅವರೂ ಒಂದು ದಾರಿಯನ್ನು ಕಂಡುಕೊಂಡರು. ಅರ್ಥಶಾಸ್ತ್ರಜ್ಞರಾಗಿ ಅಲ್ಲ, ಯಾರಿಗೂ ಬೇಡದಿದ್ದ ಅನೇಕ ಕಸುಬುಗಳನ್ನು ಹಿಂದುಳಿದ ಬಂಗಾಲಿಗಳು ಕೈಗೆತ್ತಿಕೊಂಡರು. ಹೀಗೆ ಉತ್ತರ ಕೊರಿಯಾ ಮತ್ತು ಪಶ್ಚಿಮ ಬಂಗಾಳ ತಳ ಸೇರಲು ಕಾರಣಗಳೇನು? ಇದಕ್ಕೆ ಉತ್ತರ ಎಲ್ಲ ಜೀವಿಗಳ ಬದುಕಿನ ಮೂಲಭೂತ ಸತ್ಯಕ್ಕೆ ಸಂಬಂಧಿಸಿದುದಾಗಿದೆ.

ಮಾನವರು ಯಾವ ಪರಿಸರದಲ್ಲಿ ಅವರಿಗೆ ಅನುಕೂಲವೊ ಅಂತಹ ಪರಿಸರದಲ್ಲಿದ್ದಾಗ ಎತ್ತರಕ್ಕೇರುತ್ತಾರೆ. ಇದೇ ಕಾರಣಕ್ಕಾಗಿ 'ಲೇವಿಯಾತನ್' ಎಂಬ ಶ್ರೇಷ್ಠ ಗ್ರಂಥವನ್ನು ಬರೆದ ಥಾಮಸ್ ಆಬ್ಸ್ ರಾಜ್ಯ ಶಾಸ್ತ್ರದಲ್ಲಿ ತನ್ನ ಸ್ಥಾನವನ್ನು ಉಳಿಸಿಕೊಂಡಿದ್ದಾನೆ. ಆ ಮಸ್ತಕ ವ್ಯಕ್ತಿ ಸಿದ್ಧಾಂತದ ಬಗ್ಗೆ ಹೇಳುತ್ತದೆ.

ಒಂದು ಗುಂಪಿನಲ್ಲಿ ಒತ್ತಾಯ ಪೂರ್ವಕವಾಗಿ ಬಂಧಿಸಿದಾಗ ಮಾನವರು ಯಶಸ್ವಿಯಾಗುವುದು ಕಡಿಮೆ. ಆದರೆ ಸ್ವತಂತ್ರ ವ್ಯಕ್ತಿಗಳಾಗಿ ಅವರು ಹೆಚ್ಚು ಯಶಸ್ಸನ್ನು ಕಾಣುತ್ತಾರೆ. ಸಮಾಜವಾದದಲ್ಲಿ ವೈಯುಕ್ತಿಕ ಉದ್ಯಮಶೀಲತೆಯನ್ನು ತಡೆಯಲಾಗಿದೆ. ಅದನ್ನು ಕೀಳಾಗಿ ಎಣಿಸಲಾಗಿದೆ. ಆದರೆ ಯಾರು ಸಾರ್ವಜನಿಕ ಹಿತಕ್ಕಾಗಿ ವ್ಯಕ್ತಿಯ ಸ್ಥಳವನ್ನು ಆಕ್ರಮಿಸಬಲ್ಲರು? ಈ ಸಂದರ್ಭದಲ್ಲಿ ಅದನ್ನು ಮಾಡಲು ಸಾಧ್ಯವಿರುವುದು ರಾಜ್ಯಾಡಳಿತಕ್ಕೆ ಮಾತ್ರ.

ಪ್ರತಿಯೊಬ್ಬ ಪ್ರಜೆಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವ ಜವಾಬ್ದಾರಿ ರಾಜ್ಯಾಡಳಿತದ್ದು. ಆದರೆ ವ್ಯಕ್ತಿಗಳಿಲ್ಲದೆ ರಾಜ್ಯ ಹೇಗೆ ಅಸ್ಥಿತ್ವಕ್ಕೆ ಬರಬಲ್ಲದು? ಸಮಾಜ ವ್ಯಕ್ತಿಗಳ ಒಂದು ಸಮೂಹವಲ್ಲವೆ?

ಕಾರ್ಲ್‌ಮಾರ್ಕ್ಸ್ ಮರೆತದ್ದು ಮತ್ತು ಜಗತ್ತಿನಾದ್ಯಂತ ಕಮ್ಯೂನಿಸ್ಟರು ನೆನಪಿನಲ್ಲಿರಿಸಿಕೊಂಡಿರುವುದು ವ್ಯಕ್ತಿ ಅಥವಾ ಪ್ರಜೆ ಮಧ್ಯೆ ಒಂದು ಕುಟುಂಬ ಇದ್ದು ಅದು ಬಹಳ ಪ್ರಮುಖವಾದುದು ಎಂಬುದನ್ನು, ಯಾವುದೇ

ಪಶ್ಚಿಮ ಬಂಗಾಳದ ದುರದೃಷ್ಟ

ಮಮತಾ ಆಡಳಿತ ಹಿನ್ನಡೆಯೇ?

ಕುಟುಂಬದ ಹಂಬಲ ಆ ಕುಟುಂಬದ ಬಗ್ಗೆ ಮಾತ್ರ. ಯಾವುದೇ ಕುಟುಂಬದ ಯಜಮಾನ ಆ ಕುಟುಂಬದ ಆಗು ಹೋಗುಗಳನ್ನು ನೋಡಿಕೊಳ್ಳದಿದ್ದಲ್ಲಿ ಅವನು ಜೀವನದ ಇತರ ಎಲ್ಲಾ ಕೆಲಸಗಳಲ್ಲಿಯೂ ಸಂಪೂರ್ಣವಾಗಿ ಸೋತಂತೆಯೆ.

ಎಡ ಪಕ್ಷಗಳು ಪಶ್ಚಿಮ ಬಂಗಾಳದಲ್ಲಿ ತಮ್ಮ 34 ವರ್ಷಗಳ ತಡೆ ರಹಿತ ಆಡಳಿತವಿದ್ದಾಗ್ಯೂ ಸೋತವು. ಏಕೆ ಕಮ್ಯೂನಿಸ್ಟ್‌ವಾದ ದೀನ ದಲಿತರನ್ನು ಕೈ ಹಿಡಿಯಲಿಲ್ಲ?

* * * * * *

ಪಶ್ಚಿಮ ಬಂಗಾಳ ಬಹುಬೇಗ ಒಂದು ಪುರಾತನ ಸಮಾಜವಾಗಿ ಬದಲಾಗಬಹುದು.

ಜಯದ ಕಾಲದಲ್ಲಿ ಅನೇಕ ವೇಳೆ ವಿವೇಚನಾಯುತ ಚಿಂತನೆ ಹಿಂದೂಡಲ್ಪಡುತ್ತದೆ. ಯಾವುದೋ ಅರ್ಥವಾಗದ ಕಾರಣಕ್ಕಾಗಿ ಈ ಯಶಸ್ಸಿನಿಂದ ನೋಡುವವರ ಕಣ್ಣು ಕೋರೈಸಲ್ಪಡುತ್ತದೆ. ಈಗ ತಾನೆ ಮುಗಿದ ಪಶ್ಚಿಮ ಬಂಗಾಳದ ಶಾಸನ ಸಭೆಗೆ ನಡೆದ ಚುನಾವಣೆ ವಿಶ್ಲೇಷಕರು ಹೇಗೆ ಅಂದಿನ ಮನಸ್ಥಿತಿಯೊಡನೆ ತಾವೂ ಸಾಗಿದರು ಹಾಗೂ ಜಯವನ್ನು ಎತ್ತಿ ಹಿಡಿದರು ಮತ್ತು ಅದರಿಂದ ಕುರುಡಾದರು, ಎಂಬುದಕ್ಕೆ ಇದೊಂದು ದೊಡ್ಡ ಉದಾಹರಣೆ. ವಿದ್ವಾಂಸರು ಸಹ ಸ್ವಲ್ಪ ಹೆಚ್ಚು ಸಮಯ ತೆಗೆದು ಕೊಳ್ಳುತ್ತಾರಾದರೂ, ಆ ಕಡೆಯೆ ನಡೆಯುತ್ತಾರೆ.

ಮಮತಾ ಬ್ಯಾನರ್ಜಿಯವರಿಗೆ ಈಗ ಆಗಿರುವಂತೆ, ಜಯದ ಮೊತ್ತ ಅತಿ ಹೆಚ್ಚಾಗಿರುವ ಸಂದರ್ಭದಲ್ಲಿ ಪರಿಸ್ಥಿತಿಯನ್ನು ಸರಿಯಾದ ಬೆಳಕಿನಲ್ಲಿ ನೋಡುವುದು ಸ್ವಲ್ಪ ಕಷ್ಟ. ಮಮತಾ ಬ್ಯಾನರ್ಜಿ ಅವರು ಬಹಳ ಶಾಂತರೂ, ನಮ್ರರೂ ಆಗಿ ಈ ಜಯವನ್ನು ಸ್ವೀಕರಿಸಿರುವರಾದರೂ ವಿಶ್ಲೇಷಕರು ಬಹಳ ಅಹಂಕಾರಪೂರಿತರಾಗಿದ್ದಾರೆ ಮತ್ತು ವಾಗ್ಝರಿ ಮಲ್ಲರಾಗಿದ್ದಾರೆ. ಇಂದಿನ ಈ ಸ್ಥಿತಿಯನ್ನು ವಿದ್ವಾಂಸರೂ ನಿರಾಸೆಗೊಳಿಸುವುದಿಲ್ಲ. ಆದರೆ ಒಂದು ವಿಶಾಲ ಭೂಮಿಕೆಯಲ್ಲಿ ನೋಡುವುದಾದರೆ ಪಶ್ಚಿಮ ಬಂಗಾಳದಂತ ಸಮೃದ್ಧ ಸಾಂಸ್ಕೃತಿಕ ಹಿನ್ನೆಲೆಯುಳ್ಳ ಒಂದು ರಾಜ್ಯಕ್ಕೆ ಮುಖ್ಯಮಂತ್ರಿಯಾಗಿ ಮಮತಾ ಅವರನ್ನು ಹೊಂದುವುದು ಭಾರತಕ್ಕೆ ಸರಿಯಾದುದೆ? ಪಶ್ಚಿಮ ಬಂಗಾಳವನ್ನು ಎಡಪಂಥದಿಂದ ಬಿಡುಗಡೆ ಮಾಡುವ ಯಾರೇ ಆಗಲಿ ಮಾನವೀಯತೆಯ ವೀರರಾಗುತ್ತಾರೆ. 34 ವರ್ಷಗಳ ತಡೆ ರಹಿತ ಎಡ ಪಕ್ಷೀಯ ಆಡಳಿತದಲ್ಲಿ ಒಂದು ಶತಮಾನ ಕಾಲ ಯಜಮಾನನ ಮಟ್ಟದಲ್ಲಿದ್ದ ಈ ರಾಜ್ಯ ನೌಕರನ ಮಟ್ಟಕ್ಕೆ ಇಳಿಯಿತು.

ಸಮಕಾಲೀನ ಜಗತ್ತಿನಲ್ಲಿ ಕಾಲ ಬೆಳಕಿನಷ್ಟು ವೇಗವಾಗಿ ಸಂಚರಿಸುತ್ತದೆ. ಸ್ವಲ್ಪ ಸಮಯದಲ್ಲೇ ಎಡ ಸರ್ಕಾರ ಪಶ್ಚಿಮ ಬಂಗಾಳದ ಜನರನ್ನು ಉದ್ಯೋಗ ಹುಡುಕುವವರನ್ನಾಗಿ ಮಾಡಿತು. ಆ ದೃಷ್ಟಿಯಲ್ಲಿ ಮಮತಾ ಬ್ಯಾನರ್ಜಿ ಒಬ್ಬ ವಿಮೋಚಕರು ಅವರು ತನ್ನ ರಾಜ್ಯದ ಪ್ರಜೆಗಳನ್ನು ಬಂಧ ಮುಕ್ತಿಗೊಳಿಸಿದುದು ಮಾತ್ರವಲ್ಲ ಪ್ರಜಾಪ್ರಭುತ್ವವನ್ನು ಬಂಧ ಮುಕ್ತಿಗೊಳಿಸಿದರು. ಅದರೆ ನಾವು ಯೋಚಿಸುತ್ತಿರುವುದು ಮಮತಾ ಬ್ಯಾನರ್ಜಿಯವರ ಬಗ್ಗೆ ಮಾತ್ರವಲ್ಲ ಬಂಗಾಳಿ ಸಮಾಜದ ಬಗ್ಗೆ. ಇದು ಬಹಳ ಪ್ರಮುಖವಾದುದು.

ನಾವು ಕೇಳಬೇಕಾದ ಪ್ರಶ್ನೆ ಎಂದರೆ ಒಂದು ಪ್ರಜಾಪ್ರಭುತ್ವದಲ್ಲಿ ಹೇಗೆ ಒಂದೇ ಸಮನೆ ಏಳು ಬಾರಿ ಒಂದೇ ಪಕ್ಷವನ್ನು ಜನರು ಚುನಾಯಿಸಿದರು ಎಂಬುದು? ಅದಕ್ಕಿಂತಲು ಕೆಡುಕಿನದು ಎಂದರೆ ಜ್ಯೋತಿಬಸು ಎಂಬ ಒಬ್ಬ ಮನುಷ್ಯ ಅಷ್ಟು ಧೀರ್ಘಕಾಲ ಸರ್ಕಾರದ ನಾಯಕನಾಗಿದ್ದು ತನ್ನ ಬಗ್ಗೆ ಅಲ್ಲ ಬಂಗಾಳಿ ಸಮಾಜದ ಬಗ್ಗೆ ಹೊಸ ಚರ್ಚೆಗೆ ಹೇಗೆ ಕರೆಕೊಡುತ್ತಾರೆ ಎಂಬುದು. ಆಗಾಗಲೆ ಬಸು ತಮ್ಮ ದೃಷ್ಟಿಯನ್ನು ಹೊಸ ದೆಹಲಿಯ ಮೇಲಿಟ್ಟಿದ್ದರು ಮತ್ತು ಬುದ್ಧದೇವ ಭಟ್ಟಾಚಾರ್ಯ ಪಶ್ಚಿಮ ಬಂಗಾಳದ ಆಡಳಿತದ ಚುಕ್ಕಾಣಿ ಹಿಡಿದಿದ್ದರು.

ನಮ್ಮ ವಿಶ್ಲೇಷಕರು ಮಮತಾ ಜಯವನ್ನು ಗಳಿಸಲಿಲ್ಲ, ಯಶಸ್ಸನ್ನು ಮಾತ್ರ ಪಡೆದಿದ್ದಾರೆ ಎಂಬುದನ್ನು ಗುರಿತಿಸುವಲ್ಲಿ ಸೋತಿದ್ದಾರೆ. ಎಡ ಪಂಥೀಯರ ಸೋಲು ಪಶ್ಚಿಮ ಬಂಗಾಳದಿಂದ ಹೊರಗೆ ನೆಲೆಸಿರುವ ಶಕ್ತಿಗಳಿಂದ ಉಂಟಾಗಿದೆ. ಎಡ ಪಂಥೀಯರ ಅಮಾನವೀಯ ದೃಷ್ಟಿಕೋನವನ್ನು ತಡೆದುಕೊಳ್ಳಲಾಗದೆ ಆ ರಾಜ್ಯದ ಕೆಳವರ್ಗಗಳು ತಮ್ಮ ಹುಟ್ಟಿನ ನಾಡನ್ನು ಬಿಟ್ಟು ಹೊರಡಲು ಪ್ರಾರಂಭಿಸಿದರು.

1990ರ ನಂತರದ ಆರ್ಥಿಕ ವಿಸ್ತರಣೆಯಲ್ಲಿ ಬಂಗಾಳದ ಕೆಳ ವರ್ಗಗಳು ಬದಲಾಗುತ್ತಿರುವ ಭಾರತವನ್ನು ಕಂಡರು. ಅವರು ತಮ್ಮ ರಾಜ್ಯದ ಹೊರಗಣ ಜಗತ್ತನ್ನು ಕಂಡು ತಾವೂ ಕೂಡ ತಮಗೆ ಬೇಕಾದ ಸರ್ಕಾರವನ್ನು ಆರಿಸಿಕೊಳ್ಳಬಹುದು ಮತ್ತು ತಮ್ಮನ್ನು ಆಳುವವರನ್ನು ಬದಲಿಸಬಹುದು ಎಂಬುದನ್ನು ಅರಿತುಕೊಂಡರು. ಪಶ್ಚಿಮ ಬಂಗಾಳದ ಹೊರಗೆ ಹುಟ್ಟಿದ ಈ ಹೊಸ ಅರಿವು ಮುಚ್ಚಿದ ಬಂಗಾಳ ಸಮಾಜದ ಕಡೆಗೆ ಹರಿದು ಬಂದಿತು.

ರಾಜ್ಯದ ಹೊರಗೆ ವಾಸಿಸುತ್ತಿದ್ದ ಅನೇಕ ಬಂಗಾಳಿಗಳು ಎಡ ಪಕ್ಷಗಳ ವಿರುದ್ಧವಾಗಿ ತಮ್ಮ ಮತವನ್ನು ನೀಡಿ ಅವರು ಅಧಿಕಾರದಿಂದ ಹೊರಹೋಗುವಂತೆ ಮಾಡಲು ತಮ್ಮ ತಮ್ಮ ಊರಿಗೆ ವಿಶೇಷ ಪ್ರಯಾಣ ಮಾಡಿದ ನಿದರ್ಶನಗಳೆಷ್ಟೋ!

ಅದು ಮಮತಾ ಅವರ ಜಯದ ಹಿಂದಿನ ಗುಟ್ಟು. ಕಾಂಗ್ರೆಸ್ ಸಹ ಎಡ ಪಂಥೀಯರನ್ನು ಸೋಲಿಸಬಹುದಿತ್ತು. ಆದರೆ ಅದರೊಳಗಡೆ ಎಡ ಪಂಥೀಯರನ್ನು ಮುಂದೆ ಮಾಡಿ ನಡೆಯುವ ಒಂದು ಗುಂಪು ಗಟ್ಟಿಯಾಗಿದ್ದುದರಿಂದ ಅದು ಸಾಧ್ಯವಾಗಲಿಲ್ಲ. ಎಡ ಪಕ್ಷಗಳನ್ನು ಅವು ಬಡವರ ಪರ ನಿಂತ ಪಾರ್ಟಿ ಎಂದೆ ಕಾಂಗ್ರೆಸ್ ಗುರುತಿಸಿತು. ಜನತೆಯ ಕಲ್ಪನೆಯಲ್ಲಿ ಎಡ ಪಂಥೀಯರು ತುಳಿತಕ್ಕೊಳಗಾದವರ ಜೊತೆ ಇದ್ದಾರೆ ಎಂಬ ಕಲ್ಪನೆಯಿತ್ತು. ಕಾಂಗ್ರೆಸ್ ಅಂತಹ ಕಲ್ಪನೆಯನ್ನು ತನ್ನ ಉದ್ದೇಶಕ್ಕೆ ಬಳಸಿಕೊಂಡಿತು. ಯಾವಾಗ ಕಾಂಗ್ರೆಸ್‌ಗೆ ಎಡ ಪಂಥೀಯರು ಬಡವರ ಪರ ಎನ್ನುವ ಕಲ್ಪನೆಯನ್ನು ಕಳೆದುಕೊಂಡಿದ್ದಾರೆ ಎಂದು ಅನ್ನಿಸಿತೊ ಆಗ ಅವರು ಆ ಪಕ್ಷದ ಕೈ ಬಿಡಲು ನಿರ್ಧರಿಸಿದರು. ಮಮತಾ ಅವರು ಆಗಾಗಲೆ ಎಡ ಪಂಥೀಯರ ವಿರುದ್ಧ ತಮ್ಮ ಚಳವಳಿಯನ್ನು ಪ್ರಾರಂಭಿಸಿದ್ದರು. ಈಗ ನಮ್ಮ ಮುಂದಿರುವ ಪ್ರಶ್ನೆ ಎಂದರೆ ಬಂಗಾಳಿಗಳು 34 ವರ್ಷ ಸತತವಾಗಿ ತಮ್ಮನ್ನಾಳಿದ ರಾಜಕೀಯ ಪಕ್ಷವನ್ನು ಕಿತ್ತೊಗೆಯಲು ಶಕ್ತರಾಗಿದ್ದರೆ ಅವರು ಮತ್ತೆ ಮತ್ತೆ ಮಮತಾ ಅವರನ್ನೆ ಆರಿಸಿ ಕಳುಹಿಸುವುದನ್ನು ಯಾರು ತಾನೆ ತಡೆಯ ಬಲ್ಲರು?

ಮಮತಾ ಅವರು ಎಡ ಪಂಥೀಯರಿಗಿಂತ ಹೆಚ್ಚು ಕ್ರಾಂತಿಕಾರಿಗಳು ಎಂದು ಕೆಲವರು ನಂಬಿದ್ದಾರೆ. ಅವರು ಸತ್ವಹೀನ ಆಡಳಿತಗಾರಿಣಿ ಎಂದು ಈಗಾಗಲೆ ತೋರಿಸಿಕೊಟ್ಟಿದ್ದಾರೆ ಮಮತಾ ಅವರು ಎಡ ಪಕ್ಷಗಳಿಗಿಂತ ಹೆಚ್ಚು ಕೈಗಾರಿಕೀಕರಣ ವಿರೋಧಿಗಳು ಮತ್ತು ಉಪಭೋಗತಾವಾದದ ವಿರೋಧಿಗಳು. ಅವರು ನಡೆದುಕೊಂಡ ರೀತಿಯನ್ನೊಮ್ಮೆ ನೋಡಿ. ಮುಖ್ಯಮಂತ್ರಿಯಾಗಿ ಪ್ರಮಾಣ ಸ್ವೀಕರಿಸಿದ ನಂತರ ಮಂತ್ರಾಲಯಕ್ಕೆ ತನ್ನ ಜವಾಬ್ದಾರಿ ವಹಿಸಿಕೊಳ್ಳಲು ಕಾಲ್ನಡಿಗೆಯಲ್ಲಿ ಹೋಗುವುದನ್ನು ಅವರು ಆರಿಸಿಕೊಂಡರು. ಮುಖ್ಯಮಂತ್ರಿಯ ವಾಹನವನ್ನು ಅವರು ತಿರಸ್ಕರಿಸಿದ್ದಾದರು ಏಕೆ? ತಾವು ಕೆಳ ಮಧ್ಯಮ ವರ್ಗದ ಕುಟುಂಬದಿಂದ ಬಂದಿದ್ದು ತಾವು ಕಾರಿನಲ್ಲಿ ಪ್ರಯಾಣ ಮಾಡಲು ಶಕ್ತರಲ್ಲ ಎಂಬುದನ್ನು ಎತ್ತಿ ತೋರಿಸಲಿಕ್ಕೆ. ನಿಜವಾಗಿಯೂ ಬಹಳ ಸಾಂಕೇತಿಕ! ಮಮತಾ ತಾವು ಬೆಳೆದ ಮನೆಯಲ್ಲಿಯೆ ಮುಂದುವರೆದಿದ್ದಾರೆ. ಅದು ಬಡತನ ರೇಖೆಗಿಂತ ಕೆಳಗೆ ಇರುವ ಜನರು ವಾಸಿಸುವಂತ ಮನೆ. ಕೇಂದ್ರ ಮಂತ್ರಿಯಾಗಿ 2 ಬೆಡ್ ರೂಂಗಳ ಮನೆಗೆ ಹೋಗಲು ಅವರು ಶಕ್ತರಿದ್ದರು. ಅವರು ತಾವು ಬೆಳೆದ ಮನೆಯಲ್ಲಿಯೆ ವಾಸ ಮುಂದುವರೆಸುವುದಾಗಿ ವರದಿಗಳಿವೆ. ಮುಖ್ಯಮಂತ್ರಿಗೆ ಮೀಸಲಾದ ಸರ್ಕಾರಿ ಬಂಗಲೆಗೆ ಸ್ಥಳಾಂತರವಾಗಲು ಅವರು ತಿರಸ್ಕರಿಸಿದ್ದಾರೆ.

ಇದು ಏನನ್ನು ಸೂಚಿಸುತ್ತದೆ? ಭಾರತ ಕಾರುಗಳಲ್ಲಿ ಪ್ರಯಾಣಿಸುವುದನ್ನು ಬಿಟ್ಟುಬಿಡಬೇಕೆ? ನಾವು ನಮ್ಮ ವಾಹನ ತಯಾರಿಕಾ ಕೈಗಾರಿಕೆಗಳನ್ನು ಮುಚ್ಚಿ ಎತ್ತು ಬಂಡಿಗಳ ಕಾಲಕ್ಕೆ ಹೋಗಬೇಕೆ? 34 ವರ್ಷಗಳ ಕಾಲ ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ ಕಮ್ಯೂನಿಸ್ಟ್ ಆಡಳಿತ ಪಶ್ಚಿಮ ಬಂಗಾಳದಲ್ಲಿ ಮತ್ತೆ ಬಂದರೆ ಏನಾಗಬಹುದು? ಮಮತಾಗಿಂತಲೂ ಎಸ್.ಯು.ಸಿ.ಐ ಹೆಚ್ಚು ಕ್ರಾಂತಿಕಾರಕ. ಹಾಗೇನಾದರು ಆದರೆ ಪಶ್ಚಿಮ ಬಂಗಾಳ ರಾಜ್ಯವನ್ನು ಜ್ಯೋತಿಬಸು ಅಂತಹವರೆ ಒಂದು ಶತಮಾನ ಆಳಿದಂತಾಗುತ್ತದೆ ಒಂದು ಸಮಾಜ ಸತತವಾಗಿ ಹಿನ್ನಡೆದರೆ ಅದು ಪುರಾತನ ಸಮಾಜವಾಗಿ ಬದಲಾಗುವ ಸಾಧ್ಯತೆ ಇಲ್ಲವೆ? □

ಬುದ್ಧಾಯಣ

೨೦

ಕೇಳಿದ್ದನ್ನೆಲ್ಲ ಕೊಡುವ ಗಡಿಗೆ ಆದರೆ... !?

ಸಿ. ಹೆಚ್. ರಾಜಶೇಖರ್

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಶ್ರಾವಸ್ಥಿಯ ಜೇತ ವನದಲ್ಲಿ ತನ್ನ ಅಪಾರ ಭಿಕ್ಷು ಸಹೋದರರೊಂದಿಗೆ ತಂಗಿದ್ದರು. ಅದಕ್ಕೂ ಪೂರ್ವದಲ್ಲಿ ವಾರಣಾಸಿ ರಾಜ್ಯವನ್ನು ಬ್ರಹ್ಮದತ್ತ ರಾಜನು ಆಳುತ್ತಿದ್ದನು. ಅಂತಹ ಸಂದರ್ಭದಲ್ಲಿ ಬೋಧಿಸತ್ವರು ಅಗರ್ಭ ಶ್ರೀಮಂತನಾದ ಶ್ರೇಷ್ಠಿಯೊಬ್ಬನ ಮಗನಾಗಿ ಜನಿಸಿದರು. ಅವರು ಬೆಳೆದು ದೊಡ್ಡವರಾದ ಬಳಿಕ ತಂದೆಯ ವೃತ್ತಿಯನ್ನು ಅವಲಂಭಿಸಿದರು. ಪ್ರಾಪ್ತ ವಯಸ್ಸಿಗೆ ಬಂದ ಮೇಲೆ ಅವರಿಗೆ ಒಂದು ಸುಂದರ ವಧುವನ್ನು ತಂದು ಮದುವೆ ಮಾಡಿದರು. ಅಕಾಲಿಕ ಮರಣಕ್ಕೆ ತುತ್ತಾದ ಅವರ ತಂದೆಯು ತೀರಿ ಹೋದರು. ಮಗನಿಗಾಗಿ ಅಪಾರ ಸಂಪತ್ತನ್ನು ಬಿಟ್ಟು ಹೋಗಿದ್ದರು. ಬೋಧಿಸತ್ವರು ಕೂಡ ತಂದೆ ತೋರಿದ ಮಾರ್ಗದಲ್ಲಿ ವ್ಯಾಪಾರ ಮತ್ತು ಕೃಷಿಯನ್ನು ಮುಂದುವರೆಸಿಕೊಂಡು ಹೋದರು. ಅವರೂ ಕೂಡ ಅಪಾರ ಸಂಪತ್ತನು ಗಳಿಸಿ ತಂದೆಯ ಅಭಿಲಾಷೆಯನ್ನು ಪಾಲಿಸಿದರು.

ಬೋಧಿಸತ್ವರು ಅವರ ತಂದೆಗಿಂತ ವಿಭಿನ್ನರಾಗಿದ್ದರು. ತಾವು ಗಳಿಸಿದ ಸಂಪತ್ತನ್ನು ಸತ್ಪಾತ್ರರಿಗೆ ದಾನವಾಗಿ ಕೊಡುತ್ತಿದ್ದರು. ಅವರ ಬಳಿ ಕಷ್ಟವೆಂದು ಯಾರೇ ಸಹಾಯ ಕೇಳಿ ಬಂದರೂ ಅವರನ್ನು ನಿರಾಸೆಗೊಳಿಸಿ ಬರಿಗೈಯಲ್ಲಿ ಕಳುಹಿಸುತ್ತಿರಲಿಲ್ಲ. ಹೀಗಿರಲು ಅವರಿಗೊಬ್ಬ ಮಗನು ಹುಟ್ಟಿದ. ಆತ ಬೆಳೆದು ದೊಡ್ಡವನಾದ ಬಳಿಕ ತಂದೆಯ ಅಥವಾ ಅಜ್ಜನ ಯಾವ ಗುಣವನ್ನೂ ಹೊಂದಿರಲಿಲ್ಲ. ವ್ಯಾಪಾರದಲ್ಲಾಗಲೀ ಕೃಷಿಯಲ್ಲಾಗಲೀ ಆತನಿಗೆ ಆಸಕ್ತಿ ಇರಲಿಲ್ಲ. ಬದಲಿಗೆ ಜೂಜು, ಮೋಜು, ಕುಡಿತ, ನೃತ್ಯ, ಸಂಗೀತ, ವೇಶ್ಯೆಯರ ಒಡನಾಟ ಮತ್ತು ಕೆಟ್ಟ ಸ್ನೇಹಿತರ ಸಹವಾಸವಿತ್ತು. ಇದರ ಪ್ರತಿಫಲವಾಗಿ ಬೋಧಿಸತ್ವರು ಗಳಿಸಿಟ್ಟಿದ್ದ ಅಪಾರ ಸಂಪತ್ತು ಮಗನ ವಿಲಾಸ ಜೀವನಕ್ಕೆ ವ್ಯಯವಾಗ ತೊಡಗಿತು.

ಬೋಧಿಸತ್ವರು ದಾನಾದಿ ಪುಣ್ಯ ಕರ್ಮಗಳನ್ನು ಮಾಡಿ ಕೀರ್ತಿವಂತರಾದರು. ಮಗನ ಗುಣ ಸ್ವಾಭಾವವನ್ನು ಅರಿತ್ತಿದ್ದ ಅವರು ಆತನ ಆಪತ್ತಿನ ಕಾಲಕ್ಕೆ ಹಣವು ಬೇಕಾಗುತ್ತದೆ ಎಂದು ಮಗನ ಮೇಲಿನ ಪ್ರೀತಿಯಿಂದ ಆತನಿಗೆ ತಿಳಿಯದಂತೆ ನಲವತ್ತು ಕೋಟಿ ಸಂಪತ್ತನ್ನು ನೆಲಮಾಳಿಗೆಯಲ್ಲಿ ಹೂಳಿದ್ದರು. ತಮ್ಮ ಆಯಸ್ಸು ಮುಗಿಯುವ ಸೂಚನೆಯನ್ನು ಕಂಡುಕೊಂಡ ಬಳಿಕ ಮಗನಿಗೆ ಹೇಳ ಬೇಕಾದ ಬುದ್ಧಿವಾದವನ್ನು ಹೇಳಿ ಆದ ನಂತರ;

"ದುಡಿದು ತಿನ್ನುವುದನ್ನು ರೂಢಿಸಿಕೋ. ನಿನ್ನದಲ್ಲದ ಶ್ರಮದ ಫಲದ ಮೇಲೆ ನೀನು ಮೋಜು ಮಾಡುವುದೆಂದರೆ ಋಣವನ್ನು ಹೆಚ್ಚಿಸಿಕೊಂಡತೆಯೇ ಸರಿ. ಮಿಥ್ಯದೃಷ್ಟಿಗೆ ವಶನಾಗಿ ಸ್ವತಃ ಗಳಿಕೆ ಇಲ್ಲದೆ ಮೋಜು ಮಾಡುವವನ ಕೈಗೆ ಚಕ್ರವರ್ತಿಯ ತುಂಬಿದ ಖಜಾನೆಯನ್ನು ಕೊಟ್ಟರೂ ಆತ ಅದನ್ನು ಬರಿದು ಮಾಡಿ ಮತ್ತೆ ಮುಂದಿನ ಖಜಾನೆಯತ್ತ ಕಣ್ಣಾಡಿಸದೇ ಬಿಡುವುದಿಲ್ಲ. ಇಂದಿನ ಸುಖಕ್ಕೆ ಮರುಳಾಗಿ ಮುಂದಿನ ದುಃಖಕ್ಕೆ ದಾರಿ ಮಾಡಿಕೊಡಬೇಡ. ಇಂದಿನ ಮೋಜು ಇಂದಿಗೆ ನಾಳಿನ ಚಿಂತೆ ನನಗೆ ಬೇಡವೆಂದರೂ ಕೂಡ ನೀನು ಮಾಡಿದ ತಪ್ಪು ನಿನ್ನನ್ನು ಹುಡುಕಿ ಬರದೆ ಬಿಡುವುದಿಲ್ಲ. ಎಚ್ಚರವಿರಲಿ, ಎಚ್ಚರ ತಪ್ಪಿದರೆ ಅವನತಿ ತಪ್ಪದು. ನೀನು ಮಾಡುವ ಪ್ರತಿ ಕರ್ಮವು ಇಂದು ಮತ್ತು ಮುಂದಿನ ಸುಖಕ್ಕೆ ನಾಂದಿಯಾಗಲಿ. ಇಲ್ಲವೆಂದರೆ ಇಂದಲ್ಲದೆ ಮುಂದೆಯಾದರೂ ಆ ಸಾಲವನ್ನು ತೀರಿಸಿಯೇ ನೀನು ಮುನ್ನಡೆಯಬೇಕು. ಋಣ ಮುಕ್ತನಾಗುವ ತನಕ ನಿನಗೆ ಬಿಡುಗಡೆ ಇಲ್ಲ. ಆದ್ದುದರಿಂದ ಕೆಟ್ಟ ಮಾರ್ಗವನ್ನು ಬಿಟ್ಟು ಒಳ್ಳೆಯ ಮಾರ್ಗದಲ್ಲಿ ನೆಡೆದಾಗ ಮಾತ್ರ ಸದ್ಗತಿ" ಎಂದ ಬೋಧಿಸತ್ವರು ಕೆಲವೇ ದಿನಗಳಲ್ಲಿ ಮರಣ ಹೊಂದಿದರು. ಮುಂದೆ ಅವರ ಪುಣ್ಯದ ಫಲವಾಗಿ ಸುಗತಿಯಲ್ಲಿ ಹುಟ್ಟಿ ಶಕ್ರ ದೇವರಾಜನ ಪದವಿಯನ್ನು ಪಡೆದರು.

ಆದರೆ ಮಗನು ಮಾತ್ರ ತನ್ನ ನಡತೆಯಲ್ಲಿ ಪರಿವರ್ತನೆಯಾಗಲಿಲ್ಲ. ಕೆಟ್ಟ ಗೆಳೆಯರ ಗುಂಪಿಗೆ ಅವನೇ ನಾಯಕನಾಗಿ ಬೀದಿ ಬೀದಿ ಅಲೆಯುತ್ತಿದ್ದ. ಎಲ್ಲಿ ಜಾತ್ರೆ ನೆಡೆಯುತ್ತದೆ? ಎಲ್ಲಿ ಜನ ಜಂಗುಳಿ ಇದೆ ಅಲ್ಲಿ ಆತ ಹಾಜರಿರುತ್ತಿದ್ದ. ಕುಣಿಯುವವರಿಗೆ, ದೊಂಬರಾಟ ಆಡುವವರಿಗೆ, ನರ್ತಿಸುವವರಿಗೆ ಸಾವಿರ ಸಾವಿರ ಹಣವನ್ನು ಕೊಡುತ್ತಿದ್ದ. ದಿನದಿಂದ ದಿನಕ್ಕೆ ಆತನಿಗೆ ಕುಡಿಯುವ, ಜೂಜಾಡುವ, ನರ್ತನ ಸಂಗೀತಾದಿಗಳನ್ನು ಕೇಳುವ, ಮಾಂಸ ತಿನ್ನುವ ಮತ್ತು ವೇಶ್ಯೆಯರ ಸಂಗವು ಮಿತಿ ಮೀರಿತು. ಅದರ ಪರಿಣಾಮವಾಗಿ ತಂದೆ ತನ್ನ ಆಪಕ್ಕಾಲಕ್ಕಾಗಿ ಇಟ್ಟಿದ್ದ ಹಣವನ್ನೂ ಕೂಡ ವೆಚ್ಚ ಮಾಡಿ ಬರೀಗೈಯಾದ.

ಆತನ ಸ್ನೇಹಿತರು, ಸಂಗಡಿಗರು ಅವನಿಂದ ದೂರವಾದರು. ನಿಲ್ಲಲು ನೆಲೆ ಇಲ್ಲದೆ ತಿನ್ನಲು ಅನ್ನವಿಲ್ಲದೆ ಬೀದಿ ಬೀದಿ ಅಲೆಯ ತೊಡಗಿದ. ಅಂಥಹ ಸಂದರ್ಭದಲ್ಲಿ ಬೋಧಿಸತ್ವ ಸ್ವರೂಪಿಯಾದ ಶಕ್ರ ದೇವರಾಜನು ತನ್ನ ಪುತ್ರನ ಮೇಲಿನ ಪ್ರೇಮದ ಸಲುವಾಗಿ ಮಗನನ್ನು ನೋಡಲು ಬಂದರು. ಆತನ ದುರ್ಗತಿಯನ್ನು ಕಂಡು ಮನನೊಂದ ಅವರು ಬೇಡಿದ್ದನ್ನೆಲ್ಲ ಕೊಡುವಂತಹ ಗಡಿಗೆಯನ್ನು ನೀಡುತ್ತಾ;

"ಮಗು, ನನ್ನ ಹಿತವಚನವನ್ನು ಗಂಭೀರವಾಗಿ ಪರಿಗಣಿಸದೆ ಈ ರೀತಿಯ ದುರ್ಗತಿಗೆ ತುತ್ತಾದೆ. ಇನ್ನೂ ಮುಂದೆಯಾದರೂ ಬದುಕನ್ನು ಸತ್ಯ ಮಾರ್ಗದಲ್ಲಿ ಅರಿತು ನೆಡೆ. ನಿನಗೆ ಅತಿ ಕಷ್ಟ ಪರಿಸ್ಥಿತಿ ಬಂದಾಗ ಈ ಗಡಿಗೆಯನ್ನು ಕೈಗೆತ್ತಿಕೊಂಡು ನಿನಗೆ ಬೇಕಾದ್ದನ್ನು ಕೇಳು. ಅದು ಕ್ಷಣಾರ್ಧದಲ್ಲಿ ನಿನ್ನ ಬೇಡಿಕೆಯನ್ನು ಈಡೇರಿಸುತ್ತದೆ. ಆದರೆ ಅಜಾಗುರುಕತೆಯಿಂದ ಈ ಗಡಿಗೆಯನ್ನು ಒಡೆದು ಹಾಕಿದರೆ ನಿನ್ನ ಭಾಗ್ಯವು ಬರಿದಾಗುತ್ತದೆ" ಎಂದ ಶಕ್ರ ದೇವರಾಜನು ಮುನ್ನೆಡೆದ.

ಮಗನಿಗೆ ತನ್ನ ತಂದೆಯ ಬಗ್ಗೆ ಅಪಾರ ಪ್ರೀತಿ ಮೂಡಿತು.

ಬೋಧಿಸತ್ವರು ದಾನಾದಿ ಪುಣ್ಯ ಕರ್ಮಗಳನ್ನು ಮಾಡಿ ಕೀರ್ತಿವಂತರಾದರು. ಮಗನ ಗುಣ ಸ್ವಾಭಾವವನ್ನು ಅರಿತ್ತಿದ್ದ ಅವರು ಆತನ ಆಪತ್ತಿನ ಕಾಲಕ್ಕೆ ಹಣವು ಬೇಕಾಗುತ್ತದೆ ಎಂದು ಮಗನ ಮೇಲಿನ ಪ್ರೀತಿಯಿಂದ ಆತನಿಗೆ ತಿಳಿಯದಂತೆ ನಲವತ್ತು ಕೋಟಿ ಸಂಪತ್ತನ್ನು ನೆಲಮಾಳಿಗೆಯಲ್ಲಿ ಹೂಳಿದ್ದರು. ತಮ್ಮ ಆಯಸ್ಸು ಮುಗಿಯುವ ಸೂಚನೆಯನ್ನು ಕಂಡುಕೊಂಡ ಬಳಿಕ ಮಗನಿಗೆ ಹೇಳ ಬೇಕಾದ ಬುದ್ಧಿವಾದವನ್ನು ಹೇಳಿ ಆದ ನಂತರ; "ದುಡಿದು ತಿನ್ನುವುದನ್ನು ರೂಢಿಸಿಕೋ. ನಿನ್ನದಲ್ಲದ ಶ್ರಮದ ಫಲದ ಮೇಲೆ ನೀನು ಮೋಜು ಮಾಡುವುದೆಂದರೆ ಋಣವನ್ನು ಹೆಚ್ಚಿಸಿ ಕೊಂಡತೆಯೇ ಸರಿ ಎಂದರು.

ನನ್ನ ಕೆಟ್ಟ ಹವ್ಯಾಸದ ಫಲವಾಗಿ ಸುಂದರ ಬದುಕನ್ನು ಕಳೆದುಕೊಂಡೆ ಎಂಬ ಅರಿವಾಯಿತು. ತಂದೆಯು ಕೊಟ್ಟು ಹೋದ ಗಡಿಗೆಯ ಬಗ್ಗೆ ಅಪಾರ ಕುತೂಹಲ ಮೂಡಿತು. ಅದನ್ನು ಪ್ರಯೋಗಿಸಿ ನೋಡಬೇಕೆಂದು ಮೊದಲಿಗೆ ತನ್ನ ಹಸಿವೆಯು ನೆನಪಾಗಿ "ನನಗೆ ಭಕ್ಷ್ಯಭೋಜನ ಬೇಕೆಂದು" ಕೇಳಿದ. ತಡ ಮಾಡದೆ ವಿವಿಧ ಬಗೆಯ ಭೋಜನವು ಅವನ ಮುಂದೆ ಕಾಣಿಸಿತು. ಅದೆಷ್ಟೋ ದಿನದ ಹಸಿವು ಬಾಯಿಗೆ ಬಂದಂತಾಗಿ ಎರಡೂ ಕೈಯಿಂದ ಅವುಗಳನ್ನು ಭಕ್ಷಿಸಿದ. ಹೋದ ಜೀವವು ಮತ್ತೆ ಬಂದಂತಾಯಿತು. ಕ್ಷಣ ಕಾಲ ಸುಧಾರಿಸಿಕೊಂಡು ವಿಕಾರವಾಗಿ ಬೆಳೆದು ನಿಂತ ಗಡ್ಡ ಮೀಸೆಯ ಮೇಲೆ ಕೈಯಾಡಿಸಿಕೊಂಡ. ತನ್ನ ಬಗ್ಗೆಯೆ ತನಗೆ ಅಸಹ್ಯ ಮೂಡಿತು. ಗಡಿಗೆಯನ್ನು ಕೈಗೆತ್ತಿಕೊಂಡು ಬೆಳೆದು ನಿಂತ ತಲೆಕೂದಲು ಮತ್ತು ಗಡ್ಡ ಮೀಸೆಯನ್ನು ಕ್ಷೌರ ಮಾಡಲು ಕೋರಿದ ಅದರಂತೆಯೆ ಆಯಿತು. ಹತ್ತಿರವಿದ್ದ ನದಿಯಲ್ಲಿ ಮಿಂದ ಬಳಿಕ ರಾಜನ ಉಡುಗೆಯನ್ನು ಮತ್ತು ಕುದುರೆಯನ್ನು ಬೇಡಿ ಪಡೆದ.

ತನ್ನ ಹಳೆಯ ಮಿತ್ರರ ನೆನಪಾಯಿತು. ಅವರ ಬಳಿ ಹೋದ. ಅವರು ಇವನ ಹೊಸ ಸ್ಥಿತಿಗತಿಗಳನ್ನು ಕಂಡು ಅಪಾರ ಆಶ್ಚರ್ಯಗೊಂಡರು. ಹೀಗಾಗಲು ಕಾರಣವೆನೆಂದು ಕೇಳಲು ಅವನು ತನ್ನ ತಂದೆ ಕೊಟ್ಟ ಗಡಿಗೆಯನ್ನು ಅವರಿಗೆ ತೋರಿಸಿ ಅದರ ಮಹಿಮೆಯನ್ನು ವಿವರಿಸಿದ. ಹಾಗಾದರೆ ಮತ್ತೆ ಇವನನ್ನು ಬಿಡದೆ ಶೋಷಿಸಬೇಕೆಂದು ನಿರ್ಧರಿಸಿದರು. ಆತ ಹಿಂದಿನ ತನ್ನ ಎಲ್ಲಾ ಜೂಜು, ಮೋಜು, ಕುಡಿತ, ಸಂಗೀತ, ನೃತ್ಯ, ವೇಶ್ಯೆಯ ಸಂಗ ಹೀಗೆ ಎಲ್ಲ ಕೆಟ್ಟ ಚಾಳಿಗಳಿಗೆ ಮತ್ತೆ ಬಲಿಯಾದ. ಹಿಂದಿನ ತನ್ನ ದುರಂತ ಜೀವನದಿಂದ ಆತ ಯಾವ ಪಾಠವನ್ನೂ ಕಲಿಯಲಿಲ್ಲ ಸುಧಾರಿಸಲಿಲ್ಲ.

ಹೀಗೆ ಬೋಧಿಸತ್ವರ ಮಗನ ಕೆಟ್ಟ ಇತಿಹಾಸವು ಮುಂದುವರೆಯಲು ಒಂದು ದಿನ ಆತ ಅತಿಯಾಗಿ ಕುಡಿದು ನರ್ತಿಸತೊಡಗಿದ. ಪ್ರಜ್ಞಾಹೀನ ಸ್ಥಿತಿಯನ್ನು ತಲುಪಿದ ಅವನು ತನ್ನ ತಂದೆ ಕೊಟ್ಟ ಮಾಯಾ ಗಡಿಗೆಯನ್ನು ಆಕಾಶಕ್ಕೆ ಚಿಮ್ಮಿ ಕೈಯಲ್ಲಿ ಹಿಡಿಯಲು ಪ್ರಯತ್ನಿಸಿದ. ಮೈಮೇಲೆ ಸ್ವಾಧೀನ ತಪ್ಪಿದ ಕಾರಣಕ್ಕಾಗಿ ಆ ಗಡಿಗೆಯು ನೆಲದ ಮೇಲೆ ಬಿದ್ದು ಹೊಡೆದು ಹೋಯಿತು. ಆತ ಬಯಸದೆ ಬಂದ ಭಾಗ್ಯವು ಮತ್ತೆ ಬರಿದಾಯಿತು. ಆತ ಹಿಂದಿನಂತೆ ಮತ್ತೆ ದಾರಿದ್ರ್ಯವಂತನಾದ. ಅವನ ಸುತ್ತ ಮುತ್ತ ಆವರಿಸಿಕೊಂಡಿದ್ದ ಬಂಧು ಮಿತ್ರರೆಲ್ಲರೂ ಅವನನ್ನು ಅಗಲಿದರು. ಹಸಿವು ಅವನನ್ನು ಕಿತ್ತು ತಿನ್ನಲು ಪ್ರಾರಂಭಿಸಿತು. ಆಗ ಅವನಿಗೆ ತನ್ನ ನಿಜವಾದ ತಪ್ಪಿನ ಅರಿವು ಮೂಡಿತು. ತನ್ನ ತಂದೆಯ ಅಪಾರ ಕರುಣೆಯನ್ನು ನೆನೆ ನೆನೆದು ದುಃಖತಪ್ತನಾದ. ದಿನ ಕಳೆದಂತೆ ಹಸಿವು ಮತ್ತು ರೋಗರುಜಿನಗಳಿಗೆ ತುತ್ತಾಗಿ ಬೀದಿಯ ಬದಿ ಬಿದ್ದು ಸಾವಿಗೀಡಾಗುವ ಮುನ್ನ;

"ಹೌದು ತಂದೆ, ಶ್ರಮವಿಲ್ಲದ ಫಲ ಎಂದಿಗೂ ಅನುಭವವನ್ನಾಗಲೀ, ಮಾರ್ಗವನ್ನಾಗಲೀ ತೋರಲಾಗದು. ನನ್ನ ಶ್ರಮವೇ ನನ್ನ ಬಲ. ಅನ್ಯರ ಸಂಪತ್ತು ಕೇಡಿಗಷ್ಟೇ ದಾರಿ. ನಿನ್ನ ಮಾತಿನಲ್ಲಿ ಅರ್ಥವಿದೆ ಮತ್ತು ಧರ್ಮವಿದೆ!!" ಎಂದು ಕೊನೆಯ ಉಸಿರನ್ನು ಎಳೆದ. □

ಹಸಿವಿನ ದೂತ ಹೀಗೆ ಬಂದು ನಿಂತ!!

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಸಾವಸ್ಥಿಯ ಜೇತವನದಲ್ಲಿ ತಮ್ಮ ಅಪಾರ ಶಿಷ್ಯರೊಂದಿಗೆ ತಂಗಿದ್ದರು. ಅದಕ್ಕೂ ಪೂರ್ವ ಕಾಲದಲ್ಲಿ ವಾರಣಾಸಿ ರಾಜ್ಯವನ್ನು ಬ್ರಹ್ಮದತ್ತ ರಾಜನು ಆಳುತ್ತಿದ್ದನು. ಅಂತಹ ಸಮಯದಲ್ಲಿ ಬೋಧಿಸತ್ವರು ರಾಜನ ಮಗನಾಗಿ ಜನ್ಮತಾಳಿದರು. ಪ್ರಾಪ್ತ ವಯಸ್ಸಿಗೆ ಬರುವಷ್ಟರಲ್ಲಿ ಕಲಿಯಬೇಕಾದ ಸಕಲ ವಿದ್ಯೆಯನ್ನು ಕಲಿತನು. ತಂದೆಯ ಮರಣಾನಂತರ ರಾಜ ಪದವಿಯನ್ನು ಸ್ವೀಕರಿಸಿದನು. ಅವನು ಊಟದ ಬಗ್ಗೆ ಬಹಳ ಗಮನವನ್ನು ಕೊಡುತ್ತಿದ್ದ. ಊಟವು ಆರೋಗ್ಯಪೂರ್ಣವಾಗಿರಬೇಕು ಎಂಬ ಭಾವನೆಯಿಂದ ಶುದ್ಧಾಶುದ್ಧತೆಯ ಬಗ್ಗೆ ಗಮನ ಹರಿಸುತ್ತಿದ್ದ. ತಾನು ಊಟ ಮಾಡುವ ರೀತಿ ನೀತಿಯನ್ನು ಪ್ರಜೆಗಳು ನೋಡಿ ನನ್ನನ್ನು ಅನುಸರಿಸಬೇಕು ಎಂಬುದು ಅವನ ಅಭಿಲಾಷೆಯಾಗಿತ್ತು. ನಿತ್ಯವೂ ಆತ ಒಂದು ಲಕ್ಷ ಬೆಲೆ ಬಾಳುವ ಚಿನ್ನದ ತಟ್ಟೆಯಲ್ಲಿ ಊಟ ಮಾಡುತ್ತಿದ್ದ. ಆದ್ದುದರಿಂದ ತಾನು ಸೇವಿಸುವ ಭಕ್ಷ್ಯ ಭೋಜನವನ್ನು ಜನರಿಗೆ ಪ್ರದರ್ಶಿಸಬೇಕು ಎಂಬುದು ಅವನ ಇಚ್ಛೆಯಾಗಿತ್ತು. ಆ ಸಲುವಾಗಿ ಆತನಿಗೆ ಪ್ರಜೆಗಳು "ಭೋಜನಸುದ್ಧಿಕ" ರಾಜನೆಂದು ಕರೆಯುತ್ತಿದ್ದರು. ಆತನ ಭೋಜನದ ಸಿದ್ಧತೆ ಮತ್ತು ವೈಭವವೂ ಈ ರೀತಿ ಇತ್ತು.

ಅರಮನೆಯ ಮುಖ್ಯದ್ವಾರದ ಬಳಿ ರತ್ನ ಖಚಿತವಾದ ಪೀಠವು ಸಿದ್ಧವಿತ್ತು. ಅದರ ಮೇಲೊಂದು ಹೊನ್ನಿನ ಶ್ವೇತ ಛತ್ರಿ ಇತ್ತು. ಆ ಪೀಠದಲ್ಲಿ ರಾಜನು ಊಟದ ಸಮಯಕ್ಕೆ ಸರಿಯಾಗಿ ಬಂದು ಆಸೀನನಾಗುತ್ತಿದ್ದನು. ಸುತ್ತಲೂ ನೆರೆದ ರಾಜಕನ್ಯೆಯರು ಏಳು ವಿಧದ ಭಕ್ಷ್ಯವನ್ನು ಆತನಿಗೆ ಬಡಿಸುತ್ತಿದ್ದರು. ರಾಜನ ಊಟದ ವೈಭವವನ್ನು ನೋಡಲೆಂದು ಪ್ರಜೆಗಳು ಆತನ ಸುತ್ತಲು ನೆರೆಯುತ್ತಿದ್ದರು.

ಹೀಗಿರಲು ಒಂದು ದಿನ ಒಬ್ಬನಿಗೆ ರಾಜ ಮಾಡುವ ಊಟವನ್ನು ನಾನು ಮಾಡಬೇಕೆಂಬ ಹಂಬಲ ಮೂಡಿತು. ಆದರೆ ಆತನಿಗೆ ತನ್ನ ಇಚ್ಛೆಯನ್ನು ವ್ಯಕ್ತಪಡಿಸಲು ಧೈರ್ಯವಿರಲಿಲ್ಲ. ಹಾಗಾಗಿ ಆತ ಒಂದು ವಾಮ ಮಾರ್ಗವನ್ನು ಹುಡುಕಿದ. ಅದೇನೆಂದರೆ, ಅಂದಿನ ದಿನಗಳಲ್ಲಿ ರಾಜನನ್ನು ನೇರವಾಗಿ ಭೇಟಿ ಮಾಡುವ ಮುಕ್ತ ಅವಕಾಶವಿದ್ದದ್ದು ದೂತರಿಗೆ ಮಾತ್ರ. ಅಂಥವರು ನಾನು ದೂತನೆಂದು ಸಭೆಯಲ್ಲಿ ಕೂಗಿ ಹೇಳಿದರೆ ನೆರೆದ ಜನರು ಅತ್ತಿತ್ತ ಸರಿದು ಅವನು ಮುಂದೆ ಹೋಗಲು ಮೊದಲು ಅವಕಾಶವನ್ನು ಮಾಡಿಕೊಡುತ್ತಿದ್ದರು. ಇದನ್ನು ಅರಿತಿದ್ದ ಆ ವ್ಯಕ್ತಿಯು ತನ್ನ ಕೈಗಳನ್ನು ಮೇಲಕ್ಕೆ ಎತ್ತಿ;

"ಭೋ.. ನಾನು ದೂತ... ನಾನು ದೂತ ದಾರಿ ಬಿಡಿ...!" ಎಂದು ಕೂಗಿದ. ನೆರೆದ ಜನರು ಅತ್ತಿತ್ತ ಸರಿದು ನಿಂತರು. ಆತ ನೇರವಾಗಿ ರಾಜನ ಬಳಿ ಬಂದು ನಿಂತು. ಆತನಿಗೆ ವಂದಿಸಿ ಆತನ ಚಿನ್ನದ ತಟ್ಟೆಯಲ್ಲಿದ್ದ ಭಕ್ಷ್ಯಭೋಜನಗಳನ್ನು ಬಿಟ್ಟ ಕಣ್ಣು ಮತ್ತು ಬಾಯಿಂದ ನೋಡತೊಡಗಿದ. ಆತನ ಬಾಯಲ್ಲಿ ಜೊಲ್ಲು ಸುರಿಯುತ್ತಿತ್ತು. ತನ್ನ ಆಸೆಯನ್ನು ಅದುಮಿಕ್ಕಿಕೊಳ್ಳಲಾಗದ ಅವನು ರಾಜನ ತಟ್ಟೆಯಿಂದ ಒಂದು ತುತ್ತು ಭಕ್ಷ್ಯವನ್ನು ತೆಗೆದುಕೊಂಡು ಬಾಯಿಗೆ ಹಾಕಿಕೊಂಡ. ಈ ಅಸಭ್ಯ ವರ್ತನೆಯನ್ನು ಕಂಡು ಸಹಿಸದಾದ ಖಡ್ಗಧಾರಿ ಅಂಗರಕ್ಷಕನು ಕತ್ತಿಯನ್ನು ಎತ್ತಿ ಅವನ ಶಿರಸ್ಸನ್ನು ಛೇದಿಸಲು ಮುಂದಾದ. ಅಷ್ಟರಲ್ಲಿ ಮಧ್ಯೆ ಪ್ರವೇಶಿಸಿದ ರಾಜನು ಅಂಗರಕ್ಷಕನನ್ನು ತಡೆದು;

"ಎಲೈ, ಹೆದರಬೇಡ ನೀನು ತೃಪ್ತಿಯಾಗುವ ತನಕ ಊಟ ಮಾಡು!" ಎಂದ ಅವನು ಕೈ ತೊಳೆದು ಕುಳಿತ. ಆ ವ್ಯಕ್ತಿಯು ಊಟ ಮಾಡಿದ ಬಳಿಕ ಆತನಿಗೆ ಕುಡಿಯಲು ನೀರು ಮತ್ತು ತಾಂಬೂಲವನ್ನು ಕೊಟ್ಟು ಉಪಚರಿಸಿದ. ಬಳಿಕ ಅಪರಿಚಿತನಾದ ಆತನನ್ನು ಕುರಿತು;

"ಹೇ ಪುರುಷ, ನೀನು 'ನಾನು ದೂತ' ಎಂದು ಪರಿಚಯಿಸಿಕೊಂಡೆ. ಆದರೆ ಈಗ ಹೇಳು ನೀನು ಯಾವುದಕ್ಕೆ ದೂತ?"

"ಕ್ಷಮಿಸು ಮಹಾರಾಜ, ನಾನು ತೃಷ್ಣೆಯ ದೂತ. ನಾನು ಹೊಟ್ಟೆಯ ದೂತ. ನಾನು ಹಸಿವಿನ ದೂತ! ನನ್ನ ಮೇಲೆ ಕೋಪಗೊಳ್ಳಬೇಡ ಮಹಾರಾಜ, ಯಾವ ಹಸಿವೆಗೆ ಒಳಗಾದ ಜನರು ದೂರ, ಬಹುದೂರ ತಮ್ಮ ಶತ್ರುವಿನ ಬಳಿಗೂ ಹೋಗಿ ಯಾಚನೆ ಮಾಡುತ್ತಾರೋ ಆ ಹಸಿವೆಯ ದೂತ ನಾನು. ಯಾವ ಹೊಟ್ಟೆಗಾಗಿ ಜನ ಹಗಲು ರಾತ್ರಿ ಒಂದು ಮಾಡಿ ಬೆವರು ಸುರಿಸಿ ದುಡಿಯುತ್ತಾರೋ ಆ ಹೊಟ್ಟೆಯ ದೂತ ನಾನು. ತೃಷ್ಣೆಯು ನನಗೆ ಆದೇಶ ನೀಡಿ ದೂತನನ್ನಾಗಿ ಮಾಡಿತು. ನೀನು ರಾಜನ ಬಳಿ ಹೋಗು ಆತನ ಭಕ್ಷ್ಯದ ರುಚಿ ನೋಡು ಎಂದು ಕಳುಹಿಸಿತು. ನಾನು ಬಂದೆ. ನನ್ನನ್ನು ಕ್ಷಮಿಸು ಪ್ರಭು!" ಎಂದು ಕೈ ಮುಗಿದು ನಿಂತ. ಆತನ ಬಗ್ಗೆ ಕೋಪಗೊಳ್ಳದ ರಾಜನು ಪ್ರಸನ್ನನಾಗಿ ನಸುನಗುತ್ತಾ;

"ಹೌದು ನೀನು ನಿಜಕ್ಕೂ ತೃಷ್ಣೆಯ ದೂತನೇ ಸರಿ. ನಿನ್ನ ಮಾತಿನಿಂದ ನಾನಿಂದು ಸತ್ಯದ ಸಂಪತ್ತನ್ನು ಪಡೆದೆ. ಲೋಕದಲ್ಲಿ ಸಕಲ ಜೀವರಾಶಿಗಳಿಗೂ ಅನ್ನವೇ ಮೊದಲು" ಎಂದ ಅವನು ತನ್ನ ಮಹಾಮಂತ್ರಿಯನ್ನು ಕರೆದು;

"ಇಂದಿನಿಂದ ರಾಜ್ಯದ ಪ್ರಜೆಗಳೆಲ್ಲರೂ ನನ್ನಂತೆಯೇ ಸ್ವಾದಿಷ್ಟ ಆಹಾರವನ್ನು ಸೇವಿಸಲು ಬೇಕಾದ ಸಕಲ ಸಿದ್ಧತೆಯನ್ನು ಮಾಡಿ. ಇದು ರಾಜಾಜ್ಞೆ! ಇಲ್ಲವೆಂದರೆ ಈತನಂತೆಯೇ ನಾಳೆ ಮತ್ತೊಬ್ಬ ಬಂದು ನಾನು ದೂತನೆಂದು ಹುಸಿಯಾಡಿ ನನ್ನ ತಟ್ಟೆಗೆ ಕೈ ಹಾಕದೇ ಬಿಡಲಾರ. ಸರ್ವರಿಗೂ ಸಮಬಾಳು, ಸಮಾನತೆ, ಸೋದರತೆ ಮತ್ತು ಸಹಿಷ್ಣುತೆ ಹಾಗೂ ಸಂವೃದ್ಧಿ ನೆಲೆಸಲಿ. ಇಲ್ಲಿ ನೀತಿ ಮತ್ತು ವ್ಯವಹಾರವೇ ಮುಖ್ಯವಾಗದಿರಲಿ. ಆದರೆ ಶೀಲಾಚರಣೆಯೇ ಇಲ್ಲಿ ಎಲ್ಲಕ್ಕೂ ಮುಖ್ಯವಾಗಿರಲಿ. ಇದು ರಾಜಾಜ್ಞೆ!!" ಎಂದ. ಆಗ ಅಲ್ಲಿ ನೆರೆದ ಜನರೆಲ್ಲರೂ ಒಕ್ಕೊರಳಿನಲ್ಲಿ;

"ಹೌದು ಮಹಾರಾಜ, ನೀನು ಕೇವಲ ಭೋಜನ ಪ್ರೀಯನಾಗಲೀ, ಪ್ರದರ್ಶನ ಪ್ರೀಯನಾಗಲೀ ಅಲ್ಲ! ನೀನು ಅಪ್ಪಟ ನ್ಯಾಯ ಪ್ರೀಯ... !!" ಎಂದು ಪ್ರಶಂಸಿಸುವ ಮೂಲಕ ಕೃತಜ್ಞತೆಯನ್ನು ಸಲ್ಲಿಸಿದರು. □

'SAMVADA' Kannada Monthly, July 2011 RNI-KAR KAN/2002/9246 CPMG/KA/BGW-706/2009-11
Office of Posting: Mail Business Center, Bangalore GPO, Date of Posting: 1st & 7th of Every Month

ಭಾಗ್ಯಲಕ್ಷ್ಮಿ

ವನಿತೆಯರ ಪಾಲಿಗೆ ವರದಾನ

ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನಕ್ಕೆ ಹೆಚ್ಚಿನ ಮನ್ನಣೆ ದೊರಕಿಸಿಕೊಡುವ ಉದ್ದೇಶದಿಂದ ಕರ್ನಾಟಕ ಸರ್ಕಾರವು ಕೈಗೊಂಡಿರುವ ಮಹತ್ವದ ಯೋಜನೆ–ಭಾಗ್ಯಲಕ್ಷ್ಮಿ. ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ 31ನೇ ಮಾರ್ಚ್ 2006ರ ನಂತರ ಜನಿಸಿದ ಇಬ್ಬರು ಹೆಣ್ಣು ಮಕ್ಕಳಿಗೆ, ಅವರು 18 ವರ್ಷ ವಯಸ್ಸು ತಲುಪಿದಾಗ ರೂ. ಒಂದು ಲಕ್ಷ ಮೊತ್ತವನ್ನು ನೀಡುವುದು ಈ ಯೋಜನೆಯ ಸಾರಾಂಶ.

ಯೋಜನೆಯ ಮುಖ್ಯಾಂಶಗಳು

* 2006–07ನೇ ಸಾಲಿನಲ್ಲಿ ನೋಂದಾಯಿತರಾದ ಫಲಾನುಭವಿಗಳಿಗೆ ರೂ. 10.850/–ಠೇವಣಿ.
* 2007–08ನೇ ಸಾಲಿನಲ್ಲಿ ನೋಂದಾಯಿತರಾದ ಫಲಾನುಭವಿಗಳಿಗೆ ರೂ. 20.000/–ಠೇವಣಿ. 2008–09ನೇ ಸಾಲಿಗೆ ಇದನ್ನು ಇಮ್ಮಡಿಗೊಳಿಸಲಾಗಿದೆ.
* 31ನೇ ಮಾರ್ಚ್ 2006ರ ನಂತರ ಬಿಪಿಎಲ್ ಕುಟುಂಬದಲ್ಲಿ ಜನಿಸಿದ ಇಬ್ಬರು ಹೆಣ್ಣು ಮಕ್ಕಳು ಈ ಯೋಜನೆಗೆ ಅರ್ಹರು. ಆ ಕುಟುಂಬ 3 ಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರಬಾರದು.
* ಒಂದನೇ ತರಗತಿಯಿಂದ ಹತ್ತನೆಯ ತರಗತಿಯವರೆಗೆ ರೂ. 300/– ರಿಂದ ರೂ. 1.000/– ವರೆಗಿನ ವಾರ್ಷಿಕ ವಿದ್ಯಾರ್ಥಿ ವೇತನ.
* 18 ವರ್ಷ ವಯಸ್ಸಿನವರೆಗೆ ರೂ.25.000/– ರಷ್ಟು ಆರೋಗ್ಯ ವಿಮೆ.
* ದುಡಿಯುತ್ತಿರುವ ತಂದೆ. ತಾಯಿ ಅಥವಾ ಪೋಷಕರ ಸಾವು ಸಂಭವಿಸಿದಲ್ಲಿ ರೂ. ಒಂದು ಲಕ್ಷದವರೆಗೆ ಕುಟುಂಬ ವಿಮೆ.

ಸ್ತ್ರೀ ಸಬಲೀಕರಣಕ್ಕೆ ವಿನೂತನ ಕ್ರಮ

ಕರ್ನಾಟಕ ವಾರ್ತೆ
Karnataka Information